ಗುರುವಾರ, ಮಾರ್ಚ್ 10, 2022 | ₹ 6.00
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

‘ಜಲ್ಸಾ’ ಟ್ರೇಲರ್

ಮುಂಬೈನಲ್ಲಿ ಬುಧವಾರ ‘ಜಲ್ಸಾ’ ಸಿನಿಮಾದ ಟ್ರೇಲರ್ ಬಿಡುಗಡೆ ಕಾರ್ಯಕ್ರಮದಲ್ಲಿ ಬಾಲಿವುಡ್ ನಟಿಯರಾದ ವಿದ್ಯಾಬಾಲನ್ ಮತ್ತು ಶಿಫಾಲಿ ಶಾ ಅವರು ಕಾಣಿಸಿಕೊಂಡಿದ್ದು ಹೀಗೆ



ಸರ್ಕಾರದ ಗಂಭೀರ ಪ್ರಯತ್ನ ಅಗತ್ಯ: ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್‌.ಡಿ.ಕುಮಾರಸ್ವಾಮಿ

ಮೇಕೆದಾಟು ಯೋಜನೆ: ತಮಿಳುನಾಡು ಒಪ್ಪಿಗೆ ಬೇಕಿಲ್ಲ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮೇಕೆದಾಟು ಯೋಜನೆ ಜಾರಿಗೊಳಿಸಲು ಇಚ್ಛಾಶಕ್ತಿ ಮತ್ತು ಗಂಭೀರ ಪ್ರಯತ್ನ ಬೇಕೇ ಹೊರತು, ಯಾವುದೇ ಪಾದಯಾತ್ರೆಗಳ ಅಗತ್ಯವಿಲ್ಲ ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್‌.ಡಿ.ಕುಮಾರಸ್ವಾಮಿ ಹೇಳಿದರು.

ವಿಧಾನಸಭೆಯಲ್ಲಿ ಬುಧವಾರ ಬಜೆಟ್ ಮೇಲಿನ ಚರ್ಚೆಯಲ್ಲಿ ಭಾಗವಹಿಸಿ ಮಾತನಾಡಿದ ಅವರು, ಈ ಯೋಜನೆ ಆರಂಭಿಸಲು ತಮಿಳುನಾಡು ಅಥವಾ ಕೇಂದ್ರ ಸರ್ಕಾರದ ಒಪ್ಪಿಗೆಯ ಅಗತ್ಯವೂ ಇಲ್ಲ. ಪರಿಸರ ಇಲಾಖೆ ಅನುಮತಿ ಪಡೆದು ಚಾಲನೆ ನೀಡಬಹುದು ಎಂದು ಅವರು ಪ್ರತಿಪಾದಿಸಿದರು.

ಕರ್ನಾಟಕ 30.65 ಟಿಎಂಸಿ ಅಡಿ ನೀರು ಬಳಸಿಕೊಳ್ಳಲು ಬಿಳಿಗೊಂಡ್ಲುವಿನಿಂದ ಮೇಲಕ್ಕೆ (ಕರ್ನಾಟಕದ ಕಡೆ) ಅಥವಾ ಮೇಕೆದಾಟು ಬಳಿ ಯೋಜನೆ ರೂಪಿಸಬಹುದು ಎಂದು ಸುಪ್ರೀಂಕೋರ್ಟ್ 2019 ರ ಮೇ ತಿಂಗಳಿನಲ್ಲೇ ಸೂಚನೆ ನೀಡಿದೆ. ಆದ್ದರಿಂದ ತಮಿಳುನಾಡಿನ ಒಪ್ಪಿಗೆ ಬೇಕಿಲ್ಲ ಎಂದೂ ಹೇಳಿದರು.

ಮೇಕೆದಾಟು ವಿಚಾರದಲ್ಲಿ ಸಾಕಷ್ಟು ಗೊಂದಲಗಳಾಗಿವೆ. ಈ ಗೋಜಲುಗಳನ್ನು ನಿವಾರಿಸಿಕೊಂಡು ಯೋಜನೆಯನ್ನು ಹೇಗೆ ಕಾರ್ಯಗತ ಮಾಡಬಹುದು ಎಂದು ಮಾಜಿ ಪ್ರಧಾನಿ ದೇವೇಗೌಡರು ಮುಖ್ಯಮಂತ್ರಿಯವರಿಗೆ ಪತ್ರ ಬರೆದಿದ್ದಾರೆ. ಈ ಯೋಜನೆಯನ್ನು ಎರಡು ಹಂತಗಳಲ್ಲಿ ಕಾರ್ಯಗತಗೊಳಿಸಲೂ ಸೂಚಿಸಿದ್ದಾರೆ. ಕುಡಿಯುವ ನೀರಿನ ಉದ್ದೇಶಕ್ಕಾಗಿ 30.65 ಟಿಎಂಸಿ ಅಡಿ ನೀರು ತುಂಬುವ 67.16 ಗ್ರಾಸ್ ಕೆಪಾಸಿಟಿಯಷ್ಟು ಗಾತ್ರದ ಯೋಜನೆ ಒಂದೇ ಹಂತದಲ್ಲಿ ಮಾಡಲು ಸಾಧ್ಯವಿಲ್ಲ. ಇದನ್ನು ಸರ್ಕಾರ ಗಮನಕ್ಕೆ ತೆಗೆದುಕೊಳ್ಳಬೇಕು ಎಂದು ಸಲಹೆ ನೀಡಿದರು.

‘ಸುಪ್ರೀಂಕೋರ್ಟ್‌ನಲ್ಲಿ ತಮಿಳುನಾಡು ರಾಜ್ಯ ವಕೀಲರೇ ಪ್ರಮಾಣ ಪತ್ರವನ್ನು ಸಲ್ಲಿಸಿ, ಕಾವೇರಿ ನದಿಯಲ್ಲಿ ತನಗೆ ಹಂಚಿಕೆ ಆದ ನೀರನ್ನು ಕರ್ನಾಟಕ ಹೇಗೆ ಬೇಕಾದರೂ ಬಳಕೆ ಮಾಡಿಕೊಳ್ಳಬಹುದು. ಅದಕ್ಕೆ ನಮ್ಮ ತಕರಾರು ಇಲ್ಲ. ಬೇಕಾದರೆ ಎರಡೂ ರಾಜ್ಯಗಳ ಗಡಿಪ್ರದೇಶದಲ್ಲಿ ಇನ್ನೊಂದು ಅಣೆಕಟ್ಟೆಕೊಳ್ಳಲಿ ಎಂದು ಅವರು ನ್ಯಾಯಾಲಯಕ್ಕೆ ತಿಳಿಸಿದ್ದಾರೆ’ ಎಂದು ಕುಮಾರಸ್ವಾಮಿ ಹೇಳಿದರು.

ಎತ್ತಿನ ಹೊಳೆ ಯೋಜನೆಯ ಮೂಲಕ ಬರಪೀಡಿತ ಕೋಲಾರ–ಚಿಕ್ಕಬಳ್ಳಾಪುರ ಜಿಲ್ಲೆಗಳ ಜನರಿಗೆ ನೀರು ಸಿಗುತ್ತದೆಯೋ ಇಲ್ಲವೋ ಗೊತ್ತಿಲ್ಲವಾದರೂ ಗುತ್ತಿಗೆದಾರರ ಜೇಬು ತುಂಬಿಸಲಾಗುತ್ತಿದೆಯೆ ಎಂಬ ಅನುಮಾನ ಬರುತ್ತಿದೆ ಎಂದು ಕುಮಾರಸ್ವಾಮಿ ಹೇಳಿದರು.

ನೇತ್ರಾವತಿ ನದಿಯಿಂದ ಮೂರು ಹಂತಗಳಲ್ಲಿ ನೀರನ್ನು ಬರಪೀಡಿತ ಜಿಲ್ಲೆಗಳಿಗೆ 24 ಟಿಎಂಸಿ ನೀರನ್ನು ಹರಿಸುವ ಈ ಯೋಜನೆಗೆ 2013 ರಲ್ಲಿ ₹8323 ಕೋಟಿ, 2014 ರಲ್ಲಿ ₹12,912 ಕೋಟಿಗೆ ಅಂದಾಜು ಮಾಡಲಾಗಿತ್ತು. 10 ವರ್ಷ ಕಳೆದರೂ ಯೋಜನೆ ಮುಗಿಯುವ ಲಕ್ಷಣವೇ ಇಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದರು.



ವಿಧಾನಸಭೆಯಲ್ಲಿ ಎಚ್‌.ಡಿ.ಕುಮಾರಸ್ವಾಮಿ ಬುಧವಾರ ಮಾತನಾಡಿದರು

ಮೇಕೆದಾಟು ಯೋಜನೆಗೆ ಬಜೆಟ್‌ನಲ್ಲಿ ಸಾವಿರ ಕೋಟಿ ಇಡಲಾಗಿದೆ. ನಮ್ಮ ಪಾದಯಾತ್ರೆಗೆ ಹೆದರಿ ಹಣ ಇಟ್ಟಿದ್ದಾರೆ ಅಂತ ಕಾಂಗ್ರೆಸ್ ನಾಯಕರು ಹೇಳಿಕೊಂಡು ತಿರುಗಾಡುತ್ತಿದ್ದಾರೆ

ಎಚ್‌.ಡಿ.ಕುಮಾರಸ್ವಾಮಿ, ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ

‘ನೀರು ಕೇಳಿದವರಿಗೆ ಬೆತ್ತದಲ್ಲಿ ಹೊಡೆಸಿದ್ದು ಯಾರು?’

‘ಕಳೆದ 75 ವರ್ಷದಲ್ಲಿ ಅನೇಕರು ಸರ್ಕಾರ ಮಾಡಿದ್ದಾರೆ. ಸಾಕಷ್ಟು ಅಣೆಕಟ್ಟುಗಳೂ ಬಂದಿವೆ. ಇದರ ಕೀರ್ತಿ ಎಲ್ಲರಿಗೂ ಸಲ್ಲಬೇಕು. ಈಗ ಕಾಂಗ್ರೆಸ್ ನಾಯಕರು ‘ನಮ್ಮ ನೀರು ನಮ್ಮ ಹಕ್ಕು’ ಎಂದು ಪಾದಯಾತ್ರೆ ಮಾಡುತ್ತಿದ್ದಾರೆ. ಜನರ ಹಕ್ಕು ಎನ್ನುತ್ತಿದ್ದಾರೆ. ಹುಬ್ಬಳ್ಳಿಯಲ್ಲಿ ಕುಡಿಯುವ ನೀರಿಗಾಗಿ ಜನರು ಧರಣಿ ನಡೆಸಿದಾಗ ಪೊಲೀಸರನ್ನು ಬಿಟ್ಟು ಬೆತ್ತದಿಂದ ಹೊಡೆಸಿದ್ದು ಯಾರು? ಆಗ ನಮ್ಮ ನೀರು ನಮ್ಮ ಹಕ್ಕು ನೆನಪಿಗೆ ಬರಲಿಲ್ಲವೆ’ ಎಂದು ಕುಮಾರಸ್ವಾಮಿ ಕಾಂಗ್ರೆಸ್ ಅನ್ನು ಪ್ರಶ್ನಿಸಿದರು.

ಎಚ್‌ಡಿಕೆ ಮಾತಿಗೆ ಮೇಜು ಕುಟ್ಟದ ಬಿಜೆಪಿ!

ಬೆಂಗಳೂರು: ವಿಧಾನಸಭೆಯಲ್ಲಿ ಬುಧವಾರ ಬಜೆಟ್ ಮೇಲಿನ ಚರ್ಚೆಯಲ್ಲಿ ಭಾಗವಹಿಸಿ ಮಾತನಾಡಿದ ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್‌.ಡಿ. ಕುಮಾರಸ್ವಾಮಿ, ಮಾತಿನುದ್ದಕ್ಕೂ ಕಾಂಗ್ರೆಸ್ ವಿರುದ್ಧ ವಾಗ್ದಾಳಿ ನಡೆಸಿದರು. ಬಿಜೆಪಿ ಸದಸ್ಯರು ಮೇಜುಕಟ್ಟಿ ಬೆಂಬಲ ವ್ಯಕ್ತಪಡಿಸಿದರು.

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಮಂಡಿಸಿರುವ ಬಜೆಟ್ ಕುರಿತು ಚರ್ಚೆ ಆರಂಭಿಸಿದ ಕುಮಾರಸ್ವಾಮಿ, ಸಾಲದ ವಿಷಯಕ್ಕೆ ಬರುತ್ತಿದ್ದಂತೆಯೇ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ವಿರುದ್ಧ ವಾಗ್ದಾಳಿ ಆರಂಭಿಸಿದರು. ಸುಮಾರು ಮೂರು ಗಂಟೆಗಳಷ್ಟು ಮಾತನಾಡಿದ ಅವರು, ಬಹುಪಾಲು ಸಮಯವನ್ನು ಕಾಂಗ್ರೆಸ್ ವಿರುದ್ಧದ ಟೀಕಾಪ್ರಹಾರಕ್ಕೆ ಮೀಸಲಿಟ್ಟರು.

ನೀರಾವರಿ ಯೋಜನೆಗಳು, ವಿತ್ತೀಯ ಶಿಸ್ತು ಸೇರಿದಂತೆ ಹಲವು ವಿಚಾರಗಳಲ್ಲಿ ಸಿದ್ದರಾಮಯ್ಯ ಅವರನ್ನು ಟೀಕಿಸಿದರು. ಕೃಷ್ಣಾ ಮೇಲ್ದಂಡೆ ಯೋಜನೆ ವಿಚಾರದಲ್ಲಿ ಕಾಂಗ್ರೆಸ್ ಸರ್ಕಾರಗಳ ಅವಧಿಯಲ್ಲಿ ಪ್ರಗತಿ ಕುಂಠಿತವಾಗಿತ್ತು ಎಂದರು.

‘ಸಾಲ ಮಾಡುವುದು ಹೊಸತೇನಲ್ಲ. ಎಲ್ಲ ಮುಖ್ಯಮಂತ್ರಿಗಳ ಅವಧಿಯಲ್ಲೂ ಸಾಲ ಮಾಡಲಾಗಿದೆ. ವರ್ಷದಿಂದ ವರ್ಷಕ್ಕೆ ಸಾಲದ ಪ್ರಮಾಣ ಏರುತ್ತಲೇ ಹೋಗಿದೆ. 2018–19 ರಲ್ಲಿ ಬಜೆಟ್ ಮಂಡಿಸಿದ್ದ ಸಿದ್ದರಾಮಯ್ಯ ಸುಮಾರು ₹40 ಸಾವಿರ ಕೋಟಿ ಸಾಲ ಮಾಡಿದ್ದರು’ ಎಂದು ಟೀಕಿಸಿದರು.

‘ನಾನು ಯಾರನ್ನೂ ಟೀಕೆ ಮಾಡಬೇಕು ಎಂದು ಮಾತನಾಡುತ್ತಿಲ್ಲ. ನಾನು ಅವರಿಗೆ ಸರ್ಟಿಫಿಕೆಟ್ ಕೊಡಲು ಮಾತನಾಡುತ್ತಿದ್ದೇನೆ. ವಿತ್ತೀಯ ಕೊರತೆ ನೀಗಿಸಲು ವಿತ್ತೀಯ ಹೊಣೆಗಾರಿಕೆ ಕಾಯ್ದೆ ತಾವೇ ತಂದಿದ್ದಾಗಿ ವಿರೋಧಪಕ್ಷದ ನಾಯಕರು ಹೇಳಿದ್ದರು. ಅದಕ್ಕಾಗಿ ಅವರಿಗೆ ಅಭಿನಂದನೆ ಸಲ್ಲಿಸಬೇಕೋ ಬೇಡವೊ’ ಎಂದು ಕುಟುಕಿದರು.

ಕುಮಾರಸ್ವಾಮಿ ಕಾಂಗ್ರೆಸ್ ವಿರುದ್ಧ ಟೀಕಿಸುವುದನ್ನು ಆಕ್ಷೇಪಿಸಿದ ವಿರೋಧ ಪಕ್ಷದ ಉಪ ನಾಯಕ ಯು.ಟಿ. ಖಾದರ್, ‘ಜೆಡಿಎಸ್ ಬಿಜೆಪಿಯ ಬಿ ಟೀಮ್’ ಎಂದರು. ಆಗ ಕಾಂಗ್ರೆಸ್ ಶಾಸಕರು ‘ಬಿ’ ಟೀಮ್ ಎಂದು ಕೂಗಿದರು. ಅದಕ್ಕೆ ಪ್ರತಿಯಾಗಿ ಜೆಡಿಎಸ್ ಸದಸ್ಯರೂ ಏರಿದ ಧ್ವನಿಯಲ್ಲಿ ಆಕ್ಷೇಪ ವ್ಯಕ್ತಪಡಿಸಿದರು.

ಆಗ ಮಧ್ಯಪ್ರವೇಶಿದ ಕಾನೂನು ಸಚಿವ ಜೆ.ಸಿ. ಮಾಧುಸ್ವಾಮಿ, ‘ಸಿದ್ದರಾಮಯ್ಯ ಅವರು ಬಸವರಾಜ ಬೊಮ್ಮಾಯಿ ಬಜೆಟ್ ಬಗ್ಗೆ ಮಾತನಾಡುವುದು ಬಿಟ್ಟು, ತಮ್ಮ ಬಜೆಟ್ ಬಗ್ಗೆ ಮಾತನಾಡಿದ್ದೇ ಹೆಚ್ಚು. ಎಸ್. ಆರ್.ಬೊಮ್ಮಾಯಿ, ಮೋದಿ ಹೀಗೆ ಎಲ್ಲರ ಬಗ್ಗೆಯೂ ಮಾತನಾಡಿದರು’ ಎಂದರು.

ಮಧ್ಯಾಹ್ನದ ಬಳಿಕ ಕಲಾಪ ಆರಂಭವಾದಾಗಲೂ ಕುಮಾರಸ್ವಾಮಿ ಮಾತಿಗೆ ಖಾದರ್ ಆಕ್ಷೇಪ ವ್ಯಕ್ತಪಡಿಸಿದರು. ಕಾಂಗ್ರೆಸ್‌ನ ಕೆ.ಆರ್. ರಮೇಶ್ ಕುಮಾರ್, ‘ಅವರು ಮಾತನಾಡಲಿ ಬಿಡಿ. ನಮಗೆ ಯೋಗ್ಯತೆ ಇದ್ದರೆ ನಮ್ಮ ನಿಲುವುಗಳನ್ನು ಸಮರ್ಥಿಸಿಕೊಳ್ಳೋಣ’ ಎಂದು ಸಮಾಧಾನಪಡಿಸಿದರು.


ರೇವಣ್ಣ ಆ ಕಡೆ– ಸಚಿವ ಅಶೋಕ ಈ ಕಡೆ

ಎಚ್‌.ಡಿ. ಕುಮಾರಸ್ವಾಮಿ ಮಾತನಾಡುತ್ತಿದ್ದಾಗ ಸಚಿವ ಆರ್. ಅಶೋಕ ಅವರು ಜೆಡಿಎಸ್ ಸದಸ್ಯರ ಸಾಲಿನಲ್ಲಿ ಬಂದು ಕುಳಿತಿದ್ದರು. ಜೆಡಿಎಸ್‌ನ ಎಚ್‌.ಡಿ. ರೇವಣ್ಣ ಆಡಳಿತ ಪಕ್ಷದ ಸಾಲಿನತ್ತ ಹೋಗಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಮತ್ತು ಸಚಿವರ ಜತೆ ಮಾತನಾಡಿಕೊಂಡು ಬಂದರು.

ಸುದ್ದಿ 2 ನಿಮಿಷ

ಕಂದಾಯ ದಾಖಲೆ ಮನೆ ಬಾಗಿಲಿಗೆ: 12ಕ್ಕೆ ಚಾಲನೆ

ಬೆಂಗಳೂರು: ‘ರೈತರ ಮನೆ ಬಾಗಿಲಿಗೆ ಪಹಣಿ, ಆದಾಯ ಮತ್ತು ಜಾತಿ ಪ್ರಮಾಣ ಪತ್ರಗಳನ್ನು ಉಚಿತವಾಗಿ ತಲುಪಿಸುವ ಯೋಜನೆಗೆ ಇದೇ 12ರಂದು ಚಾಲನೆ ನೀಡಲಾಗುವುದು’ ಎಂದು ಕಂದಾಯ ಸಚಿವ ಆರ್. ಅಶೋಕ ತಿಳಿಸಿದರು.



ವಿಧಾನ ಪರಿಷತ್‌ನಲ್ಲಿ ಬುಧವಾರ ಈ ವಿಷಯ ತಿಳಿಸಿದ ಅವರು, ‘ಈ ಯೋಜನೆಯಿಂದ ರಾಜ್ಯದ ಸುಮಾರು 45 ಲಕ್ಷ ರೈತರಿಗೆ ಅನುಕೂಲವಾಗಲಿದೆ’ ಎಂದರು.

‘ಐದು ವರ್ಷಗಳಿಗೆ ಒಂದು ಬಾರಿ ಉಚಿತವಾಗಿ ದಾಖಲೆಗಳನ್ನು ರೈತರಿಗೆ ನೀಡಬೇಕು ಎನ್ನುವುದು ಕಾಯ್ದೆಯಲ್ಲಿದೆ. ಆದರೆ, ಇದುವರೆಗೆ ಜಾರಿಯಾಗಿರಲಿಲ್ಲ’ ಎಂದು ತಿಳಿಸಿದರು.

ಪಶು ವೈದ್ಯಾಧಿಕಾರಿಗಳಿಗೆ ಅನ್ಯ ಇಲಾಖೆಯ ಒಲವು!

ಬೆಂಗಳೂರು: ‘ಪಶುವೈದ್ಯಾಧಿಕಾರಿಗಳಿಗೆ ಮಾತೃಇಲಾಖೆಗಿಂತಲೂ ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಹಣಾಧಿಕಾರಿ ಸೇರಿದಂತೆ ಅನ್ಯ ಇಲಾಖೆಯಲ್ಲಿನ ಹುದ್ದೆಗಳು ಹೆಚ್ಚು ಆಕರ್ಷಕವಾಗಿವೆ’ ಎಂದು ವಿಧಾನಪರಿಷತ್‌ನಲ್ಲಿ ಸದಸ್ಯರು ಟೀಕಿಸಿದರು.

ಪ್ರಶ್ನೋತ್ತರ ವೇಳೆಯಲ್ಲಿ ವಿಷಯ ಪ್ರಸ್ತಾಪಿಸಿದ ಬಿಜೆಪಿಯ ಸುನಿಲ್ ವಲ್ಯಾಪುರೆ, ‘ಪಶುವೈದ್ಯಾಧಿಕಾರಿಗಳು ಒಳ ಮಾರ್ಗ ಕಂಡುಕೊಂಡಿದ್ದಾರೆ. ಪಶುವೈದ್ಯಕೀಯ ಇಲಾಖೆಗಿಂತ ಗ್ರಾಮೀಣಾಭಿವೃದ್ಧಿ ಪಂಚಾಯತ್‌ರಾಜ್ ಇಲಾಖೆಗೆ ನಿಯೋಜನೆ ಮೇಲೆ ತೆರಳುತ್ತಿದ್ದಾರೆ. ಗೋಮಾತೆ ರಕ್ಷಣೆಯ ಕಾರ್ಯಕ್ಕೆ ಪಶುವೈದ್ಯಾಧಿಕಾರಿಗಳು ಇಲ್ಲದಿದ್ದರೆ ಹೇಗೆ’ ಎಂದು ಪ್ರಶ್ನಿಸಿದರು.

ಈ ಬಗ್ಗೆ ಪ್ರತಿಕ್ರಿಯಿಸಿದ ಪಶುಸಂಗೋಪನಾ ಸಚಿವ ಪ್ರಭು ಚವ್ಹಾಣ, ‘ಪಶುವೈದ್ಯಕೀಯ ಸೇವಾ ಇಲಾಖೆಯ 131 ಪಶುವೈದ್ಯಾಧಿಕಾರಿಗಳು ಮತ್ತು ಸಿಬ್ಬಂದಿ ನಿಯೋಜನೆ ಮೇಲೆ ಕಾರ್ಯನಿರ್ವಹಿಸುತ್ತಿದ್ದರು. ಇವರಲ್ಲಿ ನಾಲ್ವರು ಪಶುವೈದ್ಯಾಧಿಕಾರಿಗಳು ಮತ್ತು ಮೂವರು ಸಿಬ್ಬಂದಿ ಹೊರತುಪಡಿಸಿ ಉಳಿದವರೆಲ್ಲರನ್ನು ಮಾತೃ ಇಲಾಖೆಗೆ ಕರೆಯಿಸಿಕೊಳ್ಳಲಾಗಿದೆ. ಉಳಿದವರಿಗೂ ನೋಟಿಸ್ ನೀಡಲಾಗಿದ್ದು, ಮಾತೃ ಇಲಾಖೆಗೆ ಮರಳದಿದ್ದರೆ ಅಮಾನತು ಮಾಡಲು ಕ್ರಮಕೈಗೊಳ್ಳಲಾಗುವುದು’ ಎಂದು ತಿಳಿಸಿದರು.

‘ಇಲಾಖೆಯಲ್ಲಿ ಪಶುವೈದ್ಯಾಧಿಕಾರಿ, ಹಿರಿಯ ಪಶುವೈದ್ಯಾಧಿಕಾರಿ, ಮುಖ್ಯ ಪಶುವೈದ್ಯಾಧಿಕಾರಿ, ಹಿರಿಯ ಪಶುವೈದ್ಯಕೀಯ ಪರೀಕ್ಷಕರು, ಪಶುವೈದ್ಯಕೀಯ ಪರೀಕ್ಷಕರು ಮತ್ತು ಕಿರಿಯ ಪಶುವೈದ್ಯಕೀಯ ಪರೀಕ್ಷಕರ ಒಟ್ಟು 3243 ಹುದ್ದೆಗಳು ಖಾಲಿ ಉಳಿದಿವೆ. 400 ಹುದ್ದೆಗಳ ಭರ್ತಿಗೆ ಹಣಕಾಸು ಇಲಾಖೆ ಅನುಮತಿ ನೀಡಿದ್ದು, ನೇಮಕಾತಿ ಪ್ರಕ್ರಿಯೆ ಕೈಗೊಳ್ಳಲಾಗಿದೆ’ ಎಂದು ತಿಳಿಸಿದರು.

‘ಅಥಣಿ ಮತ್ತು ಪುತ್ತೂರಿನಲ್ಲಿ ಹೊಸ ಪಶುವೈದ್ಯಕೀಯ ಕಾಲೇಜುಗಳನ್ನು ಮಂಜೂರು ಮಾಡಲಾಗಿದೆ. ಮೂಲಸೌಕರ್ಯಗಳನ್ನು ಕಲ್ಪಿಸಿ, ವಿವಿಧ ಹುದ್ದೆಗಳನ್ನು ಭರ್ತಿ ಮಾಡಿದ ಬಳಿಕ ಭಾರತೀಯ ಪಶುವೈದ್ಯಕೀಯ ಪರಿಷತ್ ತಂಡ ಪರಿಶೀಲನೆ ನಡೆಸಲಿದೆ. ಪರಿಷತ್ ಅನುಮತಿ ನೀಡಿದ ಬಳಿಕ ಈ ಕಾಲೇಜುಗಳು ಆರಂಭವಾಗಲಿವೆ’ ಎಂದು ವಿವರಿಸಿದರು.

‘ಕೃಷಿ ಉಪಕರಣ ಖರೀದಿ; ಸಾಮಾನ್ಯ ವರ್ಗಕ್ಕೆ ಶೇ 75 ಸಬ್ಸಿಡಿ ಪರಿಶೀಲನೆ’

‘3 ಲಕ್ಷ ಟನ್ ರಾಗಿ ಖರೀದಿಗೆ ಕೇಂದ್ರಕ್ಕೆ ಪತ್ರ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಈ ಸಾಲಿಗೆ ಒಟ್ಟು ಮೂರು ಲಕ್ಷ ಟನ್ ರಾಗಿ ಖರೀದಿಗೆ ಕೇಂದ್ರ ಸರ್ಕಾರಕ್ಕೆ ಪತ್ರ ಬರೆಯಲಾಗಿದೆ ಎಂದು ಜಲಸಂಪನ್ಮೂಲ ಸಚಿವ ಗೋವಿಂದ ಕಾರಜೋಳ ತಿಳಿಸಿದರು.

ವಿಧಾನಸಭೆಯಲ್ಲಿ ಬುಧವಾರ ಶೂನ್ಯ ವೇಳೆಯಲ್ಲಿ ಬಿಜೆಪಿಯ ಗೂಳಿಹಟ್ಟಿ ಶೇಖರ್ ಅವರ ಪ್ರಶ್ನೆಗೆ ಉತ್ತರಿಸಿದ ಸಚಿವರು, ಈ ಸಾಲಿನಲ್ಲಿ 2.10 ಲಕ್ಷ ಟನ್ ರಾಗಿ ಖರೀದಿಗೆ ತೀರ್ಮಾನಿಸಲಾಗಿತ್ತು. ಅಷ್ಟು ಪ್ರಮಾಣದ ರಾಗಿ ಖರೀದಿಸಲಾಗಿದೆ ಎಂದರು.

ಈ ಬಾರಿ ಅತಿ ಹೆಚ್ಚು ಪ್ರಮಾಣದಲ್ಲಿ ರಾಗಿ ಬೆಳೆದಿದ್ದು, ಖರೀದಿ ಮಿತಿಯನ್ನು ಹೆಚ್ಚಿಸಲು ಅನುಮತಿ ನೀಡುವಂತೆ ಭಾರತೀಯ ಆಹಾರ ನಿಗಮಕ್ಕೆ ಜ.29 ರಂದು ಪತ್ರ ಬರೆಯಲಾಗಿದೆ. ಅನುಮತಿ ಸಿಕ್ಕಿದ ಕೂಡಲೇ ಖರೀದಿಗೆ ವ್ಯವಸ್ಥೆ ಮಾಡಲಾಗುವುದು ಎಂದರು.

ವಿಷಯ ಪ್ರಸ್ತಾಪಿಸಿದ ಗೂಳಿಹಟ್ಟಿ ಶೇಖರ್, ನಿಗದಿತ ಅವಧಿಗೆ ಮೊದಲೇ ರಾಗಿ ಖರೀದಿ ನಿಲ್ಲಿಸಲಾಗಿದೆ. ಕೇವಲ ಸಣ್ಣ ರೈತರಿಂದ ಮಾತ್ರ ಖರೀದಿಸಿದ್ದು, ಈ ಸೌಲಭ್ಯವನ್ನು ಎಲ್ಲ ರೈತರಿಗೂ ವಿಸ್ತರಿಸಬೇಕು ಎಂದು ಒತ್ತಾಯಿಸಿದರು.

ಶೇ 75 ರಷ್ಟು ಸಬ್ಸಿಡಿ: ಕೃಷಿ ಯಂತ್ರೋಪಕರಣಗಳ ಖರೀದಿಗಾಗಿ ಸಾಮಾನ್ಯ ವರ್ಗದ ರೈತರಿಗೆ ಶೇ 75 ರಷ್ಟು ಸಬ್ಸಿಡಿ ನೀಡುವ ಬಗ್ಗೆ ಪರಿಶೀಲನೆ ನಡೆಸಲಾಗುವುದು ಎಂದು ಕೃಷಿ ಸಚಿವ ಬಿ.ಸಿ.ಪಾಟೀಲ ತಿಳಿಸಿದರು.

ಪ್ರಶ್ನೋತ್ತರ ಅವಧಿಯಲ್ಲಿ ಕಾಂಗ್ರೆಸ್‌ನ ಆನಂದ್ ಸಿದ್ದು ನ್ಯಾಮಗೌಡ ಅವರ ಪ್ರಶ್ನೆಗೆ ಉತ್ತರಿಸಿದ ಸಚಿವರು, ಸಾಮಾನ್ಯ ವರ್ಗದವರಿಗೆ ಶೇ 50 ರಷ್ಟು ಸಹಾಯಧನ, ಪರಿಶಿಷ್ಟ ಜಾತಿ ಮತ್ತು ಪಂಗಡದವರಿಗೆ ಶೇ 90 ರಷ್ಟು ಸಬ್ಸಿಡಿ ನೀಡಲಾಗುತ್ತಿದೆ. ಸಹಾಯಧನವನ್ನು ಗರಿಷ್ಠ ಮಿತಿ ₹1 ಲಕ್ಷದವರೆಗೆ ನೀಡಲಾಗುತ್ತಿದೆ. ಸಣ್ಣ ಟ್ರಾಕ್ಟರ್‌ಗಳಿಗೆ ಮಾತ್ರ ಸಾಮಾನ್ಯ ರೈತರಿಗೆ ₹75 ಸಾವಿರ, ಪರಿಶಿಷ್ಟ ಜಾತಿ ಮತ್ತು ಪಂಗಡದ ರೈತರಿಗೆ ₹3 ಲಕ್ಷ ಸಹಾಯ ಧನ ನೀಡಲಾಗುತ್ತಿದೆ ಎಂದು ಹೇಳಿದರು.

ಸಕಾಲಕ್ಕೆ ಹಾಜರಾಗದ ಸಚಿವರು: ಸಭಾಧ್ಯಕ್ಷ ಕಾಗೇರಿ ಗರಂ

ಕಲಾಪದ ವೇಳೆ ಸಚಿವರು ಸಕಾಲಕ್ಕೆ ಹಾಜರಾಗದ ಬಗ್ಗೆ ವಿಧಾನಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ ಆಕ್ಷೇಪ ವ್ಯಕ್ತಪಡಿಸಿದರು.

ಈ ರೀತಿ ಆದರೆ ಸದನವನ್ನು ನಡೆಸುವುದಾದರೂ ಹೇಗೆ? ಏನು ಮಾಡಿದರೂ ನಡೆಯುತ್ತದೆ ಎಂಬ ಭಾವನೆ ಸಚಿವರಲ್ಲಿ ಬಂದರೆ ಶೋಭೆ ತರುವುದಿಲ್ಲ ಎಂದರು. ಪ್ರಶ್ನೋತ್ತರ ವೇಳೆ ಕಾಂಗ್ರೆಸ್‌ನ ರಾಜೇಗೌಡ ಅವರ ಪ್ರಶ್ನೆ ಕರೆದಾಗ ಉತ್ತರ ಹೇಳಬೇಕಿದ್ದ ಕ್ರೀಡಾ ಸಚಿವ ನಾರಾಯಣ ಗೌಡ ಅವರು ಹಾಜರಿರಲಿಲ್ಲ.

ಬಿಜೆಪಿಯ ಶಾಸಕ ಬಸನಗೌಡ ಪಾಟೀಲ ಯತ್ನಾಳ ಅವರೂ ಈ ಬಗ್ಗೆ ಆಕ್ಷೇಪ ವ್ಯಕ್ತಪಡಿಸಿದರು. ಮಂತ್ರಿ ಆಗುವುದಕ್ಕೆ ಮೊದಲು ಲಾಬಿ ಮಾಡುತ್ತಾರೆ. ಮಂತ್ರಿ ಆದ ಮೇಲೆ ಸದನಕ್ಕೆ ಬರುವುದಿಲ್ಲವೆಂದರೆ ಹೇಗೆ ಎಂದು ಪ್ರಶ್ನಿಸಿದರು. ಜೆಡಿಎಸ್ ಮತ್ತು ಕಾಂಗ್ರೆಸ್ ಸದಸ್ಯರೂ ಈ ಬಗ್ಗೆ ಆಕ್ಷೇಪ ವ್ಯಕ್ತಪಡಿಸಿದರು.

ಸಾರಿಗೆ ಇಲಾಖೆಯ 30 ಸೇವೆ ಆನ್‌ಲೈನ್: ಶ್ರೀರಾಮುಲು

ಸಾರಿಗೆ ಇಲಾಖೆಯಲ್ಲಿ 30 ಸೇವೆಗಳನ್ನು ಆನ್‌ಲೈನ್ ಮೂಲಕ ನೀಡುತ್ತಿದ್ದು, ಈ ಸೇವೆಗಳನ್ನು ಕಾಗದ ರಹಿತ ಮಾಡಿದ್ದೇವೆ ಎಂದು ಸಾರಿಗೆ ಸಚಿವ ಬಿ.ಶ್ರೀರಾಮುಲು ತಿಳಿಸಿದರು.

ವಿಧಾನಸಭೆಯಲ್ಲಿ ಪ್ರಶ್ನೋತ್ತರ ಅವಧಿಯಲ್ಲಿ ಕಾಂಗ್ರೆಸ್‌ನ ಹೊಲಗೇರಿ ಡಿ.ಎಸ್ ಅವರ ಪ್ರಶ್ನೆಗೆ ಉತ್ತರಿಸಿದ ಅವರು, ಡಿ.ಎಲ್, ಎಲ್.ಎಲ್, ವಾಹನಗಳ ನೋಂದಣಿ ಸೇರಿದಂತೆ ಎಲ್ಲ ಸೇವೆಗಳೂ ಆನ್‌ಲೈನ್‌ನಲ್ಲಿ ಲಭ್ಯವಿದೆ. ಸಾರ್ವಜನಿಕರು ಈ ಸೇವೆ ಪಡೆಯಲು ಆರ್‌ಟಿಒ ಕಚೇರಿಗಳಿಗೆ ಹೋಗಬೇಕಾಗಿಲ್ಲ ಎಂದರು.

ವಿಜಯಪುರ ಜಿಲ್ಲೆಯ ಮುದ್ದೇಬಿಹಾಳ, ಸಿಂಧಗಿ ಅಥವಾ ಇಂಡಿ, ದಾವಣಗೆರೆ ತಾಲ್ಲೂಕಿನ ಹೊನ್ನಾಳಿ ಅಥವಾ ಚೆನ್ನಗಿರಿ, ಕಲಬುರ್ಗಿ ಜಿಲ್ಲೆಯ ಸೇಡಂ, ರಾಯಚೂರು ಜಿಲ್ಲೆಯ ಸಿಂಧನೂರು ಅಥವಾ ಲಿಂಗಸುಗೂರು, ಉಡುಪಿ ಜಿಲ್ಲೆಯ ಕುಂದಾಪುರ ತಾಲ್ಲೂಕಿನಲ್ಲಿ ಹೊಸದಾಗಿ ಸಹಾಯಕ ಪ್ರಾದೇಶಿಕ ಸಾರಿಗೆ ಅಧಿಕಾರಿಗಳ ಕಚೇರಿಗಳನ್ನು ತೆರೆಯುವ ಪ್ರಸ್ತಾವನೆ ಪರಿಶೀಲನೆಯಲ್ಲಿದೆ ಎಂದು ಹೇಳಿದರು.

‘ದೇಗುಲ ಪ್ರವಾಸೋದ್ಯಮ’ಕ್ಕೆ ಉತ್ತೇಜನ

ಬೆಂಗಳೂರು: ‘ದೇಗುಲ ಪ್ರವಾಸೋದ್ಯಮಕ್ಕೆ ಉತ್ತೇಜನ ನೀಡುವ ನಿಟ್ಟಿನಲ್ಲಿ ‘ಎ’ ಶ್ರೇಣಿಯ 25 ದೇವಾಲಯಗಳನ್ನು ಗುರುತಿಸಿ ವಿವಿಧ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳಲಾಗುವುದು’ ಎಂದು ಮುಜರಾಯಿ ಸಚಿವೆ ಶಶಿಕಲಾ ಜೊಲ್ಲೆ ತಿಳಿಸಿದರು.

ವಿಧಾನ ಪರಿಷತ್‌ನಲ್ಲಿ ಬುಧವಾರ ಪ್ರಶ್ನೋತ್ತರ ವೇಳೆಯಲ್ಲಿ ಬಿಜೆಪಿಯ ಎನ್. ರವಿಕುಮಾರ್ ಅವರ ಪ್ರಶ್ನೆಗೆ ಉತ್ತರಿಸಿದ ಸಚಿವರು, ‘ದೈವ ಸಂಕಲ್ಪ ಯೋಜನೆ ಅಡಿಯಲ್ಲಿ ಮೊದಲ ಹಂತದಲ್ಲಿ ಈ ಕಾರ್ಯಗಳನ್ನು ಕೈಗೊಳ್ಳಲಾಗುವುದು. ಆಯಾ ದೇವಾಲಯಗಳಿಂದ ಬರುವ ಆದಾಯದಿಂದ ಅಭಿವೃದ್ಧಿ ಕಾರ್ಯ ಕೈಗೊಳ್ಳಲಾಗುವುದು’ ಎಂದು ವಿವರಿಸಿದರು. ‘ಎರಡು–ಮೂರು ದೇವಾಲಯಗಳನ್ನು ಒಗ್ಗೂಡಿಸಿ ಪ್ರವಾಸದ ಪ್ಯಾಕೇಜ್ ಕೈಗೊಳ್ಳುವ ಯೋಜನೆಯನ್ನು ಸಹ ರೂಪಿಸಲಾಗುತ್ತಿದೆ. ಜತೆಗೆ, ವಿಮಾನ ಮತ್ತು ರೈಲುಗಳ ಪ್ರಯಾಣ ಒಗ್ಗೂಡಿಸಿ ಪ್ರವಾಸಿಗರಿಗೆ ಅನುಕೂಲವಾಗುವ ಯೋಜನೆ ಆರಂಭಿಸುವ ಬಗ್ಗೆಯೂ ಪರಿಶೀಲಿಸಲಾಗುತ್ತಿದೆ’ ಎಂದರು.

ಬೀದರ್ ಪಶು ವಿ.ವಿ: 1,471 ಹುದ್ದೆಗಳು ಖಾಲಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೀದರ್ ಕರ್ನಾಟಕ ಪಶು ವೈದ್ಯಕೀಯ, ಪಶು ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯದಲ್ಲಿ 398 ಬೋಧಕರ ಮತ್ತು 1073 ಬೋಧಕೇತರ ಹುದ್ದೆಗಳು ಖಾಲಿ ಉಳಿದಿವೆ.

ವಿಧಾನಪರಿಷತ್‌ನಲ್ಲಿ ಬುಧವಾರ ಕಾಂಗ್ರೆಸ್‌ನ ಅರವಿಂದ ಕುಮಾರ್ ಅರಳಿ ಅವರ ಪ್ರಶ್ನೆಗೆ ಉತ್ತರಿಸಿದ ಪಶುಸಂಗೋಪನಾ ಸಚಿವ ಪ್ರಭು ಚವ್ಹಾಣ ಅವರು, ’305 ಬೋಧಕರ ಮತ್ತು 188 ಬೋಧಕೇತರ ಹುದ್ದೆಗಳನ್ನು ಭರ್ತಿ ಮಾಡುವ ಪ್ರಸ್ತಾವ ಆರ್ಥಿಕ ಇಲಾಖೆಯ ಪರಿಶೀಲನೆಯಲ್ಲಿದೆ’ ಎಂದು ತಿಳಿಸಿದರು.

‘ಈಗಾಗಲೇ 132 ಸಹಾಯಕ ಪ್ರಾಧ್ಯಾಪಕರನ್ನು ಗುತ್ತಿಗೆ ಆಧಾರದ ಮೇಲೆ ಮತ್ತು 34 ಸಹಾಯಕ ಪ್ರಾಧ್ಯಾಪಕರನ್ನು ಪಶುವೈದ್ಯ ಸೇವಾ ಇಲಾಖೆಯಿಂದ ನಿಯೋಜಿಸಲಾಗಿದೆ. ಬೋಧಕೇತರ ಹುದ್ದೆಗಳಿಗೆ 52 ಮಂದಿಯನ್ನು ಗುತ್ತಿಗೆ ಆಧಾರದ ಮೇಲೆ ನೇಮಿಸಿಕೊಳ್ಳಲಾಗಿದೆ’ಎಂದು ವಿವರಿಸಿದರು.

ಸಚಿವರ ಉತ್ತರಕ್ಕೆ ಕಟುವಾಗಿ ಪ್ರತಿಕ್ರಿಯಿಸಿದ ಅರವಿಂದ ಕುಮಾರ್ ಅರಳಿ, ‘ಬಿಜೆಪಿ ಸರ್ಕಾರ ಗೋಮಾತೆ ರಕ್ಷಣೆ ಬಗ್ಗೆ ಪದೇ ಪದೇ ಹೇಳುತ್ತದೆ. ಆದರೆ, ಗೋಮಾತೆ ರಕ್ಷಣೆಗೆ ಅಗತ್ಯ ಇರುವ ಉತ್ತಮ ಪಶುವೈದ್ಯಾಧಿಕಾರಿಗಳನ್ನು ರೂಪಿಸಲು ಸೌಲಭ್ಯಗಳನ್ನು ಕಲ್ಪಿಸುತ್ತಿಲ್ಲ. ವಿಶ್ವವಿದ್ಯಾಲಯ ಅಭಿವೃದ್ಧಿಗೆ ಸರ್ಕಾರದ ನಿರ್ಲಕ್ಷ್ಯವಹಿಸಿದೆ. ಈ ವಿಶ್ವವಿದ್ಯಾಲಯವನ್ನು ಸ್ಥಳಾಂತರಿಸುವ ಹುನ್ನಾರ ನಡೆದಿದೆ. ಇದು ಯಾವ ರೀತಿಯ ಅಭಿವೃದ್ಧಿ’ ಎಂದರು.

ಮಧ್ಯಪ್ರವೇಶಿಸಿದ ಕಂದಾಯ ಸಚಿವ ಅಶೋಕ, ‘ವಿಶ್ವವಿದ್ಯಾಲಯವನ್ನು ಯಾವುದೇ ಕಾರಣಕ್ಕೂ ಸ್ಥಳಾಂತರಿಸುವುದಿಲ್ಲ. ಹುದ್ದೆಗಳನ್ನು ಭರ್ತಿ ಮಾಡಲು ಹಣಕಾಸು ಇಲಾಖೆ ಜತೆ ಚರ್ಚಿಸಲಾಗುವುದು’ ಎಂದು ಭರವಸೆ ನೀಡಿದರು.

ರಾಜ್ಯದಲ್ಲಿ ನಿರುದ್ಯೋಗ ಸಮಸ್ಯೆ ಇದೆ. ಎಲ್ಲ ವಿಶ್ವವಿದ್ಯಾಲಯಗಳಲ್ಲಿ ಹೊರಗುತ್ತಿಗೆ ವ್ಯವಸ್ಥೆ ಜಾರಿ ಮಾಡಲಾಗಿದೆ. ಸರ್ಕಾರ ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಬೇಕು

ಬಿ.ಕೆ. ಹರಿಪ್ರಸಾದ್, ವಿಧಾನ ಪರಿಷತ್ ವಿರೋಧ ಪಕ್ಷದ ನಾಯಕ

‘ರಾಜಕೀಯ ಪ್ರಭಾವದಿಂದ ಈಗಲ್‌ಟನ್‌ಗೆ ದಂಡ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಮನಗರ ಜಿಲ್ಲೆಯ ಪ್ರಭಾವಿ ರಾಜಕೀಯ ನಾಯಕರೊಬ್ಬರ ಹಸ್ತಕ್ಷೇಪದಿಂದ ಬಿಡದಿಯ ಈಗಲ್‌ಟನ್ ರೆಸಾರ್ಟ್ ಮಾಲೀಕರಿಗೆ ₹ 982 ಕೋಟಿ ದಂಡ ವಿಧಿಸಿ ಅನ್ಯಾಯ ಮಾಡಲಾಗಿದೆ ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್‌.ಡಿ. ಕುಮಾರಸ್ವಾಮಿ ಆರೋಪಿಸಿದರು.

ವಿಧಾನಸಭೆಯಲ್ಲಿ ಬುಧವಾರ ಬಜೆಟ್ ಮೇಲಿನ ಚರ್ಚೆಯ ಸಂದರ್ಭದಲ್ಲಿ ಈ ವಿಷಯ ಪ್ರಸ್ತಾಪಿಸಿದ ಅವರು, ‘ಚಾಮುಂಡೇಶ್ವರಿ ಬಿಲ್ಡ್‌ಟೆಕ್ ಪ್ರೈವೇಟ್ ಲಿಮಿಟೆಡ್ ಕಂಪನಿಯ ಮಾಲೀಕರು 1986ರಿಂದ ಹಂತ ಹಂತವಾಗಿ ಸರ್ಕಾರದ ಅನುಮತಿ ಪಡೆದುಕೊಂಡು ರೆಸಾರ್ಟ್ ನಿರ್ಮಿಸಿದ್ದಾರೆ. ಸರ್ಕಾರಿ ಜಮೀನು ಅತಿಕ್ರಮಣ ಆರೋಪದಡಿ ₹ 1 ಕೋಟಿಗಿಂತ ಕಡಿಮೆ ದಂಡ ವಿಧಿಸಲಾಗಿತ್ತು. ಅದು ₹ 982 ಕೋಟಿಗೆ ಏರಿಕೆಯಾಗಲು ರಾಜಕೀಯ ಪ್ರಭಾವವೇ ಕಾರಣ’ ಎಂದರು.

ಚುನಾವಣೆಯೊಂದರ ಸಂದರ್ಭದಲ್ಲಿ ರಾಜಕೀಯ ನಾಯಕರೊಬ್ಬರು ತಮ್ಮ ಬೆಂಬಲಿಗರಿಗೆ ಅಲ್ಲಿ ಊಟ ಹಾಕಿಸಿದ್ದರು. ₹ 95,000 ಬಿಲ್ ನೀಡಲಾಗಿತ್ತು. ಆ ಸಿಟ್ಟಿನಿಂದ ಈಗಲ್‌ಟನ್ ರೆಸಾರ್ಟ್ ಮಾಲೀಕರ ಮೇಲೆ ಹಗೆತನ ಸಾಧಿಸುತ್ತಿದ್ದರು. ಜಿಲ್ಲಾಧಿಕಾರಿಯೊಬ್ಬರ ಮೇಲೆ ಒತ್ತಡ ಹೇರಿ ಇಷ್ಟು ದೊಡ್ಡಮೊತ್ತದ ದಂಡ ಹಾಕಿಸಿದ್ದಾರೆ. ಇದರಿಂದ ರೆಸಾರ್ಟ್ ಮಾಲೀಕರ ಕುಟುಂಬಕ್ಕೆ ಅನ್ಯಾಯವಾಗಿದೆ ಎಂದು ಅವರು ದೂರಿದರು.

‘ರೆಸಾರ್ಟ್ ಮಾಲೀಕರ ಮಗನನ್ನು ಕರೆಸಿ, ಸಮಸ್ಯೆ ಕುರಿತು ಮಾತನಾಡಿದೆ. ಎಲ್ಲ ದಾಖಲೆಗಳನ್ನೂ ನೀಡಿದ ಅವರು ನೈಜ ವಿಷಯ ತಿಳಿಸಿದರು. ಈಗ ಸರ್ಕಾರ ಅವರಿಗೆ ನ್ಯಾಯ ಕೊಡಬೇಕು’ ಎಂದು ಒತ್ತಾಯಿಸಿದರು.

‘ವೆಸ್ಟ್ ಎಂಡ್‌ಗೆ ಹೋಗಲ್ಲ’

‘ಬಿಡದಿಯ ತೋಟದ ಮನೆಯಲ್ಲೇ ಒಂದು ವರ್ಷದಿಂದ ಇದ್ದೇನೆ. ನಾನೀಗ ತಾಜ್ ವೆಸ್ಟ್ ಎಂಡ್‌ಗೆ ಹೋಗುವುದಿಲ್ಲ’ ಎಂದು ಎಚ್‌.ಡಿ. ಕುಮಾರಸ್ವಾಮಿ ಹೇಳಿದರು.

ಈಗಲ್‌ಟನ್ ರೆಸಾರ್ಟ್ ಕುರಿತು ಮಾತನಾಡುವಾಗ ಅವರು ಈ ಮಾತು ಹೇಳಿದರು. ವೆಸ್ಟ್ ಎಂಡ್‌ನಲ್ಲಿ ರೈತರ ಮಕ್ಕಳಿಗೆ ಶೇಕಡ 10ರಷ್ಟು ರಿಯಾಯಿತಿ ಕೊಡಿಸುವಂತೆ ಕಾನೂನು ಸಚಿವ ಜೆ.ಸಿ. ಮಾಧುಸ್ವಾಮಿ ಕೇಳಿದರು.

‘ನಾನೊಬ್ಬನೇ ಅಲ್ಲಿಗೆ ಹೋಗುವವನಲ್ಲ. ಅನೇಕರು ಹೋಗುತ್ತಾರೆ. ನಮ್ಮ ವಿಷಯ ಮಾತ್ರ ಪ್ರಚಾರವಾಗಿದೆ’ ಎಂದು ಕುಮಾರಸ್ವಾಮಿ ಪ್ರತಿಕ್ರಿಯಿಸಿದರು.



ವಿಧಾನಸಭೆ ಕಲಾಪವನ್ನು ಬುಧವಾರ ವೀಕ್ಷಿಸಿದ ವಿದ್ಯಾರ್ಥಿಗಳು – ಪ್ರಜಾವಾಣಿ ಚಿತ್ರ

ಕೈವಾರ ತಾತಯ್ಯ ಜಯಂತಿ ದಿನಾಂಕ ಬದಲಿಸಲು ಮನವಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೈವಾರದ ಸದ್ಗುರು ಯೋಗಿನಾರೇಯಣ ತಾತಯ್ಯ ಅವರ ಜಯಂತ್ಯುತ್ಸವವನ್ನು ಪ್ರತಿ ವರ್ಷ ಮಾರ್ಚ್ 27ರಂದು ಆಚರಿಸುವ ಬದಲು ಫಲ್ಗುಣ ಮಾಸದ ಹುಣ್ಣಿಮೆಯಂದು ಆಚರಿಸಬೇಕು ಎಂದು ಕೈವಾರ ಕ್ಷೇತ್ರದ ಧರ್ಮಾಧಿಕಾರಿ ಎಂ.ಆರ್.ಜಯರಾಮ್ ಅವರು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರನ್ನು ಒತ್ತಾಯಿಸಿದ್ದಾರೆ.

ಮುಖ್ಯಮಂತ್ರಿ ಬೊಮ್ಮಾಯಿ ಹಾಗೂ ಬಿ.ಎಸ್.ಯಡಿಯೂರಪ್ಪ ಅವರನ್ನು ಬುಧವಾರ ಭೇಟಿ ಮಾಡಿದ ಅವರು, ಕೈವಾರ ತಾತಯ್ಯ ಅವರ ಜಯಂತಿಯನ್ನು ಸರ್ಕಾರದ ವತಿಯಿಂದ ಆಚರಿಸಲು ತೀರ್ಮಾನಿಸಿದ್ದಕ್ಕೆ ಧನ್ಯವಾದ ಅರ್ಪಿಸಿದರು.

‘ತಾತಯ್ಯ ಅವರ ಜಯಂತಿಯನ್ನು ಇಂಗ್ಲಿಷ್ ಕ್ಯಾಲೆಂಡರ್ ಪ್ರಕಾರ ಪ್ರತಿ ವರ್ಷ ಮಾರ್ಚ್ 27ರಂದು ಆಚರಿಸುವುದಾಗಿ ಸರ್ಕಾರ ತಿಳಿಸಿದೆ. ಕೈವಾರ ತಾತಯ್ಯ ಅವರು ಕ್ರಿಸ್ತಶಕ 1726ರಂದು ಫಲ್ಗುಣ ಮಾಸದ ಹುಣ್ಣಿಮೆಯಂದು ಅವತಾರ ಪುರುಷರಾಗಿ ಜನಿಸಿದ್ದರು. ಶ್ರೀಮಠವು ಅಧಿಕೃತವಾಗಿ ಪ್ರಕಟಿಸಿರುವ ತಾತಯ್ಯ ಅವರ ಜೀವನ ಚರಿತ್ರೆಯಲ್ಲೂ ಇದನ್ನು ಉಲ್ಲೇಖಿಸಲಾಗಿದೆ. ಹಾಗಾಗಿ ಅವರ ಜಯಂತಿಯ ದಿನಾಂಕವನ್ನು ತಿದ್ದುಪಡಿ ಮಾಡಿ ಆದೇಶ ಹೊರಡಿಸಬೇಕು’ ಎಂದು ಅವರು ಮುಖ್ಯಮಂತ್ರಿಯವರನ್ನು ಒತ್ತಾಯಿಸಿದರು.



ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೆ ಎಂ.ಆರ್. ಜಯರಾಮ್ ಅವರು ಸ್ಮರಣಿಕೆ ನೀಡಿ ಅಭಿನಂದಿಸಿದರು

ಮಾಜಿ ಶಾಸಕರೊಬ್ಬರ ಪುತ್ರ ಶಾಸಕರ ಕಾರು ತೊಳೆಯುತ್ತಿದ್ದ!

ಬೆಂಗಳೂರು: ‘ರಾಜಕೀಯದಿಂದ ವಿಶ್ರಾಂತಿ ಪಡೆದಿದ್ದ ಮಾಜಿ ಶಾಸಕರೊಬ್ಬರ ಪುತ್ರ, ಇತರ ಶಾಸಕರ ಕಾರು ತೊಳೆದು ಜೀವನ ನಡೆಸುತ್ತಿದ್ದ ಅಸಹಾಯಕ ಪರಿಸ್ಥಿತಿ ಗಮನಿಸಿ ನೊಂದಿದ್ದ ಅಂದಿನ ಮುಖ್ಯಮಂತ್ರಿ ದೇವರಾಜ ಅರಸು ಅವರು ಶಾಸಕರಿಗೆ ಪಿಂಚಣಿ ಸೌಲಭ್ಯ ಜಾರಿಗೆ ತಂದಿದ್ದರು’ ಎಂದು ಬಿಜೆಪಿಯ ಎಚ್. ವಿಶ್ವನಾಥ್ ನೆನಪಿಸಿದರು.

ವಿಧಾನ ಪರಿಷತ್‌ನಲ್ಲಿ ಬಜೆಟ್ ಮೇಲೆ ಜೆಡಿಎಸ್‌ನ ಬೋಜೇಗೌಡ ಮಾತನಾಡುತ್ತಿದ್ದ ವೇಳೆ ಮಧ್ಯಪ್ರವೇಶಿಸಿದ ಅವರು, ‘ಮಧುಗಿರಿಯಿಂದ ಆಯ್ಕೆಯಾಗಿದ್ದ ಶಾಸಕರೊಬ್ಬರ ಇಬ್ಬರು ಮಕ್ಕಳು ಇತರೆ ಶಾಸಕರ ಕಾರು ತೊಳೆದು ಜೀವನ ನಡೆಸುತ್ತಿದ್ದರು. ಪ್ರತಿ ದಿನ ಕಾರು ತೊಳೆಯಲು ₹ 2 ಕೇಳುತ್ತಿದ್ದರು. ಪ್ರತಿದಿನ ಕಾಸು ಕೊಡಬೇಕೇ ಎಂದು ಹುಡುಗನ ಕೆನ್ನೆಗೆ ಬಾರಿಸಿದ್ದೆ’ ಎಂದರು.

ಆಗ ಆ ಹುಡುಗ, ‘ನಾನು ಶಾಸಕರೊಬ್ಬರ ಮಗ, ಕಾರು ತೊಳೆದು ಜೀವನ ನಡೆಸುತ್ತಿದೇನೆ. ನೀವು ಹಣ ನೀಡಲ್ಲ ಎಂದರೆ ಹೇಗೆ’ ಎಂದು ಪ್ರಶ್ನಿಸಿದ್ದ. ಇದರಿಂದ ಮನಸ್ಸಿಗೆ ತೀವ್ರನೋವಾಗಿತ್ತು. ಆ ಹುಡುಗನನ್ನು ಮುಖ್ಯಮಂತ್ರಿಯಾಗಿದ್ದ ದೇವರಾಜ ಅರಸು ಬಳಿ ಕರೆದುಕೊಂಡು ಹೋಗಿ ಉದ್ಯೋಗ ಕೊಡಿಸಿದ್ದೆ. ಅಲ್ಲದೆ, ಸರ್ಕಾರಿ ನೌಕರರಿಗೆ ಪಿಂಚಣಿ ಸೌಲಭ್ಯ ಇದೆ. ಶಾಸಕರಿಗೆ ಇಲ್ಲ ಎಂದು ವಿವರಿಸಿದ್ದೆ’ ಎಂದರು.

ತಕ್ಷಣ ಪ್ರತಿಕ್ರಿಯಿಸಿದ್ದ ದೇವರಾಜ ಅರಸರು, ‘ಶಾಸಕರಿಗೆ ಪಿಂಚಣಿ ಸೌಲಭ್ಯಕ್ಕಾಗಿ ಕರಡು ಕಾಯ್ದೆ ಸಿದ್ದಪಡಿಸಲು ಶಾಸಕರಾಗಿದ್ದ ಜಯಚಂದ್ರ ಅವರಿಗೆ ತಿಳಿಸಿದ್ದರು. ಅಲ್ಲಿಂದ ಪಿಂಚಣಿ ಸೌಲಭ್ಯ ಜಾರಿಯಾಯಿತು’ ಎಂದರು.

‘ನೀರಾವರಿಗೆ ಕಾಂಗ್ರೆಸ್‌ನಿಂದ ಅನ್ಯಾಯ’

ಬೆಂಗಳೂರು: ‘ಕಾಂಗ್ರೆಸ್ ನಡಿಗೆ ಕೃಷ್ಣೆಯ ಕಡೆಗೆ’ ಎಂಬ ಪಾದಯಾತ್ರೆ ಮಾಡಿ, ಅಧಿಕಾರಕ್ಕೆ ಬಂದ ಕಾಂಗ್ರೆಸ್ ನೀರಾವರಿ ಯೋಜನೆಗೆ ವಾಗ್ದಾನ ಮಾಡಿದಷ್ಟು ಹಣ ನೀಡದೇ ಅನ್ಯಾಯ ಮಾಡಿತು ಎಂದು ಜಲಸಂಪನ್ಮೂಲ ಸಚಿವ ಗೋವಿಂದ ಕಾರಜೋಳ ಹರಿಹಾಯ್ದರು.

ಬಜೆಟ್ ಮೇಲಿನ ಚರ್ಚೆಯಲ್ಲಿ ಮಧ್ಯ ಪ್ರವೇಶಿಸಿ ಮಾತನಾಡಿದ ಅವರು, ಕೊಯ್ನಾ ಜಲಾಶಯ ನಿರ್ಮಾಣದ ಸಂದರ್ಭದಲ್ಲಿ ಅಖಂಡ ವಿಜಯಪುರ ಜಿಲ್ಲೆಯಲ್ಲಿ ನೀರು ಹರಿಸಲು ₹2 ಕೋಟಿ ಬೇಕು ಎಂದು ಅಂದಿನ ಮೈಸೂರು ರಾಜ್ಯಕ್ಕೆ ಭಾರತ ಸರ್ಕಾರ ಎರಡು ಬಾರಿ ಪತ್ರ ಬರೆದಿತ್ತು. ಆದರೆ ₹2 ಕೋಟಿ ನೀಡಲು ಸರ್ಕಾರ ಒಪ್ಪಲಿಲ್ಲ. ಆಗ ಕಾಂಗ್ರೆಸ್‌ನದು ತ್ರಿಬಲ್ ಎಂಜಿನ್ ಸರ್ಕಾರ ಇತ್ತು. ಕೇಂದ್ರ, ರಾಜ್ಯ ಮತ್ತು ಮಹಾರಾಷ್ಟ್ರ ಮೂರು ಕಡೆಗಳಲ್ಲಿ ಕಾಂಗ್ರೆಸ್ ಅಧಿಕಾರದಲ್ಲಿ ಇತ್ತು. ಅಂದು ಯೋಜನೆಗೆ ಹಣಕೊಟ್ಟಿದ್ದರೆ ನೀರಾವರಿ ಚಿತ್ರಣವೇ ಬದಲಾಗುತ್ತಿತ್ತು ಎಂದರು.

‘ದುರ್ಬಲ ವರ್ಗದವರ ನಿರ್ಲಕ್ಷ್ಯ’


ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ರೈತರು, ಮಹಿಳೆಯರು, ಕಾರ್ಮಿಕರು, ಹಿಂದುಳಿದ ವರ್ಗಗಳ ವಿರೋಧಿಯಾಗಿರುವ ಬಿಜೆಪಿ ಸರ್ಕಾರ, ಸಾಲ ಮಾಡಿ ಸಾಲ ತೀರಿಸುವ ಬಜೆಟ್ ರೂಪಿಸಿದೆ’ ಎಂದು ವಿಧಾನಪರಿಷತ್ ವಿರೋಧ ಪಕ್ಷದ ನಾಯಕ ಬಿ.ಕೆ. ಹರಿಪ್ರಸಾದ್ ಟೀಕಿಸಿದರು.

ವಿಧಾನ ಪರಿಷತ್‌ನಲ್ಲಿ ಬುಧವಾರ ಬಜೆಟ್ ಮೇಲಿನ ಚರ್ಚೆಯಲ್ಲಿ ಭಾಗವಹಿಸಿ ಮಾತನಾಡಿದ ಅವರು, ‘ದುರ್ಬಲ ವರ್ಗದವರನ್ನು ಸಂಪೂರ್ಣವಾಗಿ ನಿರ್ಲಕ್ಷಿಸಲಾಗಿದೆ. ಕಾಂಗ್ರೆಸ್ ಅಧಿಕಾರದಲ್ಲಿದ್ದಾಗ ಮಿಗತೆಯ ಬಜೆಟ್ ಮಂಡಿಸಿತ್ತು’ ಎಂದು ವಿವರಿಸಿದರು.

‘ರಾಜ್ಯದಲ್ಲಿ ವಿತ್ತೀಯ ಹೊಣೆಗಾರಿಕೆ ಕಾಯ್ದೆಗೆ 2002ರಲ್ಲಿ ಅನುಮೋದನೆ ನೀಡಲಾಗಿತ್ತು. ಅದರ ಪ್ರಕಾರ 2006 ರ ಮಾರ್ಚ್ ವೇಳೆಗೆ, ವಿತ್ತೀಯ ಕೊರತೆ ಶೇ 3ಕ್ಕಿಂತ ಕಡಿಮೆ ಇರಬೇಕು ಎಂದು ಸೂಚಿಸಲಾಗಿತ್ತು. 2018ರಲ್ಲಿ ರಾಜ್ಯದ ಒಟ್ಟು ಸಾಲ ₹2.47 ಲಕ್ಷ ಕೋಟಿ ಇತ್ತು. ಆದರೆ, ಮಾದರಿ ಕರ್ನಾಟಕ ರಾಜ್ಯ ನಿರ್ಮಾಣದ ಭರವಸೆ ನೀಡಿದವರಿಂದ ಮುಂದಿನ ವರ್ಷದ ಮಾರ್ಚ್ ವೇಳೆಗೆ ರಾಜ್ಯದ ಒಟ್ಟು ಸಾಲ ₹5.18 ಲಕ್ಷ ಕೋಟಿಗೆ ಏರಲಿದೆ. ಸಾಲ ಮಾಡುವುದೇ ಸರ್ಕಾರದ ಸಾಧನೆಯಾಗಿದೆ’ ಎಂದರು.

ಕಳೆದ ವರ್ಷದ ಬಜೆಟ್‌ನಲ್ಲಿ ಘೋಷಿಸಿದ್ದ ಹತ್ತಾರು ಯೋಜನೆಗಳನ್ನು ಸದ್ದಿಲ್ಲದೆಯೇ ಕೈಬಿಡಲಾಗಿದೆ ಎಂದು ಪಟ್ಟಿಯನ್ನು ಓದಿದ ಅವರು, ‘ಜನಸಾಮಾನ್ಯರಿಗೆ ಅನುಕೂಲವಾಗುವ ಯೋಜನೆಗಳನ್ನು ಘೋಷಿಸಿಲ್ಲ. ಹಿಂದಿನ ವರ್ಷಗಳ ಬಜೆಟ್‌ನಲ್ಲೂ ಬೋಗಸ್ ಯೋಜನೆಗಳನ್ನು ಪ್ರಕಟಿಸಲಾಗಿತ್ತು. ಡಬಲ್ ಎಂಜಿನ್ ಸರ್ಕಾರ ಎಲ್ಲಿದೆ. ಎಲ್ಲ ವರ್ಗದವರನ್ನು ಸಮಾನವಾಗಿ ಕಾಣುವ ಯೋಜನೆಗಳು ಎಲ್ಲಿವೆ’ ಎಂದು ಪ್ರಶ್ನಿಸಿದರು.



ವಿಧಾನಪರಿಷತ್‌ನಲ್ಲಿ ಬಿ.ಕೆ. ಹರಿಪ್ರಸಾದ್ ಬುಧವಾರ ಮಾತನಾಡಿದರು

ನಿಮ್ಮ ರೀತಿಯಲ್ಲಿ ಜಾತಿ, ಹಣ ಬಲದಿಂದ ಚುನಾವಣೆ ಮಾಡುವ ಕ್ರಿಮಿನಲ್ ನಾನಲ್ಲ. ನನಗೆ ಜಾತಿ, ಹಣ ಬಲ ಇಲ್ಲ

ಬಿ.ಕೆ. ಹರಿಪ್ರಸಾದ್, ವಿಧಾನ ಪರಿಷತ್ ವಿರೋಧ ಪಕ್ಷದ ನಾಯಕ

‘ಟಾಟಾ ದೇಶದ್ರೋಹಿಯೇ?’

‘ಉದ್ಯಮಿ ಟಾಟಾ ಅವರನ್ನು ದೇಶದ್ರೋಹಿ ಎಂದು ಕರೆಯಲಾಗಿದೆ’ ಎಂದು ಬಿ.ಕೆ. ಹರಿಪ್ರಸಾದ್ ನೀಡಿದ ಹೇಳಿಕೆ ವಿಧಾನ ಪರಿಷತ್‌ನಲ್ಲಿ ಬಿಜೆಪಿ ಸದಸ್ಯರ ಜತೆ ವಾಗ್ವಾದಕ್ಕೆ ಕಾರಣವಾಯಿತು.

ಹೇಳಿಕೆಗೆ ಆಕ್ಷೇಪ ವ್ಯಕ್ತಪಡಿಸಿದ ಸಚಿವ ಡಾ.ಸಿ.ಎನ್. ಅಶ್ವತ್ಥ ನಾರಾಯಣ, ಸದಸ್ಯ ಎನ್. ರವಿಕುಮಾರ್ ಹಾಗೂ ಇತರರು, ‘ಟಾಟಾ ದೇಶದ್ರೋಹಿ ಎಂದು ಯಾರು ಹೇಳಿದ್ದಾರೆ. ದಾಖಲೆ ನೀಡಿ. ಟಾಟಾ ನಮ್ಮ ಹೆಮ್ಮೆ. ಕ್ಷಮೆಯಾಚಿಸಬೇಕು’ ಎಂದು ಒತ್ತಾಯಿಸಿದರು.

‘ಆಧಾರ ರಹಿತ ಆರೋಪಗಳನ್ನು ಮಾಡಬೇಡಿ’ ಎಂದು ಸಚಿವ ಕೋಟ ಶ್ರೀನಿವಾಸ ಪೂಜಾರಿ ಹೇಳಿದರು.

ಬಿ.ಕೆ. ಹರಿಪ್ರಸಾದ್, ‘ನಾನು ದಾಖಲೆ ಕೊಡುತ್ತೇನೆ. ಕೇಂದ್ರ ಸಚಿವ ಪೀಯೂಷ್ ಗೋಯಲ್ ಹೇಳಿಕೆ ನೀಡಿದ್ದಾರೆ. ದಾಖಲೆ ನೀಡದಿದ್ದರೆ ಕಡತದಿಂದ ತೆಗೆದು ಹಾಕಿ’ ಎಂದು ಹೇಳಿದರು.

‘ದಾಖಲೆ ಕೊಡುವುದಾಗಿ ಹೇಳಿದ್ದಾರೆ. ಹೀಗಾಗಿ, ದಾಖಲೆ ನೀಡಲಿ’ ಎಂದು ಸಭಾಪತಿ ಬಸವರಾಜ ಹೊರಟ್ಟಿ ಹೇಳಿದರು.

ಗುರುವಾರ, ಮಾರ್ಚ್ 10, 2022 | ಬೆಂಗಳೂರು | ₹ 6.00 | ಸಂಪುಟ 75 | ಸಂಚಿಕೆ 69 | ಪುಟ 16

● www.prajavani.net

/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಸ್ಪರ್ಧಾವಾಣಿ

ಸ್ಪರ್ಧಾತ್ಮಕ ಪರೀಕ್ಷೆ ಬರೆಯುವವರಿಗೆ ವೃತ್ತಪತ್ರಿಕೆ ಓದುವ ಬಗ್ಗೆ ಗೊಂದಲವಿರುತ್ತದೆ. ಹಾಗಾದರೆ ಪತ್ರಿಕೆಯನ್ನು ಏಕೆ ಮತ್ತು ಹೇಗೆ ಓದಬೇಕು?

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
54,647 ▲	16,345 ▲	₹54,720 (ಬೆಂಗಳೂರು)	₹72,900 (ಬೆಂಗಳೂರು)	76.62 ▲

ಒಳ ಪುಟಗಳು

ಚಿನಕುರಳಿ

ಪ್ರಕಾಶ್ ಶೆಟ್ಟಿ



ಉತ್ತರಪ್ರದೇಶ: ಮೂವರು ಅಧಿಕಾರಿಗಳ ವಿರುದ್ಧ ಕ್ರಮ ● ಎಸ್‌ಪಿ, ಬಿಜೆಪಿ ದೂರು–ಪ್ರತಿದೂರು

ಇವಿಎಂ ಸಾಗಣೆಯಲ್ಲಿ ಲೋಪ

ಲಖನೌ/ವಾರಾಣಸಿ (ಪಿಟಿಐ): ಉತ್ತರ ಪ್ರದೇಶ ಲೋಕಸಭಾ ಚುನಾವಣೆಯ ಏಳನೇ ಹಂತದ ಮತದಾನದಲ್ಲಿ ಬಳಸಲಾಗಿದ್ದ ಮತಯಂತ್ರಗಳ ಸಾಗಣೆ ಮತ್ತು ನಿರ್ವಹಣೆಯಲ್ಲಿ ಲೋಪವಾಗಿರುವ ಕೆಲವು ಘಟನೆಗಳು ವರದಿಯಾಗಿವೆ. ನಿಯಮಗಳನ್ನು ಪಾಲಿಸುವಲ್ಲಿ ಲೋಪವಾಗಿದೆ ಎಂಬುದನ್ನು ವಾರಾಣಸಿ, ಸೋನಭದ್ರಾ ಮತ್ತು ಬರೇಲಿ ಜಿಲ್ಲಾ ಚುನಾವಣಾ ಅಧಿಕಾರಿಗಳು ಒಪ್ಪಿಕೊಂಡಿದ್ದಾರೆ. ಈ ಸಂಬಂಧ ಮೂವರು ಅಧಿಕಾರಿಗಳನ್ನು ಚುನಾವಣಾ ಕರ್ತವ್ಯದಿಂದ ಬಿಡುಗಡೆ ಮಾಡಲಾಗಿದೆ.

ಈ ಸಂಬಂಧ ಸಮಾಜವಾದಿ ಪಕ್ಷವು ರಾಜ್ಯ ಹೆಚ್ಚುವರಿ ಮುಖ್ಯ ಚುನಾವಣಾ ಅಧಿಕಾರಿಗೆ ದೂರು ನೀಡಿತ್ತು.

‘ಮತಯಂತ್ರಗಳನ್ನು ತಿರುಚುವ ಉದ್ದೇಶದಿಂದ ಅಕ್ರಮವಾಗಿ, ಅವುಗಳನ್ನು ಸ್ಟ್ರಾಂಗ್‌ರೂಂಗಳಿಂದ ಸಾಗಿಸಲಾಗಿದೆ. ವಾರಾಣಸಿಯ ಪಹಾಡಿಯಾ ಎಣಿಕಾ ಕೇಂದ್ರದಿಂದ ಮೂರು ಟ್ರಕ್‌ಗಳಲ್ಲಿ ಮತಯಂತ್ರಗಳನ್ನು ಸಾಗಿಸಲಾಗಿದೆ. ಒಂದು ಟ್ರಕ್ ಅನ್ನು ನಮ್ಮ ಪಕ್ಷದ ಕಾರ್ಯಕರ್ತರು ತಡೆದು ನಿಲ್ಲಿಸಿದ್ದಾರೆ. ಎರಡು ಟ್ರಕ್‌ಗಳು ಅಲ್ಲಿಂದ ಪರಾರಿಯಾಗಿವೆ. ಆ ಟ್ರಕ್‌ಗಳು ಮತ್ತು ಅದರಲ್ಲಿ ಇದ್ದ ಮತಯಂತ್ರಗಳು ನಾಪತ್ತೆಯಾಗಿವೆ. ವಾರಾಣಸಿ ಜಿಲ್ಲಾಧಿಕಾರಿ ಮತ್ತು ವಾರಾಣಸಿ ವಿಭಾಗೀಯ ಆಯುಕ್ತರನ್ನು ವರ್ಗಾವಣೆ ಮಾಡಬೇಕು’ ಎಂದು ಸಮಾಜವಾದಿ ಪಕ್ಷದ ನಿಯೋಗವು ದೂರಿನಲ್ಲಿ ಆಗ್ರಹಿಸಿತ್ತು.

ವಾರಾಣಸಿಯಲ್ಲಿ ಪತ್ತೆಯಾದ ಇವಿಎಂಗಳನ್ನು ಎಣಿಕೆ ಸಿಬ್ಬಂದಿಯ ತರಬೇತಿಗಾಗಿ ತರಲಾಗಿತ್ತು ಎಂದು ಚುನಾವಣಾ ಆಯೋಗ ತಿಳಿಸಿದೆ.

‘ಲೋಪವಾಗಿರುವುದನ್ನು ಪರಿಶೀಲಿಸಿ, ಕಾನೂನಿನ ಅಡಿ ಕ್ರಮ ತೆಗೆದುಕೊಳ್ಳಲಾಗುತ್ತದೆ’ ಎಂದು ಚುನಾವಣಾ ಅಧಿಕಾರಿ ಹೇಳಿದ್ದರು.

ಏಳನೇ ಹಂತದಲ್ಲಿ ಮತದಾನ ನಡೆದಿದ್ದ ವಾರಾಣಸಿಯ ಪಹಾಡಿಯಾದ ಸ್ಟ್ರಾಂಗ್‌ರೂಂ ಇದ್ದ ಸ್ಥಳದಿಂದ ಮಂಗಳವಾರ ರಾತ್ರಿ ಮೂರು ಟ್ರಕ್‌ಗಳಲ್ಲಿ ಮತಯಂತ್ರಗಳನ್ನು ಸಾಗಿಸಲಾಗಿತ್ತು. ಅವುಗಳಲ್ಲಿ ಒಂದು ಟ್ರಕ್ ಅನ್ನು ಸಮಾಜವಾದಿ ಪಕ್ಷದ ಕಾರ್ಯಕರ್ತರು ತಡೆದು ನಿಲ್ಲಿಸಿದ್ದರು. ಆ ಟ್ರಕ್‌ನಲ್ಲಿದ್ದ ಮತಯಂತ್ರಗಳನ್ನು ಎಣಿಕೆ ಸಿಬ್ಬಂದಿಗೆ ತರಬೇತಿ ನೀಡಲು ಒಯ್ಯಲಾಗುತ್ತಿತ್ತು ಎಂದು ವಾರಾಣಸಿ ಜಿಲ್ಲಾಧಿಕಾರಿ ಕೌಶಲ್ ರಾಜ್ ಶರ್ಮಾ ಮಂಗಳವಾರ ಸ್ಪಷ್ಟನೆ ನೀಡಿದ್ದರು. ಆದರೆ, ವಾರಾಣಸಿ ವಿಭಾಗೀಯ ಆಯುಕ್ತ ದೀಪಕ್ ಅಗರ್ವಾಲ್ ಅವರು ನೀಡಿರುವ ಹೇಳಿಕೆಯು ಇದಕ್ಕೆ ವ್ಯತಿರಿಕ್ತವಾಗಿದೆ. ಅವರು, ‘ಮತಗಟ್ಟೆಗಳಲ್ಲಿ ಇದ್ದ ಹೆಚ್ಚುವರಿ ಮತ್ತು ಬಳಕೆಯಾಗದೇ ಇದ್ದ ಮತಯಂತ್ರಗಳನ್ನು ಮಾತ್ರ ಸಾಗಿಸಲಾಗಿದೆ. ಮತದಾನದಲ್ಲಿ ಬಳಕೆಯಾಗಿದ್ದ ಮತಯಂತ್ರಗಳು ಸ್ಟ್ರಾಂಗ್‌ರೂಂನಲ್ಲಿ ಭದ್ರವಾಗಿವೆ’ ಎಂದು ಹೇಳಿದ್ದಾರೆ.

ಕಸ ಸಾಗಿಸುವ ವಾಹನದಲ್ಲಿ ಮತಯಂತ್ರಗಳು: ಬರೇಲಿ ಜಿಲ್ಲೆಯ ಸ್ಟ್ರಾಂಗ್‌ರೂಂನ ಸಮೀಪ ನಿಲುಗಡೆ ಮಾಡಲಾಗಿದ್ದ ಕಸ ಸಾಗಿಸುವ ವಾಹನದಲ್ಲಿ ಮತಯಂತ್ರಗಳು ಇದ್ದ ಮೂರು ಪೆಟ್ಟಿಗೆಗಳನ್ನು ಮುಚ್ಚಿಟ್ಟಿದ್ದು ಪತ್ತೆಯಾಗಿದೆ. ಸ್ಟ್ರಾಂಗ್‌ರೂಂ ಸಮೀಪ ನಿಲ್ಲಿಸಿದ್ದ ವಾಹನವನ್ನು ಸಮಾಜ ವಾದಿ ಪಕ್ಷದ ಕಾರ್ಯಕರ್ತರು ಪರಿಶೀಲಿಸಿದ್ದಾರೆ.

ಪೆಟ್ಟಿಗೆಗಳನ್ನು ವಾಹನದಿಂದ ತೆಗೆಯುತ್ತಿರುವ ಹಲವು ವಿಡಿಯೊಗಳನ್ನು ಸಮಾಜವಾದಿ ಪಕ್ಷದ ಕಾರ್ಯಕರ್ತರು ಟ್ವೀಟ್ ಮಾಡಿದ್ದಾರೆ. ಆ ವಿಡಿಯೊಗಳು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿವೆ.

11ನೇ ಪುಟ ನೋಡಿ



ಉತ್ತರಪ್ರದೇಶದ ವಿಧಾನಸಭಾ ಚುನಾವಣೆಯ ಮತ ಎಣಿಕೆಗೂ ಮುನ್ನಾ ದಿನವಾದ ಬುಧವಾರ ಸಮಾಜವಾದಿ ಪಕ್ಷದ ಕಾರ್ಯಕರ್ತರು ಗೋರಖ್‌ಪುರ ವಿಶ್ವವಿದ್ಯಾಲಯದ ಮತ ಎಣಿಕೆ ಕೇಂದ್ರದ ಹೊರಗೆ ಇವಿಎಂ ಬಾಕ್ಸ್‌ಗಳನ್ನು ಲೋಡ್ ಮಾಡಿದ್ದ ಟ್ರಕ್ ಪರಿಶೀಲಿಸಿದರು –ಪಿಟಿಐ ಚಿತ್ರ

ಐದು ರಾಜ್ಯಗಳಲ್ಲಿ ಇಂದು ಮತ ಎಣಿಕೆ

ನವದೆಹಲಿ (ಪಿಟಿಐ): ಐದು ರಾಜ್ಯಗಳ ವಿಧಾನಸಭಾ ಚುನಾವಣೆಯ ಮತಎಣಿಕೆ ಗುರುವಾರ ಬೆಳಿಗ್ಗೆ 8 ಗಂಟೆಗೆ ಆರಂಭವಾಗಲಿದೆ. ಮೊದಲಿಗೆ ಅಂಚೆ ಪತ್ರಗಳ ಎಣಿಕೆ ನಡೆಯಲಿದೆ.

ಉತ್ತರ ಪ್ರದೇಶ, ಪಂಜಾಬ್, ಗೋವಾ, ಉತ್ತರಾಖಂಡ ಹಾಗೂ ಮಣಿಪುರದಲ್ಲಿ ಒಟ್ಟು 1,200 ಮತ ಎಣಿಕೆ ಕೇಂದ್ರಗಳನ್ನು ತೆರೆಯಲಾಗಿದ್ದು, ಸುಮಾರು 50 ಸಾವಿರ ಸಿಬ್ಬಂದಿಯನ್ನು ಕರ್ತವ್ಯಕ್ಕೆ ನಿಯೋಜಿಸಲಾಗಿದೆ. ಈ ಎಲ್ಲ ರಾಜ್ಯಗಳಲ್ಲಿ ಒಟ್ಟು 650ಕ್ಕೂ ಹೆಚ್ಚು ವೀಕ್ಷಕರು ಕಾರ್ಯನಿರ್ವಹಿಸಲಿದ್ದಾರೆ.

ಫೆ. 10ರಿಂದ ಮಾರ್ಚ್ 7ರವರೆಗೆ ಏಳು ಹಂತಗಳಲ್ಲಿ ಮತದಾನ ನಡೆದಿತ್ತು. 403 ಕ್ಷೇತ್ರಗಳನ್ನು ಹೊಂದಿರುವ ಉತ್ತರ ಪ್ರದೇಶದಲ್ಲಿ 750ಕ್ಕೂ ಹೆಚ್ಚು ಮತ ಎಣಿಕೆ ಕೇಂದ್ರಗಳನ್ನು ತೆರೆಯಲಾಗಿದೆ. ಪಂಜಾಬ್‌ನಲ್ಲಿ 200 ಮತ ಎಣಿಕೆ ಕೇಂದ್ರಗಳು ಕಾರ್ಯನಿರ್ವಹಿಸಲಿವೆ.

ಎಲ್ಲ ಮತ ಎಣಿಕೆ ಕೇಂದ್ರಗಳಲ್ಲಿ ಕೋವಿಡ್ ಮಾರ್ಗಸೂಚಿಗಳನ್ನು ಪಾಲಿಸಲು ಚುನಾವಣಾ ಆಯೋಗ ಸೂಚಿಸಿದೆ. ಲಸಿಕೆ ಹಾಕಿಸಿಕೊಂಡಿದ್ದರೂ, ಜ್ವರ, ನೆಗಡಿಯ ಲಕ್ಷಣ ಕಂಡುಬಂದವರು ಮತ ಎಣಿಕೆ ಕೇಂದ್ರಕ್ಕೆ ಪ್ರವೇಶಿಸುವಂತಿಲ್ಲ.

ಚುನಾವಣಾ ಫಲಿತಾಂಶದ ಲೈವ್ ಅಪ್‌ಡೇಟ್ಸ್, ಲೈವ್ ಸಂವಾದ ಕಾರ್ಯಕ್ರಮಗಳನ್ನು **Prajavani.net** ತಾಣದಲ್ಲಿ ವೀಕ್ಷಿಸಿ



ಮತಯಂತ್ರಗಳನ್ನು ಕದಿಯುವ ಉದ್ದೇಶ ಇಲ್ಲದೇ ಇದ್ದಿದ್ದರೆ, ಆ ಟ್ರಕ್‌ಗಳನ್ನು ಯಾವುದೇ ಭದ್ರತೆ ಇಲ್ಲದೆ ಒಯ್ದಿದ್ದು ಏಕೆ? ಅವು ಪರಾರಿಯಾದದ್ದು ಏಕೆ?
ಅಖಿಲೇಶ್ ಯಾದವ್,
ಸಮಾಜವಾದಿ ಪಕ್ಷದ ಮುಖ್ಯಸ್ಥ



ಈ ಚುನಾವಣೆಯಲ್ಲಿ ಸಮಾಜವಾದಿ ಪಕ್ಷವು ಸೋಲಲಿದೆ. ಸೋಲಿನ ಕಾರಣವನ್ನು ಮತಯಂತ್ರಗಳ ಮೇಲೆ ಹೊರಿಸಲು ಅಖಿಲೇಶ್ ಯಾದವ್ ಸಿದ್ಧತೆ ಮಾಡಿಕೊಳ್ಳುತ್ತಿದ್ದಾರೆ
ಕೇಶವ ಪ್ರಸಾದ್ ಮೌರ್ಯ,
ಉತ್ತರಪ್ರದೇಶ ಉಪ ಮುಖ್ಯಮಂತ್ರಿ

ರಷ್ಯಾ ಘೋಷಣೆ

‘ಉಕ್ರೇನ್ ಸರ್ಕಾರ ಬೀಳಿಸುವ ಪ್ರಶ್ನೆಯೇ ಇಲ್ಲ’

ಮಾಸ್ಕೊ/ಕೀವ್ (ಎಎಫ್‌ಪಿ/ಪಿಟಿಐ): ‘ಉಕ್ರೇನ್ ಸರ್ಕಾರವನ್ನು ಉರುಳಿಸಲು ರಷ್ಯಾ ಪಡೆಗಳು ಕಾರ್ಯಾಚರಣೆ ನಡೆಸುತ್ತಿಲ್ಲ. ಅಲ್ಲಿನ ಬಿಕ್ಕಟ್ಟನ್ನು ಪರಿಹರಿಸಲು ಉಕ್ರೇನ್‌ನ ಅಧಿಕಾರಿಗಳೊಂದಿಗೆ ಮಾತುಕತೆ ನಡೆಸಲಾಗುತ್ತಿದೆ’ ಎಂದು ರಷ್ಯಾ ಬುಧವಾರ ಹೇಳಿದೆ.

ಯುದ್ಧದಿಂದ ಜರ್ಜರಿತವಾಗಿರುವ ಉಕ್ರೇನ್ ರಾಜಧಾನಿ ಕೀವ್ ನಗರ ಸೇರಿ ಆರು ಪ್ರದೇಶಗಳಿಂದ ನಾಗರಿಕರನ್ನು ಸ್ಥಳಾಂತರಿಸಲು 12 ಗಂಟೆಗಳ ಕದನ ವಿರಾಮವನ್ನು ರಷ್ಯಾ ಮತ್ತು ಉಕ್ರೇನ್ ಘೋಷಿಸಿದ್ದವು. ಇದರಿಂದ ನಾಗರಿಕರ ಸ್ಥಳಾಂತರ ಪ್ರಕ್ರಿಯೆಗೆ ಒಂದಿಷ್ಟು ಚುರುಕು ಸಿಕ್ಕಿದೆ.

ರಷ್ಯಾದ ವಿದೇಶಾಂಗ ಸಚಿವಾಲಯದ ವಕ್ತಾರರಾದ ಮಾರಿಯಾ ಜಖರೋವಾ, ಎರಡು ದೇಶಗಳ ನಿಯೋಗದ ನಡುವೆ ನಡೆದಿರುವ ಮೂರು ಸುತ್ತಿನ ಮಾತುಕತೆಯನ್ನು ಉಲ್ಲೇಖಿಸಿ, ‘ಈ ನಿಟ್ಟಿನಲ್ಲಿ ಒಂದಿಷ್ಟು ಪ್ರಗತಿ ಸಾಧಿಸಿದ್ದೇವೆ. ಪ್ರಸ್ತುತ ಉಕ್ರೇನ್‌ನಲ್ಲಿ ಅಸ್ತಿತ್ವದಲ್ಲಿರುವ ಸರ್ಕಾರವನ್ನು ಕಿತ್ತೊಗೆಯುವ ಉದ್ದೇಶದಿಂದ ನಾವು ಸೇನಾಪಡೆಗಳನ್ನು ನಿಯೋಜಿಸಿಲ್ಲ’ ಎಂದು ಸುದ್ದಿಗೋಷ್ಠಿಯಲ್ಲಿ ಹೇಳಿದರು.

ಮಂಗಳವಾರ ವಿಡಿಯೊ ಸಂವಾದದ ಮೂಲಕ ಬ್ರಿಟನ್‌ನ ಹೌಸ್ ಆಫ್ ಕಾಮನ್ಸ್‌ನಲ್ಲಿ ಐತಿಹಾಸಿಕ ಭಾಷಣ ಮಾಡಿದ್ದ ಝೆಲೆನ್‌ಸ್ಕಿ, ತಮ್ಮ ದೇಶದ ಮೇಲೆ ಆಕ್ರಮಣ ಮಾಡಿರುವ ರಷ್ಯಾವನ್ನು ‘ಭಯೋತ್ಪಾದಕ ದೇಶ’ವಾಗಿ ಪರಿಗಣಿಸಬೇಕು ಎಂದು ಬ್ರಿಟನ್ ಸಂಸದರನ್ನು ಒತ್ತಾಯಿಸಿದ್ದರು.

5ನೇ ಪುಟ ನೋಡಿ

1998ನೇ ಸಾಲಿನ ‘ಎ’,‘ಬಿ’ ಪ್ರೊಬೆಷನರಿ ಹುದ್ದೆ

ಕೆಪಿಎಸ್‌ಸಿ ಹಗರಣ ಯಥಾಸ್ಥಿತಿಗೆ ಆದೇಶ

ಬೆಂಗಳೂರು: 1998ನೇ ಸಾಲಿನ ‘ಎ’ ಮತ್ತು ‘ಬಿ’ ಪ್ರೊಬೆಷನರಿ ಹುದ್ದೆಗಳಿಗೆ ಸಂಬಂಧಿಸಿದಂತೆ ಕರ್ನಾಟಕ ಲೋಕ ಸೇವಾ ಆಯೋಗ (ಕೆಪಿಎಸ್‌ಸಿ) 2021ರ ಜ. 30ರಂದು ಸಿದ್ಧಪಡಿಸಿರುವ ನೇಮಕಾತಿ ಅಂತಿಮ ಪಟ್ಟಿಯ ಕುರಿತು ಯಥಾಸ್ಥಿತಿ ಕಾಯ್ದುಕೊಳ್ಳುವಂತೆ ಹೈಕೋರ್ಟ್ ಆದೇಶಿಸಿದೆ.

ಅಂತಿಮ ಪಟ್ಟಿಯನ್ನು ಪ್ರಶ್ನಿಸಿ ವಾಣಿಜ್ಯ ತೆರಿಗೆ ಇಲಾಖೆ ಜಂಟಿ ನಿರ್ದೇಶಕ ಗಂಜಿ ದತ್ತಾತ್ರೇಯ ಮತ್ತು ಎಪಿಎಂಸಿ ಇಲಾಖೆ ಕಾರ್ಯದರ್ಶಿ ಟಿ.ಎ. ಮಹೇಶ ಸೇರಿದಂತೆ 10 ಮಂದಿ ಅಧಿಕಾರಿಗಳು ಸಲ್ಲಿಸಿರುವ ರಿಟ್ ಅರ್ಜಿಯನ್ನು ನ್ಯಾಯಮೂರ್ತಿ ಜಿ.ನರೇಂದರ್ ನೇತೃತ್ವದ ವಿಭಾಗೀಯ ನ್ಯಾಯಪೀಠ ವಿಚಾರಣೆ ನಡೆಸಿ, ‘ಅರ್ಜಿದಾರರಿಗೆ ಸಂಬಂಧಿಸಿದಂತೆ ಅಂತಿಮ ಪಟ್ಟಿ ಕುರಿತು ಯಥಾಸ್ಥಿತಿ ಕಾಯ್ದುಕೊಳ್ಳಬೇಕು’ ಎಂದು ಕೆಪಿಎಸ್‌ಸಿಗೆ ನಿರ್ದೇಶಿಸಿ ವಿಚಾರಣೆ ಮುಂದೂಡಿದೆ.

‘ಕೆಪಿಎಸ್‌ಸಿ ಸಿದ್ಧಪಡಿಸಿರುವ ನೇಮಕಾತಿ ಅಂತಿಮ ಪಟ್ಟಿಯು, ಹೈಕೋರ್ಟ್ ನೀಡಿರುವ ಆದೇಶಕ್ಕೆ ವಿರುದ್ಧವಾಗಿದೆ ಮತ್ತು ನೈಸರ್ಗಿಕ ನ್ಯಾಯದ ಉಲ್ಲಂಘನೆಯಾಗಿದೆ. ಆದ್ದರಿಂದ, 2021ರ ಜ. 30ರಂದು ಕೆಪಿಎಸ್‌ಸಿ ಪ್ರಕಟಿಸಿದ ನೇಮಕಾತಿ ಅಂತಿಮ ಪಟ್ಟಿಯನ್ನು ರದ್ದುಪಡಿಸಬೇಕು’ ಎಂದು ಅರ್ಜಿದಾರರು ಕೋರಿದ್ದಾರೆ.

ಈ ಮಧ್ಯೆ ಪೀಠವು, ‘ದಿನನಿತ್ಯ ವಿಚಾರಣೆ ನಡೆಸುವ ಮೂಲಕ ಶೀಘ್ರವೇ ಈ ಪ್ರಕರಣವನ್ನು ವಿಲೇವಾರಿ ಮಾಡಲಾಗುವುದು’ ಎಂದು ತಿಳಿಸಿದೆ.

ಶೇ 10ರಷ್ಟು ಶುಲ್ಕ ಹೆಚ್ಚಿಸಿ ಕನ್ನಡ ಶಾಲೆ, ಸಂಸ್ಥೆಗಳ ಗುತ್ತಿಗೆ ನವೀಕರಣ

ಮಾರುಕಟ್ಟೆ ಆಧರಿತ ಶುಲ್ಕ ನಿಗದಿ ಕೈಬಿಟ್ಟ ಬಿಬಿಎಂಪಿ • ಸರ್ಕಾರದ ಅನುಮೋದನೆಗೆ ಪ್ರಸ್ತಾವ ಸಲ್ಲಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಕನ್ನಡ ಶಾಲೆ, ಕಾಲೇಜು ಹಾಗೂ ಕನ್ನಡ ಸಂಘ ಸಂಸ್ಥೆಗಳಿಗೆ ಬಿಬಿಎಂಪಿ ವತಿಯಿಂದ ನೀಡಿರುವ ಸ್ವತ್ತುಗಳ ಗುತ್ತಿಗೆಯನ್ನು ಈಗ ವಿಧಿಸುತ್ತಿರುವುದಕ್ಕಿಂತ ಶೇ 10ರಷ್ಟು ಹೆಚ್ಚು ದರ ನಿಗದಿಪಡಿಸಿ ನವೀಕರಿಸುವ ಪ್ರಸ್ತಾವಕ್ಕೆ ಆಡಳಿತಾಧಿಕಾರಿ ರಾಕೇಶ್ ಸಿಂಗ್ ಅನುಮೋದನೆ ನೀಡಿದ್ದಾರೆ.

ಕೋವಿಡ್‌ನಿಂದಾಗಿ ಬಿಕ್ಕಟ್ಟಿನ ಸ್ಥಿತಿ ನಿರ್ಮಾಣವಾದ ಬಳಿಕ ಸರ್ಕಾರದ ಸೂಚನೆ ಮೇರೆಗೆ ಸ್ವತ್ತುಗಳ ನಗದೀಕರಣಕ್ಕೆ ಮುಂದಾಗಿದ್ದ ಬಿಬಿಎಂಪಿ ಸ್ವತ್ತುಗಳ ಗುತ್ತಿಗೆ ನವೀಕರಣದ ಬದಲು, ಅವುಗಳನ್ನು ಆಯಾ ಸಂಸ್ಥೆಗಳೇ ಖರೀದಿಸಬೇಕು ಎಂದು ಒತ್ತಡ ಹೇರುತ್ತಿತ್ತು. 2020ರ ಆ.09ರಂದು ನಡೆದ ಬಿಬಿಎಂಪಿ ಕೌನ್ಸಿಲ್ ಸಭೆಯಲ್ಲಿ ಪಾಲಿಕೆ ಸದಸ್ಯರು ಇದಕ್ಕೆ ವಿರೋಧ ವ್ಯಕ್ತಪಡಿಸಿದ್ದರು. ಕನ್ನಡ ಸಂಘ ಸಂಸ್ಥೆಗಳು, ಕನ್ನಡ ಶಾಲೆಗಳು ಹಾಗೂ ಕನ್ನಡ ಸಾಹಿತ್ಯ ಪರಿಷತ್ತಿನ ಕೇಂದ್ರಗಳಿಗೆ ಬಿಬಿಎಂಪಿಯಿಂದ ನೀಡಲಾದ ಜಾಗಗಳ ಗುತ್ತಿಗೆ ನವೀಕರಣದ ವೇಳೆ ಪರಾಭಾರೆ ಮಾಡದಂತೆ ಷರತ್ತು ವಿಧಿಸಿ ಅದೇ ಸಂಸ್ಥೆಗೆ ಗುತ್ತಿಗೆಯನ್ನು ನವೀಕರಣ ಮಾಡಲು ಆ ಕೌನ್ಸಿಲ್ ಸಭೆಯಲ್ಲಿ ಸರ್ವಾನುಮತದ ತೀರ್ಮಾನ ಕೈಗೊಳ್ಳಲಾಗಿತ್ತು.

ಪಾಲಿಕೆಯ ಯಾವುದೇ ಸ್ವತ್ತನ್ನು ಗುತ್ತಿಗೆ ನೀಡುವ ಸಂದರ್ಭದಲ್ಲಿ ಅದಕ್ಕೆ ವಿಧಿಸುವ ವಾರ್ಷಿಕ ಗುತ್ತಿಗೆ ಮೊತ್ತವು ಅಲ್ಲಿನ ಮಾರುಕಟ್ಟೆ ಮೌಲ್ಯದ ಶೇ 10ರಷ್ಟಾದರೂ ಇರಬೇಕು ಎಂದು ಬಿಬಿಎಂಪಿಯು 2020ರ ಮಾ.1ರ ಆದೇಶ ಹೊರಡಿಸಿದೆ. ಗುತ್ತಿಗೆ ನವೀಕರಣದ ಸಂದರ್ಭದಲ್ಲಿ ಬಿಬಿಎಂಪಿ ಈ ಆದೇಶದ ಪ್ರಕಾರ ಗುತ್ತಿಗೆ ಮೊತ್ತವನ್ನು ನಿಗದಿಪಡಿಸುತ್ತಿದೆ. ಕೆಲವು ಪ್ರದೇಶಗಳಲ್ಲಿ ಸ್ವತ್ತಿನ ಮಾರುಕಟ್ಟೆ ಮೌಲ್ಯ ಭಾರಿ ಪ್ರಮಾಣದಲ್ಲಿ ಹೆಚ್ಚಳವಾಗಿದೆ. ಅಂತಹ ಕಡೆ ಕಾರ್ಯನಿರ್ವಹಿಸುತ್ತಿರುವ ಕೆಲವು ಸಂಘ ಸಂಸ್ಥೆಗಳು ಯಾವುದೇ ವರಮಾನ ಹೊಂದಿಲ್ಲ. ಹಾಗಾಗಿ ಅವು ಗುತ್ತಿಗೆ ಮೊತ್ತವನ್ನು ಪಾವತಿಸಲಾಗದೇ ಸಮಸ್ಯೆಗೆ ಸಿಲುಕಿದ್ದವು. ಹಿಂದಿನ ಮೊತ್ತಕ್ಕಿಂತ ಶೇ 10ರಷ್ಟು ದರ ನಿಗದಿಪಡಿಸಿ ಸ್ವತ್ತಿನ ಗುತ್ತಿಗೆ ನವೀಕರಿಸುವಂತೆ ಕೆಲ ಸಂಘ ಸಂಸ್ಥೆಗಳು ಬಿಬಿಎಂಪಿಯನ್ನು ಒತ್ತಾಯಿಸಿದ್ದವು. ಈ ಬಗ್ಗೆ ಮುಖ್ಯ ಆಯುಕ್ತ ಗೌರವ್ ಗುಪ್ತ ಅವರು ತೆರಿಗೆ ವಿಧಿಸುವಿಕೆ, ಹಣಕಾಸು, ಅಪೀಲು ಸ್ಥಾಯಿ ಸಮಿತಿಗೆ 2022ರ ಫೆ.15ರಂದು ಪ್ರಸ್ತಾವ ಕಳುಹಿಸಿದ್ದರು. ಈ ಪ್ರಸ್ತಾವಕ್ಕೆ 2022ರ ಫೆ. 22ರಂದು ನಡೆದ ಸ್ಥಾಯಿ ಸಮಿತಿಯ ಸಭೆಯಲ್ಲಿ ಆಡಳಿತಾಧಿಕಾರಿಯವರು ಸಮ್ಮತಿ ನೀಡಿದ್ದಾರೆ.

‘ಸ್ವತ್ತುಗಳ ಗುತ್ತಿಗೆ ನವೀಕರಣದ ಸಂದರ್ಭದಲ್ಲಿ ಮಾರುಕಟ್ಟೆ ದರವನ್ನು ಆಧರಿಸಿ ಗುತ್ತಿಗೆ ಮೊತ್ತವನ್ನು ನಿಗದಿಪಡಿಸುವುದರಿಂದ ಸಮಸ್ಯೆ ಆಗುತ್ತಿದೆ. ಗುತ್ತಿಗೆ ಮೊತ್ತವನ್ನು ಶೇ 10ರಷ್ಟು ಹೆಚ್ಚಿಸಿ ಗುತ್ತಿಗೆ ನವೀಕರಿಸುವಂತೆ ಕೆಲವು ಸಂಘ ಸಂಸ್ಥೆಗಳು ಕೋರಿದ್ದವು. ಈ ಪ್ರಸ್ತಾವಕ್ಕೆ ಆಡಳಿತಾಧಿಕಾರಿಯವರು ಒಪ್ಪಿಗೆ ನೀಡಿದ್ದಾರೆ. ಪ್ರಸ್ತಾವವನ್ನು ಸರ್ಕಾರಕ್ಕೆ ಕಳುಹಿಸಿದ್ದೇವೆ. ಸರ್ಕಾರದ ಸೂಚನೆ ಆಧರಿಸಿ ಮುಂದಿನ ಕ್ರಮ ಕೈಗೊಳ್ಳಲಿದ್ದೇವೆ’ ಎಂದು ಗೌರವ್ ಗುಪ್ತ ‘ಪ್ರಜಾವಾಣಿ’ಗೆ ತಿಳಿಸಿದರು.

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅಭಿಮತ

ಮಹಿಳೆಯರ ಅಭ್ಯುದಯಕ್ಕೆ ಸರ್ಕಾರ ಬದ್ಧ

ಪ್ರಜಾವಾಣಿ ವಾರ್ತೆ



ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಕಾರ್ಯಕ್ರಮ ಉದ್ಘಾಟಿಸಿದರು. ಅಬಕಾರಿ ಸಚಿವ ಕೆ.ಗೋಪಾಲಯ್ಯ, ಪ್ರವಾಸೋದ್ಯಮ ಸಚಿವ ಆನಂದ್ ಸಿಂಗ್, ಮುಜರಾಯಿ ಸಚಿವೆ ಶಶಿಕಲಾ ಜೊಲ್ಲೆ, ಹೇಮಲತಾ ಕೆ.ಗೋಪಾಲಯ್ಯ, ನಟಿ ತಾರಾ ಅನೂರಾಧ, ರಾಘವೇಂದ್ರ ಶೆಟ್ಟಿ, ಮಹಾಲಕ್ಷ್ಮಿ ಎಜುಕೇಷನ್ ಟ್ರಸ್ಟ್ ಅಧ್ಯಕ್ಷ ಜಯರಾಮಯ್ಯ, ನೆ.ಲ.ನರೇಂದ್ರ ಬಾಬು ಹಾಗೂ ಇತರರು ಇದ್ದಾರೆ.

ಬೆಂಗಳೂರು: ‘ಮಹಿಳೆಯರ ಮೇಲೆ ಭರವಸೆ ಇಟ್ಟು ಉತ್ತಮ ಬಜೆಟ್ ನೀಡಲಾಗಿದೆ. ಬಡತನ ರೇಖೆಗಿಂತ ಕೆಳಗಿರುವ ಮಹಿಳೆಯರ ಅಭ್ಯುದಯಕ್ಕಾಗಿ ಸರ್ಕಾರ ವಿಶೇಷ ಯೋಜನೆ ರೂಪಿಸಲಿದೆ’ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

ಮಹಾಲಕ್ಷ್ಮೀ ಎಜುಕೇಷನಲ್ ಟ್ರಸ್ಟ್ ವತಿಯಿಂದ ಶಂಕರಮಠ ಬಡಾವಣೆಯಲ್ಲಿ ಆಯೋಜಿಸಿದ್ದ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

‘4 ಲಕ್ಷ ಮಹಿಳೆಯರಿಗೆ ಉದ್ಯೋಗ ನೀಡುವ ಹಾಗೂ ಪ್ರತಿ ಮಹಿಳಾ ಸಂಘಕ್ಕೆ ₹1.50 ಲಕ್ಷ ಸಹಾಯಧನ ನೀಡುವ ಘೋಷಣೆಗಳನ್ನು ಈ ಬಜೆಟ್‌ನಲ್ಲಿ ಮಾಡಲಾಗಿದೆ. ಇವುಗಳ ಪ್ರಯೋಜನವನ್ನು ಎಲ್ಲ ಮಹಿಳೆಯರು ಪಡೆದುಕೊಂಡು ರಾಜ್ಯವನ್ನು ಅಭಿವೃದ್ಧಿ ಪಥದತ್ತ ಕೊಂಡೊಯ್ಯಬೇಕು’ ಎಂದರು.

‘ಮಹಿಳಾ ಮತ್ತು ಮಕ್ಕಳ ಕಲ್ಯಾಣಕ್ಕಾಗಿ ₹41,018 ಕೋಟಿ ಮೀಸಲಿಡಲಾಗಿದೆ. ಮಹಿಳೆಯರು ಮತ್ತು ಮಕ್ಕಳ ಆರೋಗ್ಯ, ಶಿಕ್ಷಣಕ್ಕೆ ಸರ್ಕಾರ ಆದ್ಯತೆ ನೀಡಿದೆ. ನನ್ನ ಬಜೆಟ್ ಪ್ರಯೋಜನವನ್ನು ಸರಿಯಾಗಿ ಪಡೆದರೆ, ರಾಜ್ಯವನ್ನು ಆರ್ಥಿಕತೆಯ ಸಬಲತೆಯಕಡೆಗೆ ಕೊಂಡೊಯ್ಯಬಹುದು’ ಎಂದರು.

‘ನವ ಭಾರತದ ನಾರಿ’ ಕಾರ್ಯಕ್ರಮದಡಿ 75 ಮಹಿಳೆಯರಿಗೆ ಗೌರವ

ನರೇಗಾದಿಂದ ಮಹಿಳೆಯರ ಆರ್ಥಿಕ ಸ್ಥಿತಿ ಸುಧಾರಣೆ: ಕೆ.ಎಸ್. ಈಶ್ವರಪ್ಪ

ಪ್ರಜಾವಾಣಿ ವಾರ್ತೆ


ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ಪ್ರಯುಕ್ತ ಮಹಿಳಾ ಕಾಯಕ ಬಂಧುಗಳನ್ನು ಗೌರವಿಸಲಾಯಿತು. ಬೆಂಗಳೂರು ಗ್ರಾಮಾಂತರ ಜಿಲ್ಲಾ ಪಂಚಾಯಿತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಕೆ. ರೇವಣಪ್ಪ, ಶಿಲ್ಪಾ ನಾಗ್, ಎಲ್.ಕೆ. ಅತೀಕ್ ಮತ್ತು ಆಯುಕ್ತಾಲಯದ ಮುಖ್ಯ ಕಾರ್ಯಾಚರಣೆ ಅಧಿಕಾರಿ ಪ್ರಾಣೇಶ್ ರಾವ್ ಇದ್ದಾರೆ – ಪ್ರಜಾವಾಣಿ ಚಿತ್ರ

ಬೆಂಗಳೂರು: ‘ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಿಂದಾಗಿ (ನರೇಗಾ) ಮಹಿಳೆಯರು ಸ್ವಾವಲಂಬಿಗಳಾಗುವ ಜತೆಗೆ ಆರ್ಥಿಕವಾಗಿ ಸಬಲರಾಗುತ್ತಿದ್ದಾರೆ. ಈ ಯೋಜನೆಯಡಿ ಕೆಲಸ ಮಾಡಲು ವಿದ್ಯಾವಂತರೂ ಮುಂದೆ ಬರುತ್ತಿದ್ದಾರೆ’ ಎಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಕೆ.ಎಸ್. ಈಶ್ವರಪ್ಪ ತಿಳಿಸಿದರು.


ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ಪ್ರಯುಕ್ತ ಗ್ರಾಮೀಣಾಭಿವೃದ್ಧಿ ಆಯುಕ್ತಾಲಯ ಹಾಗೂ ಬೆಂಗಳೂರು ಗ್ರಾಮಾಂತರ ಜಿಲ್ಲಾ ಪಂಚಾಯಿತಿ ಸಹಯೋಗದಲ್ಲಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಹಮ್ಮಿಕೊಂಡ ‘ನವ ಭಾರತದ ನಾರಿ’ ಕಾರ್ಯಕ್ರಮ ಉದ್ಘಾಟಿಸಿ, ಮಾತನಾಡಿದರು.

‘ನರೇಗಾ ಯೋಜನೆಯಿಂದಾಗಿ ಗ್ರಾಮೀಣ ಪ್ರದೇಶಗಳು ಅಭಿವೃದ್ಧಿಯಾಗುತ್ತಿವೆ. ಜಿಲ್ಲಾ ಪಂಚಾಯಿತಿ ಅಡಿಯಲ್ಲಿದ್ದ ಕೆರೆಗಳನ್ನು ಗ್ರಾಮ ಪಂಚಾಯಿತಿಗಳಿಗೆ ನೀಡಲಾಗಿವೆ. ಇದರಿಂದಾಗಿ ಆ ಕೆರೆಗಳ ಸ್ಥಿತಿ ಸುಧಾರಿಸುತ್ತಿದೆ. ಉದ್ಯೋಗ ಸೃಷ್ಟಿ, ಸಂಪತ್ತು ವೃದ್ಧಿ, ಭೂಮಿಯ ಫಲವತ್ತತೆ ಹೆಚ್ಚಳ ಸೇರಿದಂತೆ ವಿವಿಧ ಪ್ರಗತಿಗೆ ನರೇಗಾ ಸಹಕಾರಿಯಾಗಿದೆ. ಎಂ.ಕಾಂ, ಸಿ.ಎ ಸೇರಿದಂತೆ ವಿವಿಧ ಪದವೀಧರರೂ ನರೇಗಾದಡಿ ಅಭಿವೃದ್ಧಿ ಕಾರ್ಯಕ್ರಮಗಳಿಗೆ ಕೈಜೋಡಿಸುತ್ತಿದ್ದಾರೆ’ ಎಂದು ಹೇಳಿದರು.

ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಎಲ್.ಕೆ. ಅತೀಕ್, ‘ನರೇಗಾ ಯೋಜನೆಯಡಿ ಮಹಿಳೆಯರ ಪಾಲ್ಗೊಳ್ಳುವಿಕೆ ಹೆಚ್ಚಿಸಲು ‘ಮಹಿಳಾ ಕಾಯಕೋತ್ಸವ’ ಯೋಜನೆ ಹಮ್ಮಿಕೊಳ್ಳಲಾಗಿದೆ. ಪ್ರಸಕ್ತ ಸಾಲಿನಲ್ಲಿ ಯೋಜನೆಯಡಿ ಕೇಂದ್ರ ಸರ್ಕಾರವು 16 ಕೋಟಿ ಮಾನವ ದಿನಗಳ ಉದ್ಯೋಗ ಸೃಷ್ಟಿ ಗುರಿ ನೀಡಿದೆ. ಈವರೆಗೆ 15.27 ಕೋಟಿ ಮಾನವ ದಿನಗಳ ಉದ್ಯೋಗ ಸೃಷ್ಟಿ ಮಾಡಲಾಗಿದೆ. ಇದರಲ್ಲಿ ಮಹಿಳೆಯರ ಉದ್ಯೋಗ ಸೃಷ್ಟಿ ಪ್ರಮಾಣ ಶೇ 49.99 ರಷ್ಟು ಇದೆ’ ಎಂದು ತಿಳಿಸಿದರು.

ಸಮಾನ ಕೂಲಿ: ಗ್ರಾಮೀಣಾಭಿವೃದ್ಧಿ ಆಯುಕ್ತಾಲಯದ ಆಯುಕ್ತೆ ಶಿಲ್ಪಾ ನಾಗ್, ‘ಉದ್ಯೋಗ ಖಾತ್ರಿ ಯೋಜನೆಯಡಿ ಮಹಿಳೆಯರಿಗೂ ಪುರುಷರಷ್ಟೇ ಕೂಲಿ ಒದಗಿಸಲಾಗುತ್ತಿದೆ. ಯೋಜನೆಯಡಿ ಮಹಿಳೆಯರ ಭಾಗವಹಿಸುವಿಕೆ ಪ್ರಮಾಣ ಶೇ 50 ರಷ್ಟಿದೆ. ಮುಂದಿನ ದಿನಗಳಲ್ಲಿ ಶೇ 60ಕ್ಕೆ ಹೆಚ್ಚಿಸಲು ಪ್ರಯತ್ನಿಸಲಾಗುವುದು’ ಎಂದರು.

ಈ ವೇಳೆ 75 ಮಹಿಳಾ ಕಾಯಕ ಬಂಧುಗಳನ್ನು ಗೌರವಿಸಲಾಯಿತು.


ನಟ ರಾಘವೇಂದ್ರ ರಾಜ್‌ಕುಮಾರ್ ಅವರು ಚಾಮರಾಜನಗರ ಜಿಲ್ಲೆಯ ಗಾಜನೂರಿಗೆ ಬುಧವಾರ ಭೇಟಿ ನೀಡಿ ಸೋದರತ್ತೆ ನಾಗಮ್ಮ ಅವರ ಆರೋಗ್ಯ ವಿಚಾರಿಸಿದರು

ವಿದ್ಯುತ್ ವ್ಯತ್ಯಯ ಇಂದು

ಬೆಂಗಳೂರು: ನೆಲದಡಿಯಲ್ಲಿ ಕೇಬಲ್ ಅಳವಡಿಸುವ ಕಾರ್ಯ ಕೈಗೊಂಡಿರುವುದರಿಂದ ಇದೇ 10ರಂದು ಬೆಳಿಗ್ಗೆ 10ರಿಂದ ಸಂಜೆ 5ರವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ.

ಸ್ಥಳಗಳು: ಕೆಎಚ್‌ಬಿ 2ನೇ ಹಂತ, ಬಸವೇಶ್ವರ ನಗರ, ಸಣ್ಣಕ್ಕಿ ಬಯಲು, ರಾಮನ್ ಕಾಲೇಜ್ ರಸ್ತೆ, ವೃಷಭಾವತಿ ನಗರ, ಮಾರುತಿ ನಗರ, ದೊಡ್ಡಬೆಲೆ ರಸ್ತೆ, ಡಿ.ಬಿ. ಕಲ್ಲು, ರಾಕ್‌ಲೈನ್ ಸ್ಟುಡಿಯೋ ರಸ್ತೆ, ಸನ್ ಸಿಟಿ, ಬಿ.ಡಿ. ಕಾಲೋನಿ, ದುಬಾಸಿಪಾಳ್ಯ, ಕೋಡಿಪಾಳ್ಯ, ಅನ್ನಪೂರ್ಣೇಶ್ವರಿ ಬಡಾವಣೆ, ಉಪಕಾರ ಬಡಾವಣೆ, ಬಿಇಎಲ್ 1ನೇ ಮತ್ತು 2ನೇ ಹಂತ, ಗಾಂಧಿ ಪಾರ್ಕ್–1 ಸುತ್ತಮುತ್ತ ಪ್ರದೇಶಗಳು.

ನಿಧನ ವಾರ್ತೆ

ಬಿ.ಜಿ.ಅಚ್ಯುತಾಚಾರ್



ಬೆಂಗಳೂರು: ಮತ್ತಿಕೆರೆ ನಿವಾಸಿ ಬಿ.ಜಿ. ಅಚ್ಯುತಾಚಾರ್ (83) ಎಂ.ಎಸ್. ರಾಮಯ್ಯ ಆಸ್ಪತ್ರೆಯಲ್ಲಿ ಬುಧವಾರ ನಿಧನರಾದರು. ಅವರಿಗೆ ಪತ್ನಿ, ಇಬ್ಬರು ಪುತ್ರರು ಹಾಗೂ ಪುತ್ರಿ ಇದ್ದಾರೆ.

ಮೃತರು ಎಚ್.ಎಂ.ಟಿ. ಕಾರ್ಖಾನೆಯಲ್ಲಿ ಕೆಲಸ ಮಾಡಿ ನಿವೃತ್ತರಾಗಿದ್ದರು.

ಶೀಘ್ರದಲ್ಲಿಯೇ ಮಕ್ಕಳ ಆರೋಗ್ಯ ಗಣತಿ

ನವದೆಹಲಿ: ಸ್ಥೂಲಕಾಯ, ಅಪೌಷ್ಟಿಕತೆ ಮತ್ತು ತೀವ್ರ ಅಪೌಷ್ಟಿಕತೆಯಿಂದ ಬಳಲುತ್ತಿರುವ ಮಕ್ಕಳನ್ನು ಪತ್ತೆ ಹಚ್ಚಲು ಸದ್ಯದಲ್ಲಿಯೇ ಕೇಂದ್ರದ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವಾಲಯ ‘ಮಕ್ಕಳ ಆರೋಗ್ಯ ಗಣತಿ’ಯನ್ನು ಹಮ್ಮಿಕೊಳ್ಳಲಿದೆ. ಇದಕ್ಕೆ ಪೂರಕವಾಗಿ ಇದೇ 20 ರಿಂದ 28ರ ವರೆಗೆ ದೇಶದಾದ್ಯಂತ ಸಚಿವಾಲಯ ಅಭಿಯಾನ ಹಮ್ಮಿಕೊಂಡಿದೆ.

ಸರ್ಕಾರವು ಎನ್‌ಜಿಒಗಳ ಸಹಕಾರದೊಂದಿಗೆ ವಿಶೇಷ ಶಿಬಿರಗಳನ್ನು ಈ ಅವಧಿಯಲ್ಲಿ ನಡೆಸಲಿವೆ ಸಚಿವಾಲಯದ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಆಸ್ಪತ್ರೆ ಮೇಲೆ ವೈಮಾನಿಕ ದಾಳಿ: 17 ಮಂದಿ ಗಾಯ

ಕೀವ್/ಎಲ್ವಿವ್ (ಎಎಫ್‌ಪಿ. ರಾಯಿಟರ್ಸ್): ಉಕ್ರೇನ್‌ನ ಬಂದರು ನಗರ ಮರಿಯುಪೋಲ್‌ನಲ್ಲಿರುವ ಮಕ್ಕಳ ಮತ್ತು ಹೆರಿಗೆ ಆಸ್ಪತ್ರೆಯ ಮೇಲೆ ರಷ್ಯಾ ಬುಧವಾರ ರಾತ್ರಿ ವೈಮಾನಿಕ ದಾಳಿ ಮುಂದುವರಿಸಿದ್ದು, ಆಸ್ಪತ್ರೆ ಕಟ್ಟಡ ಹಾನಿಗೊಳಗಾಗಿದೆ. ಇಲ್ಲಿದ್ದವರಲ್ಲಿ ಕನಿಷ್ಠ 17 ಮಂದಿ ಗಾಯಗೊಂಡಿದ್ದಾರೆ ಎಂದು ಸ್ಥಳೀಯ ಅಧಿಕಾರಿಗಳು ಹೇಳಿದ್ದಾರೆ.

ಉಕ್ರೇನ್ ಅಧ್ಯಕ್ಷ ವೊಲೊಡಿಮಿರ್ ಝೆಲೆನ್‌ಸ್ಕಿ ಅವರು ಟ್ವಿಟರ್‌ನಲ್ಲಿ ವೈದ್ಯಕೀಯ ಸಂಕೀರ್ಣದಲ್ಲಿ ಭಾರಿ ಹಾನಿಯಾಗಿರುವ ವಿಡಿಯೊವನ್ನು ಪೋಸ್ಟ್ ಮಾಡಿದ್ದಾರೆ. ಆಸ್ಪತ್ರೆಯನ್ನೇ ಗುರಿಯಾಗಿಸಿಕೊಂಡು ರಷ್ಯಾ ಪಡೆಗಳು ದಾಳಿ ನಡೆಸಿವೆ ಎಂದು ಅವರು ದೂರಿದ್ದಾರೆ.

ಒಂದೇ ದಿನ 40 ಸಾವಿರ ಮಂದಿ ತೆರವು: ಉಕ್ರೇನ್‌ನ ನಗರಗಳಿಂದ ಬುಧವಾರ ಒಂದೇ ದಿನ 40,000 ಕ್ಕೂ ಹೆಚ್ಚು ಜನರನ್ನು ತೆರವುಗೊಳಿಸಲಾಗಿದೆ. ಆದರೆ, ಕೈವ್, ಹಾರ್ಕಿವ್ ಮತ್ತು ಮರಿಯುಪೋಲ್ ನಗರಗಳ ಮೇಲೆ ರಷ್ಯಾ ತೀವ್ರ ದಾಳಿ ನಡೆಸಿರುವುದರಿಂದ ಅಲ್ಲಿಂದ ಜನರನ್ನು ತೆರವುಗೊಳಿಸಲು ಹರಸಾಹಸ ಪಡಬೇಕಾಗಿದೆ ಎಂದು ರಷ್ಯಾ– ಉಕ್ರೇನ್ ಮಾತುಕತೆಯ ಸಂಧಾನಕಾರರಲ್ಲಿ ಒಬ್ಬರಾದ ಡೇವಿಡ್ ಅರಾಖಮಿಯಾ ಹೇಳಿದ್ದಾರೆ.

ಅಮೆರಿಕದಿಂದ ತುರ್ತು ನೆರವು ಉಕ್ರೇನ್(ವಾಷಿಂಗ್ಟನ್ ವರದಿ): ಯುದ್ಧ ಪೀಡಿತ ಉಕ್ರೇನ್‌ಗೆ 13.6 ಶತಕೋಟಿ ಡಾಲರ್ ತುರ್ತು ನೆರವು ನೀಡುವ ಮಸೂದೆಯನ್ನು ಅಮೆರಿಕ ಸಂಸತ್ ಅಂತಿಮಗೊಳಿಸಿದೆ. ಈ ಮೊದಲು ಪ್ರಕಟಿಸಿದ್ದ ಸಹಾಯಕ್ಕಿಂತ ಎರಡು ಪಟ್ಟು ಹೆಚ್ಚು ಮೊತ್ತವನ್ನು ನೀಡಲು ಬೈಡನ್ ಆಡಳಿತ ನಿರ್ಧರಿಸಿದೆ.

‘ಅಡುಗೆ ಎಣ್ಣೆಗೆ ಬದಲಿ ಮೂಲ ಹುಡುಕಾಟ’

ಬೆಂಗಳೂರು: ರಷ್ಯಾ ಹಾಗೂ ಉಕ್ರೇನ್ ನಡುವೆ ನಡೆಯುತ್ತಿರುವ ಯುದ್ಧದ ಪರಿಣಾಮವಾಗಿ ದೇಶದಲ್ಲಿ ಅಡುಗೆ ಲಭ್ಯತೆ ಮೇಲೆ ಒಂದಿಷ್ಟು ಪರಿಣಾಮ ಆಗಬಹುದು ಎಂದು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಹೇಳಿದರು.

ಪಕ್ಷದ ಕಚೇರಿಯಲ್ಲಿ ಬುಧವಾರ ಆಯೋಜಿಸಿದ್ದ ಸಂವಾದ ಕಾರ್ಯಕ್ರಮದಲ್ಲಿ ಅವರು ಸುದ್ದಿಗಾರರ ಪ್ರಶ್ನೆಯೊಂದಕ್ಕೆ ಪ್ರತಿಕ್ರಿಯೆಯಾಗಿ ಈ ಮಾತು ಹೇಳಿದರು. ‘ನಾವು ಈಗಾಗಲೇ ಬೇರೆ ಮೂಲಗಳನ್ನು ಹುಡುಕುವ ಕೆಲಸ ಆರಂಭಿಸಿದ್ದೇವೆ. ಸೂರ್ಯಕಾಂತಿ ಎಣ್ಣೆ ಅಲ್ಲದಿದ್ದರೆ ಭಾರತದಲ್ಲಿ ಬಳಕೆಯಲ್ಲಿ ಇರುವ ಬೇರೆ ಅಡುಗೆ ಎಣ್ಣೆಯನ್ನು ಆಮದು ಮಾಡಿಕೊಳ್ಳಲು ಹುಡುಕಾಟ ಶುರುವಾಗಿದೆ’ ಎಂದು ವಿವರಿಸಿದರು.

ವಾಟ್ಸ್‌ಆ್ಯಪ್ ಗ್ರೂಪ್ ಮೂಲಕ ಸಾಮಾಜಿಕ ಸೇವೆ

ನಡುವಯಸ್ಸಿನಲ್ಲಿ ಸೈಕ್ಲಿಂಗ್ ಸಾಧನೆ

• ಶಿವರಾಜ ರಾಮನಾಳ

ಬೆಂಗಳೂರು: ಸೈಕ್ಲಿಂಗ್ ಪ್ರವೃತ್ತಿ ಮೂಲಕ ದೇಹಾರೋಗ್ಯ ಕಾಪಿಟ್ಟುಕೊಳ್ಳುವ ಸಂದೇಶ ನೀಡುವ ಇವರು ಯುವಜನತೆಗೆ ಮಾದರಿ.

ಸೈಕ್ಲಿಂಗ್ ಮೂಲಕ ಸದೃಢ ಆರೋಗ್ಯ ಕಾಪಾಡಿಕೊಂಡಿರುವ ನೀಳಕಾಯದ ವಿಜಯ್ ಬಿ. ಅವರು ಸದ್ಯ ಕರ್ನಾಟಕ ವಾಣಿಜ್ಯ ಮತ್ತು ಕೈಗಾರಿಕಾ ಮಹಾಮಂಡಳಿಯ (ಎಫ್‌ಕೆಸಿಸಿಐ) ಸಹ ಕಾರ್ಯದರ್ಶಿ.

52 ವರ್ಷದ ವಿಜಯ್ ಅವರು ಮೊದಲು ಕೊಂಚ ದಪ್ಪಗಿದ್ದರು. ಸ್ವಿಮ್ಮಿಂಗ್ ಹವ್ಯಾಸ ಬೆಳೆಸಿಕೊಂಡ ಬಳಿಕ 48ರ ವಯಸ್ಸಿನಲ್ಲಿ ಸಾಮಾನ್ಯ ಸೈಕಲ್ ತುಳಿಯಲು ಆರಂಭಿಸಿದರು. ಆದರೆ, ಸೈಕ್ಲಿಂಗ್‌ಗಾಗಿಯೇ ಪ್ರತ್ಯೇಕ ಉಡುಗೆ, ತೊಡುಗೆಯ ವಸ್ತ್ರಸಂಹಿತೆ ಅಗತ್ಯವಿದೆ ಎಂದು ಒಡನಾಡಿಗಳಿಂದ ಅರಿತರು. ಆಗಿನಿಂದ ನಿತ್ಯ ಆರಂಭವಾದ ಸೈಕಲ್ ಪಯಣದ ಹವ್ಯಾಸ ಪ್ರವೃತ್ತಿಯಾಗಿ ಬದಲಾಯಿತು.

ಮೊದಲು 20, 30 ಕಿ.ಮೀ. ತುಳಿಯಬಹುದು ಎಂದು ಆರಂಭಿಸಿದ ಸೈಕ್ಲಿಂಗ್ ಯಾನ ಈಗ ಸಾವಿರಾರು ಮೈಲುಗಟ್ಟಲೆ ಸಾಗಿದೆ. ಸೈಕ್ಲಿಂಗ್ ಅವರ ಜೀವನನಕ್ಕೆ ಹೊಸ ದಿಕ್ಕು ತೋರಿಸಿದೆ.


ಸೈಕಲ್ ಜೊತೆ ವಿಜಯ್

ಹೊಸ ಬೆಳಕು

ಹಾಗೆಂದು ಅದಕ್ಕಾಗಿ ಅವರು ವೃತ್ತಿ ತೊರೆದಿಲ್ಲ. ಬಿಡುವಿನ ಸಮಯವನ್ನು ಮತ್ತು ರಜಾ ದಿನಗಳನ್ನು ಸೈಕ್ಲಿಂಗ್‌ಗೆ ಮುಡಿಪಿಟ್ಟಿದ್ದಾರೆ.

ವಿಜಯ್ ಅವರು ಬೆಂಗಳೂರು ಮಾತ್ರವಲ್ಲದೆ ವಾರಾಂತ್ಯಗಳಲ್ಲಿ ದೂರದ ಪಯಣ (ಲಾಂಗ್ ರೈಡ್) ಬೆಳೆಸುತ್ತಾರೆ. ನಾಲ್ಕು ವರ್ಷಗಳಲ್ಲಿ ಅವರು ಸೈಕಲ್ ಮೂಲಕವೇ ಮೈಸೂರು, ಮಲೆ ಮಹದೇಶ್ವರ ಬೆಟ್ಟ, ಜೋಗ ಜಲಪಾತ, ಸಿಗಂದೂರು, ತಿರುಪತಿ, ಧರ್ಮಸ್ಥಳ, ಗೋಕಾಕ್, ಬೆಳಗಾವಿ, ಹುಬ್ಬಳ್ಳಿ, ಸಿರಾ, ತುಮಕೂರು ಮೊದಲಾದ ಕಡೆ 90 ಗಂಟೆಗಳಲ್ಲಿ ಪಯಣಿಸಿದ್ದಾರೆ.

ಬೆಳಿಗ್ಗೆ 4.30ಕ್ಕೆ ಆರಂಭವಾಗುವ ವಿಜಯ್ ಅವರ ದಿನಚರಿ, ರಾತ್ರಿ 9.30ರವರೆಗೆ ಮುಕ್ತಾಯಗೊಳ್ಳುತ್ತದೆ. ಸೈಕ್ಲಿಸ್ಟ್‌ಗಳು ಹೆಲ್ಮೆಟ್ ಧಾರಣೆ ಮಾಡಲೇಬೇಕು. ದಾರಿಯಲ್ಲಿ ಹಳ್ಳಗಳಿರುತ್ತವೆ. ಅಪಘಾತಗಳಾಗುವ ಸಾಧ್ಯತೆ ಹೆಚ್ಚಾಗಿರುತ್ತದೆ. ಸುರಕ್ಷತೆ ದೃಷ್ಟಿಯಿಂದ ಇದು ಮುಖ್ಯವಾದುದು ಎಂದು ವಿಜಯ್ ಹೇಳುತ್ತಾರೆ.

‘ಸೈಕ್ಲಿಂಗ್ ನನ್ನ ಜೀವನ ಬದಲಿಸಿದೆ. 77 ಕೆಜಿ ಇದ್ದ ನಾನು ಈಗ 62 ಕೆಜಿಗೆ ಇಳಿದಿದ್ದೇನೆ. ದೇಹದ ಆಕಾರ ಬದಲಾಗಿದೆ. ಆಸ್ತಮಾದಿಂದ ಬಳಲುತ್ತಿದ್ದ ನನಗೆ ಈಗ ಯಾವುದೇ ರೋಗಗಳಿಲ್ಲ. ಸೈಕಲ್ ತುಳಿಯುವುದರಿಂದ ರೋಗ ನಿರೋಧಕ ಶಕ್ತಿ ಹೆಚ್ಚುತ್ತದೆ. ಆರೋಗ್ಯ ತಹಬದಿಯಲ್ಲಿರುತ್ತದೆ. ದೇಹ ದಂಡಿಸಲು ಪಥ್ಯ ಮಾಡಬೇಕಿಲ್ಲ. ಆದರೆ ತಿಂದ ಆಹಾರವನ್ನು ಕರಗಿಸಲು ಶ್ರಮ ಪಡಬೇಕು’ ಎಂದು ಸಲಹೆ ನೀಡುತ್ತಾರೆ ವಿಜಯ್.

ನೆರವಾದ ವಾಟ್ಸ್ ಆ್ಯಪ್ ಗ್ರೂಪ್: ತಾನೂ ಸೈಕಲ್ ತುಳಿಯಬೇಕು ಎಂಬ ಆಸೆ ಚಿಗುರೊಡೆದಾಗ ವಿಜಯ್ ಅವರಿಗೆ ನೆರವಿಗೆ ಬಂದದ್ದು ವಾಟ್ಸ್ ಆ್ಯಪ್ ಗ್ರೂಪ್. ಹೈ ಆನ್ ವೀಲ್ಸ್ ಹೆಸರಿನ ಈ ವಾಟ್ಸ್‌ಆ್ಯಪ್ ಗುಂಪಿನಲ್ಲಿ ಎಲ್ಲ ವಯೋಮಾನದವರು ಇದ್ದಾರೆ. ಸೈಕ್ಲಿಂಗ್‌ಗಾಗಿ ರೂಪಿಸಲಾದ ಈ ಗುಂಪಿನಲ್ಲಿ ವಿಜಯ್ ಅವರು ಸೇರಿದಾಗ 20 ಜನರಿದ್ದರು. ಈಗ ಇವರಿಂದ ಸ್ಫೂರ್ತಿಗೊಂಡು ಇನ್ನೂ 30 ಮಂದಿ ಜೊತೆಯಾಗಿದ್ದಾರೆ. ಎಲ್ಲರೂ ಸೇರಿ ಇದುವರೆಗೆ 25 ಸಾವಿರ ಕಿ.ಮೀ. ತುಳಿದಿರುವುದಾಗಿ ವಿಜಯ್ ಹೇಳುತ್ತಾರೆ.

ನೂರಾರು ಪ್ರಯಾಣಿಕರು ಬಚಾವ್

ಹಠಾತ್ತನೇ ಬಂದ ರೈಲಿಗೆ ಯುವಕ ಬಲಿ

ಪ್ರಜಾವಾಣಿ ವಾರ್ತೆ

ಮಾಲೂರು (ಕೋಲಾರ): ತಾಲ್ಲೂಕಿನ ಟೇಕಲ್ ರೈಲು ನಿಲ್ದಾಣಕ್ಕೆ ಬುಧವಾರ ನಿಗದಿತ ಸಮಯಕ್ಕಿಂತ ತಡವಾಗಿ, ಬಂದ ಜನ ಶತಾಬ್ದಿ ಎಕ್ಸ್‌ಪ್ರೆಸ್ ರೈಲಿಗೆ ಸಿಲುಕಿ ಹಳಿ ದಾಟುತ್ತಿದ್ದ ಕಾಲ್ ಸೆಂಟರ್ ಉದ್ಯೋಗಿ ಮೃತಪಟ್ಟಿದ್ದಾರೆ.


ಶಹಬಾಜ್

ಬೆಳಿಗ್ಗೆ 8 ಗಂಟೆಗೆ ರೈಲು ನಿಲ್ದಾಣದಲ್ಲಿ ಈ ಘಟನೆ ನಡೆದಾಗ ನೂರಾರು ಪ್ರಯಾಣಿಕರು ಹಳಿ ದಾಟುತ್ತಿದ್ದರು. ಅನಿರೀಕ್ಷಿತವಾಗಿ ಬಂದ ರೈಲು ಕಂಡು ಗಾಬರಿಯಾದ ಜನರು ದಿಕ್ಕಾಪಾಲಾಗಿ ಓಡಿ ಪ್ರಾಣ ಉಳಿಸಿಕೊಂಡರು.

ಒಂದೇ ಕ್ಷಣದಲ್ಲಿ ಶಹಬಾಜ್ ಅಹಮ್ಮದ್ ಷರೀಫ್ (25) ಎಂಬ ಯುವಕನ ಛಿದ್ರವಾದ ದೇಹ ಹಳಿ ಮೇಲೆ ಬಿದ್ದಿತ್ತು. ಮತ್ತೊಬ್ಬ ಮಹಿಳೆ ಗಂಭೀರವಾಗಿ ಗಾಯಗೊಂಡಿದ್ದರು. ಬೆಂಗಳೂರಿನ ಕೆ.ಆರ್.ಪುರದ ಕಾಲ್‌ಸೆಂಟರ್ ಉದ್ಯೋಗಿಯಾಗಿದ್ದ ಬಂಗಾರಪೇಟೆಯ ಶಹಬಾಜ್ ನಿತ್ಯ ಕೆಲಸಕ್ಕಾಗಿ ರೈಲಿನಲ್ಲಿ ಬೆಂಗಳೂರಿಗೆ ಹೋಗಿಬರುತ್ತಿದ್ದರು.


ಟೇಕಲ್ ರೈಲು ನಿಲ್ದಾಣದಲ್ಲಿ ಬುಧವಾರ ಅಪಘಾತದ ನಂತರ ಕಂಡು ಬಂದ ದೃಶ್ಯ

ನಡೆದದ್ದು ಏನು?: ಮಾರಿಕುಪ್ಪಂ ಸ್ವರ್ಣ ಪ್ಯಾಸೆಂಜರ್ ರೈಲು ನಿಗದಿಯಂತೆ ಬೆಳಿಗ್ಗೆ 8ಕ್ಕೆ ಟೇಕಲ್ ನಿಲ್ದಾಣಕ್ಕೆ ಬಂದಿತ್ತು. ಟೇಕಲ್ ಮತ್ತು ಬೆಂಗಳೂರು ನಡುವಿನ ಮಾರ್ಗದಲ್ಲಿ ಸಮಸ್ಯೆಯಿದ್ದ ಕಾರಣ ರೈಲನ್ನು ಅರ್ಧ ತಾಸಿಗೂ ಹೆಚ್ಚು ಟೇಕಲ್ ನಿಲ್ದಾಣದಲ್ಲಿ ನಿಲುಗಡೆ ಮಾಡಲಾಗಿತ್ತು.

ಬಂಗಾರಪೇಟೆಯಿಂದ ಬೆಂಗಳೂರು ಕಡೆಗೆ ಹೊರಟಿದ್ದ ಪುಷ್‌ಪುಲ್ ರೈಲನ್ನು ಒಂದನೇ ಪ್ಲಾಟ್‌ಫಾರಂನಲ್ಲಿ ನಿಲುಗಡೆ ಮಾಡಲಾಗಿತ್ತು.

ಈ ರೈಲುಗಳ ನೂರಾರು ಪ್ರಯಾಣಿಕರು ಹಳಿ ದಾಟುವಾಗ ಬೆಂಗಳೂರಿನಿಂದ ಚೆನ್ನೈಗೆ ಹೊರಟಿದ್ದ ಜನ ಶತಾಬ್ದಿ ರೈಲು ಮಧ್ಯದ ಹಳಿಯಲ್ಲಿ ಬಂದಿದ್ದರಿಂದ ಗಾಬರಿಯಾದ ಪ್ರಯಾಣಿಕರು ಆಚೀಚೆ ಜಿಗಿದು ಪ್ರಾಣ ಉಳಿಸಿಕೊಂಡರು.

ರೈಲು ತಡವಾಗಿದ್ದು ಘಟನೆಗೆ ಕಾರಣ

ಶತಾಬ್ದಿ ಎಕ್ಸ್‌ಪ್ರೆಸ್ ಪ್ರತಿನಿತ್ಯ ಬೆಳಿಗ್ಗೆ 6.50ಕ್ಕೆ ಟೇಕಲ್ ಮಾರ್ಗವಾಗಿ ಸಂಚರಿಸುತ್ತಿತ್ತು. ಆದರೆ, ಬುಧ ವಾರ ಆ ರೈಲು ಸುಮಾರು 1 ಗಂಟೆ 40 ನಿಮಿಷ ತಡವಾಗಿ ಸಂಚರಿಸಿದೆ.

ರೈಲು ತಡವಾದ ವಿಷಯ ಪ್ರಯಾಣಿಕರಿಗೆ ತಿಳಿಯದೇ ಗೊಂದಲ ಸೃಷ್ಟಿಯಾಗಿದ್ದರಿಂದ ಈ ಅವಘಡ ನಡೆದಿದೆ ಎಂದು ಪೊಲೀಸರು ಮಾಹಿತಿ ನೀಡಿದ್ದಾರೆ.

ಬೆಂಗಳೂರಿನ ವೈಟ್‌ಫೀಲ್ಡ್ ನಲ್ಲಿ ತಾಂತ್ರಿಕ ಸಮಸ್ಯೆ , ದುರಸ್ತಿ ಕಾರಣ ಬುಧವಾರ ಈ ಮಾರ್ಗವಾಗಿ ಹೋಗುವ ಕೆಲವು ರೈಲುಗಳು ತಡವಾಗಿ ಸಂಚರಿಸಿದವು. ಈ ಬಗ್ಗೆ ಯಾವುದೇ ಮುನ್ಸೂಚನೆ ಇರಲಿಲ್ಲ ಎಂದು ಪ್ರಯಾಣಿಕರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಉಪನಗರ ರೈಲು: ಕಾರಿಡಾರ್–2 ಕಾಮಗಾರಿಗೆ ಶೀಘ್ರ ಚಾಲನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಉಪನಗರ ರೈಲು ಯೋಜನೆಯ ಕಾರಿಡಾರ್–2 ಕಾಮಗಾರಿಯನ್ನು ಮಾರ್ಚ್ ಅಂತ್ಯದ ವೇಳೆಗೆ ಆರಂಭಿಸಲು ಉದ್ದೇಶಿಸಲಾಗಿದೆ’ ಎಂದು ವಸತಿ ಸಚಿವ ವಿ. ಸೋಮಣ್ಣ ತಿಳಿಸಿದರು.


ವಿ.ಸೋಮಣ್ಣ

ವಿಧಾನ ಪರಿಷತ್‌ನಲ್ಲಿ ಬುಧವಾರ ಪ್ರಶ್ನೋತ್ತರ ವೇಳೆಯಲ್ಲಿ ಕಾಂಗ್ರೆಸ್‌ನ ಪ್ರಕಾಶ್ ಕೆ. ರಾಥೋಡ್ ಅವರ ಪರವಾಗಿ ಯು.ಬಿ. ವೆಂಕಟೇಶ್ ಅವರು ಕೇಳಿದ ಪ್ರಶ್ನೆಗೆ ಉತ್ತರಿಸಿದ ಅವರು, ‘ಕಾರಿಡಾರ್–2 ವ್ಯಾಪ್ತಿಯ ಬೈಯಪ್ಪನಹಳ್ಳಿ–ಚಿಕ್ಕಬಾಣಾವರ 25.01 ಕಿ.ಮೀ ಉದ್ದ ಮಾರ್ಗದ ಸಿವಿಲ್ ಕಾಮಗಾರಿಯ ಟೆಂಡರ್ ಕರೆಯಲಾಗಿದ್ದು, ಮಾರ್ಚ್ 1ರಂದು ಟೆಂಡರ್ ಬಿಡ್ಡಿಂಗ್ ತೆರೆಯಲಾಗಿದೆ’ ಎಂದು ವಿವರಿಸಿದರು.

‘ಟೆಂಡರ್ ಕರೆಯುವ ಮುನ್ನ ಭೂಸ್ವಾಧೀನ ಪ್ರಕ್ರಿಯೆ, ವಿನ್ಯಾಸ ರಚನೆಯಂತಹ ಪೂರ್ವಭಾವಿ ಕಾರ್ಯಗಳನ್ನು ಪೂರ್ಣಗೊಳಿಸಲಾಗಿದೆ. ಉಳಿದ ಮೂರು ಕಾರಿಡಾರ್‌ಗಳ ಟೆಂಡರ್ ಕರೆಯಲು ಪೂರ್ವಭಾವಿ ಸಿದ್ಧತೆಗಳನ್ನು ನಡೆಸಲಾಗುತ್ತಿದ್ದು, 2026ರ ವೇಳೆಗೆ ಕಾಮಗಾರಿಯನ್ನು ಪೂರ್ಣಗೊಳಿಸುವ ಗುರಿ ಹೊಂದಲಾಗಿದೆ’ ಎಂದು ತಿಳಿಸಿದರು.

ನಾಲ್ಕು ಕಾರಿಡಾರ್‌ಗಳ ನಿರ್ಮಾಣ

- ಕೆಎಸ್‌ಆರ್ ಬೆಂಗಳೂರು ನಗರ–ದೇವನಹಳ್ಳಿ (41.40 ಕಿ.ಮೀ.)
- ಬೈಯಪ್ಪನಹಳ್ಳಿ–ಚಿಕ್ಕಬಾಣವಾರ (25.01 ಕಿ.ಮೀ)
- ಕೆಂಗೇರಿ–ವೈಟ್ ಫೀಲ್ಡ್ (35.52 ಕಿ.ಮೀ)
- ಹೀಲಲಿಗೆ–ರಾಜನಕುಂಟೆ (46.24 ಕಿ.ಮೀ.)

‘ಉಪನಗರ ರೈಲು ಯೋಜನೆಗೆ ಆರ್ಥಿಕ ವ್ಯವಹಾರಗಳ ಕುರಿತ ಕೇಂದ್ರ ಸಚಿವ ಸಂಪುಟ ಸಮಿತಿಯು 2020ರ ಅಕ್ಟೋಬರ್‌ನಲ್ಲಿ ಅನುಮೋದನೆ ನೀಡಿದೆ. ಈ ಯೋಜನೆಯ ಅಂದಾಜು ವೆಚ್ಚ ₹15,767 ಕೋಟಿಯಾಗಿದೆ. 148.17 ಕಿ. ಮೀ. ಉದ್ದದ ಈ ಯೋಜನೆಯನ್ನು ರಾಜ್ಯ ಸರ್ಕಾರ ಮತ್ತು ರೈಲ್ವೆ ಸಚಿವಾಲಯದ ಜಂಟಿ ಸಂಸ್ಥೆಯಾದ ‘ಕೆ–ರೈಡ್’ ಮೂಲಕ ಕಾರ್ಯಗತಗೊಳಿಸಲಾಗುತ್ತಿದೆ’ ಎಂದು ವಿವರಿಸಿದರು.

ಯು.ಬಿ. ವೆಂಕಟೇಶ್ ಮಾತನಾಡಿ, ‘ಅನುಮೋದನೆ ದೊರೆತು 500ಕ್ಕೂ ಹೆಚ್ಚು ದಿನಗಳಾದರೂ ಯೋಜನೆಗೆ ಶಂಕುಸ್ಥಾಪನೆ ನೆರವೇರಿಸಿಲ್ಲ. ಈ ಯೋಜನೆ ಬಗ್ಗೆ ಮಲತಾಯಿ ಧೋರಣೆ ಮಾಡಬೇಡಿ’ ಎಂದು ಹೇಳಿದರು.

‘ನೀಟ್‌ನಿಂದ ದಕ್ಷಿಣ ರಾಜ್ಯಗಳ ವಿದ್ಯಾರ್ಥಿಗಳಿಗೆ ಅನ್ಯಾಯ’

ಬೆಂಗಳೂರು: ‘ವೈದ್ಯಕೀಯ ಸೀಟುಗಳ ಹಂಚಿಕೆಗೆ ನಡೆಯುವ ರಾಷ್ಟ್ರೀಯ ಅರ್ಹತಾ ಮತ್ತು ಪ್ರವೇಶ ಪರೀಕ್ಷೆಯಿಂದ (ನೀಟ್) ಕರ್ನಾಟಕ ಸೇರಿ ದಕ್ಷಿಣ ರಾಜ್ಯಗಳ ವಿದ್ಯಾರ್ಥಿಗಳಿಗೆ ಅನ್ಯಾಯವಾಗುತ್ತಿದೆ. ಈ ಕುರಿತು ಮರುವಿಮರ್ಶೆ ಮಾಡಬೇಕಾದ ಅಗತ್ಯವಿದೆ’ ಎಂದು ಕಾಂಗ್ರೆಸ್ ಮುಖಂಡ ಎಂ. ವೀರಪ್ಪ ಮೊಯಿಲಿ ಹೇಳಿದರು.


ವೀರಪ್ಪ ಮೊಯಿಲಿ

ಸುದ್ದಿಗಾರರ ಜೊತೆ ಬುಧವಾರ ಮಾತನಾಡಿದ ಅವರು, ‘ನಾನು ಶಿಕ್ಷಣ ಸಚಿವ ಆಗಿದ್ದ ಸಂದರ್ಭದಲ್ಲಿ ಸಿಇಟಿ ಪರೀಕ್ಷೆ ಪರಿಚಯಿಸಿದ್ದೆ. ಪಿಯು ಅಂಕಗಳಿಂದ ಮತ್ತು ಸಿಇಟಿಯಿಂದ ತಲಾ ಶೇ 50ರಷ್ಟು ಅಂಕಗಳನ್ನು ಪರಿಗಣಿಸಿ ವೈದ್ಯಕೀಯ ಮತ್ತು ಎಂಜಿನಿಯರಿಂಗ್ ಕೋರ್ಸ್ ಪ್ರವೇಶಕ್ಕೆ ಅವಕಾಶ ಕಲ್ಪಿಸಿದ್ದೆ. ಉತ್ತಮ ಅಂಕಗಳನ್ನು ಗಳಿಸಿದ್ದ ಎಲ್ಲ ವರ್ಗಗಳ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಅರ್ಹತೆ ಆಧಾರದಲ್ಲಿ ಸೀಟ್‌ಗಳು ಸಿಗುತ್ತಿತ್ತು. ಆದರೆ, ಇದೀಗ ಉತ್ತಮ ಅಂಕ ಗಳಿಸುವ ವಿದ್ಯಾರ್ಥಿಗಳಿಗೆ ವೈದ್ಯಕೀಯ ಸೀಟು ಲಭ್ಯವಾಗದ ಸ್ಥಿತಿ ನಿರ್ಮಾಣವಾಗಿದೆ’ ಎಂದು ಹೇಳಿದರು.

‘ಈಗ ಶೇ 97ರಷ್ಟು ಅಂಕ ಗಳಿಸಿದ್ದರೂ ದೇಶದಲ್ಲಿ ವೈದ್ಯಕೀಯ ಸೀಟು ಸಿಗದಂತಾಗಿದೆ. ಹೀಗಾಗಿ, ಹೊರದೇಶಗಳಿಗೆ ಹೋಗಬೇಕಾದ ಅನಿವಾರ್ಯತೆ ನಿರ್ಮಾಣವಾಗಿದೆ. ಸಿಇಟಿ ಪರಿಚಯಿಸಿದ ಸಂದರ್ಭದಲ್ಲಿ ಎಂಜಿನಿಯರಿಂಗ್‌ಗೆ ₹ 5 ಸಾವಿರ, ವೈದ್ಯಕೀಯಕ್ಕೆ ₹ 12 ಸಾವಿರ ಶುಲ್ಕ ನಿಗದಿ ಮಾಡಲಾಗಿತ್ತು. ನೀಟ್ ಜಾರಿಯಿಂದ ಶುಲ್ಕವೂ ಹೆಚ್ಚಾಗಿದೆ. ಜತೆಗೆ, 12 ವರ್ಷ ಕಲಿತ ಶಿಕ್ಷಣಕ್ಕೆ ಬೆಲೆಯೇ ಇಲ್ಲದಂತಾಗಿದೆ. ಈ ಬೆಳವಣಿಗೆ ಹಲವು ಸಂಶಯಗಳಿಗೆ ಕಾರಣವಾಗಿದೆ. ಹೀಗಾಗಿ, ಆಯಾ ರಾಜ್ಯಗಳು ಈ ನೀಟ್ ಜಾರಿಗೆ ಸಂಬಂಧಿಸಿದಂತೆ ಪುನರ್ ವಿಮರ್ಶೆ ಮಾಡಬೇಕಾದ ಅಗತ್ಯವಿದೆ’ ಎಂದು ಮೊಯಿಲಿ ಅವರು ಹೇಳಿದರು.

‘ಲಕೋಟೆ ಮುಖ್ಯಮಂತ್ರಿ’

ಬೆಂಗಳೂರು: ‘ನಾನು ಮುಖ್ಯಮಂತ್ರಿಯಾದ ಸಂದರ್ಭದಲ್ಲಿ ಪಕ್ಷದ ಹೈಕಮಾಂಡ್ ಮೂವರು ವೀಕ್ಷಕರನ್ನು ರಾಜ್ಯಕ್ಕೆ ಕಳುಹಿಸಿಕೊಟ್ಟಿತ್ತು. ಅತ್ಯಧಿಕ ಬೆಂಬಲ ಹೊಂದಿರುವ ವೀರಪ್ಪ ಮೊಯಿಲಿ ಅವರನ್ನೇ ಮುಖ್ಯಮಂತ್ರಿಯನ್ನಾಗಿ ಮಾಡಲು ಸೂಚಿಸಿದ ಪತ್ರವನ್ನು ಎಐಸಿಸಿ ಅಧ್ಯಕ್ಷರು ಲಕೋಟೆಯಲ್ಲಿ ಕಳುಹಿಸಿಕೊಟ್ಟಿದ್ದರು. ನಂತರ ಇದನ್ನೇ ಮುಂದಿಟ್ಟು ಹಲವರು ಲಕೋಟೆ ಮುಖ್ಯಮಂತ್ರಿ ಎಂದು ಟೀಕಿಸಿದ್ದರು’ ಎಂದು ಕಾಂಗ್ರೆಸ್ ಮುಖಂಡ ವೀರಪ್ಪ ಮೊಯಿಲಿ ಹೇಳಿದರು. ತಮ್ಮ ಆತ್ಮಕಥೆ ‘ನನ್ನ ಬೊಗಸೆಯ ಆಕಾಶ’ ಇದೇ 12ರಂದು ಬಿಡುಗಡೆಯಾಗಲಿದ್ದು, ಅದರಲ್ಲಿ ಈ ವಿಷಯವನ್ನು ಬರೆದುಕೊಂಡಿರುವುದಾಗಿ ಮೊಯಿಲಿ ತಿಳಿಸಿದರು.

‘ನೀಟ್‌ಗೆ ಗರಿಷ್ಠ ವಯೋಮಿತಿ ಇಲ್ಲ’

ನವದೆಹಲಿ (ಪಿಟಿಐ): ವೈದ್ಯಕೀಯ ಪದವಿ ಕೋರ್ಸ್‌ಗಳ ಪ್ರವೇಶಕ್ಕೆ ನೀಟ್ ಪರೀಕ್ಷೆ ಬರೆಯುವವರಿಗೆ ಗರಿಷ್ಠ ವಯೋಮಿತಿಯನ್ನು ರಾಷ್ಟ್ರೀಯ ವೈದ್ಯಕೀಯ ಆಯೋಗವು (ಎನ್‌ಎಂಸಿ) ತೆಗೆದುಹಾಕಿದೆ ಎಂದು ಅಧಿಕಾರಿಗಳು ಬುಧವಾರ ತಿಳಿಸಿದ್ದಾರೆ.

2017ರಲ್ಲಿ ಕೇಂದ್ರೀಯ ಪ್ರೌಢಶಿಕ್ಷಣ ಮಂಡಳಿ (ಸಿಬಿಎಸ್‌ಇ) ಸಾಮಾನ್ಯ ವರ್ಗದ ಅಭ್ಯರ್ಥಿಗಳಿಗೆ ಪರೀಕ್ಷಾ ದಿನಾಂಕಕ್ಕೆ 25 ವರ್ಷ ಮತ್ತು ಮೀಸಲಾತಿಯಡಿ ಬರುವ ಅಭ್ಯರ್ಥಿಗಳಿಗೆ 30 ವರ್ಷಗಳ ಗರಿಷ್ಠ ವಯೋಮಿತಿ ನಿಗದಿಪಡಿಸಿತ್ತು. ಎಸ್‌ಸಿ, ಎಸ್‌ಟಿ, ಒಬಿಸಿ ವರ್ಗಕ್ಕೆ ಸೇರಿದ ಅಭ್ಯರ್ಥಿಗಳಿಗೆ ಐದು ವರ್ಷಗಳ ಸಡಿಲಿಕೆ ನೀಡಲಾಗಿತ್ತು ಎಂದು ಸುತ್ತೋಲೆಯಲ್ಲಿ ಹೇಳಿತ್ತು.

‘2021ರ ಅಕ್ಟೋಬರ್ 21ರಂದು ನಡೆದ 4ನೇ ಎನ್‌ಎಂಸಿ ಸಭೆಯಲ್ಲಿ ನೀಟ್–ಯುಜಿ ಪರೀಕ್ಷೆ ಬರೆಯಲು ಯಾವುದೇ ಗರಿಷ್ಠ ವಯೋಮಿತಿ ಇರಬಾರದೆಂದು ನಿರ್ಧರಿಸಲಾಗಿದೆ. ಹಾಗಾಗಿ ಈ ಮಾರ್ಪಾಡು ಮಾಡಲಾಗಿದೆ’ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಹೈಕೋರ್ಟ್ ಸಿಬ್ಬಂದಿ ಮೇಲೆ ಹಲ್ಲೆ: ಪಿಎಸ್‌ಐ ಅಮಾನತು

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಹೈಕೋರ್ಟ್‌ನ ಸಿಬ್ಬಂದಿ ಮೇಲೆ ಹೈಕೋರ್ಟ್ ಆವರಣದಲ್ಲೇ ಇರುವ ಭದ್ರತಾ ಪೊಲೀಸ್ ಠಾಣೆಯಲ್ಲಿ ಗಂಭೀರ ಹಲ್ಲೆ ನಡೆಸಿದ ಆರೋಪದಡಿ ಠಾಣೆಯ ಸಬ್ ಇನ್‌ಸ್ಪೆಕ್ಟರ್ ಟಿಪ್ಪು ಸುಲ್ತಾನ್ ನಾಯಕವಾಡಿ ಅವರನ್ನು ಅಮಾನತು ಮಾಡಿ ವಿಧಾನಸೌಧ ಭದ್ರತಾ ವಿಭಾಗದ ಡಿಸಿಪಿ ಆದೇಶ ಹೊರಡಿಸಿದ್ದಾರೆ.

ಹೈಕೋರ್ಟ್ ಆವರಣದಲ್ಲಿನ ಮುಖ್ಯ ನ್ಯಾಯಮೂರ್ತಿಗಳ ಕೊಠಡಿ, ಕೋರ್ಟ್ ಹಾಲ್–1ರ ಕೆಳಗಿರುವ ಹೈಕೋರ್ಟ್ ಭದ್ರತಾ ವಿಭಾಗದ ಪೊಲೀಸ್ ಠಾಣೆಯಲ್ಲಿ ಐವರು ಸಿಬ್ಬಂದಿ ಮೇಲೆ ಮಂಗಳವಾರ (ಮಾ.8) ಸಂಜೆ ಕೋರ್ಟ್ ಕಲಾಪ ಮುಗಿದ ನಂತರದ ಅವಧಿಯಲ್ಲಿ ಗಂಭೀರವಾಗಿ ಹಲ್ಲೆ ನಡೆಸಿದ ಆರೋಪಕ್ಕೆ ಸಂಬಂಧಿಸಿದಂತೆ ಅಮಾನತು ಮಾಡಲಾಗಿದೆ ಎಂದು ತಿಳಿದು ಬಂದಿದೆ.

ಹಲ್ಲೆಗೆ ಸಹಕರಿಸಿದ ಆರೋಪದಡಿ ಕಾನ್‌ಸ್ಟೆಬಲ್‌ಗಳಾದ ಎಂ.ಡಿ. ವೆಂಕಟೇಶ್, ಸಿದ್ದಣ್ಣ ಕಳಕೂರು ಮತ್ತು ಶಶಿಕುಮಾರ್ ಅವರನ್ನೂ ಹೈಕೋರ್ಟ್ ವಿಭಾಗದಿಂದ ಎತ್ತಂಗಡಿ ಮಾಡಲಾಗಿದೆ.


ಟಿಪ್ಪು ಸುಲ್ತಾನ್ ನಾಯಕವಾಡಿ

ಏನು ಪ್ರಕರಣ?: ರಾಜ್ಯ ಪ್ರಾಸಿಕ್ಯೂಷನ್ ವಿಭಾಗದಲ್ಲಿನ ಕ್ರಿಮಿನಲ್ ಪ್ರಕರಣವೊಂದು ಮಾರ್ಚ್ 8ರಂದು ವಿಚಾರಣೆಗೆ ನಿಗದಿಯಾಗಿತ್ತು. ಇದರ ಫೈಲ್ ನೀಡುವಂತೆ ಎಸ್‌ಪಿಪಿ–2 ವಿ.ಎಸ್. ಹೆಗಡೆ ಪ್ರಾಸಿಕ್ಯೂಷನ್ ಕಚೇರಿ ಸಿಬ್ಬಂದಿಗೆ ಸೂಚಿಸಿದ್ದರು. ಆದರೆ, ‘ಫೈಲ್ ಇಲ್ಲ’ ಎಂದು ಸಿಬ್ಬಂದಿ ತಿಳಿಸಿದ್ದರು. ಹೆಗಡೆ ಬರಿಗೈಯಲ್ಲೇ ಕೋರ್ಟ್ ಹಾಲ್‌ಗೆ ತೆರಳಿದ್ದರು. ವಿಚಾರಣೆಗೆ ಬಂದ ಪ್ರಕರಣಕ್ಕೆ ನ್ಯಾಯಪೀಠ ತಡೆ ಆದೇಶ ನೀಡಿತ್ತು.

ಕುಪಿತರಾಗಿ ಕಚೇರಿಗೆ ಬಂದ ಹೆಗಡೆ ಸಿಬ್ಬಂದಿಯನ್ನು ತೀವ್ರ ತರಾಟೆಗೆ ತೆಗೆದುಕೊಂಡಿದ್ದರು. ಕಡೆಗೆ ಕಚೇರಿಯ ಎಲ್ಲೆಡೆ ಹುಡುಕಿಸಿದಾಗ, ಒಂದು ಬೀರುವಿನ ಹಿಂದೆ ರಿಟ್ ಪಿಟಿಷನ್‌ಗಳ ಕಡತದಲ್ಲಿ ಅಗತ್ಯವಿರುವ ಫೈಲ್ ಸಿಕ್ಕಿತ್ತು. ‘ಇದು ಹೇಗೆ ಇಲ್ಲಿ ಸೇರಿತು’ ಎಂದು ವಿಚಾರಿಸಿದಾಗ ಸಿಬ್ಬಂದಿ, ‘ನಮಗೆ ಗೊತ್ತಿಲ್ಲ’ ಎಂದು ಹೇಳಿದ್ದರು.

ತಕ್ಷಣವೇ ವಿ.ಎಸ್.ಹೆಗಡೆ ಮತ್ತು ಪ್ರಾಸಿಕ್ಯೂಷನ್ ವಿಭಾಗದ ಶಾಖಾಧಿಕಾರಿ ಹೈಕೋರ್ಟ್ ಭದ್ರತಾ ಪೊಲೀಸರನ್ನು ಕರೆಸಿ, ‘ಫೈಲ್ ಹೇಗೆ ಕಾಣೆಯಾಗಿತ್ತು ಎಂಬುದರ ಬಗ್ಗೆ ಇವರನ್ನು ಸ್ವಲ್ಪ ವಿಚಾರಿಸಿ’ ಎಂದು ತಾಕೀತು ಮಾಡಿ ಸಿಬ್ಬಂದಿಯನ್ನು ಪೊಲೀಸರ ವಶಕ್ಕೆ ಒಪ್ಪಿಸಿದ್ದರು. ಈ ಹಿನ್ನೆಲೆಯಲ್ಲಿ ಟಿಪ್ಪು ಸುಲ್ತಾನ್, ರಿಟ್ ಮತ್ತು ಪ್ರಾಸಿಕ್ಯೂಷನ್ ವಿಭಾಗದ ಎಂಟು ಜನರನ್ನು ಠಾಣೆಗೆ ಕರೆದುಕೊಂಡು ಹೋಗಿದ್ದರು. ‘ಎಂಟು ಜನರಲ್ಲಿ ಮೂವರು ರಾಜ್ಯ ಸರ್ಕಾರಿ ನೌಕರರು ಎಂಬ ಕಾರಣಕ್ಕೆ ಅವರನ್ನು ವಾಪಸು ಕಳುಹಿಸಿ, ಹೊರಗುತ್ತಿಗೆ ಆಧಾರದಲ್ಲಿ ದುಡಿಯುತ್ತಿದ್ದ ಉಳಿದವರ ಮೇಲೆ ಗಂಭೀರ ಹಲ್ಲೆ ನಡೆಸಿದ್ದರು’ ಎಂಬುದು ಪ್ರಕರಣದ ಸಾರಾಂಶ.

ಈ ಕುರಿತಂತೆ ಎಸ್‌ಪಿಪಿ–2 ವಿ.ಎಸ್. ಹೆಗಡೆ ಅವರನ್ನು ‘ಪ್ರಜಾವಾಣಿ’ ಪ್ರತಿಕ್ರಿಯೆಗಾಗಿ ಸಂಪರ್ಕಿಸಿದಾಗ,‘ಹೌದಾ, ಅಮಾನತು ಆಗಿದ್ದಾರಾ? ಯಾರು? ನನಗೇನೂ ಗೊತ್ತಿಲ್ಲವಲ್ಲ. ಬಹುಶಃ ಅಡ್ವೊಕೇಟ್ ಜನರಲ್ ಮಟ್ಟದಲ್ಲೇ ಏನೊ ಆಗಿರಬೇಕು’ ಎಂದರು.

‘ತಮ್ಮ ವ್ಯಾಪ್ತಿಗೆ ಬಾರದ ವಿಷಯದಲ್ಲಿ ಹಸ್ತಕ್ಷೇಪ ನಡೆಸಿದ ಮತ್ತು ಕರ್ತವ್ಯಲೋಪ ಎಸಗಿದ ಆರೋಪಕ್ಕೆ ಸಂಬಂಧಿಸಿದಂತೆ ಟಿಪ್ಪು ಸುಲ್ತಾನ್ ಅವರನ್ನು ವಿಧಾನಸೌಧ ಭದ್ರತಾ ವಿಭಾಗದ ಡಿಸಿಪಿ ಅಮಾನತು ಮಾಡಿದ್ದಾರೆ’ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ನಗರದಲ್ಲಿ ಇಂದು

ಪಿ.ನಂಜುಂಡ ಅವರ ‘ಕಾದಂಬರಿ ಕನ್ನಡಿಯಲ್ಲಿ: ಕಾರಂತ–ತಕಳಿ’ ಪುಸ್ತಕ ಬಿಡುಗಡೆ:ಕಮಲಾ ಹಂಪನಾ, ಅಧ್ಯಕ್ಷತೆ–ವೈ.ವೆಂಕಟೇಶಪ್ಪ, ಅತಿಥಿಗಳು–ಎಲ್.ಜಿ.ಮೀರಾ, ರಾಜಶೇಖರ ಮಠಪತಿ, ರಾಜಪ್ಪ ದಳವಾಯಿ, ತಾರಾಬಾಯಿ, ಕೆ.ಎಂ.ಸುರೇಶ್, ಪಿ.ನಂಜುಂಡ, ಆಯೋಜನೆ–ವಿಜಯ ವಿಕಾಸ ಹಳೆಯ ವಿದ್ಯಾರ್ಥಿಗಳ ಸಂಘ, ಸ್ಥಳ–ಕುವೆಂಪು ಸಭಾಂಗಣ, ವಿಜಯನಗರ ಸರ್ಕಾರಿ ಪ್ರಥಮ ದರ್ಜೆ ಕಾಲೇಜು,ಬೆಳಿಗ್ಗೆ 10.30

‘ಸೌರ ವಿದ್ಯುತ್ ಉತ್ಪಾದನೆಗೆ ಮಾರ್ಗದರ್ಶನ’ ಕುರಿತು ಚರ್ಚೆ:ಸತೀಶ್ ಭಕ್ಷಿ, ಆಯೋಜನೆ ಮತ್ತು ಸ್ಥಳ–ಲಘು ಉದ್ಯೋಗ ಭಾರತಿ ಕರ್ನಾಟಕ, ದೇವೇಗೌಡ ಪೆಟ್ರೋಲ್ ಬಂಕ್ ಹತ್ತಿರ, ಬನಶಂಕರಿ 3ನೇ ಹಂತ, ಸಂಜೆ 4

ಬೆಂಗಳೂರು ಅಂತರರಾಷ್ಟ್ರೀಯ ಚಲನಚಿತ್ರೋತ್ಸವ ಸಮಾರೋಪ ಹಾಗೂ ಪ್ರಶಸ್ತಿ ಪ್ರದಾನ:ರಾಜ್ಯಪಾಲ ಥಾವರಚಂದ್ ಗೆಹಲೋತ್, ಅತಿಥಿಗಳು–ಉನ್ನತ ಶಿಕ್ಷಣ ಸಚಿವ ಸಿ.ಎನ್. ಅಶ್ವತ್ಥನಾರಾಯಣ, ಸಂಸದ ಡಿ. ವಿ.ಸದಾನಂದ ಗೌಡ, ಕರ್ನಾಟಕ ಚಲನಚಿತ್ರ ಅಕಾಡೆಮಿ ಅಧ್ಯಕ್ಷ ಸುನೀಲ್ ಪುರಾಣಿಕ್, ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿ ಅಧ್ಯಕ್ಷ ಡಿ.ಆರ್. ಜಯರಾಜ್, ಸ್ಥಳ–ಜೆ.ಎನ್.ಟಾಟಾ ಆಡಿಟೋರಿಯಂ, ಮಲ್ಲೇಶ್ವರ, ಸಂಜೆ 6.30


ಥಾವರಚಂದ್ ಗೆಹಲೋತ್

ಮಹಿಳಾ ದಿನ ಮತ್ತು ಸನ್ಮಾನ: ಕಾರ್ಯಚಟುವಟಿಕೆಗಳ ಉದ್ಘಾಟನೆ–ದೊಡ್ಡರಂಗೇಗೌಡ, ಸಾಧಕಿಯರಿಗೆ ಸನ್ಮಾನ–ಕೆ.ಆರ್.ಸಂಧ್ಯಾರೆಡ್ಡಿ, ಅಧ್ಯಕ್ಷತೆ–ಎಂ.ಪ್ರಕಾಶಮೂರ್ತಿ, ಆಯೋಜನೆ–ಬೆಂಗಳೂರು ನಗರ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ಸ್ಥಳ–ಕೃಷ್ಣರಾಜ ಪರಿಷನ್ಮಂದಿರ, ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಸಂಜೆ 5.30

‘ದ್ಯಾವನೂರು ಒಡಲಾಳ’ ಉಪನ್ಯಾಸ:ಎ. ಎಂ.ಶಿವಸ್ವಾಮಿ, ಅತಿಥಿಗಳು–ಎಂ.ಸಿ. ನರೇಂದ್ರ, ಅಧ್ಯಕ್ಷತೆ–ಜಗದೀಶ ರೆಡ್ಡಿ, ಆಯೋಜನೆ ಮತ್ತು ಸ್ಥಳ– ಕನ್ನಡ ಯುವಜನ ಸಂಘ, ಹೊಂಬೇಗೌಡ ನಗರ, ಸಂಜೆ 6.30

ವಾರ್ತಾ ಹಾಗೂ ಸಾರ್ವಜನಿಕ ಸಂಪರ್ಕ ಇಲಾಖೆ

"ವಾರ್ತಾ ಸೌಧ", ನಂ.17, ಭಗವಾನ್ ಮಹಾವೀರ ರಸ್ತೆ,
ಬೆಂಗಳೂರು – 560001. ದೂರವಾಣಿ ಸಂಖ್ಯೆ: 080–22028110

ಸಂಖ್ಯೆ:ವಾಸಾಸಂಇ/ಉನಿ(ಪ್ರ)/ವಾಜಮುಟೆ/2021–22/7793 ದಿನಾಂಕ: 07–03–2022

ಇ–ಟೆಂಡರ್ ಪ್ರಕಟಣೆ

ವಾರ್ತಾ ಹಾಗೂ ಸಾರ್ವಜನಿಕ ಸಂಪರ್ಕ ಇಲಾಖೆಯಿಂದ ಪ್ರಕಟಗೊಳ್ಳುವ **"ವಾರ್ತಾ ಜನಪದ" ಕನ್ನಡ ಮಾಸಿಕ ಪತ್ರಿಕೆಯನ್ನು 2022–23ನೇ ಸಾಲಿನ ಏಪ್ರಿಲ್ 2022 ರಿಂದ ಮಾರ್ಚ್ 2023 ರವರೆಗೆ ಮುದ್ರಿಸಿ ಸರಬರಾಜು ಮಾಡಲು** ಬೆಂಗಳೂರಿನಲ್ಲಿ ಬಹುವರ್ಣ ಆಫ್‌ಸೆಟ್ ಮುದ್ರಣ ಯಂತ್ರ ಹೊಂದಿರುವ ಹಾಗೂ ಇ–ಆಡಳಿತ ಇಲಾಖೆಯ ಇ–ಪ್ರೊಕ್ಯೂರ್‌ಮೆಂಟ್‌ನಲ್ಲಿ ಹೆಸರನ್ನು ನೋಂದಾಯಿಸಿಕೊಂಡಿರುವ ಮುದ್ರಕರಿಂದ ದ್ವಿ–ಲಕೋಟೆಯಲ್ಲಿ ಇ–ಟೆಂಡರ್‌ನ್ನು ಆಹ್ವಾನಿಸಲಾಗಿದೆ.

ಇ–ಟೆಂಡರ್‌ನಲ್ಲಿ ಭಾಗವಹಿಸುವವರು ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್: **http://www.eproc.karnataka.gov.in** ನಲ್ಲಿ ಲಾಗಿನ್ ಆಗಿ ದಿನಾಂಕ: **09–03–2022ರ ಮಧ್ಯಾಹ್ನ 3.00 ಗಂಟೆ ನಂತರ** ಡೌನ್‌ಲೋಡ್ ಮಾಡಿಕೊಳ್ಳಬಹುದು.

ಇ–ಟೆಂಡರ್‌ಗಳನ್ನು ಇ.ಎಂ.ಡಿ ಮೊತ್ತದೊಂದಿಗೆ ದಿನಾಂಕ: **08–04–2022ರಂದು ಸಂಜೆ 5.00 ಗಂಟೆಯೊಳಗೆ ಸಲ್ಲಿಸಬಹುದು.** ಟೆಂಡರ್‌ನಲ್ಲಿ ಭಾಗವಹಿಸಲು ಇಚ್ಛಿಸುವ ಟೆಂಡರ್‌ದಾರರು ಅರ್ಹತೆ ಷರತ್ತುಗಳ ವಿವರ ಇತ್ಯಾದಿಗಳನ್ನು ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್: **http://www.eproc.karnataka.gov.in** ನಿಂದ ಪಡೆದುಕೊಳ್ಳಬಹುದು. ಹೆಚ್ಚಿನ ಮಾಹಿತಿಗಾಗಿ ಇ–ಪ್ರೊಕ್ಯೂರ್‌ಮೆಂಟ್ ಸಹಾಯವಾಣಿ ಸಂಖ್ಯೆ: **+91–8046010000, +91–8068948777 ಅಥವಾ ಜಂಟಿ ನಿರ್ದೇಶಕರು (ಪ್ರಕಟಣೆ),** ವಾರ್ತಾ ಹಾಗೂ ಸಾರ್ವಜನಿಕ ಸಂಪರ್ಕ ಇಲಾಖೆ, ನಂ.17, ವಾರ್ತಾಸೌಧ, ಭಗವಾನ್ ಮಹಾವೀರ ರಸ್ತೆ (ಇನ್‌ಫೆಂಟ್ರಿ ರಸ್ತೆ), ಬೆಂಗಳೂರು – 560001, ದೂರವಾಣಿ ಸಂಖ್ಯೆ: **080–22028110** ಮೂಲಕ ಸಂಪರ್ಕಿಸಬಹುದು.

ಸಹಿ/– (ಡಿ.ಪಿ. ಮುರಳೀಧರ್)
ಜಂಟಿ ನಿರ್ದೇಶಕರು (ಪ್ರಕಟಣೆ)
ಆಯುಕ್ತರ ಪರವಾಗಿ

ವಾಸಾಸಂಇ/ಬೆಂ.ನ/ಅಡ್ವರ್ಟೋರ್/3677/2021–22

ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಕಾರ್ಯಪಾಲಕ ಅಭಿಯಂತರರ ಕಚೇರಿ, ರಸ್ತೆ ಮೂಲಭೂತಸೌಕರ್ಯ–
ಟ್ರಾಫಿಕ್ ಇಂಜಿನಿಯರಿಂಗ್ ಸೆಲ್, ನರಸಿಂಹರಾಜ ಚೌಕ, ಬೆಂಗಳೂರು – 02.

ಸಂಖ್ಯೆ: ಕಾಪಾಅ/ರಮೂ–ಟಿಇಸಿ/ಟೆಂಡರ್/07/2021–22 ದಿನಾಂಕ: 09.03.2022

ಅಲ್ಪಾವಧಿ ಟೆಂಡರ್ ಪ್ರಕಟಣೆಗಾಗಿ ಆಹ್ವಾನ (ಐಎಫ್‌ಟಿ) 4ನೇ ಕರೆ
(ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ)

ಕಾರ್ಯಪಾಲಕ ಅಭಿಯಂತರರು, ರಸ್ತೆ ಮೂಲಭೂತಸೌಕರ್ಯ, ಟಿಇಸಿ ವಿಭಾಗ, ಬೃ.ಬೆಂ.ಮ.ಪಾಲಿಕೆ, ಬೆಂಗಳೂರು ಇವರು ಅರ್ಹ ಟೆಂಡರುದಾರರಿಂದ ಈ ಕೆಳಕಂಡ ಕಾಮಗಾರಿಗೆ ಟೆಂಡರನ್ನು ಆಹ್ವಾನಿದ್ದಾರೆ.

ಕಾಮಗಾರಿಯ ಹೆಸರು	ಟೆಂಡರಿಗಿಟ್ಟ ಅಂದಾಜು ಮೊತ್ತ (₹. ಲಕ್ಷ ಗಳಲ್ಲಿ)	ಇಎಂಡಿ (₹. ಲಕ್ಷ ಗಳಲ್ಲಿ)
ಪೂರ್ವ ವಲಯದಲ್ಲಿ ಸಂಚಾರ ಪೊಲೀಸರ ಕೋರಿಕೆಗಳಂತೆ ಪ್ರಧಾನ ಮತ್ತು ಉಪ ಪ್ರಧಾನ ರಸ್ತೆಗಳಲ್ಲಿ ರಂಬ್ಲರ್ ಸ್ಟ್ರಿಪ್ಸ್‌ಗಳಿಗೆ ಥರ್ಮೋಪ್ಲಾಸ್ಟಿಕ್ ಪೈಂಟಿಂಗ್, ಲೇನ್ ಗುರುತಿಸುವಿಕೆ, ಜಂಕ್ಷನ್ ಗುರುತಿಸುವಿಕೆ, ವಿವಿಧ ರೀತಿ ಸೂಚನಾ ಫಲಕಗಳು, ಪೆಲಿಕನ್ ಸಿಗ್ನಲ್ಸ್, ವೈಜ್ಞಾನಿಕ ರಸ್ತೆ ಉಬ್ಬುಗಳು, ಮೀಡಿಯನ್, ಮೀಡಿಯನ್‌ಗಳು ಮತ್ತು ಕರ್ಬ್ ಕಲ್ಲುಗಳಿಗೆ ಬಣ್ಣ ಬಳಿಯುವಿಕೆ, ಹೆಚ್‌ಆರ್‌ಪಿಸಿ ಮತ್ತು ಇತರೆ ಸುರಕ್ಷತೆ ಪೀಠೋಪಕರಣಗಳನ್ನು ಒದಗಿಸುವುದು. (4ನೇ ಕರೆ) ಕೆಡಬ್ಲ್ಯೂ–4	718.00	10.78

ಟೆಂಡರ್ ವೇಳಾಪಟ್ಟಿ: (1) ಟೆಂಡರ್ ದಾಖಲೆಗಳು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ದಿನಾಂಕ:**10.03.2022**ರಿಂದ ಲಭ್ಯವಿರುತ್ತದೆ. (2) ಬಿಡ್–ಪೂರ್ವಭಾವಿ ಸಭೆಯನ್ನು ದಿನಾಂಕ: **14.03.2022**ರ ಮಧ್ಯಾಹ್ನ **3:30** ಗಂಟೆಗೆ ನಡೆಸಲಾಗುವುದು. (3) ಟೆಂಡರ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ **18.03.2022**ರ ಸಂಜೆ **4:00** ಗಂಟೆಯವರೆಗೆ. (4) ತಾಂತ್ರಿಕ ಬಿಡ್ಡನ್ನು ದಿನಾಂಕ: **19.03.2022**ರ ಸಂಜೆ **4:30** ಗಂಟೆಗೆ ತೆರೆಯಲಾಗುವುದು. (5) ಆರ್ಥಿಕ ಬಿಡ್ ತೆರೆಯುವುದನ್ನು **ಟೆಂಡರುದಾರರಿಗೆ ತಿಳಿಸಲಾಗುವುದು.** ಹೆಚ್ಚಿನ ವಿವರಗಳನ್ನು ಮೇಲ್ಕಂಡ ಕಚೇರಿಯಿಂದ ಕೆಲಸದ ವೇಳೆಯಲ್ಲಿ ಅಥವಾ ವೆಬ್‌ಸೈಟ್ **https://eproc.karnataka.gov.in** ನಲ್ಲಿ ಪಡೆದುಕೊಳ್ಳಬಹುದಾಗಿದೆ.

ಸಹಿ/– ಕಾರ್ಯಪಾಲಕ ಅಭಿಯಂತರರು
(ರ.ಮೂ.ಸೌ–ಟಿ.ಇ.ಸಿ)

ಕೋವಿಡ್-19 ಲಕ್ಷಣಗಳು ಇವೆಯೇ? ಸಂಪರ್ಕಿಸಿ, ಆಪ್ತಮಿತ್ರ ಸಹಾಯವಾಣಿ 14410.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಉನ್ನತ ಶಿಕ್ಷಣ ಇಲಾಖೆ

ಕರ್ನಾಟಕ ಸರ್ಕಾರದ ಸಚಿವಾಲಯ, ಬಹುಮಹಡಿಗಳ ಕಟ್ಟಡ, ಬೆಂಗಳೂರು.

ಇ–ಕ್ರಮಾಂಕ: ಇಡಿ/5/ಯುಟಿಟಿ/2022 ದಿನಾಂಕ: 08.03.2022

ಪ್ರಕಟಣೆ

ತುಮಕೂರು ವಿಶ್ವವಿದ್ಯಾಲಯದ ಕುಲಪತಿ ಹುದ್ದೆಯ ನೇಮಕಾತಿ

1. ತುಮಕೂರಿನಲ್ಲಿರುವ ತುಮಕೂರು ವಿಶ್ವವಿದ್ಯಾಲಯದ ಕುಲಪತಿಯ ಹುದ್ದೆಗೆ ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ–2000 ಪ್ರಕರಣ 14(2)ರ ಉಪಬಂಧಗಳನುಸಾರ ನೇಮಕಾತಿ ಮಾಡಲು ಈ ಕೆಳಕಂಡ ಅರ್ಹತೆಯುಳ್ಳ ಪ್ರಾಧ್ಯಾಪಕರು / ಶಿಕ್ಷಣ ತಜ್ಞರುಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.
   - ಉನ್ನತ ಮಟ್ಟದ ಆಡಳಿತ, ಶೈಕ್ಷಣಿಕ ಹಾಗೂ ಸಂಶೋಧನಾ ಸಾಮರ್ಥ್ಯ, ಪ್ರಾಮಾಣಿಕತೆ, ಸಮಗ್ರತೆ / ಋಜುತ್ವ ನೈತಿಕ ಮೌಲ್ಯಗಳನ್ನು ಹಾಗೂ ಸಾಂಸ್ಥಿಕ ಬದ್ಧತೆಯನ್ನು ಹೊಂದಿರತಕ್ಕದ್ದು
   - ವಿಶ್ವವಿದ್ಯಾಲಯಗಳಲ್ಲಿ ಪ್ರಾಧ್ಯಾಪಕರಾಗಿ ಕನಿಷ್ಠ 10 ವರ್ಷಗಳ ಸೇವೆ ಸಲ್ಲಿಸಿದ ಅಥವಾ ವಿಖ್ಯಾತ ಸಂಶೋಧನಾ / ಅಥವಾ ಶೈಕ್ಷಣಿಕ ಆಡಳಿತ ಸಂಸ್ಥೆಗಳಲ್ಲಿ ಕನಿಷ್ಠ 10 ವರ್ಷಗಳು ಕಾರ್ಯನಿರ್ವಹಿಸಿದ ಅನುಭವವನ್ನು ಹಾಗೂ ರುಜುವಾತದ ಶೈಕ್ಷಣಿಕ ಅಗ್ರಗಾಮಿತ್ವವನ್ನು ಹೊಂದಿರತಕ್ಕದ್ದು
   - ತುಮಕೂರು ವಿಶ್ವವಿದ್ಯಾಲಯದ ಕುಲಪತಿಯು ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ–2000ರ ಪ್ರಕರಣ 14(5) ಹಾಗೂ ಪ್ರಕರಣ 14(6) ರಲ್ಲಿ ನಿಯಮಿಸಿರುವಂತೆ, 4 ವರ್ಷಗಳು ಅಥವಾ 67 ವರ್ಷಗಳ ವಯಸ್ಸಾಗುವವರೆಗೆ ಇವುಗಳಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ ಕುಲಾಧಿಪತಿಗಳ ಇಷ್ಟಪರ್ಯಂತ ಪದಧಾರಣಾವಧಿಯನ್ನು ಹೊಂದಿರುತ್ತಾರೆ. ಆದುದರಿಂದ ಕುಲಾಧಿಪತಿಗಳ ಇಷ್ಟಪರ್ಯಂತ 4 ವರ್ಷಗಳ ಪದಧಾರಣಾವಧಿಯ ಅವಕಾಶವಿರುವ ವಯೋಮಿತಿಯನ್ನು ಹೊಂದಿರತಕ್ಕದ್ದು
2. ತುಮಕೂರು ವಿಶ್ವವಿದ್ಯಾಲಯದ ಕುಲಪತಿ ಹುದ್ದೆಯ ನೇಮಕಾತಿಗೆ ಉಮೇದುವಾರಿಕೆ ಸಲ್ಲಿಸ ಬಯಸುವ ಆಸಕ್ತರು ತಮ್ಮ ವಿದ್ಯಾರ್ಹತೆ, ಸಂಶೋಧನೆ, ಶೈಕ್ಷಣಿಕ ಮತ್ತು ಆಡಳಿತಾತ್ಮಕ ಅನುಭವಗಳು, ಸಾಧನೆಗಳು ಹಾಗೂ ಇತರೆ ವಿವರಗಳನ್ನು ಯುಜಿಸಿಯಿಂದ ನಿಗದಿಪಡಿಸಲಾಗಿರುವ ನಮೂನೆಯಲ್ಲಿ ಭರ್ತಿ ಮಾಡಿ ಮುದ್ರಿತ ಅರ್ಜಿಗಳನ್ನು ತ್ರಿಪ್ರತಿಗಳಲ್ಲಿ ಈ ನೇಮಕಾತಿ ಜಾಹೀರಾತು ಪ್ರಕಟಣೆಯಾದ 12 ದಿನಗಳ ಒಳಗಾಗಿ ಸ್ವೀಕೃತವಾಗುವಂತೆ.
   "ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಉನ್ನತ ಶಿಕ್ಷಣ ಇಲಾಖೆ, 6ನೇ ಮಹಡಿ, ಗೇಟ್ ನಂ. 2, ಬಹುಮಹಡಿಗಳ ಕಟ್ಟಡ, ಬೆಂಗಳೂರು–560 001" ಇವರಿಗೆ ಸಲ್ಲಿಸತಕ್ಕದ್ದು.
3. ಪಿಡಿಎಫ್ (PDF) ರೂಪದ ವಿದ್ಯುನ್ಮಾನ ಅರ್ಜಿಗಳನ್ನು ಏಕ ಪ್ರತಿಯಲ್ಲಿ **e-mail: kgsheduni2020@gmail.com** ಗೆ ಕಳುಹಿಸತಕ್ಕದ್ದು.
4. ಪ್ರಸ್ತುತ ಸೇವೆಯಲ್ಲಿರುವ ವ್ಯಕ್ತಿಗಳು ಅವರ ವಿರುದ್ಧ ಇಲಾಖಾ / ಕ್ರಿಮಿನಲ್ ವಿಚಾರಣೆಗಳು ಬಾಕಿ ಇರದ / ಹೂಡಲು ಉದ್ದೇಶಿಸಿರದ ಮತ್ತು ಈ ಹಿಂದೆ ವಿಚಾರಣೆಗಳನ್ನು ನಡೆಸಿ ದಂಡನೆ ವಿಧಿಸಲಾಗಿರದ ಬಗ್ಗೆ ಹಾಗೂ ಕಳಂಕಿತ ಸೇವಾ ಚರಿತ್ರೆ ಹಾಗೂ ನೇಮಕಾತಿ ವಿವಾದಗಳನ್ನು ಹೊಂದಿರದ ಬಗ್ಗೆ, ಅವರು ಸೇವೆ ಸಲ್ಲಿಸುತ್ತಿರುವ ಸಂಸ್ಥೆಯ ಮುಖ್ಯಸ್ಥರಿಂದ ದೃಢೀಕರಿಸಿ ಪ್ರಮಾಣ ಪತ್ರಗಳನ್ನು ಹಾಗೂ ಸೇವೆಯಿಂದ ವಯೋನಿವೃತ್ತಿ ಹೊಂದಿರುವವರು ಈ ಕುರಿತಂತೆ ಸ್ವಯಂ ದೃಢೀಕರಣ ಪ್ರಮಾಣ ಪತ್ರಗಳನ್ನು ಅರ್ಜಿಯೊಂದಿಗೆ ಕಡ್ಡಾಯವಾಗಿ ಸಲ್ಲಿಸತಕ್ಕದ್ದು. ಪ್ರಮಾಣ ಪತ್ರಗಳಲ್ಲಿ ತಪ್ಪು ಮಾಹಿತಿ ನೀಡಿರುವುದು ಕಂಡುಬಂದಲ್ಲಿ ಸಂಬಂಧಿಸಿದವರನ್ನು ಕಠಿಣ ಕ್ರಮಕ್ಕೆ ಗುರಿಪಡಿಸಲಾಗುವುದು. ಈ ರೀತಿಯಲ್ಲಿ ಪ್ರಮಾಣ ಪತ್ರಗಳನ್ನು ಸಲ್ಲಿಸದ ವ್ಯಕ್ತಿಗಳ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ.
5. ಅರ್ಜಿ ಸಲ್ಲಿಸಲು ನಿಗದಿಪಡಿಸಲಾಗಿರುವ ನಮೂನೆ / ಪ್ರಪತ್ರವನ್ನು ತುಮಕೂರು ವಿಶ್ವವಿದ್ಯಾಲಯದ ಅಧಿಕೃತ ಜಾಲತಾಣದಿಂದ ಪಡೆಯಬಹುದು.
6. **ನಿಗದಿತ ಅವಧಿ / ಗಡುವು ಮುಕ್ತಾಯವಾದ ನಂತರ ಸ್ವೀಕೃತವಾಗುವ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ. ಅಂಚೆ ಅಥವಾ ಇತರೆ ಸ್ವರೂಪದ ವಿಳಂಬಗಳಿಗೆ ಉನ್ನತ ಶಿಕ್ಷಣ ಇಲಾಖೆಯು ಜವಾಬ್ದಾರವಾಗುವುದಿಲ್ಲ.**
7. **ನೇಮಕಾತಿ ಪ್ರಕ್ರಿಯೆಯಲ್ಲಿ ವಾಮಮಾರ್ಗದ ಮೂಲಕ ಅನುಚಿತ ಪ್ರಭಾವ ಬೀರಲು ಪ್ರಯತ್ನಿಸುವ ವ್ಯಕ್ತಿಗಳ ಅಭ್ಯರ್ಥಿತ್ವವನ್ನು ರದ್ದುಗೊಳಿಸಲಾಗುವುದು.**

ಸಹಿ/–
ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ,
ಉನ್ನತ ಶಿಕ್ಷಣ ಇಲಾಖೆ.

DIPR/DDU/AAPL/RO3652/21-22

ಕೋವಿಡ್-19 - ಗಾಳಿಸುದ್ದಿ ಹರಡಬೇಡಿ, ಜವಾಬ್ದಾರಿಯಿಂದ ವರ್ತಿಸಿ, ಸೋಂಕನ್ನು ದೂರವಿಡಿ-ಸೋಂಕಿತರನ್ನಲ್ಲ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

DAVANAGERE SMART CITY LIMITED

Plot No.77, Zilladalitha Bhavana Office Premises,
Karur Industrial Area, Old P.B. Road, Davanagere-577006
Tel-08192-222383, CIN: U74999KA2016PLC093411,
davanageresmartcity.mrc.gov.in, smartcitydavanagere@gmail.com

No: DSCL/EE/CR-225/2021-22/2340 Date: 07-03-2022

Davanagere Smart City Limited invites Expression of interest (EOI) for the projects detailed as follows:

Name of the project and details:-"Conceptualization, Planning, Designing, Engineering, Supply, Installation, Testing, Commissioning, Operation and Maintenance for 5 Years, training and Handing Over of the Complete System of most sophisticated Computer Controlled using Latest State of Art Technology Fountain system cum Illumination to Kalyani At Hondada Circle And Illumination to Clock Tower including All Related Civil, Electromechanical, Automation Works, Control Panel Etc., Complete On Lump sum Turnkey Basis"Tender **Number : UDD/DSCL/CR-06/2021-22/Call-4.**

Last date for submission:- Last date and time for receipt of EOI application is 15-03-2022,16:00:00. Interested parties can submit their EOI through website of http://eproc.karnataka.gov.in Note: Any changes in date and other information will be notified only in e-procurement portal.

Sd/- Executive Engineer, Davanagere Smart City Ltd., Davanagere.
Sd/- Managing Director and Chief Executive officer, Davanagere Smart city Limited Davanagere.

ವಾಸಾಇ/ದಾವಣಗೆರೆ/842/ಎಂಸಿಎ/2021–22

ಕರ್ನಾಟಕ ಸರ್ಕಾರ

ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ, ಲೋಕೋಪಯೋಗಿ ಇಲಾಖೆ ವಿಭಾಗ, ಚಿತ್ರದುರ್ಗ.

ಸಂಖ್ಯೆ: ಕಾಇಂ:ಲೋವಿಚಿ:ಎಇ–1:ಟೆಂಡರ್–125:2021–22 ದಿನಾಂಕ: 05.03.2022

ಇ–ಟೆಂಡರ್ ಪ್ರಕಟಣೆ

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅದ್ಯಾದೇಶ 2000 ಹಾಗೂ ಆಕ್ಟ್ 2000ರ ಪ್ರಕಾರ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್‌ಗಳ ನಿಯಮಗಳನ್ವಯ ಕರ್ನಾಟಕ ರಾಜ್ಯ ಸರ್ಕಾರದ ರಾಜ್ಯಪಾಲರ ಪರವಾಗಿ ಕಾರ್ಯಪಾಲಕ ಇಂಜಿನಿಯರು, ಲೋಕೋಪಯೋಗಿ ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ ವಿಭಾಗ, ಚಿತ್ರದುರ್ಗ ಇವರಿಂದ ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತರಾದ ಅರ್ಹ ಗುತ್ತಿಗೆದಾರರಿಂದ ಇ–ಪ್ರೊಕ್ಯೂರಮೆಂಟ್ ಪೋರ್ಟಲ್ ಮುಖಾಂತರ ಈ ಕೆಳಕಂಡ ಕಾಮಗಾರಿಗಳಿಗೆ ಅರ್ಹ ಗುತ್ತಿಗೆದಾರರಿಂದ ದ್ವಿ ಲಕೋಟೆ ಪದ್ಧತಿಯಲ್ಲಿ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಅರ್ಹ ಗುತ್ತಿಗೆದಾರರು ವೆಬ್‌ಸೈಟ್ www.eproc.Karnataka.gov.in/eportal/index.seam ನಲ್ಲಿ ಟೆಂಡರ್‌ಗಾಗಿ ವಿವರಗಳನ್ನು ಪಡೆದು ಭಾಗವಹಿಸಬಹುದು.

ಕಾಮಗಾರಿಯ ಹೆಸರು: ಇ–ಪ್ರೊಕ್ಯೂರ್‌ಮೆಂಟ್ ಮೂಲಕ–ದ್ವಿ ಲಕೋಟೆ ಪದ್ಧತಿ: ಸಾಮಾನ್ಯ: ಲೆಕ್ಕ ಶೀರ್ಷಿಕೆ: 8443 ಠೇವಣಿ ವಂತಿಕೆ: 1) ಚಿತ್ರದುರ್ಗ ತಾಲ್ಲೂಕು ಭರಮಸಾಗರ ಹೋಬಳಿ ಭರಮಸಾಗರ ಗ್ರಾಮದಲ್ಲಿ ಶಾಲಾ ಕಟ್ಟಡ ನಿರ್ಮಾಣ (ವ.ಇಂ. 147492). ಟೆಂಡರ್ ಮೊತ್ತ: ರೂ. 100.00 ಲಕ್ಷ.

ಕಾಮಗಾರಿ ಟೆಂಡರ್ ದಿನಾಂಕಗಳು ಈ ಕೆಳಕಂಡಂತಿವೆ: ಟೆಂಡರ್ ಬಗ್ಗೆ ವಿಚಾರಿಸಲು/ಮಾಹಿತಿ ಪಡೆಯಲು ಕೊನೆಯ ದಿನಾಂಕ: 21.03.2022, ಸಮಯ 17:30. ಟೆಂಡರ್ ಸಲ್ಲಿಸುವ ಅಂತಿಮ ದಿನಾಂಕ ಮತ್ತು ವೇಳೆ: 22.03.2022, ಸಮಯ 16:00. ತಾಂತ್ರಿಕ ಬಿಡ್ ತೆರೆಯುವ ದಿನಾಂಕ ಮತ್ತು ವೇಳೆ: 23.03.2022, ಸಮಯ 16:01. ಆರ್ಥಿಕ ಬಿಡ್ ತೆರೆಯುವ ದಿನಾಂಕ ಮತ್ತು ವೇಳೆ: 25.03.2022, ಸಮಯ 11:00.

ಹೆಚ್ಚಿನ ವಿವರಗಳಿಗೆ ಸದರಿ ಕಛೇರಿಯಿಂದ (ದೂರವಾಣಿ ಸಂಖ್ಯೆ 08194 222446) ಹಾಗೂ ಹೆಚ್.ಪಿ. ಕಂಪನಿಯ ಸಹಾಯಕ ದೂರವಾಣಿ ಸಂಖ್ಯೆ 080–25501216 ಮತ್ತು 080–25501227ರಿಂದ ಮಾಹಿತಿ ಪಡೆಯಬಹುದು.

RO No. 1018: DIPR/CTA/MCA/2021-22 ಸಹಿ/– ಕಾರ್ಯಪಾಲಕ ಅಭಿಯಂತರರು

ಕರ್ನಾಟಕ ಸರ್ಕಾರ

ಜಿಲ್ಲಾ ಪಂಚಾಯತ್, ಬಳ್ಳಾರಿ
ಕಾರ್ಯನಿರ್ವಾಹಕ ಅಭಿಯಂತರರವರ ಕಛೇರಿ, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಬಳ್ಳಾರಿ.

ಸಂ: ಕಾನಿಅ/ಗ್ರಾಕುನೀ&ನೈ/ವಿ/ಬ/ಜೆಇ–1/JJM/2020-21/1916
ದಿನಾಂಕ:08.03.2022

ಇ–ಟೆಂಡರು ಪ್ರಕಟಣೆ
(ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅದ್ಯಾದೇಶ – 2000 ರಂತೆ)

ಕರ್ನಾಟಕ ರಾಜ್ಯ ಪಾಲರ ಪರವಾಗಿ ಕಾರ್ಯನಿರ್ವಾಹಕ ಇಂಜಿನಿಯರ್, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ, ವಿಭಾಗ **ಬಳ್ಳಾರಿ, ಬಳ್ಳಾರಿ ಜಿಲ್ಲೆಯ 2021–22 ಸಾಲಿನ ಜಲ್ ಜೀವನ್ ಮೀಷನ್ ಯೋಜನೆಯಡಿಯಲ್ಲಿ ಅನುಮೋದನೆಗೊಂಡಿರುವ ಬಳ್ಳಾರಿ ಮತ್ತು ಸಿರುಗುಪ್ಪ ತಾಲ್ಲೂಕಿನ ಗ್ರಾಮೀಣ ಪ್ರದೇಶದ ಜನವಸತಿಗಳ ಮನೆ ಮನೆಗೆ ಕಾರ್ಯತ್ಮಕ ನಳ ಸಂಪರ್ಕ ಒದಗಿಸುವ (Retrofitting)** ಕಾಮಗಾರಿಗಳನ್ನು ಇ–ಪ್ರೋಕ್ಯೂರ್‌ಮೆಂಟ್ ಮೂಲಕ ಇ–ಟೆಂಡರ್ ಕರೆಯಲಾಗಿದ್ದು, ಸದರಿ ಟೆಂಡರ್‌ನ ಬಗ್ಗೆ ಹೆಚ್ಚಿನ ಮಾಹಿತಿಗಾಗಿ (www.eproc.karnataka.gov.in) ವೆಬ್ ಸೈಟ್‌ನ್ನು ಸಂಪರ್ಕಿಸಲು ಕೋರಿದೆ. ಹಾಗೂ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟ್‌ಲ್ ಮುಖಾಂತರ **ದಿನಾಂಕ:08.03.2022** ರಿಂದ Download ಮಾಡಿಕೊಳ್ಳಬಹುದು. ಟೆಂಡರ್‌ಗಳನ್ನು ಸಲ್ಲಿಸುವ ಕೊನೆಯ **ದಿನಾಂಕ:16.03.2022** ರಂದು ಸಂಜೆ 4.00 ರವರೆಗೆ. ಸಲ್ಲಿಸಬಹುದಾಗಿರುತ್ತದೆ. ತಾಂತ್ರಿಕ ಬಿಡ್ ತೆರೆಯುವ **ದಿನಾಂಕ:17.03.2022** ಸಮಯ ಸಂಜೆ 5.00 ಗಂಟೆ ನಂತರ, ಆರ್ಥಿಕ ಬಿಡ್ ತೆರೆಯುವ ದಿನಾಂಕ ಮತ್ತು ವೇಳೆಯನ್ನು ತಾಂತ್ರಿಕ ಬಿಡ್‌ಲ್ಲಿ ಅರ್ಹತೆ ಹೊಂದಿದವರಿಗೆ ತಿಳಿಸಲಾಗುವುದು ಹಾಗೂ ದಿನಾಂಕ **10.03.2022** ರಂದು ಪೂರ್ವಭಾವಿ ಸಭೆಯನ್ನು, ಕಾರ್ಯಪಾಲಕ ಅಭಿಯಂತರರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಬಳ್ಳಾರಿ, ಎಸ್.ಬಿ.ಐ ಬ್ಯಾಂಕ್‌ನ ಮೇಲ್ಮಹಡಿ ಕಟ್ಟಡ, ಸುಧಾ ಕ್ರಾಸ್, ಕಂಟ್ನೋನ್‌ಮೆಂಟ್, ಬಳ್ಳಾರಿ ಕಛೇರಿಯಲ್ಲಿ ಕರೆಯಲಾಗಿದೆ, ಕಾಮಗಾರಿಗಾಗಿ ಟೆಂಡರ್ ಸಲ್ಲಿಸಲು ನಿಗಧಿ ಪಡಿಸಿದ ಅರ್ಹತೆ, ಷರತ್ತುಗಳು, ಕಾಮಗಾರಿ ವಿವರ ಇತ್ಯಾದಿಗಳನ್ನು **ದಿ:14.03.2022 ರ 16.00 ಗಂಟೆಯವರೆಗೆ** ವಿಭಾಗ, ಕಛೇರಿಯಲ್ಲಿ ಅಥವಾ **"ಇ–ಪ್ರೋಕ್ಯೂರಮೆಂಟ್"** ಹೆಲ್ಪ್ ಡೆಸ್ಕನಂದ ಪಡೆಯಬಹುದು. ಇನ್ನೂ ಹೆಚ್ಚಿನ ಮಾಹಿತಿಗಾಗಿ ಈ ವಿಭಾಗ ಕಛೇರಿ ಸಮಯದಲ್ಲಿ ಭೇಟಿ ನೀಡಿ ಮಾಹಿತಿಯನ್ನು ಪಡೆಯ ಬಹುದು.

ಸಹಿ/– ಕಾರ್ಯನಿರ್ವಾಹಕ ಅಭಿಯಂತರರು, ಗ್ರಾಕುನೀ&ನೈ. ವಿಭಾಗ, ಬಳ್ಳಾರಿ.
ಡಿಐಪಿಆರ್/ಬಳ್ಳಾರಿ/822/ಎಂಸಿಎ/2021–22

ಕರ್ನಾಟಕ ಸರ್ಕಾರ
ರಾಷ್ಟ್ರೀಯ ಆರೋಗ್ಯ ಅಭಿಯಾನ
ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಂಘ(ರಿ), ಮಂಡ್ಯ
ಜಿಲ್ಲಾ ಆರ್.ಸಿ.ಹೆಚ್. ಅಧಿಕಾರಿಗಳ ಕಛೇರಿ, ಮೊದಲನೇ ಮಹಡಿ
ಜಿಲ್ಲಾ ಅರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳ ಕಛೇರಿ
ಆವರಣ, ಮಂಡ್ಯ
ದೂ:228700 E mail ID : rchomandya@gmail.com
ಸಂಖ್ಯೆ: ಆರ್.ಸಿ.ಹೆಚ್/ಎನ್.ಹೆಚ್.ಎಂ/545/2021–22
ದಿನಾಂಕ : 05.03.2022

ಇ–ಟೆಂಡರ್ ಪ್ರಕಟಣೆ

ಹೊರಗುತ್ತಿಗೆ ಆಧಾರದ ಮೇಲೆ ಮಾನವ ಸಂಪನ್ಮೂಲ ಸೇವೆಯನ್ನು ಪಡೆಯುವ ಬಗ್ಗೆ.

2022–23 ನೇ ಸಾಲಿಗೆ ರಾಷ್ಟ್ರೀಯ ಆರೋಗ್ಯ ಅಭಿಯಾನ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೊಸೈಟಿ, ಮಂಡ್ಯ ಜಿಲ್ಲೆ, ಮಂಡ್ಯ ಇಲ್ಲಿ ವಿವಿಧ ಕಾರ್ಯಕ್ರಮಗಳಲ್ಲಿ ಕರ್ತವ್ಯ ನಿರ್ವಹಿಸಲು ಕಾರ್ಯಕ್ರಮ ಸಹಾಯಕರು–01, ಲೆಕ್ಕ ಸಹಾಯಕರು–09, ಗಣಕಯಂತ್ರ ಸಹಾಯಕರು–31, ಎಂ.ಐ.ಎಸ್.ಐ.ಟಿ ಸಹಾಯಕರು–01, ಕುಕ್–01, ಎಲ್.ಡಿ.ಸಿ (ಎನ್.ಯು.ಹೆಚ್.ಎಂ)–02, ವಾಹನ ಚಾಲಕರು–18. ಮತ್ತು ಗ್ರೂಪ್–ಡಿ–07, ನೌಕರರನ್ನು ಒಳಗೊಂಡಂತೆ ಒಟ್ಟು–70 ಹುದ್ದೆಗಳನ್ನು ಹೊರ ಸಂಪನ್ಮೂಲ ಏಜೆನ್ಸಿ ಮುಖಾಂತರ ಹೊರ ಗುತ್ತಿಗೆ ಆಧಾರದ ಮೇಲೆ ಪಡೆಯಲು ಎನ್.ಹೆಚ್.ಎಂ ಮಾರ್ಗಸೂಚಿ ಹಾಗೂ ಕೆ.ಟಿ.ಪಿ.ಪಿ ಕಾಯ್ದೆ 1999ರ ನಿಯಮಗಳು ಹಾಗೂ ಪ್ರಕಾರ2000 ರಂತೆ ದಿ:05.03.2022 ರಂದು ನಿಯಮಾನುಸಾರ ಇ–ಟೆಂಡರ್ ಅಧಿಸೂಚನೆಯನ್ನು ಹೊರಡಿಸಲಾಗಿದ್ದು, ವಿವರಗಳು ಕೆಳಕಂಡಂತಿವೆ.

(1) ಟೆಂಡರ್ ಪ್ರಕಟಣೆಯ ದಿನಾಂಕ : **05.03.2022.** (2) ಇ.ಎಂ.ಡಿ ಮೊತ್ತ : **ರೂ. 4,65,000/– + ಇ–ಪ್ರೊಕ್ಯೂರ್‌ಮೆಂಟ್ ಶುಲ್ಕ.** (3) ಟೆಂಡರ್ ಪ್ರಾರಂಭದ ದಿನಾಂಕ (Web Portal) : **05.03.2022 ಬೆಳಗ್ಗೆ: 11.00 ಗಂಟೆಗೆ.** (4) ಭರ್ತಿ ಮಾಡಿದ ಟೆಂಡರ್ ಫಾರಂಗಳ ಸಲ್ಲಿಕೆಗೆ ಕೊನೆಯ ದಿನಾಂಕ ಮತ್ತು ಸಮಯ : **ದಿನಾಂಕ: 04.04.2022 ರಂದು ಸಂಜೆ: 5.00 ಗಂಟೆಗೆ.** (5) ತಾಂತ್ರಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ : **05.04.2022 ಬೆಳಿಗ್ಗೆ 11.00 ಘಂಟೆಗೆ.** (6) ಆರ್ಥಿಕ ಲಕೋಟೆ ತೆರೆಯುವ ದಿನಾಂಕ ಮತ್ತು ಸಮಯ : **06.04.2022 ಬೆಳಿಗ್ಗೆ 11:00 ಗಂಟೆ.** ಟೆಂಡರ್ ಅಂದಾಜು ಮೊತ್ತ : **ರೂ.1,86,00,000/–.** ಟೆಂಡರ್ ಇ.ಎಂ.ಡಿ ಮೊತ್ತ : **ರೂ.4,65,000/–.** ಹೆಚ್ಚಿನ ವಿವರಗಳನ್ನು http://eproc.karnataka.gov.in ಹಾಗೂ ಕಛೇರಿ ವೇಳೆಯಲ್ಲಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳ ಕಛೇರಿ, ಮಂಡ್ಯ ಜಿಲ್ಲೆಯಲ್ಲಿ ಪಡೆಯಬಹುದು.

ಸಹಿ/–ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳು, ಮಂಡ್ಯ ಜಿಲ್ಲೆ

ವಾಸಾಸಂಇ/ಸನಿ–ಮಂಡ್ಯ/ಎಂಸಿ&ಎ/706/2021–22

ಕಾವೇರಿ ನೀರಾವರಿ ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಒಂದು ಉದ್ಯಮ)
ಕಾರ್ಯಪಾಲಕ ಇಂಜಿನಿಯರ್‌ರವರ ಕಚೇರಿ, ಎಂ.ಪಿ. ವಿಭಾಗ, ರಾಮನಗರ.
ದೂ.ಸಂ: 080–27271259 ಇ–ಮೇಲ್: eempdrmgm@gmail.com

ಪ್ರಕಟಣೆ ಸಂಖ್ಯೆ: 15/2021–22 ದಿನಾಂಕ: 07.03.2022

ಅಲ್ಪಾವಧಿ ಟೆಂಡರ್ ಪ್ರಕಟಣೆ

ಕಾವೇರಿ ನೀರಾವರಿ ನಿಗಮ ನಿಯಮಿತದಲ್ಲಿ ನೋಂದಾಯಿಸಿದ ಅರ್ಹ ಗುತ್ತಿಗೆದಾರರಿಂದ ಇ–ಪ್ರೊಕ್ಯೂರ್‌ಮೆಂಟ್ **www.eproc.karnataka.gov.in** ಮುಖಾಂತರ ವಿಭಾಗ ವ್ಯಾಪ್ತಿಯಡಿಯಲ್ಲಿನ **ಮಾಗಡಿ ಹಾಗೂ ಕನಕಪುರ ತಾಲ್ಲೂಕಿನ** ಕಾಮಗಾರಿಗಳ ಟೆಂಡರ್ ಆಹ್ವಾನಿಸಲಾಗಿದ್ದು, ಕಾಮಗಾರಿಗಳ ಟೆಂಡರ್ ಸಲ್ಲಿಸಲು ಕಡೆಯ **ದಿನಾಂಕ: 28.03.2022ರ ಸಂಜೆ 4:30 ಗಂಟೆ.** ತಾಂತ್ರಿಕ ಬಿಡ್ ತೆರೆಯುವ **ದಿನಾಂಕ: 29.03.2022ರ ಸಂಜೆ 5:00 ಗಂಟೆ.** ಆರ್ಥಿಕ ಬಿಡ್ ತೆರೆಯುವ **ದಿನಾಂಕ: 04.04.2022ರ ಬೆಳಿಗ್ಗೆ 11:00 ಗಂಟೆ.** ಪ್ರಿಬಿಡ್ ಸಭೆ ನಡೆಯುವ **ದಿನಾಂಕ: 23.03.2022** ಹಾಗೂ ಮುಂತಾದ ಇತರೆ ಮಾಹಿತಿಗಳನ್ನು ಸದರಿ ಕಛೇರಿಯಿಂದ ಅಥವಾ ಮೇಲ್ಕಂಡ ವೆಬ್‌ಸೈಟ್ ಮೂಲಕ ಪಡೆಯಬಹುದು.

ಸಹಿ/– ಕಾರ್ಯಪಾಲಕ ಇಂಜಿನಿಯರ್
ಎಂ.ಪಿ. ವಿಭಾಗ, ರಾಮನಗರ

ವಾಸಾಸಂಇ/ರಾನ/ಬ್ರಾಂಚ್/533/2021–22

ಕರ್ನಾಟಕ ಸರ್ಕಾರ
ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ಚಿಕ್ಕಮಗಳೂರು ಅರಣ್ಯ ವಿಭಾಗ, ಚಿಕ್ಕಮಗಳೂರು,

E-Mail: dcf ckm@yahoo.co.in ಕಛೇರಿ ದೂ.ಸಂಖ್ಯೆ :08262–238800
ಸಂಖ್ಯೆ:ಬಿ1ನೆಡುತೋಮ:ಟೆಂಡರ್:ಸಿಆರ್:81/2021–22ದಿನಾಂಕ:25–02–2022

ಅರಣ್ಯ ಕಾಮಗಾರಿಗಳಿಗಾಗಿ ಇ–ಟೆಂಡರ್ ಪ್ರಕಟಣೆ.

2022–23ನೇ ಸಾಲಿನಲ್ಲಿ ಚಿಕ್ಕಮಗಳೂರು ಅರಣ್ಯ ವಿಭಾಗದ ಚಿಕ್ಕಮಗಳೂರು, ಕಡೂರು, ಮುತ್ತೋಡಿ, ಆಲ್ದೂರು ಮತ್ತು ಮೂಡಿಗೆರೆ ವಲಯಗಳಲ್ಲಿ ಷೆಡ್ಯೂಲ್‌ನಲ್ಲಿ ನಮೂದಿಸಿರುವ ಪ್ರದೇಶದಲ್ಲಿ ವಿವಿಧ ಲೆಕ್ಕಶೀರ್ಷಿಕೆಗಳ ಯೋಜನೆಯಡಿ ಹಮ್ಮಿಕೊಳ್ಳುವ ಕಾಮಗಾರಿಗಳಾದ ಸಸಿಗಳನ್ನು ಬೆಳೆಸುವುದು, ಈಗಾಗಲೇ ಬೆಳೆಸಿದ ಸಸಿಗಳ ನಿರ್ವಹಣೆ, ಹಿಂದಿನ ವರ್ಷಗಳಲ್ಲಿ ನಿರ್ಮಾಣ ಮಾಡಿದ ನೆಡುತೋಪುಗಳ ನಿರ್ವಹಣೆ ಹಾಗೂ ಹೊಸದಾಗಿ ನೆಡುತೋಪು ನಿರ್ಮಾಣ ಮಾಡುವ ಕಾಮಗಾರಿಗಳನ್ನು ಕೈಗೊಳ್ಳುವ ಕುರಿತು ಆಸಕ್ತ ನೊಂದಾಯಿತ ಗುತ್ತಿಗೆದಾರರಿಂದ ಇ–ಟೆಂಡರನ್ನು ಆಹ್ವಾನಿಸಲಾಗಿದೆ.

ಇ–ಟೆಂಡರ್ ಸ್ವೀಕರಿಸುವ ಕಡೇ ದಿನಾಂಕ: 25–03–2022ರ ಸಂಜೆ 5.00 ಗಂಟೆಯವರೆಗೆ ನಿಗಧಿಪಡಿಸಲಾಗಿದೆ. ಸದರಿ ದಿನಾಂಕದಂದು ಯಾವುದೇ ಟೆಂಡರ್ ಸ್ವೀಕೃತಿಯಾಗದಿದ್ದಲ್ಲಿ ಅಥವಾ ಭಾಗಶಃ ಸ್ವೀಕೃತವಾದಲ್ಲಿ ಬಾಕಿ ಉಳಿದ ಯುನಿಟ್‌ಗಳಿಗೆ ಮರು ಟೆಂಡರನ್ನು ದಿನಾಂಕ:28–03–2022ರ ಸಂಜೆ 5.00 ಗಂಟೆಯವರೆಗೆ ಟೆಂಡರ್ ಚಾಲ್ತಿಯಲ್ಲಿರುತ್ತದೆ. ಈ ಬಗ್ಗೆ ಪ್ರತ್ಯೇಕ ಪ್ರಕಟಣೆ ಹೊರಡಿಸಲಾಗುವುದಿಲ್ಲ. ಹೆಚ್ಚಿನ ಮಾಹಿತಿಗಾಗಿ ಕಛೇರಿಯ ವೇಳೆಯಲ್ಲಿ ಈ ಕಛೇರಿಯನ್ನು ಸಂಪರ್ಕಿಸಬಹುದಾಗಿರುತ್ತದೆ. ಅಥವಾ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಮಾಹಿತಿಯನ್ನು ಪಡೆಯಬಹುದು.
(**https://www.eproc.karnataka.gov.in**)

ಸಹಿ/–ಉಪ ಅರಣ್ಯ ಸಂರಕ್ಷಣಾಧಿಕಾರಿ,
ಚಿಕ್ಕಮಗಳೂರು ವಿಭಾಗ, ಚಿಕ್ಕಮಗಳೂರು,

ಕರ್ನಾಟಕ ರೂರಲ್ ಇನ್‌ಫ್ರಾಸ್ಟ್ರಕ್ಚರ್ ಡೆವೆಲಪ್‌ಮೆಂಟ್ ಲಿಮಿಟೆಡ್

(ಹಿಂದಿನ ಹೆಸರು ಕರ್ನಾಟಕ ಭೂಸೇನಾ ನಿಗಮ ನಿ.)
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವಲಯ
"ಗ್ರಾಮೀಣ ಭವನ" 3ನೇ ಮಹಡಿ, ಸಿ.ಎ. ನಿವೇಶನ ಸಂಖ್ಯೆ – 6,
13ನೇ ಅಡ್ಡರಸ್ತೆ, ಎ–ಬ್ಲಾಕ್, ಜ್ಞಾನಭಾರತಿ ಬಿಡಿಎ ಲೇಔಟ್, ಬೆಂಗಳೂರು – 560056
ಸಂ:ಅಅ/ಕೆಆರ್‌ಐಡಿಎಲ್/ಬಿಬಿಎಂಪಿ ವಲಯ/ಪ್ರೀ – ಆಡಿಟ್/2022–23/677
ದಿನಾಂಕ: 09/03/22

ಅಲ್ಪಾವಧಿ ಸಂಕ್ಷಿಪ್ತ ಟೆಂಡರ್ ಪ್ರಕಟಣೆ

ಅಧೀಕ್ಷಕ ಅಬಿಯಂತರರು, ಕೆಆರ್‌ಐಡಿಎಲ್ ಬಿಬಿಎಂಪಿ ವಲಯ ವ್ಯಾಪ್ತಿಯಲ್ಲಿ ಬರುವ (5 ವಿಭಾಗಗಳ) ಬೆಂಗಳೂರಿನಲ್ಲಿರುವ ವಿಭಾಗೀಯ ಕಚೇರಿಯಲ್ಲಿ (ಕಾರ್ಯಪಾಲಕ ಅಭಿಯಂತರರು ಕಚೇರಿಗಳು) ದಿನಾಂಕ: 01.04.2022 ರಿಂದ 31.03.2023 ರವರೆಗೆ ಪ್ರೀ–ಆಡಿಟ್ ಮಾಡುವ ಸಂಬಂಧ ಆಸಕ್ತಿವುಳ್ಳ Charted Accountants / Cost Accountants ಗಳಿಂದ ಸೀಲ್ ಮಾಡಲಾದ ಕೊಟೇಶನ್ನು ಎರಡು ಕವರ್ ಮಾದರಿಯಲ್ಲಿ ಆಹ್ವಾನಿಸಲಾಗಿದೆ. Charted Accountants ಗಳು ನಿರ್ವಹಿಸಬೇಕಾದ ಕೆಲಸ ಕಾರ್ಯಗಳ ಮಾರ್ಗ ಸೂಚಿ, ಸಂಸ್ಥೆಯ ಬಗ್ಗೆ ಕಿರು ಮಾಹಿತಿ ಹಾಗೂ ಹಲವು ಷರತ್ತುಗಳ ಬಗ್ಗೆ ಸಂಸ್ಥೆಯ ವೆಬ್ ಸೈಟ್ www.kridl.org ಡೌನ್‌ಲೋಡ್ ಲಿಂಕ್ ಅಡಿಯಲ್ಲಿ ಪಡೆಯಬಹುದಾಗಿದೆ. ಕೊಟೇಶನ್‌ಗಳನ್ನು ಸಲ್ಲಿಸುವಾಗ Charted Accountants ಗಳ ಕಚೇರಿಗಳು ಕೆಆರ್‌ಐಡಿಎಲ್ ಬೆಂಗಳೂರು ಬಿಬಿಎಂಪಿ ವಲಯ ವ್ಯಾಪ್ತಿಯಲ್ಲಿಯೇ ಇರಬೇಕೆಂದು ಹಾಗೂ ಎಲ್ಲಾ ವಿಭಾಗಗಳಿಗೂ (10 ಉಪವಿಭಾಗಗಳಿಗೆ ಪ್ರತ್ಯೇಕವಾಗಿ) ಅನ್ವಯಿಸುವಂತೆ Audit Fee ಮೊತ್ತವನ್ನು ಕಡ್ಡಾಯವಾಗಿ ಕೋಟ್ ಮಾಡಬೇಕೆಂಬ ಅಂಶಗಳ ಬಗ್ಗೆ ಸ್ಪಷ್ಟಪಡಿಸಲಾಗಿದೆ. ಕೊಟೇಶನ್‌ಗಳನ್ನು ಅಂಚೆ ಮುಖಾಂತರ ಅಥವಾ ಖುದ್ದಾಗಿ ದಿ: 25.03.2022ರ ಸಂಜೆ 4.00 ಗಂಟೆಯವರೆಗೆ ಮಾತ್ರ ಸ್ವೀಕರಿಸಲು ಅವಕಾಶ ಕಲ್ಪಿಸಲಾಗಿದೆ. ಕೊಟೇಶನ್‌ಗಳನ್ನು ದಿ: 29.03.2022 ರ ಸಂಜೆ 4.00 ಗಂಟೆಗೆ ಹಾಜರಿದ್ದವರ ಸಮ್ಮುಖದಲ್ಲಿ ತೆರೆಯಲಾಗುವುದು. ಯಾವುದೇ ಸ್ಪಷ್ಟೀಕರಣಕ್ಕಾಗಿ ಅಧೀಕ್ಷಕ ಅಭಿಯಂತರರು ಕೆಆರ್‌ಐಡಿಎಲ್ ಬಿಬಿಎಂಪಿ ವಲಯ ಬೆಂಗಳೂರು ಇವರನ್ನು ಕಚೇರಿಯ ಸಮಯದಲ್ಲಿ ಸಂಪರ್ಕಿಸಬಹುದು.

ಸಹಿ/– ಅಧೀಕ್ಷಕ ಅಭಿಯಂತರರು
ಕೆಆರ್‌ಐಡಿಎಲ್, ಬಿಬಿಎಂಪಿ ವಲಯ, ಬೆಂಗಳೂರು

ಕರ್ನಾಟಕ ಸರಕಾರ
(ಲೋಕೋಪಯೋಗಿ ಇಲಾಖೆ)
ಕಾರ್ಯನಿರ್ವಾಹಕ ಇಂಜಿನೀಯರರು, ಲೋಕೋಪಯೋಗಿ ಇಲಾಖೆ ವಿಭಾಗ, ಚಿಕ್ಕೋಡಿ

ನಂ.ಲೋ.ಇ./ಚಿ.ವಿ./ಸ.ಇಂ.–3/ಟೆಂಡರ/2021–22/7176 ದಿನಾಂಕ: 07/03/2022

ಅಲ್ಪಾವಧಿ ಇ–ಮರುಟೆಂಡರ್ ಪ್ರಕಟಣೆ (Call-2)

ಲೋಕೋಪಯೋಗಿ ಇಲಾಖೆ ಚಿಕ್ಕೋಡಿ ವಿಭಾಗದಡಿ 2021–22 ನೇ ಸಾಲಿನ ಲೆಕ್ಕ ಶೀರ್ಷಿಕೆ 5054–ಪರಿಶಿಷ್ಟ ಜಾತಿ ಉಪಯೋಜನೆ (ಎಸ್.ಸಿ.ಪಿ) ಅಡಿ 1 ಕಾಮಗಾರಿ ರೂ. 65.79 ಲಕ್ಷ ಇರುವ ಕಾಮಗಾರಿಗೆ ಮರುಟೆಂಡರ್ ಆಹ್ವಾನಿಸಲಾಗಿದೆ.

ಗುತ್ತಿಗೆ ಪ್ರಕ್ರಿಯೆಯ ನಿಗದಿತ ದಿನಾಂಕಗಳು ಈ ಕೆಳಗಿನಂತೆ ಇರುವುದು

1)ಆಕ್ಷೇಪಣೆ–ಸಂದೇಹ ಮತ್ತು ವಿವರಣೆಗಳಿಗೆ ಕೊನೆಯ ದಿನಾಂಕ:11–03–2022(ಸಾಯಂಕಾಲ 5.30 ಗಂಟೆಯವರೆಗೆ), 2)ಗುತ್ತಿಗೆ ಪತ್ರಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ:15–03–2022 (ಸಾಯಂಕಾಲ 5.00 ಗಂಟೆಯವರೆಗೆ), 3)ಹಣಕಾಸು ಬಿಡ್‌ನ್ನು ತೆರೆಯುವ ದಿನಾಂಕ (Single Cover System): 17-03-2022(ಸಾಯಂಕಾಲ 4.30 ಗಂಟೆಗೆ)

ಕಾಮಗಾರಿಗಳ ಎಲ್ಲ ವಿವರಗಳಿಗಾಗಿ ಇಲಾಖೆಯ ವೆಬಸೈಟ್ www.eproc.karnataka.gov.in ನ್ನು ಮತ್ತು ಟೆಂಡರ ಪ್ರಕಟಣೆಗಾಗಿ www.kpwd.gov.in ನ್ನು ಗಮನಿಸಲು ಅಥವಾ ಲೋಕೋಪಯೋಗಿ ಇಲಾಖೆ ವಿಭಾಗ ಚಿಕ್ಕೋಡಿ ಕಾರ್ಯಾಲಯವನ್ನು ಕಚೇರಿಯ ವೇಳೆಯಲ್ಲಿ ಸಂಪರ್ಕಿಸಲು ಕೋರಲಾಗಿದೆ.

ಸಹಿ/–ಕಾರ್ಯನಿರ್ವಾಹಕ ಇಂಜಿನೀಯರರು,
DIPR/BGM/RO-NO-1752/MCA/2021-22 ಲೋಕೋಪಯೋಗಿ ಇಲಾಖೆ, ವಿಭಾಗ ಚಿಕ್ಕೋಡಿ.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಕಾರ್ಯಪಾಲಕ ಅಭಿಯಂತರರವರ ಕಛೇರಿ, ರಸ್ತೆ ಮೂಲಸೌಕರ್ಯ–ಪೂರ್ವ ವಿಭಾಗ,
ನಂ. 208, 2ನೇ ಮಹಡಿ, ಹೊಸ ಕಟ್ಟಡ, ಎನ್. ಆರ್. ಚೌಕ, ಬೆಂಗಳೂರು– 560 002.

ಸಂ: ಕಾಪಾಅ/ರಮೂಸೌ/ಪೂರ್ವ/ಟೆಂಡ್/04/2021–22 ದಿನಾಂಕ:09.03.2022

ಅಲ್ಪಾವಧಿ ಟೆಂಡರ್ ಪ್ರಕಟಣೆ (ಐಎಫ್‌ಟಿ)
(ಜಿಒಕೆ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

ಕಾರ್ಯಪಾಲಕ ಅಭಿಯಂತರರು, ರಸ್ತೆ ಮೂಲಸೌಕರ್ಯ–ಪೂರ್ವ ವಿಭಾಗ ಇವರು ಅರ್ಹ ಗುತ್ತಿಗೆದಾರರಿಂದ ಕೆಳಕಂಡ ಕಾಮಗಾರಿಗಳಿಗಾಗಿ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕ್ರ. ಸಂ	ಕಾಮಗಾರಿಯ ವಿವರ	ಟೆಂಡರಿಗಿಟ್ಟ ಮೊತ್ತ (ರೂ. ಲಕ್ಷಗಳಲ್ಲಿ)	ಇಎಂಡಿ (ರೂ. ಲಕ್ಷಗಳಲ್ಲಿ)
1.	ಶಾಂತಿನಗರ, ಸಿವಿ ರಾಮನ್ ನಗರ & ಸರ್ವಜ್ಞನಗರ ವಿಧಾನಸಭಾ ಕ್ಷೇತ್ರದ ಪ್ರದೇಶಗಳಲ್ಲಿ ಫುಟ್‌ಪಾತ್ ಸೇರಿದಂತೆ ಆರ್ಟೆರಿಯಲ್ ಮತ್ತು ಸಬ್ ಆರ್ಟೆರಿಯಲ್ ರಸ್ತೆಗಳ ವಾರ್ಷಿಕ ನಿರ್ವಹಣೆ, ಹೆಬ್ಬಾಳ, ಶಿವಾಜಿನಗರ & ಪುಲಿಕೇಶಿನಗರ ವಿಧಾನಸಭಾ ಕ್ಷೇತ್ರದ ಪ್ರದೇಶಗಳಲ್ಲಿ ಫುಟ್‌ಪಾತ್ ಸೇರಿದಂತೆ ಆರ್ಟೆರಿಯಲ್ ಮತ್ತು ಸಬ್ ಆರ್ಟೆರಿಯಲ್ ರಸ್ತೆಗಳ ವಾರ್ಷಿಕ ನಿರ್ವಹಣೆ.	223.13	3.50

1) ಟೆಂಡರ್ ಡಾಕ್ಯುಮೆಂಟ್‌ಗಳನ್ನು ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್‌ನಿಂದ ದಿನಾಂಕ: **21.03.2022ರಿಂದ** ಡೌನ್‌ಲೋಡ್ ಮಾಡಿಕೊಳ್ಳಬಹುದು. 2) ಪೂರ್ವಭಾವಿ ಸಭೆ ದಿನಾಂಕ : **24.03..2022ರ ಸಂಜೆ 4.00 ಗಂಟೆಗೆ.** 3) ಟೆಂಡರ್ ಡಾಕ್ಯುಮೆಂಟ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ : **29.03.2022ರ ಸಂಜೆ 4.00 ಗಂಟೆಯವರೆಗೆ** 4) ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ: **30.03.2022ರ ಬೆಳಿಗ್ಗೆ 11.00 ಗಂಟೆಗೆ.** ಹೆಚ್ಚಿನ ಮಾಹಿತಿಗಾಗಿ ವೆಬ್‌ಸೈಟ್: **www.eproc.karnataka.gov.in** ನಲ್ಲಿ ಲಾಗಿನ್ ಮಾಡಿ ಪಡೆಯಬಹುದು ಅಥವಾ ಕೆಳಸಹಿದಾರರ ಕಛೇರಿಯನ್ನು ಸಂಪರ್ಕಿಸಬಹುದು.

ಸಹಿ/– ಕಾರ್ಯಪಾಲಕ ಅಭಿಯಂತರರು, ರಸ್ತೆ ಮೂಲಸೌಕರ್ಯ–ಪೂರ್ವ ವಿಭಾಗ

ಕೋವಿಡ್-19 - ಗಾಳಿಸುದ್ದಿ ಹರಡಬೇಡಿ, ಜವಾಬ್ದಾರಿಯಿಂದ ವರ್ತಿಸಿ, ಸೋಂಕನ್ನು ದೂರವಿಡಿ-ಸೋಂಕಿತರನ್ನಲ್ಲ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಚಿಕ್ಕಮಗಳೂರು, ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ಉತ್ತಮ ಮಳೆ

ಮಂಗಳೂರು: ದಕ್ಷಿಣ ಕನ್ನಡ ಹಾಗೂ ಚಿಕ್ಕಮಗಳೂರು ಜಿಲ್ಲೆಯ ಹಲವೆಡೆ ಬುಧವಾರ ಬೆಳಿಗ್ಗೆ ಉತ್ತಮ ಮಳೆಯಾಗಿದೆ.

ಮಂಗಳೂರು ನಗರ ಸೇರಿದಂತೆ ದಕ್ಷಿಣ ಕನ್ನಡ ಜಿಲ್ಲೆಯ ಕೆಲವೆಡೆ ಮಳೆ ಸುರಿದಿದೆ. ಜಿಲ್ಲೆಯ ಮುನ್ನೂರಿನಲ್ಲಿ 6 ಸೆಂ.ಮೀ., ಮಂಗಳೂರಿನಲ್ಲಿ 3 ಸೆಂ.ಮೀ. ಹಾಗೂ ಕುಕ್ಕೆ ಸುಬ್ರಹ್ಮಣ್ಯದಲ್ಲಿ 5.4 ಮಿ.ಮೀ. ಮಳೆಯಾಗಿದೆ. ನಗರದ ರೋಸಾರಿಯೊ ರಸ್ತೆಯಲ್ಲಿ ಕಾಂಪೌಂಡ್‌ಗೆ ಹೊಂದಿಕೊಂಡಿದ್ದ ದೊಡ್ಡ ಮರವೊಂದು ಬುಡಸಮೇತ ಲಾರಿ ಮೇಲೆ ಉರುಳಿದೆ. ನಗರದ ಹಂಪನಕಟ್ಟೆಯ ತಗ್ಗು ಪ್ರದೇಶಗಳಿಗೆ ನೀರು ನುಗ್ಗಿದ್ದು, ಅಂಗಡಿಗಳಲ್ಲಿನ ವಸ್ತುಗಳಿಗೆ ಹಾನಿಯಾಗಿದೆ.

ಚಿಕ್ಕಮಗಳೂರು ಜಿಲ್ಲೆಯ ಕಳಸ, ಶೃಂಗೇರಿ ಭಾಗದಲ್ಲಿ ಬುಧವಾರ ತುಂತುರು ಮಳೆಯಾಗಿದೆ. ಮಧ್ಯಾಹ್ನ ಮೋಡ ಕವಿದ ವಾತಾವರಣ ಇತ್ತು.

ಕಣಕುಂಬಿ ಅರಣ್ಯದಲ್ಲಿ ಮಳೆ

ಖಾನಾಪುರ: ಕರ್ನಾಟಕ– ಗೋವಾ ಗಡಿಯ ಕಣಕುಂಬಿ ಅರಣ್ಯ ಪ್ರದೇಶದಲ್ಲಿ ಬುಧವಾರ ಅರ್ಧ ಗಂಟೆ ಮಳೆಯಾಗಿದೆ.

ಕಣಕುಂಬಿ, ಚೋರ್ಲಾ, ಸಡಾ, ಬೇಟಣೆ, ಪಾರವಾಡ ಭಾಗದಲ್ಲಿ ಬಿದ್ದ ಮಳೆಯು ಪ್ರದೇಶದಲ್ಲಿ ತಂಪನೆರೆಯಿತು.

डॉ. बी.आर. अम्बेडकर डेवलपमेन्ट कार्पोरेशन लिमिटेड

(कर्नाटक सरकार का उपक्रम)
9वीं और 10वीं मंजिल, विश्वेश्वरैया मिनी टावर्स,
डॉ. बी.आर. अम्बेडकर वीधी, बेंगलुरु - 560 001
दूरभाष: 080-22868870 ई-मेल : mdadcl2011@gmail.com
सिन : U20293KA1975ULL002755

अधिसूचना

डॉ. बी.आर. अम्बेडकर विकास निगम लिमिटेड (निगम) ने पंजीकरण प्रमाण पत्र **(CoR No. N-02-00220)** को गैर-जमा स्वीकार करने वाली गैर-बैंकिंग वित्त कँपनी **(NBFC-ND)** के रूप में अपनी मर्जी से रद्द करने के लिए आत्मसमर्पण कर दिया था क्योंकि निगम ने निर्धारक को संतुष्ट नहीं किया था। सीओआर धारण करने के लिए कारक। यू / एस द्वारा प्रदत्त शक्तियों के प्रयोग में। भारतीय रिजर्व बैंक अधिनियम के **45-I(6)& 1934,** आरबीआई ने अपने आदेश दिनांक **18.01.2022** द्वारा रद्द करने का आदेश पारित किया है जिसके द्वारा सीओआर रद्द कर दिया गया है।

सही/–
प्रबंध निदेशक

DIPR/DDU/JA/3684/2021-22

STAY PROTECTED FROM COVID-19, NO CARELESSNESS UNTIL THERE IS A CURE.
Wear Mask | 6 Feet Follow Physical Distancing | Maintain Hand Hygiene

ಕರ್ನಾಟಕ ಸರ್ಕಾರ
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ

ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳ ಕಛೇರಿ, ಜಿಲ್ಲಾ ಮಕ್ಕಳ ರಕ್ಷಣಾ ಘಟಕ, 06ನೇ ಕ್ರಾಸ್, ಸುಭಾಷ್‌ನಗರ, ಕೆ.ಆರ್.ರಸ್ತೆ, ಮಂಡ್ಯ–571401
ದೂ:08232–223222 Email:dcpumandya@gmail.com
ಸಂ:ಜಿಮರಘ/ಮಂಡ್ಯ/ಟೆಂಡರ್–1–2/2021–22 ದಿ:05.03.2022

ಇ–ಟೆಂಡರ್ ಪ್ರಕಟಣೆ

(1) ಮಂಡ್ಯ ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳ ಕಛೇರಿಗೆ ಬಾಹ್ಯಮೂಲದಿಂದ ಸಿಬ್ಬಂದಿಗಳನ್ನು ನೇಮಕಮಾಡಿಕೊಳ್ಳಲು ಇ–ಟೆಂಡರ್ ಪ್ರಕಟಣೆ ಹೊರಡಿಸಲಾಗಿದೆ. (2) ಬಾಲಕರ ಹಾಗೂ ಬಾಲಕಿಯರ ಬಾಲಮಂದಿರಗಳಿಗೆ ಬಾಹ್ಯಮೂಲದಿಂದ ಸಿಬ್ಬಂದಿಗಳನ್ನು ನೇಮಕಮಾಡಿಕೊಳ್ಳಲು ಇ–ಟೆಂಡರ್ ಪ್ರಕಟಣೆ ಹೊರಡಿಸಲಾಗಿದೆ.

ಇ–ಟೆಂಡರ್ ಸಲ್ಲಿಸಲು ಅಂತಿಮ **ದಿನಾಂಕ:22.03.2022** ರಂದು ಸಂಜೆ **4.30 ಗಂಟೆಗೆ** ನಿಗಧಿಪಡಿಸಲಾಗಿದೆ. ಹೆಚ್ಚಿನ ಮಾಹಿಗಿಗಾಗಿ ಮೇಲಿನ ವಿಳಾಸದಲ್ಲಿನ ಕಛೇರಿಯ ಮುಖ್ಯಸ್ಥರನ್ನು ಭೇಟಿ ಮಾಡಿ ಪಡೆದುಕೊಳ್ಳುವುದು. www. eproc.karnataka.gov.in ವೆಬ್‌ಸೈಟ್‌ನಲ್ಲಿ ಮಾಹಿತಿಯನ್ನು ಸಹ ಪಡೆದುಕೊಳ್ಳಬಹುದಾಗಿದೆ.

ಸಹಿ/–ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳು,
ಜಿಲ್ಲಾ ಮಕ್ಕಳ ರಕ್ಷಣಾ ಘಟಕ, ಮಂಡ್ಯ

ವಾಸಾಸಂಇ/ಸನಿ–ಮಂಡ್ಯ/ಎಂಸಿ&ಎ/713/2021–22

ನಗರಸಭಾ ಕಾರ್ಯಾಲಯ, ಹೂಟಗಳ್ಳಿ

ಎಸ್.ಆರ್.ಎಸ್. ಸ್ಟೇಷನ್ ಎದುರು,
ಹೈಟೆನ್ಷನ್ ಜೋಡಿ ರಸ್ತೆ, ಹೂಟಗಳ್ಳಿ, ಮೈಸೂರು ಜಿಲ್ಲೆ–570018
ಸಹಾಯವಾಣಿ ಸಂಖ್ಯೆ: 0821-2001737, E-Mail: itstaff_ulb_hootagalli@yahoo.com

ಸಂ: ನಸಹೂ: ಫವನಿ:ಹೊರಗುತ್ತಿಗೆ/01/2021–22 ದಿನಾಂಕ: 07.03.2022

ಟೆಂಡರ್ ಪ್ರಕಟಣೆ (ಇ–ಪ್ರೊಕ್ಯುರ್‌ಮೆಂಟ್ ಪೋರ್ಟಲ್ ಮೂಲಕ)

ಕೆಟಿಟಿಪಿ ಆಕ್ಟ್ 2000ರ ನಿಯಮದಂತೆ ಹೂಟಗಳ್ಳಿ ನಗರಸಭೆಯ ಈ ಕೆಳಕಂಡ ಸೇವೆಗಳಿಗೆ ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಟೆಂಡರ್ ಆಹ್ವಾನಿಸಿಗಿದ್ದು. ಟೆಂಡರ್‌ನಲ್ಲಿ ಭಾಗವಹಿಸಲು ಆಸಕ್ತಿಯುಳ್ಳ ನೋಂದಾಯಿತ ಸಂಸ್ಥೆ/ಗುತ್ತಿಗೆದಾರರು http://eproc.karnataka.nic.in ನಿಂದ ಟೆಂಡರ್ ಷರತ್ತು ಹಾಗೂ ದಾಸ್ತಾವೇಜನ್ನು ಡೌನ್‌ಲೋಡ್ ಮಾಡಿಕೊಂಡು ಆನ್‌ಲೈನ್ ಮುಖಾಂತರ ಟೆಂಡರ್‌ಗಳನ್ನು ಸಲ್ಲಿಸಬಹುದು. ಹೆಚ್ಚಿನ ಮಾಹಿತಿ ಹಾಗೂ ವಿವರಗಳಿಗೆ ಕಛೇರಿಯಲ್ಲಿ ಸಂಪರ್ಕಿಸಬಹುದು ಅಥವಾ ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್ ನಲ್ಲಿ ಪಡೆಯಬಹುದಾಗಿರುತ್ತದೆ. 1. ಇಂಡೆಂಟ್ ನಂ. **CMCHTGL/SWM/LABOUR/OUTSOURCE/01/2021-22:** ಅಂದಾಜು ಮೊತ್ತ : **96.20** ಲಕ್ಷ 2. ಇಂಡೆಂಟ್ ನಂ. **CMCHTGL/EST/01/2021-22:** ಅಂದಾಜು ಮೊತ್ತ : **10.40** ಲಕ್ಷ. ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ ಮತ್ತು ಸಮಯ : **22.03.2022** ರ ಸಂಜೆ **4.00** ಗಂಟೆಗೆ. ಟೆಂಡರ್ ತೆರೆಯುವ ದಿನಾಂಕ ಮತ್ತು ಸಮಯ: **23.03.2022** ರ ಸಂಜೆ **4.30** ರ ನಂತರ.

ಸಹಿ/– ಪೌರಾಯುಕ್ತರು
ನಗರಸಭೆ, ಹೂಟಗಳ್ಳಿ

ವಾಸಾಸಂಇ/ಮೈಸೂರು/ಶಿರಡಿ ಸಾಯಿ/1021/2021–22

ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ತುಮಕೂರು ಸ್ಮಾರ್ಟ್ ಸಿಟಿ ಲಿಮಿಟೆಡ್, ತುಮಕೂರು

ಶ್ರೀ ಮಹಾಲಕ್ಷ್ಮೀ ಆರ್ಕೇಡ್, ಎಸ್.ಎಸ್.ಪುರಂ ಮುಖ್ಯರಸ್ತೆ, ಕಾಫಿ ಬೋರ್ಡ್ ಕಾಲೋನಿ, ತುಮಕೂರು–572 102
ದೂರವಾಣಿ:0816–2278190
ವೆಬ್‌ಸೈಟ್: www.smartcitytumakuru.in
ಇ–ಮೇಲ್: smartcitytumakuru@gmail.com
ಸಂಖ್ಯೆ:ತುಸ್ಮಾಸಿ/ಟೆಂಡರ್/ಸಿಆರ್/18,21,22,23/2021–22 ದಿನಾಂಕ: 08.03.2022

ಟೆಂಡರ್ ಪ್ರಕಟಣೆ

ತುಮಕೂರು ಸ್ಮಾರ್ಟ್‌ಸಿಟಿ ಯೋಜನೆಯಡಿಯಲ್ಲಿ ಇ–ಪ್ರೊಕ್ಯುರ್‌ಮೆಂಟ್ ಮುಖಾಂತರ ಈ ಕೆಳಕಂಡ ಕಾಮಗಾರಿಗೆ ಟೆಂಡರ್ ಆಹ್ವಾನಿಸಲಾಗಿದೆ. ಅರ್ಹ ಬಿಡ್‌ದಾರರು ಟೆಂಡರ್‌ನಲ್ಲಿ ಭಾಗವಹಿಸಲು ಟೆಂಡರ್ ದಾಸ್ತಾನನ್ನು ಇ–ಪೋರ್ಟಲ್ www.eproc.karnataka.gov.in - ಮುಖಾಂತರ ಪಡೆಯಬಹುದಾಗಿದೆ. ಹೆಚ್ಚಿನ ವಿವರಗಳಿಗೆ ಇ–ಪೋರ್ಟಲ್ ಹೆಲ್ಪ್ ಡೆಸ್ಕ್ ದೂರವಾಣಿ ಸಂಖ್ಯೆ:080–22340948 ಹಾಗೂ ತುಮಕೂರು ಸ್ಮಾರ್ಟ್‌ಸಿಟಿ ದೂರವಾಣಿ ಸಂಖ್ಯೆ: 0816–2278190 ಯನ್ನು ಸಂಪರ್ಕಿಸಬಹುದು.

ಕಾಮಗಾರಿಯ ಹೆಸರು: 1. ತುಮಕೂರು ಅಮಾನಿಕೆರೆಯಲ್ಲಿರುವ ಸಂಗೀತ ಕಾರಂಜಿಯ ಪುನರಾಭಿವೃದ್ಧಿ ಮತ್ತು ಮಲ್ಟಿಮೀಡಿಯಾ ಲೇಸರ್ ಮತ್ತು ವಿಡಿಯೋ ಪ್ರದರ್ಶನ ಅಭಿವೃದ್ಧಿ ಕಾಮಗಾರಿ, ಕಾಮಗಾರಿಯ ಮೊತ್ತ ರೂ.4.13 ಕೋಟಿಗಳು, ಇಎಂಡಿ ರೂ.6.19ಲಕ್ಷಗಳು, ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: **23.03.2022,** ಟೆಂಡರ್ ತೆರೆಯುವ ದಿನಾಂಕ: **24.03.2022. 2.** ತುಮಕೂರು ನಗರದ ವಿವಿಧ 2 ಸ್ಥಳಗಳಲ್ಲಿ ಅಂಗನವಾಡಿ ಕೇಂದ್ರಗಳ ನಿರ್ಮಾಣ –ಹಂತ 5, ಕಾಮಗಾರಿಯ ಮೊತ್ತ ರೂ.42.00ಲಕ್ಷಗಳು, ಇಎಂಡಿ ರೂ.0.80ಲಕ್ಷಗಳು, ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: **23.03.2022** ಟೆಂಡರ್ ತೆರೆಯುವ ದಿನಾಂಕ: **24.03.2022. 3.** ತುಮಕೂರು ನಗರದ ವಿವಿಧ ಸ್ಥಳಗಳಲ್ಲಿ ಸಾರ್ವಜನಿಕ ಶೌಚಾಲಯ ನಿರ್ಮಾಣ, ದುರಸ್ತಿ ಮತ್ತು ನವೀಕರಣ ಕಾಮಗಾರಿ, ಕಾಮಗಾರಿಯ ಮೊತ್ತ ರೂ.72.00ಲಕ್ಷಗಳು, ಇಎಂಡಿ ರೂ.1.44ಲಕ್ಷಗಳು, ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: **23.03.2022,** ಟೆಂಡರ್ ತೆರೆಯುವ ದಿನಾಂಕ: **24.03.2022 4.** BIS ನಿಯಮಾವಳಿ ಅನ್ವಯ ನೀರಿನ ಸಂಸ್ಕರಣೆಗಾಗಿ ಪಂಪ್ ಹೌಸ್‌ಗಳಲ್ಲಿ ಆನ್‌ಲೈನ್ ಸಮಗ್ರ ವಿಶ್ಲೇಳಕದೊಂದಿಗೆ PLC ಆಧಾರಿತ CBR-MMS ಸಂಯೋಜಿತ ಕೇಂದ್ರೀಕೃತ ಸ್ವಯಂಚಾಲಿತ ಬ್ಯಾಕ್ಟೀರಿಯೊಲಾಜಿಕಲ್ ಟ್ರೀಟ್‌ಮೆಂಟ್ ಪ್ಲಾಂಟ್‌ನ ಸ್ಥಾಪನೆ, ಕಾಮಗಾರಿಯ ಮೊತ್ತ ರೂ.43.80ಲಕ್ಷಗಳು, ಇಎಂಡಿ ರೂ.0.87ಲಕ್ಷಗಳು, ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: **23.03.2022,** ಟೆಂಡರ್ ತೆರೆಯುವ ದಿನಾಂಕ: **24.03.2022. ಸೂಚನೆ:** ಈ ಕಾಮಗಾರಿಗಳಿಗೆ ಸಂಬಂಧಿಸಿದಂತೆ ಯಾವುದಾದರೂ ಬದಲಾವಣೆ ಇದ್ದಲ್ಲಿ ಇ–ಪ್ರೊಕ್ಯುರ್‌ಮೆಂಟ್ ಪೋರ್ಟಲ್‌ನಲ್ಲಿ ಮಾತ್ರ ಪ್ರಕಟಿಸಲಾಗುವುದು ಮತ್ತು ಯಾವುದೇ ಪತ್ರಿಕಾ ಪ್ರಕಟಣೆಯನ್ನು ಹೊರಡಿಸಲಾಗುವುದಿಲ್ಲ.

ಸಹಿ/–ಕಾರ್ಯಪಾಲಕ ಅಭಿಯಂತರರು,
ತುಮಕೂರು ಸ್ಮಾರ್ಟ್‌ಸಿಟಿ ಲಿಮಿಟೆಡ್, ತುಮಕೂರು.

DIPR/TUM/718/MCA/2021-22

ಪಾರಾಗಿ ಬಂದ ಭಯಾನಕ ವೃತ್ತಾಂತ ಬಿಚ್ಚಿಟ್ಟ ಮಾಜಿ 'ಮಿಸ್ ಉಕ್ರೇನ್'

ಲಾಸ್ ಏಂಜಲೀಸ್ (ಎಪಿ): ಎರಡನೇ ಮಹಾಯುದ್ಧದಲ್ಲೂ ಕಾಣದಂತಹ ಭೀಕರ ಪರಿಸ್ಥಿತಿ ಉಕ್ರೇನ್‌ನಲ್ಲಿ ಏರ್ಪಟ್ಟಿದೆ. ರಷ್ಯಾ ಆಕ್ರಮಣದಿಂದಾಗಿ ಹಲವು ಯೋಧರು, ನಾಗರಿಕರು ಪ್ರಾಣ ಕಳೆದುಕೊಂಡರೆ, ಮತ್ತೆ ಕೆಲವರು ದೇಶ ಬಿಟ್ಟು ಹೋಗಿದ್ದಾರೆ. ಹಾಗೆ, ದೇಶ ತೊರೆದವರಲ್ಲಿ ಮಾಜಿ 'ಮಿಸ್ ಉಕ್ರೇನ್' ವೆರೊನಿಕಾ ದಿಡುಸೆಂಕೊ ಒಬ್ಬರು.


ವೆರೊನಿಕಾ ದಿಡುಸೆಂಕೊ

ಕೀವ್ ನಗರದಿಂದ ತಮ್ಮ 7 ವರ್ಷದ ಮಗನ ಜೊತೆ ತಪ್ಪಿಸಿಕೊಂಡು ಬಂದ ವೃತ್ತಾಂತವನ್ನು 2018ರ ಮಿಸ್ ಉಕ್ರೇನ್ ವೆರೊನಿಕಾ, ಲಾಸ್ ಏಂಜಲೀಸ್‌ನ ಮಹಿಳೆಯರ ಹಕ್ಕುಗಳ ಅಟಾರ್ನಿ ಗ್ಲೋರಿಯಾ ಅಲ್ಲೆರ್ಡ್ ಅವರ ಕಚೇರಿಯ ಸುದ್ದಿಗೋಷ್ಠಿಯಲ್ಲಿ ಎಳೆ ಎಳೆಯಾಗಿ ಬಿಚ್ಚಿಟ್ಟಿದ್ದಾರೆ.

'ರಷ್ಯಾ ದಾಳಿ ಮಾಡಿದ ಮೊದಲ ದಿನ ಭಾರೀ ಸ್ಫೋಟ, ಸೈರನ್ ಸದ್ದನ್ನು ಕೇಳಿ ಗಾಬರಿಯಿಂದ ಬೆಳಗ್ಗೆ ಎದ್ದೆವು. ಭಯಗೊಂಡು ಸಾವಿರಾರು ಉಕ್ರೇನ್ ಜನರ ರೀತಿಯೇ ನಾನೂ ಹೊರಗೆ ಓಡಿ ಬಂದೆ. ರಕ್ಷಣೆಗಾಗಿ ನನಗೆ ಸೈರನ್, ಬಾಂಬ್ ಸ್ಫೋಟ ಮತ್ತು ರಾಕೆಟ್ ದಾಳಿಗಳಿಲ್ಲದ ಚಿಕ್ಕ ಸ್ಥಳವೂ ಕಾಣಲಿಲ್ಲ. ಜೀವ ಕೈಯಲ್ಲಿ ಹಿಡಿದುಕೊಂಡು ಭಯದಲ್ಲೇ ಗಡಿ ತಲುಪಿದೆವು' ಎಂದಿದ್ದಾರೆ.

ಬಳಿಕ, ಸಾಹಸ ಮಾಡಿ ಮಾಲ್ಡೊವಾ ತಲುಪಿದ್ದ ಅವರು, ಯುರೋಪಿಯನ್ ದೇಶಗಳನ್ನು ದಾಟಿ ಸ್ವಿಟ್ಜರ್ಲೆಂಡ್‌ನ ಜಿನಿವಾ ತಲುಪಿದ್ದರು. ವೀಸಾ ಸಮಸ್ಯೆಯಿಂದಾಗಿ ಮಗನನ್ನು ಜಿನಿವಾದಲ್ಲೇ ಬಿಟ್ಟು ಅಮೆರಿಕಕ್ಕೆ ಪ್ರಯಾಣಿಸುವ ನಿರ್ಧಾರ ಕೈಗೊಂಡೆ ಎಂದಿದ್ದಾರೆ.

'ಇದೀಗ, ಉಕ್ರೇನ್‌ನ ಲಕ್ಷಾಂತರ ಮಕ್ಕಳು ಮತ್ತು ಅವರ ತಾಯಂದಿರು ಮೆಟ್ರೊ ಸುರಂಗ ಮಾರ್ಗಗಳು ಮತ್ತು ಬಾಂಬ್ ಶೆಲ್ಟರ್‌ಗಳಲ್ಲಿ ಕುಳಿತು ಪ್ರತಿ ಸ್ಫೋಟದ ಶಬ್ದಕ್ಕೂ ನಡುಗುತ್ತಿದ್ದಾರೆ. ಈ ಆಶ್ರಯ ತಾಣಗಳಲ್ಲೇ ಮಹಿಳೆಯರು ಮಕ್ಕಳಿಗೆ ಜನ್ಮ ನೀಡುತ್ತಿರುವುದು ಹೃದಯ ವಿದ್ರಾವಕವಾಗಿದೆ' ಎಂದು ದಿಡುಸೆಂಕೊ ಹೇಳಿದರು.

ಈ ಮಧ್ಯೆ, ತನ್ನ ಮಗನ ವೀಸಾಗೆ ಅನುಮತಿ ಕೋರಿ ಅಮೆರಿಕದಲ್ಲಿ ಸಲ್ಲಿಸಲಾಗಿದ್ದ ಅರ್ಜಿ ತಿರಸ್ಕೃತಗೊಂಡಿದ್ದು, ಮಗನಿಗಾಗಿ ವಾರಾಂತ್ಯಕ್ಕೆ ಮತ್ತೆ ಜಿನಿವಾಗೆ ಹಿಂದಿರುಗುವುದಾಗಿ ಹೇಳಿದ್ದಾರೆ. ಆದರೆ, ಅಮೆರಿಕ ಅಧಿಕಾರಿಗಳು ದಿಡುಸೆಂಕೊ ಅವರ ಮಗನಿಗೆ ವೀಸಾ ನೀಡುವ ನಿಟ್ಟಿನಲ್ಲಿ ನಿಯಮಗಳ ಸಡಿಲಿಕೆ ಮಾಡುವ ವಿಶ್ವಾಸವಿದೆ ಎಂದು ಮಹಿಳೆಯರ ಹಕ್ಕುಗಳ ಅಟಾರ್ನಿ ಗ್ಲೋರಿಯಾ ಅಲ್ಲೆರ್ಡ್ ಹೇಳಿದ್ದಾರೆ.

ಉಕ್ರೇನ್ ಪ್ರಜೆಗಳು ತಮ್ಮ ದೇಶದ ರಕ್ಷಣೆಗೆ ಬದ್ಧರಾಗಿದ್ದಾರೆ. ಅವರಿಗೆ, ಇತರೆ ದೇಶಗಳಿಂದ ನೆರವಿನ ಅಗತ್ಯವಿದೆ ಎಂದು ದಿಡುಸೆಂಕೊ ಹೇಳುತ್ತಾರೆ.


'ಉಕ್ರೇನಿಯನ್ನರು ತಮ್ಮ ಭೂಮಿ ಮತ್ತು ಮನೆಗಳನ್ನು ರಕ್ಷಿಸಿಕೊಳ್ಳಲು ಬೇಕಾದ ಧೈರ್ಯವನ್ನು ಹೊಂದಿದ್ದಾರೆ. ಆದರೆ, ದೇಶದ ಪೂರ್ವ ಮತ್ತು ಉತ್ತರದಿಂದ ನಡೆಯುತ್ತಿರುವ ದಾಳಿಯನ್ನು ತಡೆಯಲು ಅವರಿಗೆ ಸೂಕ್ತ ಪ್ರಮಾಣದ ಶಸ್ತ್ರಾಸ್ತ್ರಗಳು ಮತ್ತು ಮದ್ದುಗುಂಡುಗಳ ಅಗತ್ಯವಿದೆ' ಎಂದು ಹೇಳಿದ್ದಾರೆ.

ಉಕ್ರೇನ್‌ನಲ್ಲಿ ನಾಗರಿಕರನ್ನು ಗುರಿಯಾಗಿಸಿ ದಾಳಿ ನಡೆಸಿಲ್ಲ; ರಷ್ಯಾ ಪುನರುಚ್ಚಾರ

ಹಾವೇರಿಯ ನವೀನ್ ಸಾವು: ತನಿಖೆ ಭರವಸೆ

ಪ್ರಜಾವಾಣಿ ವಾರ್ತೆ

ನವದೆಹಲಿ: 'ಉಕ್ರೇನ್‌ನಲ್ಲಿ ನಾಗರಿಕರನ್ನು ಗುರಿಯಾಗಿಸಿಕೊಂಡು ದಾಳಿ ನಡೆಸಿಲ್ಲ' ಎಂದು ಪುನರುಚ್ಚರಿಸಿರುವ ರಷ್ಯಾ, ಕರ್ನಾಟಕದ ವೈದ್ಯಕೀಯ ವಿದ್ಯಾರ್ಥಿ, ಹಾವೇರಿ ಜಿಲ್ಲೆಯ ಚಳಗೇರಿಯ ನವೀನ್ ಗ್ಯಾನಗೌಡರ್ ಅವರ ಸಾವು ರಷ್ಯಾದ ದಾಳಿಯಿಂದ ಘಟಿಸಿದ್ದಲ್ಲ ಎಂದು ಹೇಳಿದೆ.


ನವೀನ್ ಗ್ಯಾನಗೌಡರ್

'ರಷ್ಯಾದ ಶೆಲ್ ದಾಳಿಯಿಂದ ನವೀನ್ ಸಾವು ಸಂಭವಿಸಿದೆ' ಎಂದು ಉಕ್ರೇನ್ ನೀಡಿರುವ ಪ್ರಾಥಮಿಕ ಹೇಳಿಕೆಯನ್ನು ತಳ್ಳಿ ಹಾಕಿರುವ ರಷ್ಯಾ, ಆಂತರಿಕ ಕಚ್ಚಾಟ ಮತ್ತು ಅರಾಜಕತೆಯಿಂದಾಗಿ ಯುದ್ಧಪೀಡಿತ ಉಕ್ರೇನ್‌ನಲ್ಲಿ ಸಂಘರ್ಷ ನಡೆಯುತ್ತಿರುವ ಪರಿಣಾಮ, ಅಮಾಯಕ ಪ್ರಜೆಗಳು ಸಾವಿಗೀಡಾಗಿದ್ದಾರೆ ಎಂದೂ ಆರೋಪಿಸಿದೆ.

'ಡೆಕ್ಕನ್ ಹೆರಾಲ್ಡ್'ಗೆ ಸಂದರ್ಶನ ನೀಡಿರುವ ನವದೆಹಲಿಯಲ್ಲಿನ ರಷ್ಯಾದ ದೂತಾವಾಸ ಕಚೇರಿಯ ಉಪ ರಾಯಭಾರಿ (ಪ್ರಭಾರಿ ರಾಯಭಾರಿ) ರೋಮನ್ ಬಾಬುಷ್ಕಿನ್, ಉಕ್ರೇನ್ ಮೇಲೆ ಯುದ್ಧ ಸಾರಿರುವ ರಷ್ಯಾದ ನಿಲುವಿನ ಕುರಿತು ಭಾರತ ತಾಳಿರುವ ತಟಸ್ಥ ನೀತಿಯನ್ನು ಸ್ವಾಗತಿಸಿದ್ದು, ನವೀನ್ ಸಾವಿನ ಘಟನೆಯ ಕುರಿತೂ ಪ್ರಸ್ತಾಪಿಸಿದ್ದಾರೆ.


ಸುಮಿ ನಗರದಲ್ಲಿ ಸಿಲುಕಿದ್ದ ಭಾರತೀಯ ವಿದ್ಯಾರ್ಥಿಗಳು ಬುಧವಾರ ವಿಶೇಷ ರೈಲಿನ ಮೂಲಕ ಪೂರ್ವ ಉಕ್ರೇನ್‌ಗೆ ಪ್ರಯಾಣ ಬೆಳೆಸಿದರು –ಪಿಟಿಐ ಚಿತ್ರ

ಪಾಕ್ ಪ್ರಜೆಯನ್ನೂ ರಕ್ಷಿಸಿದ ಭಾರತ

ನವದೆಹಲಿ (ಪಿಟಿಐ): ಉಕ್ರೇನ್‌ನ ಸುಮಿ ನಗರದಿಂದ ಭಾರತದ 700 ವಿದ್ಯಾರ್ಥಿಗಳ ಜೊತೆಗೆ ಪಾಕಿಸ್ತಾನದ ಪ್ರಜೆ ಸೇರಿ 17 ವಿದೇಶಿ ನಾಗರಿಕರನ್ನೂ ಯುದ್ಧಪೀಡಿತ ಉಕ್ರೇನ್ ನೆಲದಿಂದ ತೆರವುಗೊಳಿಸಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

'ಭಾರತೀಯ ವಿದ್ಯಾರ್ಥಿಗಳ ನಂತರ, ಇತರ ದೇಶಗಳ ವಿದ್ಯಾರ್ಥಿಗಳನ್ನು ಸಹ ತೆರವುಗೊಳಿಸಲಾಗಿದೆ. ಪಾಕಿಸ್ತಾನದ ಮಹಿಳೆ ಆಸ್ಮಾ ಶಫೀಕ್, ನೇಪಾಳದ ಪ್ರಜೆ, ಟ್ಯುನೀಷಿಯಾದ ಇಬ್ಬರು ಮತ್ತು ಬಾಂಗ್ಲಾದೇಶದ 13 ಪ್ರಜೆಗಳನ್ನು ಭಾರತೀಯ ವಿದ್ಯಾರ್ಥಿಗಳ ಜೊತೆಗೆ ಸುಮಿಯಿಂದ ತೆರವುಗೊಳಿಸಲಾಗಿದೆ' ಎಂದು ವಿದ್ಯಾರ್ಥಿ ಸಂಯೋಜಕ ಅನ್ವದ್ ಅಲಿ ಹೇಳಿದ್ದಾರೆ.

ಭಾರತೀಯ ವಿದ್ಯಾರ್ಥಿಯ ಸಾವಿನ ಕುರಿತು ತನಿಖೆ ನಡೆಸುವುದಲ್ಲದೆ, ತನಿಖೆಯ ವಿವರಗಳನ್ನೂ ಭಾರತದೊಂದಿಗೆ ಹಂಚಿಕೊಳ್ಳಲಾಗುವುದು. ಒಮ್ಮೆ ಹಾರ್ಕಿವ್ ನಗರವನ್ನು ಸಂಪೂರ್ಣ ವಶಕ್ಕೆ ಪಡೆದಿದ್ದೇ ಆದಲ್ಲಿ, ಪಾರ್ಥಿವ ಶರೀರವನ್ನು ತಾಯ್ನಾಡಿಗೆ ಕಳುಹಿಸಿಕೊಡುವಲ್ಲಿಯೂ ಸೂಕ್ತ ಸಹಕಾರ ನೀಡುವುದಾಗಿ ಅವರು ಭರವಸೆ ನೀಡಿದ್ದಾರೆ.

ಭಾರತೀಯ ವಿದ್ಯಾರ್ಥಿಯ ಸಾವು ನಿಜಕ್ಕೂ ಅತ್ಯಂತ ದುರದೃಷ್ಟಕರ ಘಟನೆ. ಈ ದುರಂತಕ್ಕೆ ಕಾರಣವಾದ ಸಂದರ್ಭಗಳ ಕುರಿತು ಖಚಿತತೆ ಇಲ್ಲ. ಆದರೂ, ರಷ್ಯಾದ ಸಶಸ್ತ್ರ ಪಡೆಗಳು ನಾಗರಿಕರನ್ನು ಗುರಿಯಾಗಿಸಿ ದಾಳಿ ನಡೆಸಿಲ್ಲ ಎಂದು ಅವರು ಹೇಳಿದ್ದಾರೆ.

'ಅದು ಶೆಲ್ ದಾಳಿಯೇ ಆಗಿದ್ದರೆ, ವೈರಲ್ ಆಗಿರುವ ವಿಡಿಯೋ ತುಣುಕುಗಳಲ್ಲಿ ಕಂಡುಬಂದಂತೆ, ಹಾರ್ಕಿವ್ ನಗರದ ಪಶ್ಚಿಮ ಭಾಗದಿಂದ ಬಂದ ಕ್ಷಿಪಣಿ 'ಟೈಮ್ ಸ್ಕ್ವೇರ್'ಗೆ ಅಪ್ಪಳಿಸಿರುವುದು ಗೋಚರಿಸುತ್ತದೆ. ಉಕ್ರೇನ್‌ನ ಆಡಳಿತವು ಕಾರಾಗೃಹದಿಂದ ಬಿಡುಗಡೆ ಮಾಡಿರುವ ಅಪರಾಧಿಗಳನ್ನೂ ಒಳಗೊಂಡಂತೆ ಅನೇಕರಿಗೆ ಬೇಕಾಬಿಟ್ಟಿಯಾಗಿ ಶಸ್ತ್ರಾಸ್ತ್ರಗಳನ್ನು ವಿತರಿಸಲು ಆರಂಭಿಸಿದೆ ಎಂಬುದನ್ನೂ ನಾವು ನೆನಪಿನಲ್ಲಿ ಇಟ್ಟುಕೊಳ್ಳಬೇಕಿದೆ. ಹಾಗೆ ಜೈಲುಗಳಿಂದ ಹೊರಬಂದವರಲ್ಲಿ ಜನಾಂಗೀಯವಾದಿಗಳು ಮತ್ತು -ನವ ನಾಝಿಗಳೂ ಇದ್ದಾರೆ. ಮುಖ್ಯವಾಗಿ, ಭಾರತೀಯ ವಿದ್ಯಾರ್ಥಿಯು ಗುಂಡಿನ ಚಕಮಕಿಯಲ್ಲಿ ಸಾವನ್ನಪ್ಪಿರುವ ಆಯಾಮದ ಕುರಿತೂ ಮಾಹಿತಿ ಲಭಿಸಿದೆ' ಎಂದು ಅವರು ಸ್ಪಷ್ಟಪಡಿಸಿದ್ದಾರೆ.'ವಿದ್ಯಾರ್ಥಿಯ ಸಾವಿನ ಘಟನೆಯ ಕುರಿತು ತನಿಖೆ ನಡೆಸಲು ನಾವು ಆಸಕ್ತರಾಗಿದ್ದೇವೆ. ಈ ಕುರಿತ ತನಿಖೆಯ ಅಂಶಗಳನ್ನು ಭಾರತ ಸರ್ಕಾರದೊಂದಿಗೆ ಹಂಚಿಕೊಳ್ಳುತ್ತೇವೆ. ವಿದ್ಯಾರ್ಥಿಯ ಪಾರ್ಥಿವ ಶರೀರವನ್ನು ಸ್ವದೇಶಕ್ಕೆ ಕಳುಹಿಸುವ ಸಂಬಂಧ ಅಗತ್ಯ ಸಹಕಾರ, ಸಮನ್ವಯಕ್ಕೆ ರಷ್ಯಾ ಸಿದ್ಧವಿದೆ' ಎಂದೂ ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ಸುಮಿ ನಗರದಿಂದ 700 ವಿದ್ಯಾರ್ಥಿಗಳ ತೆರವು

ನವದೆಹಲಿ (ಪಿಟಿಐ): ಯುದ್ಧಪೀಡಿತ ಉಕ್ರೇನ್‌ನ ಸುಮಿ ನಗರದಲ್ಲಿ ಸಿಲುಕಿದ್ದ 700 ಭಾರತೀಯ ವಿದ್ಯಾರ್ಥಿಗಳ ಕೊನೆಯ ದೊಡ್ಡದಾದ ಗುಂಪನ್ನು ತೆರವು ಮಾಡಲಾಗಿದ್ದು, ಪೋಲ್ಟಾವಾದಿಂದ ವಿಶೇಷ ರೈಲಿನ ಮೂಲಕ ಪ್ರಯಾಣ ಬೆಳೆಸಿದ್ದಾರೆ. ಇವರೆಲ್ಲರೂ ಪೋಲೆಂಡ್‌ನಿಂದ ಗುರುವಾರ ಭಾರತಕ್ಕೆ ತೆರಳಲು ವಿಮಾನ ಹತ್ತುವ ಸಾಧ್ಯತೆಯಿದೆ.

'ವಿದ್ಯಾರ್ಥಿಗಳನ್ನು ರೈಲಿನಲ್ಲಿ ಪಶ್ಚಿಮ ಉಕ್ರೇನ್‌ನ ಎಲ್ವಿವ್‌ಗೆ ಕರೆದೊಯ್ಯಲಾಗುತ್ತಿದೆ. ಅಲ್ಲಿಂದ ಅವರನ್ನು ಬಸ್‌ಗಳಲ್ಲಿ ಪೋಲೆಂಡ್‌ಗೆ ಕರೆದೊಯ್ಯಲಾಗುವುದು' ಎಂದು ವಿದ್ಯಾರ್ಥಿ ಸಂಯೋಜಕ ಅನ್ವದ್ ಅಲಿ ತಿಳಿಸಿದ್ದಾರೆ.

'ಪೋಲ್ಟಾವಾದಿಂದ ಎಲ್ವಿವ್ ನಗರವು 888 ಕಿ.ಮೀ. ದೂರದಲ್ಲಿದೆ. ಎಲ್ವಿವ್‌ನಿಂದ ಪೋಲೆಂಡ್ ಗಡಿ50 ಕಿ.ಮೀ. ದೂರದಲ್ಲಿದೆ. ಗಡಿಯನ್ನು ದಾಟಿದ ನಂತರ ವಿದ್ಯಾರ್ಥಿಗಳನ್ನು ವಿಮಾನಗಳಲ್ಲಿ ಭಾರತಕ್ಕೆ ಕಳುಹಿಸಲಾಗುವುದು' ಎಂದು ಅವರು ತಿಳಿಸಿದರು.

'ಸುಮಿಯಿಂದ ಭಾರತೀಯ ವಿದ್ಯಾರ್ಥಿಗಳ ಕೊನೆಯ ಗುಂಪನ್ನು ಸ್ಥಳಾಂತರಿಸುವ ಕಾರ್ಯಾಚರಣೆಯನ್ನು ಮಂಗಳವಾರ ಬೆಳಿಗ್ಗೆಯೇ ಆರಂಭಿಸಲಾಗಿತ್ತು. ರೆಡ್‌ಕ್ರಾಸ್‌ನ ಅಂತರರಾಷ್ಟ್ರೀಯ ಸಮಿತಿಯ ಬೆಂಗಾವಲು ವಾಹನಗಳ ಜೊತೆಗೆ 13 ಬಸ್‌ಗಳಲ್ಲಿ ವಿದ್ಯಾರ್ಥಿಗಳನ್ನು ಪೋಲ್ಟಾವಾ ನಗರಕ್ಕೆ ಕರೆದೊಯ್ಯಲಾಯಿತು' ಎಂದು ಅಲಿ ಹೇಳಿದರು. 'ಶೇ 95 ರಷ್ಟು ಭಾರತೀಯ ವಿದ್ಯಾರ್ಥಿಗಳನ್ನು ಸುಮಿಯಿಂದ ತೆರವುಗೊಳಿಸಲಾಗಿದೆ. ವಿದ್ಯಾರ್ಥಿಗಳಲ್ಲದೆ, ಸುಮಿಯಲ್ಲಿ ಕೆಲಸ ಮಾಡುತ್ತಿದ್ದ ಸುಮಾರು 20 ಭಾರತೀಯರು ಮತ್ತು ಅವರ ಕುಟುಂಬದ ಸದಸ್ಯರನ್ನೂ ತೆರವುಗೊಳಿಸಲಾಗಿದೆ' ಎಂದು ಅವರು ಮಾಹಿತಿ ನೀಡಿದರು.

'ಸುಮಿಯಿಂದ ಹೊರಗೆ ಬಂದಿದ್ದರಿಂದ ಎಲ್ಲರೂ ಈಗ ನಿರಾಳರಾಗಿದ್ದೇವೆ. ನಮಗೆ ವಿಪರೀತ ದಣಿವಾಗಿದ್ದರೂ, ಸಂತೋಷವಾಗಿದ್ದೇವೆ. ಮಂಗಳವಾರ ಬೆಳಿಗ್ಗೆಯಿಂದ ನಮ್ಮ ಪ್ರಯಾಣ ಆರಂಭವಾಗಿದ್ದು, ಇನ್ನೂ ಹಲವು ಗಂಟೆಗಳ ಕಾಲ ಪ್ರಯಾಣಿಸಬೇಕಿದೆ. ಸುರಕ್ಷಿತವಾಗಿ ಮನೆಗೆ ತಲುಪುತ್ತೇವೆ ಎಂಬ ಭರವಸೆ ಎಲ್ಲರಲ್ಲೂ ಈಗ ಮೂಡಿದೆ' ಎಂದು ವೈದ್ಯಕೀಯ ವಿದ್ಯಾರ್ಥಿನಿ ಜಿಸ್ನಾ ಜೀಜಿ ಹೇಳಿದ್ದಾರೆ.

'ಉಕ್ರೇನ್ ಸರ್ಕಾರ ಬೀಳಿಸುವ ಪ್ರಶ್ನೆಯೇ ಇಲ್ಲ'

ಒಂದನೇ ಪುಟದಿಂದ...

'ರಷ್ಯಾ ಪಡೆಗಳ ವಿರುದ್ಧ ವಾಯು, ಸಮುದ್ರ ಮತ್ತು ನೆಲದಲ್ಲಿ ಹೋರಾಟ ಮುಂದುವರಿಸಲಾಗುವುದು. ನಾವು ನಮ್ಮ ದೇಶವನ್ನು ಬಿಟ್ಟುಕೊಡುವುದಿಲ್ಲ ಮತ್ತು ಸೋಲುವುದಿಲ್ಲ. ಏನೇ ಬೆಲೆ ತೆತ್ತಾದರೂ ನಮ್ಮ ನೆಲಕ್ಕಾಗಿ ಕೊನೆಯವರೆಗೂ ಹೋರಾಟ ಮಾಡುತ್ತೇವೆ' ಎಂದು ಅವರು ಹೇಳಿದರು.

ಮುಂದುವರಿದ ಬಾಂಬ್ ದಾಳಿ:

ಉಕ್ರೇನ್‌ನ ಮರಿಯುಪೋಲ್ ನಗರದಲ್ಲಿ ನಾಗರಿಕರ ಸ್ಥಳಾಂತರಕ್ಕೆ ತೆರೆದಿದ್ದ 'ಮಾನವೀಯ ಕಾರಿಡಾರ್'ನಲ್ಲಿ ರಷ್ಯಾ ಪಡೆಗಳು ಬುಧವಾರ ಕೂಡ ಬಾಂಬ್ ದಾಳಿ ನಡೆಸಿವೆ ಈ ನಗರ ಕಳೆದ ಒಂಬತ್ತು ದಿನಗಳಿಂದ ನೀರು, ವಿದ್ಯುತ್ ಸೌಲಭ್ಯ ಇಲ್ಲದೇ ಕತ್ತಲಿನಲ್ಲಿ ಮುಳುಗಿದೆ.

ಚೆರ್ನೊಬಿಲ್‌ನಲ್ಲಿ ವಿಕಿರಣ ಅಪಾಯ:

ಉಕ್ರೇನ್‌ನ ಚೆರ್ನೊಬಿಲ್ ಅಣು ವಿದ್ಯುತ್ ಸ್ಥಾವರದಿಂದ ವಿಕಿರಣ ಸೋರಿಕೆಯಾಗುವ ಅಪಾಯ ಎದುರಾಗಿದೆ.

ರಷ್ಯಾ ಪಡೆಗಳ ದಾಳಿಯಿಂದ ಹಾನಿಗೀಡಾಗಿರುವ ಚೆರ್ನೊಬಿಲ್ ಅಣು ವಿದ್ಯುತ್ ಸ್ಥಾವರದ ವಿದ್ಯುತ್ ಮಾರ್ಗದ ದುರಸ್ತಿಗೆ ಅವಕಾಶ ನೀಡುವಂತೆ ಉಕ್ರೇನ್ ಸರ್ಕಾರ, ಬುಧವಾರ ತಾತ್ಕಾಲಿಕ ಕದನ ವಿರಾಮ ಘೋಷಿಸಬೇಕೆಂದು ರಷ್ಯಾಕ್ಕೆ ಮನವಿ ಮಾಡಿದೆ.

'ಚೆರ್ನೊಬಿಲ್‌ನಲ್ಲಿ ಸುಮಾರು 20,000 ಬಳಕೆ ಮಾಡಿದ ಇಂಧನ ಅಸೆಂಬ್ಲಿಗಳು ಇದ್ದು, ವಿದ್ಯುತ್ ಸಂಪರ್ಕ ಇಲ್ಲದೇ ಇವುಗಳನ್ನು ತಣ್ಣಗಿಡುವುದು ಅಸಾಧ್ಯ. ಅವುಗಳ ಉಷ್ಣತೆಯಿಂದ ಸೋರಿಕೆಯಾಗುವ ವಿಕಿರಣಗಳು ಮೋಡಗಳಲ್ಲಿ ಬೆರೆತು ಗಾಳಿಯಲ್ಲಿ ಉಕ್ರೇನ್, ಬೆಲಾರಸ್, ರಷ್ಯಾ ಹಾಗೂ ಯುರೋಪ್‌ನಾದ್ಯಂತ ಪಸರಿಸಬಹುದು' ಎಂದು ಉಕ್ರೇನ್‌ನ ಸರ್ಕಾರಿ ಪರಮಾಣು ಕಂಪನಿ ಎನರ್‌ಗೋಟಮ್ ಎಚ್ಚರಿಸಿದೆ.


ರಷ್ಯಾ ಪಡೆಗಳ ವಶಕ್ಕೆ ಸಿಕ್ಕ ನಂತರ ಚೆರ್ನೊಬಿಲ್ ಅಣು ವಿದ್ಯುತ್ ಸ್ಥಾವರವು ಐಎಇಎಗೆ ದತ್ತಾಂಶ ಕಳುಹಿಸುವುದನ್ನು ಸ್ಥಗಿತಗೊಳಿಸಿದೆ. ಸ್ಥಾವರದಲ್ಲಿರುವ 210 ಸಿಬ್ಬಂದಿ ವಿಕಿರಣಕ್ಕೆ ಒಳಪಡುವ ಅಪಾಯವಿದೆ' ಎಂದು ಎನರ್‌ಗೋಟಮ್ ನೀಡಿರುವ ವರದಿ ಉಲ್ಲೇಖಿಸಿ ಐಎಇಎ ಕಳವಳ ವ್ಯಕ್ತಪಡಿಸಿದೆ.

ಆಕ್ರಮಣ ನಿಲ್ಲಿಸದ ರಷ್ಯಾದ ಮೇಲೆ ಒತ್ತಡ ಮುಂದುವರಿಸಿರುವ ಅಮೆರಿಕ, ಐರೋಪ್ಯ ರಾಷ್ಟ್ರಗಳು ಮತ್ತಷ್ಟು ಹೊಸ ಆರ್ಥಿಕ ನಿರ್ಬಂಧಗಳನ್ನು ಹೇರಿವೆ. ಪಾಶ್ಚಿಮಾತ್ಯ ದೇಶಗಳ ಈ ನಿರ್ಬಂಧದ ಪರಿಣಾಮವನ್ನು ತಗ್ಗಿಸಲು ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ಗುರುವಾರ (ಇದೇ 10ರಂದು) ಸರ್ಕಾರದ ಉನ್ನತ ಅಧಿಕಾರಿಗಳ ಸಭೆ ಕರೆದಿದ್ದಾರೆ.

> **ಸದಸ್ಯತ್ವಕ್ಕಾಗಿ ನ್ಯಾಟೊ ಮುಂದೆ ಮಂಡಿಯೂರಿ ಬೇಡುವಂಥ ರಾಷ್ಟ್ರವೊಂದರ ಅಧ್ಯಕ್ಷನಾಗಲು ನನಗೆ ಇಷ್ಟ ಇಲ್ಲ**
> **ವೊಲೊಡಿಮಿರ್ ಝೆಲೆನ್‌ಸ್ಕಿ**
> ಉಕ್ರೇನ್ ಅಧ್ಯಕ್ಷ

> **ರಷ್ಯಾ ವಿರುದ್ಧ ಅಮೆರಿಕ ಆರ್ಥಿಕ ಸಂಘರ್ಷ ಸಾರಿದೆ. ಮುಂದೇನು ಮಾಡಬೇಕೆಂದು ಮಾಸ್ಕೊ ಗಂಭೀರವಾಗಿ ಯೋಚಿಸಲಿದೆ**
> **ಡಿಮಿಟ್ರಿ ಪೆಸ್ಕೋವ್**
> ರಷ್ಯಾದ ವಕ್ತಾರ

ಮರಳಿದ ವೈದ್ಯ ವಿದ್ಯಾರ್ಥಿಗಳಿಗೆ ಪ್ರವೇಶ: ಪ್ರಭಾಕರ ಕೋರೆ



ಬೆಳಗಾವಿ: 'ಯುದ್ಧಪೀಡಿತ ಉಕ್ರೇನ್‌ನಿಂದ ವಾಪಸಾಗಿರುವ ವೈದ್ಯಕೀಯ ವಿದ್ಯಾರ್ಥಿಗಳಿಗೆ ಶಿಕ್ಷಣ ಮುಂದುವರಿಸಲು ಸರ್ಕಾರದ ಸೂಚನೆ ಹಾಗೂ ನಿಯಮಗಳಿಗೆ ಅನುಗುಣವಾಗಿ ರಾಜ್ಯದ ಡೀಮ್ಡ್ ವಿಶ್ವವಿದ್ಯಾಲಯಗಳಲ್ಲಿ ಪ್ರವೇಶ ನೀಡಲಾಗುವುದು' ಎಂದು ಕೆಎಲ್‌ಇ ಸಂಸ್ಥೆಯ ಕಾರ್ಯಾಧ್ಯಕ್ಷರೂ ಆಗಿರುವ ಕೋಡ್‌ಯುನಿಕ್ (ಕರ್ನಾಟಕ ರಾಜ್ಯ ಎಲ್ಲ ಡೀಮ್ಡ್ ವಿಶ್ವವಿದ್ಯಾಲಯಗಳ ಒಕ್ಕೂಟ) ಅಧ್ಯಕ್ಷ ಪ್ರಭಾಕರ ಕೋರೆ ತಿಳಿ ಸಿದ್ದಾರೆ.

ಈ ಬಗ್ಗೆ ಬುಧವಾರ ಪ್ರಕಟಣೆ ನೀಡಿರುವ ಅವರು, 'ಉಕ್ರೇನ್‌ನಲ್ಲಿ ಭಾರತೀಯ ವೈದ್ಯ ವಿದ್ಯಾರ್ಥಿಗಳು ಶಿಕ್ಷಣವನ್ನು ಮಧ್ಯದಲ್ಲಿಯೇ ತೊರೆದು ವಾಪಸಾಗುವಂತಹ ಸ್ಥಿತಿ ನಿರ್ಮಾಣವಾಗಿರುವುದು ವಿಷಾದನೀಯ. ಆದರೆ, ಅವರ ಮುಂದಿನ ವ್ಯಾಸಂಗಕ್ಕೆ ಯಾವುದೇ ತೊಂದರೆ ಆಗದಂತೆ ಕೇಂದ್ರ ಸರ್ಕಾರವು ಹಲವು ಉಪಕ್ರಮಗಳನ್ನು ಕೈಗೊಳ್ಳುತ್ತಿದೆ. ನಾವು ಪ್ರಧಾನಿ ನರೇಂದ್ರ ಮೋದಿ ಅವರು ಸೂಚಿಸಿರುವಂತೆ ಪ್ರವೇಶ ಒದಗಿಸಲಿದ್ದೇವೆ' ಎಂದು ಹೇಳಿದ್ದಾರೆ.

'ನಮ್ಮ ವಿದ್ಯಾರ್ಥಿಗಳನ್ನು ತಾಯ್ನಾಡಿಗೆ ಸುರಕ್ಷಿತವಾಗಿ ಕರೆ ತಂದ ಪ್ರಧಾನಿ ಅವರಿಗೆ ಅಭಿನಂದನೆ ಸಲ್ಲಿಸುತ್ತೇನೆ. ವಿದ್ಯಾರ್ಥಿಗಳು ಹತಾಶರಾಗದೆ, ವೈದ್ಯರಾಗಬೇಕು ಎನ್ನುವ ಕನಸನ್ನು ಭಾರತದಲ್ಲೇ ನನಸು ಮಾಡಿಕೊಳ್ಳಬಹುದು' ಎಂದಿದ್ದಾರೆ

ನ್ಯಾಟೊ ಸೇರಬೇಕೆಂಬ ಉಕ್ರೇನ್ ಉದ್ದೇಶವೇ ದಾಳಿಗೆ ಕಾರಣ: ರಷ್ಯಾ

'ನ್ಯಾಟೊ ಸದಸ್ಯತ್ವ ನೀಡುವಂತೆ ಒತ್ತಾಯಿಸುವುದಿಲ್ಲ'

ವಾಷಿಂಗ್ಟನ್ (ಎಎಫ್‌ಪಿ): 'ಉಕ್ರೇನ್‌ಗೆ ನ್ಯಾಟೊ ಸದಸ್ಯತ್ವ ನೀಡಬೇಕು ಎಂಬುದಾಗಿ ಇನ್ನು ಮುಂದೆ ಒತ್ತಾಯಿಸುವುದಿಲ್ಲ' ಎಂದು ಅಧ್ಯಕ್ಷ ವೊಲೊಡಿಮಿರ್ ಝೆಲೆನ್‌ಸ್ಕಿ ಹೇಳಿದ್ದಾರೆ.

ಅಲ್ಲದೇ, ರಷ್ಯಾ ಪರ ಇರುವ ಡಾನೆಟ್ಸ್ಕ್ ಹಾಗೂ ಲುಗಾನ್ಸ್ಕ್ ರಾಜ್ಯಗಳನ್ನು ಸ್ವಾಯತ್ತ ಪ್ರಾಂತ್ಯಗಳೆಂದು ಮಾನ್ಯ ಮಾಡುವ ಬಗ್ಗೆಯೂ ಸಕಾರಾತ್ಮಕವಾಗಿ ಸ್ಪಂದಿಸಲು ಸಿದ್ಧ ಎಂದು ಅವರು ಹೇಳಿದ್ದಾರೆ.

ಆ ಮೂಲಕ ಅವರು, ರಷ್ಯಾ ಅಧ್ಯಕ್ಷ ಮುಂದಿಟ್ಟಿರುವ ಬಹುತೇಕ ಷರತ್ತುಗಳನ್ನು ಒಪ್ಪಿ, ರಾಜಿ ಮಾಡಿಕೊಳ್ಳಲು ಸಿದ್ಧ ಎಂಬ ಇರಾದೆ ವ್ಯಕ್ತಪಡಿಸಿದ್ದಾರೆ.

'ಅವರ (ರಷ್ಯಾ) ಪ್ರಕಾರ ಇದು ಕೊನೆಯ ಎಚ್ಚರಿಕೆಯಾಗಿದೆ. ಆದರೆ, ನಾವು ಇಂಥ ಗಡುವುಗಳಿಗೆ ಸಿದ್ಧರಾಗಿಲ್ಲ. ಈಗ ಮಾತುಕತೆಯ ಅಗತ್ಯವಿದ್ದು, ಅಧ್ಯಕ್ಷ ಪುಟಿನ್ ಅವರೇ ಇದಕ್ಕೆ ಚಾಲನೆ ನೀಡಬೇಕು. ಅನಿಶ್ಚಿತತೆಯಲ್ಲಿ ದಿನದೂಡುವುದಕ್ಕಿಂತ ಮಾತುಕತೆ ಆರಂಭಿಸಿ, ಬಿಕ್ಕಟ್ಟು ಶಮನ ಮಾಡಿಕೊಳ್ಳಬೇಕಿದೆ' ಎಂದು ಅವರು ಎಬಿಸಿ ನ್ಯೂಸ್ ವಾಹಿನಿಗೆ ನೀಡಿರುವ ಸಂದರ್ಶನದಲ್ಲಿ ತಿಳಿಸಿದ್ದಾರೆ.


ವೊಲೊಡಿಮಿರ್ ಝೆಲೆನ್‌ಸ್ಕಿ

'ಉಕ್ರೇನ್‌ಗೆ ನ್ಯಾಟೊ ಸದಸ್ಯತ್ವ ನೀಡಬೇಕು ಎಂಬ ವಿಷಯವಾಗಿ ನಾನೀಗ ಶಾಂತಚಿತ್ತನಾಗಿದ್ದೇನೆ. ಉಕ್ರೇನ್‌ಅನ್ನು ಸದಸ್ಯ ರಾಷ್ಟ್ರವಾಗಿ ಸ್ವೀಕರಿಸಲು ನ್ಯಾಟೊ ಸಿದ್ಧ ಇಲ್ಲ ಎಂಬುದು ಮನವರಿಕೆಯಾಗಿರುವುದೇ ಇದಕ್ಕೆ ಕಾರಣ' ಎಂದು ಹೇಳಿರುವ ಅವರು, 'ಸದಸ್ಯತ್ವಕ್ಕಾಗಿ ನ್ಯಾಟೊ ಮುಂದೆ ಮಂಡಿಯೂರಿ ಬೇಡುವಂಥ ರಾಷ್ಟ್ರವೊಂದರ ಅಧ್ಯಕ್ಷನಾಗಲು ನನಗೆ ಇಷ್ಟ ಇಲ್ಲ' ಎಂದಿದ್ದಾರೆ.

'ವಿವಾದಾತ್ಮಕ ವಿಷಯಗಳು ಹಾಗೂ ರಷ್ಯಾ ಜೊತೆ ಸಂಘರ್ಷಕ್ಕೆ ಇಳಿಯುವ ಬಗ್ಗೆ ನ್ಯಾಟೊ ರಾಷ್ಟ್ರಗಳಿಗೆ ಭಯ ಇದೆ' ಎಂದೂ ಝೆಲೆನ್‌ಸ್ಕಿ ಹೇಳಿದ್ದಾರೆ.

ಉಕ್ರೇನ್, ನ್ಯಾಟೊ ಸದಸ್ಯ ರಾಷ್ಟ್ರವಾಗುವುದು ರಷ್ಯಾಕ್ಕೆ ಇಷ್ಟ ಇಲ್ಲ. ಈ ಮಾತನ್ನು ರಷ್ಯಾ ಹಿಂದಿನಿಂದಲೂ ಹೇಳುತ್ತಾ ಬಂದಿದೆ. ಜೊತೆಗೆ, ಪಾಶ್ಚಾತ್ಯ ದೇಶಗಳ ಪರವಾದ ನಿಲುವು ತಳೆದಿದ್ದೇ ಉಕ್ರೇನ್ ಮೇಲೆ ದಾಳಿ ಮಾಡಲು ಕಾರಣ ಎಂದೂ ರಷ್ಯಾ ಹೇಳಿದೆ.

ನ್ಯಾಟೊ ತನ್ನ ಸದಸ್ಯ ಬಲವನ್ನು ಹೆಚ್ಚಿಸಿಕೊಳ್ಳುವುದು ತನಗೆ ಅಪಾಯ ಎಂಬುದು ರಷ್ಯಾದ ಪ್ರತಿಪಾದನೆ. ಪಾಶ್ಚಾತ್ಯ ರಾಷ್ಟ್ರಗಳ ನೆರವಿನೊಂದಿಗೆ ನ್ಯಾಟೊ ಪಡೆಗಳು ತನ್ನ ಗಡಿಗಳಲ್ಲಿ ಮಿಲಿಟರಿ ಜಮಾವಣೆ ಮಾಡಿ, ದೇಶದ ಭದ್ರತೆಗೆ ಬೆದರಿಕೆವೊಡ್ಡಲಿವೆ ಎಂಬ ಆತಂಕವನ್ನೂ ರಷ್ಯಾ ವ್ಯಕ್ತಪಡಿಸುತ್ತಾ ಬಂದಿದೆ.

ಫೆ. 24ರಂದು ಉಕ್ರೇನ್ ಮೇಲೆ ದಾಳಿ ಮಾಡುವ ಮೂಲಕ ಪುಟಿನ್, ವಿಶ್ವಕ್ಕೆ ಆಘಾತ ನೀಡಿದರು. ಈ ದಾಳಿಗೂ ಮುನ್ನವೇ ಅವರು, ರಷ್ಯಾ ಪರ ನಿಲುವು ಹೊಂದಿರುವ ಪೂರ್ವ ಉಕ್ರೇನ್‌ನ ಡಾನೆಟ್ಸ್ಕ್ ಹಾಗೂ ಲುಗಾನ್ಸ್ಕ್ ರಾಜ್ಯಗಳನ್ನು 'ಸ್ವತಂತ್ರ ಪ್ರದೇಶ'ಗಳು ಎಂಬುದಾಗಿ ಮಾನ್ಯ ಮಾಡಿದ್ದಾಗಿ ಘೋಷಿಸಿ, ಮತ್ತೊಂದು ಆಘಾತ ನೀಡಿದರು.

ಈಗ ಅವರು, ಈ ಎರಡೂ ಪ್ರಾಂತ್ಯಗಳನ್ನು ಸ್ವತಂತ್ರ ಹಾಗೂ ಸಾರ್ವಭೌಮ ಪ್ರದೇಶಗಳು ಎಂಬುದಾಗಿ ಉಕ್ರೇನ್ ಘೋಷಿಸಬೇಕು ಎಂದು ಒತ್ತಡ ಹೇರುತ್ತಿದ್ದಾರೆ.



ಗುರು ವೈಭವೋತ್ಸವ ಮಂತ್ರಾಲಯದಲ್ಲಿ ಗುರು ವೈಭವೋತ್ಸವದ ಕೊನೆಯ ದಿನವಾದ ಬುಧವಾರ, ರಾಯರ 427ನೇ ವರ್ಧಂತಿ ಉತ್ಸವದ ನಿಮಿತ್ತ ಚೆನ್ನೈನ ಶ್ರೀರಾಘವೇಂದ್ರ ಸಂಗೀತ ಸೇವಾ ಟ್ರಸ್ಟ್‌ನ 150 ಸದಸ್ಯರು ಏಕಕಾಲಕ್ಕೆ ವಾದ್ಯ ಸಮೇತ ಗಾಯನ ಪ್ರಸ್ತುತಪಡಿಸುವ ಮೂಲಕ ರಾಯರಿಗೆ ನಾದಹಾರ ಸಮರ್ಪಿಸಿದರು –ಪ್ರಜಾವಾಣಿ ಚಿತ್ರ

₹ 14.5 ಕೋಟಿ ದಂಡ ಪಾವತಿಸಲು ಸುಪ್ರೀಂ ಕೋರ್ಟ್ ಆದೇಶ

ಕ್ಯಾಂಪಸ್ ಉಳಿಸಿಕೊಳ್ಳಲು ಕುವೆಂಪು ವಿವಿ ಸರ್ಕಸ್

• ಚಂದ್ರಹಾಸ ಹಿರೇಮಳಲಿ

ಶಿವಮೊಗ್ಗ: ಕುವೆಂಪು ವಿಶ್ವವಿದ್ಯಾಲಯ ಸ್ಥಾಪನೆಯಾಗಿ ನಾಲ್ಕು ದಶಕಗಳು ಕಳೆದರೂ ತನ್ನ ಹೆಸರಿಗೆ ಕ್ಯಾಂಪಸ್ ಪ್ರದೇಶ ನೋಂದಾಯಿಸಿಕೊಳ್ಳಲು ವಿಶ್ವವಿದ್ಯಾಲಯ ಹರಸಾಹಸ ಪಡುತ್ತಿದೆ. ಸುಪ್ರೀಂ ಕೋರ್ಟ್ ಸೂಚನೆಯಂತೆ ₹ 14.5 ಕೋಟಿ ದಂಡ ಪಾವತಿಸಲು ಸಿದ್ಧವಿದ್ದರೂ, ಕೇಂದ್ರ ಸರ್ಕಾರದ ಅನುಮತಿ ದೊರೆಯದೇ ಪರಿತಪಿಸುತ್ತಿದೆ.


ಅನುರಾಧಾ

1979ರಲ್ಲಿ ಕುವೆಂಪು ವಿಶ್ವವಿದ್ಯಾಲಯ ಆರಂಭವಾಗಿತ್ತು. ರಾಜ್ಯ ಸರ್ಕಾರ ಭದ್ರಾವತಿ ತಾಲ್ಲೂಕು ಶಂಕರಘಟ್ಟದ ಬಳಿ 89 ಹೆಕ್ಟೇರ್ ಕಿರು ಅರಣ್ಯ ಪ್ರದೇಶವನ್ನು 20 ವರ್ಷಗಳ ಅವಧಿಗೆ ಗುತ್ತಿಗೆಗೆ ನೀಡಿತ್ತು. ಮೂರು ದಶಕಗಳ ಅವಧಿಯಲ್ಲಿ ಆ ಪ್ರದೇಶದಲ್ಲಿ ನೂರಾರು ಕೋಟಿ ರೂಪಾಯಿ ವೆಚ್ಚದಲ್ಲಿ ಹಲವು ಕಟ್ಟಡಗಳು ತಲೆಎತ್ತಿವೆ. ರಾಜ್ಯ ಸರ್ಕಾರದ ಅಧೀನದಲ್ಲಿದ್ದ ಈ ಕಿರು ಅರಣ್ಯ ಪ್ರದೇಶವನ್ನು 1998ರಲ್ಲಿ ಕೇಂದ್ರ ಸರ್ಕಾರ ಭದ್ರಾ ಹುಲಿ ಸಂರಕ್ಷಿತ ಅಭಯಾರಣ್ಯದ ವ್ಯಾಪ್ತಿಗೆ ಸೇರಿಸಿತ್ತು. 1999ಕ್ಕೆ ಗುತ್ತಿಗೆ ಅವಧಿ ಮುಗಿದರೂ ತಕ್ಷಣವೇ ಕೇಂದ್ರ ಸರ್ಕಾರಕ್ಕೆ ಅರ್ಜಿ ಸಲ್ಲಿಸಿ, ಗುತ್ತಿಗೆ ಅವಧಿ ನವೀಕರಿಸಲು ಕೋರದ ಪರಿಣಾಮ ವಿಶ್ವವಿದ್ಯಾಲಯ ಹಲವು ಸಂಕಷ್ಟಗಳನ್ನು ಎದುರಿಸುತ್ತಿದೆ.


ಕುವೆಂಪು ವಿಶ್ವವಿದ್ಯಾಲಯ

2002ರಲ್ಲಿ ಅರ್ಜಿ ಸಲ್ಲಿಸಿದರೂ, ಗುತ್ತಿಗೆ ಅವಧಿ ಆಗಲೇ ಮುಕ್ತಾಯವಾಗಿದ್ದು, ಹುಲಿ ಸಂರಕ್ಷಿತ ಪ್ರದೇಶವಾದ ಕಾರಣ ಹೊಸದಾಗಿ ಗುತ್ತಿಗೆ ನೀಡಲು ಕೇಂದ್ರ ಸರ್ಕಾರ ನಿರಾಕರಿಸಿತ್ತು. ಕ್ಯಾಂಪಸ್ ಒಳಗೆ ಯಾವುದೇ ನಿರ್ಮಾಣ ಚಟುವಟಿಕೆ ನಡೆಸದಂತೆ ನಿರ್ಬಂಧ ವಿಧಿಸಿತ್ತು. ಅಲ್ಲದೇ ₹ 42 ಕೋಟಿ ದಂಡ ವಿಧಿಸಿತ್ತು. ಸರ್ಕಾರದ ನಿರ್ಧಾರ ಪ್ರಶ್ನಿಸಿ 2008ರಲ್ಲಿ ವಿಶ್ವವಿದ್ಯಾಲಯ ಸುಪ್ರೀಂ ಕೋರ್ಟ್‌ನ ಹಸಿರುಪೀಠಕ್ಕೆ ಮೇಲ್ಮನವಿ ಸಲ್ಲಿಸಿತ್ತು.

ಅರ್ಜಿ ವಿಚಾರಣೆ ನಡೆಸಿದ ಪೀಠ ದಂಡದ ಮೊತ್ತವನ್ನು ₹ 14.5 ಕೋಟಿಗೆ ಇಳಿಸಿತ್ತು. ದಂಡದ ಮೊತ್ತ ಪಾವತಿಸಲು ರಾಜ್ಯ ಸರ್ಕಾರ ₹ 11 ಕೋಟಿ ನೆರವು ನೀಡಿತ್ತು. ಆದರೂ, ಕೇಂದ್ರ ಸರ್ಕಾರ ಕೆಲವು ವರ್ಷಗಳ ಕಾಲ ದಂಡ ಪಾವತಿ ಪ್ರಕ್ರಿಯೆಯನ್ನೇ ಆರಂಭಿಸಿರಲಿಲ್ಲ. ಎರಡು ದಿನಗಳ ಹಿಂದೆ ಕೇಂದ್ರ ಅರಣ್ಯ ಮತ್ತು ಪರಿಸರ ಸಚಿವಾಲಯದ ಅಧಿಕಾರಿ ಅಂಜನ್‌ಕುಮಾರ್ ನೇತೃತ್ವದ ತಂಡ ಭೇಟಿ ನೀಡಿ, ಕ್ಯಾಂಪಸ್ ಗಡಿ ಪರಿಶೀಲನೆ ನಡೆಸಿದೆ. ದೆಹಲಿಗೆ ತೆರಳಿದ ತಂಡ ವರದಿ ನೀಡಿದ ನಂತರ ಸರ್ಕಾರ ದಂಡ ಕಟ್ಟಲು ಸೂಚಿಸಬೇಕಿದೆ. ವರದಿ ನೀಡುವುದನ್ನೇ ವಿಶ್ವವಿದ್ಯಾಲಯದ ಆಡಳಿತ ಮಂಡಳಿ ಚಾತಕ ಪಕ್ಷಿಯಂತೆ ಕಾಯುತ್ತಿದೆ.

'ಕ್ಯಾಂಪಸ್ ಸ್ವಂತವಾಗದ ಕಾರಣ ವಿವಿಧ ಶೈಕ್ಷಣಿಕ ವಿಭಾಗಗಳು, ಹಾಸ್ಟೆಲ್, ಕ್ರೀಡಾಂಗಣ ಸೇರಿ ಯಾವುದೇ ಅಭಿವೃದ್ಧಿ ಕಾರ್ಯ ಮಾಡಲು ನಿಯಮಗಳು ಅಡ್ಡಿಯಾಗಿದ್ದವು. ಸಾಕಷ್ಟು ಕಿರಿಕಿರಿ ಅನುಭವಿಸಿದ್ದೇವೆ. ಇನ್ನಾದರೂ ಈ ಎಲ್ಲ ಸಮಸ್ಯೆಗಳಿಗೆ ಮುಕ್ತಿ ದೊರೆಯುವ ನಿರೀಕ್ಷೆ ಮೂಡಿದೆ' ಎನ್ನುತ್ತಾರೆ ಕೇಂದ್ರ ಸರ್ಕಾರದ ತಂಡದ ಜತೆ ಸಮನ್ವಯ ಸಾಧಿಸಲು ರಚಿಸಿದ್ದ ವಿಶ್ವವಿದ್ಯಾಲಯ ಸಮಿತಿಯ ಸದಸ್ಯ ಪ್ರೊ.ಭೋಜ್ಯಾ ನಾಯ್ಕ.

ಅಂಕಿ–ಅಂಶ

₹42 ಕೋಟಿ
ಕೇಂದ್ರ ಸರ್ಕಾರ ವಿಧಿಸಿದ್ದ ದಂಡ

₹14.5 ಕೋಟಿ
ಸುಪ್ರೀಂ ಕೋರ್ಟ್ ನಿಗದಿಪಡಿಸಿ ದಂಡ

₹11 ಕೋಟಿ
ದಂಡ ಪಾವತಿಗೆ ರಾಜ್ಯ ಸರ್ಕಾರ ನೀಡಿದ ನೆರವು

₹3.5 ಕೋಟಿ
ದಂಡ ಕಟ್ಟಲು ಬೇಕಿರುವ ಬಾಕಿ ಮೊತ್ತ

360 ಹೆಕ್ಟೇರ್ ಬದಲಿ ಭೂಮಿ ಹಸ್ತಾಂತರ

ವಿಶ್ವವಿದ್ಯಾಲಯದ 89 ಹೆಕ್ಟೇರ್ ಕ್ಯಾಂಪಸ್ ಭೂಮಿಗೆ ಪರ್ಯಾಯವಾಗಿ ದಂಡದ ಜತೆಗೆ ನಾಲ್ಕು ಪಟ್ಟು ಬದಲಿ ಭೂಮಿಯನ್ನು ಅರಣ್ಯ ಇಲಾಖೆಗೆ ಹಸ್ತಾಂತರಿಸುವಂತೆ ಹಸಿರುಪೀಠ ರಾಜ್ಯ ಸರ್ಕಾರಕ್ಕೆ ಸೂಚಿಸಿತ್ತು. ಅದರಂತೆ ಚಿಕ್ಕಮಗಳೂರು ಜಿಲ್ಲೆ ಎನ್‌ಆರ್ ಪುರದ ಬಳಿ 360 ಹೆಕ್ಟೇರ್ ಸರ್ಕಾರಿ ಭೂಮಿಯನ್ನು ಸರ್ಕಾರ ನೀಡಿದೆ.

₹ 3.5 ಕೋಟಿ ನೆರವಿಗೆ ಮೊರೆ

ಸುಪ್ರೀಂ ಕೋರ್ಟ್ ಹಸಿರು ಪೀಠದ ಸೂಚನೆಯಂತೆ ಕುವೆಂಪು ವಿಶ್ವವಿದ್ಯಾಲಯ ಕೇಂದ್ರ ಸರ್ಕಾರಕ್ಕೆ ₹ 14.5 ಕೋಟಿ ದಂಡ ಪಾವತಿಸಬೇಕಿದೆ. ದಂಡದ ಮೊತ್ತದಲ್ಲಿ ₹ 11 ಕೋಟಿ ಈಗಾಗಲೇ ರಾಜ್ಯ ಸರ್ಕಾರ ಬಿಡುಗಡೆ ಮಾಡಿದೆ. ಉಳಿದ ₹ 3.5 ಕೋಟಿ ನೀಡುವಂತೆ ಮತ್ತೆ ರಾಜ್ಯ ಸರ್ಕಾರವನ್ನು ಕೋರಲು ವಿ.ವಿ. ಆಡಳಿತ ಮಂಡಳಿ ಪ್ರಸ್ತಾವ ಸಿದ್ಧಪಡಿಸಿದೆ.

ಬಹುರೂಪಿ ರಾಷ್ಟ್ರೀಯ ರಂಗೋತ್ಸವ ನಾಳೆಯಿಂದ

ಇದು ಕೇವಲ ನಾಟಕಗಳ ಹಬ್ಬವಲ್ಲ..!


• ಕೆ.ನರಸಿಂಹಮೂರ್ತಿ

ಮೈಸೂರು: 'ಬಹುರೂಪಿ ರಾಷ್ಟ್ರೀಯ ರಂಗೋತ್ಸವ'ಕ್ಕೆ ಇಲ್ಲಿನ ರಂಗಾಯಣ ಸಂಭ್ರಮದಿಂದ ಸಜ್ಜಾಗಿದೆ.

'ತಾಯಿ' ಪರಿಕಲ್ಪನೆಯನ್ನು ಆಧರಿಸಿ ಮಾ.11ರಿಂದ ಹತ್ತು ದಿನ ನಡೆಯಲಿರುವ ಉತ್ಸವದಲ್ಲಿ ಬಹುಭಾಷಾ ನಾಟಕಗಳ ಪ್ರದರ್ಶನ, ರಾಷ್ಟ್ರೀಯ ವಿಚಾರ ಸಂಕಿರಣ, ಅಂತರ ರಾಷ್ಟ್ರೀಯ ಚಲನಚಿತ್ರೋತ್ಸವ, ಜನಪದೋತ್ಸವ ಮೇಳೈಸಲಿದೆ.

ಉತ್ಸವಕ್ಕೆ ಅಂತಿಮ ಸಿದ್ಧತೆ ನಡೆಸುತ್ತಲೇ ರಂಗಾಯಣ ನಿರ್ದೇಶಕ ಅಡ್ಡಂಡ ಸಿ.ಕಾರ್ಯಪ್ಪ ಅವರು 'ಪ್ರಜಾವಾಣಿ'ಗೆ ನೀಡಿದ ಸಂದರ್ಶನದ ಪೂರ್ಣ ಪಾಠ ಇಲ್ಲಿದೆ.

ಪ್ರಜಾವಾಣಿ ಸಂದರ್ಶನ
ಅಡ್ಡಂಡ ಸಿ.ಕಾರ್ಯಪ್ಪ



• **ಬಹುರೂಪಿ ಉತ್ಸವದಲ್ಲಿ ಈ ಬಾರಿಯ ವಿಶೇಷವೇನು?**

2001ರಿಂದಲೂ ರಂಗಾಯಣವು ಬಹುರೂಪಿ ಉತ್ಸವವನ್ನು ಪರಿಕಲ್ಪನೆ ಆಧಾರಿತವಾಗಿಯೇ ಏರ್ಪಡಿಸುತ್ತಿದೆ. ಶಿಸ್ತು ಮತ್ತು ಅಚ್ಚುಕಟ್ಟುತನದ ಕಾರಣಕ್ಕಾಗಿಯೇ ಈ ಉತ್ಸವಗಳು ಇಷ್ಟು ವರ್ಷದಿಂದ ಜನರ ಮನದಲ್ಲಿ ಉಳಿದಿವೆ. ರಂಗಾಯಣ ಮತ್ತು ಬಹುರೂಪಿ ಉತ್ಸವ ಎಲ್ಲರಿಗೂ ಸಲ್ಲ ಬೇಕು ಎಂಬ ಕಾರಣಕ್ಕೆ ಹಿಂದಿನ ಬಾರಿ 'ಗಾಂಧಿಪಥ' ಪರಿಕಲ್ಪನೆಯಲ್ಲಿ ಉತ್ಸವವನ್ನು ರೂಪಿಸಲಾಗಿತ್ತು. ಈ ಬಾರಿ 'ತಾಯಿ' ಪರಿಕಲ್ಪನೆಯಲ್ಲಿ ರೂಪಿಸಿರುವುದು ವಿಶೇಷ.

• **'ತಾಯಿ' ಎಂಬ ವ್ಯಕ್ತಿತ್ವದ ವಿಶಾಲ ಅರ್ಥವನ್ನು ಉತ್ಸವ ಹೇಗೆ ಪ್ರತಿನಿಧಿಸುತ್ತದೆ?**

ಜಗತ್ತಿನಲ್ಲಿ ಎಲ್ಲದ್ದಕ್ಕೂ ವಿರೋಧವಿರುತ್ತದೆ. ಆದರೆ ತಾಯಿಗೆ ವಿರೋಧವಿರುವುದಿಲ್ಲ. ಉತ್ಸವದಲ್ಲಿ ತಾಯಿ ಪರಿಕಲ್ಪನೆಯನ್ನು ಹೆತ್ತ ತಾಯಿ ಎಂಬ ಜೈವಿಕ ಅರ್ಥಕ್ಕಷ್ಟೇ ಸೀಮಿತಗೊಳಿಸಿಲ್ಲ. ಜಮೀನು, ಜಲ, ಜಂಗಲ್, ಜಾನುವಾರು ಮತ್ತು ಜನ ಎಂಬ ಐದು ಸೂತ್ರ ರೂಪದಲ್ಲಿ ಗ್ರಹಿಸಲಾಗಿದೆ. ಭೂಮಿ ತಾಯಿ, ಜಲಮಾತೆಯರು, ಪ್ರಕೃತಿ ತಾಯಿ, ಪಶು–ಪಕ್ಷಿಗಳ ತಾಯ್ತನ ಮತ್ತು ಮಾತೃಸ್ವರೂಪಿಣಿಯರಾದ ಮಹಿಳೆಯರು. ಇವರೆಲ್ಲರನ್ನು ಕುರಿತು ಉತ್ಸವ ವಿವಿಧ ಪ್ರಕಾರಗಳಲ್ಲಿ ಮಾತನಾಡುತ್ತದೆ. ಇದುವರೆಗಿನ ಉತ್ಸವಗಳಲ್ಲಿ ವಿಚಾರ ಸಂಕಿರಣಗಳಲ್ಲಷ್ಟೇ ಪರಿಕಲ್ಪನೆ ಕುರಿತು ಚರ್ಚೆಗಳು ನಡೆಯುತ್ತಿದ್ದವು. ಈ ಬಾರಿ ಎಲ್ಲ ಕಾರ್ಯಕ್ರಮಗಳನ್ನು ತಾಯಿ ಮತ್ತು ತಾಯ್ತನವನ್ನು ಕೇಂದ್ರೀಕರಿಸಿಯೇ ರೂಪಿಸಲಾಗಿದೆ.

• **'ತಾಯಿ' ಪರಿಕಲ್ಪನೆಯನ್ನೇ ಆಯ್ಕೆ ಮಾಡಲು ಪ್ರೇರಣೆ ಏನು?**

ವೃದ್ಧಾಶ್ರಮಗಳು ಹೆಚ್ಚುತ್ತಿರುವುದು ನಾಗರಿಕವಾದ ನಡೆ ಎಂಬ ಪ್ರತಿಪಾದನೆ ನಡೆದಿದೆ. ಆದರೆ ತಾಯಿಯ ಕಾಳಜಿ ವಹಿಸದ ಮಕ್ಕಳು ಅನಾಗರಿಕರು ಎಂಬುದನ್ನು ಯಾರೂ ಹೇಳುತ್ತಿಲ್ಲ. ಜೊತೆಗೆ, ನಾವು ಇಂದು ಅಶಾಂತಿ ಪರ್ವದಲ್ಲಿದ್ದೇವೆ. ಶಾಂತಿ– ಸೌಹಾರ್ದದ ಸಂದೇಶವನ್ನು ಸಾರಲು ತಾಯಿ ಪರಿಕಲ್ಪನೆಯನ್ನು ಆಯ್ಕೆ ಮಾಡಿದೆವು. 3 ಸಾವಿರಕ್ಕೂ ಹೆಚ್ಚು ಮಹಿಳೆಯರು ಉತ್ಸವದಲ್ಲಿ ಪಾಲ್ಗೊಳ್ಳಲಿದ್ದಾರೆ.

• **ಉತ್ಸವದ ಉದ್ಘಾಟನೆ 12ರಂದು ಇದ್ದರೂ, 11ರಂದೇ ಆರಂಭ ಎಂದಿರುವ ಉದ್ದೇಶವೇನು?**

ಇದು ಉತ್ಸವದ ದೇಸಿ ಆರಂಭ. ಶುಭ ಕಾರ್ಯಗಳ ಸಂದರ್ಭದಲ್ಲಿ ಒಂದು ದಿನ ಮುಂಚೆಯೇ ಮನೆ ಮುಂದೆ ಚಪ್ಪರವನ್ನು ಹಾಕುತ್ತಾರಲ್ಲ ಹಾಗೆ. 11ರಂದು ಸಂಜೆ ಚಪ್ಪರದ ಕಾರ್ಯಕ್ರಮ– ಜನಪದ ಉತ್ಸವ ಶುರುವಾಗುತ್ತದೆ. ಉತ್ಸವದ ತೆರೆಯೂ ಮೇಲೇಳುತ್ತದೆ.

• **ಉತ್ಸವದ ಪ್ರಮುಖ ಆಕರ್ಷಣೆಗಳೇನು?**

ನಾಟಕಗಳೊಂದಿಗೆ ಶ್ರೇಷ್ಠ ಸಿನಿಮಾ, ರಂಗಸಂಗೀತ, ಯಕ್ಷಗಾನ, ಬಯಲಾಟ, ತಾಳಮದ್ದಲೆ, ಗೊಂಬೆಯಾಟ, ಕರಕುಶಲಮೇಳ, ಗುಡಿ ಕೈಗಾರಿಕೆ ಪ್ರಾತ್ಯಕ್ಷಿಕೆ, ದೇಸಿ ಆಹಾರ ಮೇಳ, ಕಾವ್ಯವಾಚನವು ಉತ್ಸವದ ಬಹುರೂಪಿ ಆಶಯಕ್ಕೆ ಮೆರುಗು ತುಂಬಲಿದೆ. ಹೊರರಾಜ್ಯದ 12 ನಾಟಕ, ಕನ್ನಡದ 22 ನಾಟಕಗಳು ಪ್ರದರ್ಶನಗೊಳ್ಳಲಿದ್ದು, ಯುವನಿರ್ದೇಶಕರಿಗೆ ಆದ್ಯತೆ ನೀಡಲಾಗಿದೆ. ಶಿವಮೊಗ್ಗ, ಕಲಬುರ್ಗಿ ಮತ್ತು ಧಾರವಾಡ ರಂಗಾಯಣದ ತಂಡಗಳೂ ಪಾಲ್ಗೊಳ್ಳಲಿವೆ.

• **ನಿಮ್ಮ ಮಾತಿನಲ್ಲಿ ಉತ್ಸವವನ್ನು ವರ್ಣಿಸುವುದಾದರೆ..?**

ಇದು ಕೇವಲ ನಾಟಕಗಳ ಹಬ್ಬವಲ್ಲ. ರಂಗಭೂಮಿಯ ರಂಗುರಂಗಿನ ಉತ್ಸವ. ದಸರಾ ನಂತರ ನಡೆಯುವ ಬಹು ದೊಡ್ಡ ರಂಗ ದಸರಾ. ರೈತನನ್ನೂ ಕೂಡ ನಾವು 'ತಾಯಿ' ಎಂದು ಕರೆದಿದ್ದೇವೆ. ತಾಯಿ ಸ್ವರೂಪದ ಮೂಲಕವೇ ಇಡೀ ಜಗತ್ತನ್ನು ನೋಡಬೇಕೆಂಬುದೇ ಆಶಯ.



ಮೂರು ಕೃಷಿ ಕಾಯ್ದೆಗಳನ್ನು ರಾಜ್ಯದಲ್ಲೂ ವಾಪಸ್ ಪಡೆಯಬೇಕು ಎಂದು ಆಗ್ರಹಿಸಿ ಜನಾಂದೋಲನಗಳ ಮಹಾಮೈತ್ರಿ ಹಮ್ಮಿಕೊಂಡಿರುವ ಜನಜಾಗೃತಿ ಜಾಥಾ ಚಾಮರಾಜನಗರ ಜಿಲ್ಲೆಯ ಮಹದೇಶ್ವರ ಬೆಟ್ಟದಲ್ಲಿ ಬುಧವಾರ ಆರಂಭಗೊಂಡಿತು

ಜನಜಾಗೃತಿ ಜಾಥಾಗೆ ಚಾಲನೆ

ಮಹದೇಶ್ವರಬೆಟ್ಟ (ಚಾಮರಾಜನಗರ): ಕೇಂದ್ರ ಸರ್ಕಾರ ಮಾದರಿಯಲ್ಲಿ ರಾಜ್ಯ ಸರ್ಕಾರವೂ ಮೂರು ಕೃಷಿ ವಿರೋಧಿ ಕಾನೂನು ವಾಪಸ್ ಪಡೆಯುವಂತೆ ಆಗ್ರಹಿಸಿ ಕರ್ನಾಟಕ ಜನಾಂದೋಲನಗಳ ಮಹಾಮೈತ್ರಿ ಕೈಗೊಂಡಿರುವ ಜನಜಾಗೃತಿ ಜಾಥಾಗೆ ಮಹದೇಶ್ವರ ಬೆಟ್ಟದಲ್ಲಿ ಬುಧವಾರ ಚಾಲನೆ ಸಿಕ್ಕಿತು.

ಬಸವಕಲ್ಯಾಣದಿಂದ ಬೆಂಗಳೂರಿನವರೆಗೆ, ಶಿವಮೊಗ್ಗದ ಕಾಗೋಡಿನಿಂದ ತುಮಕೂರಿನ ಜುಂಜಪ್ಪನಗುಡ್ಡದವರೆಗೆ, ಮಹದೇಶ್ವರ ಬೆಟ್ಟದಿಂದ ಬೆಂಗಳೂರಿನವರೆಗೆ ಜಾಥಾ ಹಮ್ಮಿಕೊಳ್ಳಲಾಗಿದೆ. 15ರಂದು ಬೆಂಗಳೂರಿನಲ್ಲಿ ಸಮಾವೇಶ ನಡೆಯಲಿದೆ.

ಮಲೆ ಮಹದೇಶ್ವರಸ್ವಾಮಿ ದೇವಾಲಯ ಮುಂಭಾಗ ಸೇರಿದ ರೈತ ಸಂಘ, ವಿವಿಧ ಸಂಘಟನೆಗಳ ಪ್ರತಿನಿಧಿಗಳು ಮತ್ತು ಕಾರ್ಯಕರ್ತರು ಕೇಂದ್ರ ಹಾಗೂ ರಾಜ್ಯ ಸರ್ಕಾರದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

'ರೈತರ ನಿರಂತರ ಹೋರಾಟಕ್ಕೆ ಮಣಿದು ಕೇಂದ್ರ ಸರ್ಕಾರ ಈಗಾಗಲೇ ಮೂರು ರೈತ ವಿರೋಧಿ ಶಾಸನ ವಾಪಸ್ ಪಡೆದಿದೆ. ಆದರೆ, ಕರ್ನಾಟಕ ಸರ್ಕಾರ ಕಾಯ್ದೆ ಹಿಂಪಡೆದಿಲ್ಲ. ಇವು ರೈತ, ದಲಿತ ಹಾಗೂ ಜನವಿರೋಧಿ ಕಾಯ್ದೆಗಳು. ಈ ಕಾಯ್ದೆ ರದ್ದುಗೊಳಿಸಬೇಕು' ಎಂದು ಆಗ್ರಹಿಸಿದರು.

ಸಹಾಯಕ ಪ್ರಾಧ್ಯಾಪಕರ ಹುದ್ದೆಯ ನೇಮಕಾತಿಗೆ 12ರಿಂದ ಪರೀಕ್ಷೆ

‘ಕಳಂಕ ಉಂಟಾದರೆ ಪರೀಕ್ಷಾ ಅಧಿಕಾರಿಗಳು ಹೊಣೆ’

ಪ್ರಜಾವಾಣಿ ವಾರ್ತೆ



ಅಶ್ವತ್ಥನಾರಾಯಣ

ಬೆಂಗಳೂರು: ‘ಸಹಾಯಕ ಪ್ರಾಧ್ಯಾಪಕ ಹುದ್ದೆಗಳ ನೇಮಕಾತಿಗೆ ಇದೇ 12ರಿಂದ ನಡೆಯಲಿರುವ ಪರೀಕ್ಷೆಗೆ ವಿಚ್ಛಿದ್ರಕಾರಿ ಶಕ್ತಿಗಳು ಕಳಂಕ ತರಲು ಯತ್ನಿಸಿದರೆ, ಪರೀಕ್ಷಾಧಿಕಾರಿಗಳಾಗಿರುವ ಜಿಲ್ಲಾಧಿಕಾರಿಗಳು ಮತ್ತು ಜಿಲ್ಲಾ ಪೊಲೀಸ್ ವರಿಷ್ಠರನ್ನೇ ಹೊಣೆಗಾರರಾಗಿ ಮಾಡಲಾಗುವುದು’ ಎಂದು ಉನ್ನತ ಶಿಕ್ಷಣ ಸಚಿವ ಡಾ. ಸಿ.ಎನ್. ಅಶ್ವತ್ಥನಾರಾಯಣ ತಿಳಿಸಿದರು.

ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ 1,242 ಸಹಾಯಕ ಪ್ರಾಧ್ಯಾಪಕ ಹುದ್ದೆಗಳ ನೇಮಕಾತಿಯ ಪರೀಕ್ಷಾ ಕೇಂದ್ರಗಳಿರುವ ಎಂಟು ಜಿಲ್ಲೆಗಳ ಜಿಲ್ಲಾಧಿಕಾರಿಗಳು, ಪೊಲೀಸ್ ವರಿಷ್ಠಾಧಿಕಾರಿಗಳು ಮತ್ತು ಕಮಿಷನರ್ ಜೊತೆ ಬುಧವಾರ ಅವರು ವಿಡಿಯೊ ಸಂವಾದ ನಡೆಸಿದರು. ಇದೇ 12ರಿಂದ 16ರವರೆಗೆ ಪರೀಕ್ಷೆಗಳು ನಡೆಯಲಿವೆ.

‘ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ನಕಲು ಹೊಡೆಯುವುದು ಸೇರಿದಂತೆ ಯಾವುದೇ ಅಕ್ರಮಕ್ಕೆ ಅವಕಾಶ ಮಾಡಿಕೊಡಬಾರದು. ಪರೀಕ್ಷೆಗಳನ್ನು ಕಟ್ಟುನಿಟ್ಟಾಗಿ ಮತ್ತು ಪಾರದರ್ಶಕವಾಗಿ ನಡೆಸಬೇಕು’ ಎಂದು ಸೂಚಿಸಿದರು.

‘33 ಸಾವಿರಕ್ಕೂ ಹೆಚ್ಚು ಅಭ್ಯರ್ಥಿಗಳು ಈ ಪರೀಕ್ಷೆ ಬರೆಯುತ್ತಿದ್ದಾರೆ. ಪರೀಕ್ಷೆಗಳು ಬೆಂಗಳೂರು ನಗರ, ಮೈಸೂರು, ಮಂಗಳೂರು, ಶಿವಮೊಗ್ಗ, ಧಾರವಾಡ, ಬೆಳಗಾವಿ ಮತ್ತು ಕಲಬುರಗಿ ಜಿಲ್ಲೆಯಲ್ಲಿ ನಡೆಯಲಿವೆ. ಇದಕ್ಕಾಗಿ 1,409 ಕೊಠಡಿ ಮೇಲ್ವಿಚಾರಕರು, 82 ವೀಕ್ಷಕರು, 82 ಕಸ್ಟೋಡಿಯನ್ಸ್ ಮತ್ತು 164 ಮಂದಿಯ ವಿಶೇಷ ಜಾಗೃತ ದಳ ರಚಿಸಲಾಗಿದೆ’ ಎಂದರು.

‘12 ಮತ್ತು 13ರಂದು 82 ಪರೀಕ್ಷಾ ಕೇಂದ್ರಗಳಲ್ಲಿ, 14ರಂದು 22, 15ರಂದು 24 ಮತ್ತು 16ರಂದು 8 ಕೇಂದ್ರಗಳಲ್ಲಿ ಸ್ಪರ್ಧಾತ್ಮಕ ಪರೀಕ್ಷೆಗಳು ನಡೆಯಲಿವೆ. ಅಭ್ಯರ್ಥಿಗಳು ಸೂಚಿತ ವಸ್ತ್ರಸಂಹಿತೆ ಪಾಲಿಸಬೇಕು. ಜತೆಗೆ, ಅಕ್ರಮ ತಡೆಗೆ ಸಹಾಯವಾಣಿ (ಮೊಬೈಲ್ 99015-81708) ರಚಿಸಲಾಗಿದೆ’ ಎಂದೂ ತಿಳಿಸಿದರು.

ಉನ್ನತ ಶಿಕ್ಷಣ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಕುಮಾರ್ ನಾಯಕ್, ಕಾಲೇಜು ಶಿಕ್ಷಣ ಇಲಾಖೆ ಆಯುಕ್ತ ಪಿ. ಪ್ರದೀಪ್, ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಕಾರ್ಯನಿರ್ವಾಹಕ ನಿರ್ದೇಶಕಿ ರಮ್ಯಾ ಮತ್ತಿತರರು ಇದ್ದರು.

ಮೇಕೆದಾಟು ಯೋಜನೆಗೆ ಜಲತಜ್ಞ ರಾಜೇಂದ್ರ ಸಿಂಗ್ ಆಕ್ಷೇಪ

ರಾಜಕೀಯ ಲಾಭಕ್ಕಾಗಿ ‘ಡ್ಯಾಂ ಕಟ್ಟುವ ಸಂಸ್ಕೃತಿ’

ಪ್ರಜಾವಾಣಿ ವಾರ್ತೆ



ರಾಜೇಂದ್ರ ಸಿಂಗ್

ಬೆಂಗಳೂರು: ‘ಹೊಸ ಅಣೆಕಟ್ಟುಗಳನ್ನು ನಿರ್ಮಿಸುವುದರಿಂದ ರಾಜಕೀಯ ನಾಯಕರ ಜೇಬು ತುಂಬುತ್ತದೆಯೇ ಹೊರತು ಜನಸಾಮಾನ್ಯರಿಗೆ ಯಾವ ಪ್ರಯೋಜನವೂ ಇಲ್ಲ. ರಾಜಕೀಯ ಲಾಭಕ್ಕಾಗಿ ಡ್ಯಾಂ ಕಟ್ಟುವ ಸಂಸ್ಕೃತಿ ಮುಂದುವರಿಸಿದ್ದಾರೆ’ ಎಂದು ಜಲತಜ್ಞ ರಾಜೇಂದ್ರ ಸಿಂಗ್ ಹೇಳಿದರು.

ಬುಧವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ‘ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಕಾರ್ಪೊರೇಟ್ ಸಂಸ್ಥೆಗಳ ಪರ ನಿಂತಿದ್ದು, ಜನಸಾಮಾನ್ಯರ ಪರವಾಗಿ ಯೋಚನೆ ಮಾಡುತ್ತಿಲ್ಲ’ ಎಂದು ದೂರಿದರು.

‘ನದಿಗಳ ಅಕ್ಕಪಕ್ಕದ ಜಾಗವನ್ನು ರಿಯಲ್ ಎಸ್ಟೇಟ್ ಮಾಫಿಯಾ ನುಂಗಿದೆ. ಇದರಿಂದ ನೀರು ಸರಾಗವಾಗಿ ಹರಿಯುವ ವ್ಯವಸ್ಥೆ ಹಾಳಾಗಿದೆ. ಈಗಿನ ಆಡಳಿತ ವ್ಯವಸ್ಥೆಯೇ ಇದಕ್ಕೆ ಕಾರಣ. ಇರುವ ನೀರಿನ ಮೂಲಗಳನ್ನು ವಿಕೇಂದ್ರೀಕರಿಸಿ, ಅವುಗಳನ್ನು ನಿರ್ವಹಣೆ ಮಾಡಿದರೆ ನೀರಿನ ಅಭಾವ ಕ್ರಮೇಣ ತಗ್ಗಲಿದೆ’ ಎಂದು ಸಲಹೆ ನೀಡಿದರು.

ನಟ ಚೇತನ್, ‘ರಾಜಕಾರಣಿಗಳು ಮೇಕೆದಾಟು ವಿಚಾರವನ್ನು ‘ಕರ್ನಾಟಕ ವರ್ಸಸ್ ತಮಿಳುನಾಡು’ ಎಂದು ಬಿಂಬಿಸುತ್ತಿದ್ದಾರೆ. ಮೇಕೆದಾಟು ಯೋಜನೆಯಲ್ಲಿ ರಾಜ್ಯದ ಮೂರೂ ಪಕ್ಷಗಳು ಒಳಒಪ್ಪಂದ ಮಾಡಿಕೊಂಡಿವೆ. ಎಲ್ಲ ಪಕ್ಷಗಳು ಪರಿಸರ ನಾಶದ ಪರ ಇವೆ. ಇದನ್ನು ವಿರೋಧಿಸಬೇಕು’ ಎಂದರು.

‘ನಾನು ಮೇಕೆದಾಟು ಪರ. ಆದರೆ, ಅಣೆಕಟ್ಟು ನಿರ್ಮಾಣಕ್ಕೆ ವಿರೋಧವಿದೆ. ನೀರು ಭಾವನಾತ್ಮಕ ವಿಚಾರ. ರಾಜಕೀಯ ಪಕ್ಷಗಳು ಜನರ ಈ ಭಾವನೆಗಳ ಜೊತೆ ಆಟ ಆಡುತ್ತಿವೆ. ಯೋಜನೆಗಳ ಮುಖಾಂತರ ಭಾವನೆಗಳ ದಿಕ್ಕು ತಪ್ಪಿಸುತ್ತಿದ್ದಾರೆ’ ಎಂದು ಆಕ್ರೋಶ ವ್ಯಕ್ತಪಡಿಸಿದರು.

‘ಮೇಕೆದಾಟು ಯೋಜನೆ ಪರಿಸರಕ್ಕೆ ಮಾರಕ. ಈ ಮೂಲಕ ಕನಕಪುರದ ನೆಲ-ಜಲ ಧ್ವಂಸ ಮಾಡಲು ರಾಜಕಾರಣಿಗಳು ಹೊರಟಿದ್ದಾರೆ. ಗುತ್ತಿಗೆದಾರರೇ ರಾಜಕಾರಣಿಗಳಾಗಿರುವುದು ದುರಂತ. ಅವರ ರಾಜಕೀಯ ಲಾಭಕ್ಕಾಗಿ ಮೇಕೆದಾಟು ಯೋಜನೆ ತರುತ್ತಿದ್ದಾರೆ. ಇದಕ್ಕೆ ಅವಕಾಶ ನೀಡಬಾರದು’ ಎಂದರು.

‘ಮೇಕೆದಾಟು ಸಂಬಂಧ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಎಲ್ಲ ಪಕ್ಷಗಳೊಂದಿಗೆ ಸಭೆ ಕರೆದಿದ್ದಾರೆ. ಪರಿಸರವಾದಿಗಳು, ಜಲತಜ್ಞರನ್ನೂ ಚರ್ಚೆಗೆ ಆಹ್ವಾನಿಸಬೇಕು’ ಎಂದು ಒತ್ತಾಯಿಸಿದರು.

ಲೇಖಕಿ ಬಿ.ಟಿ.ಲಲಿತಾ ನಾಯಕ್ ಮತ್ತಿತರರು ಭಾಗವಹಿಸಿದ್ದರು.

ಮುಖ್ಯಾಂಶಗಳು

- ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಕಾರ್ಪೊರೇಟ್ ಸಂಸ್ಥೆಗಳ ಪರ ನಿಂತಿವೆ
- ನೀರಿನ ಮೂಲಗಳನ್ನು ವಿಕೇಂದ್ರೀಕರಿಸಿ ನಿರ್ವಹಿಸಬೇಕು
- ನೀರು ಜನರ ಭಾವನಾತ್ಮಕ ವಿಚಾರವಾಗಿದೆ–ನಟ ಚೇತನ್

ಅರಣ್ಯ ನಾಶಕ್ಕೆ ಸಾವಿರ ಕೋಟಿ : ನಾಗೇಶ ಹೆಗಡೆ ವ್ಯಂಗ್ಯ

‘ಬಜೆಟ್‌ನಲ್ಲಿ ₹1 ಸಾವಿರ ಕೋಟಿ ಅನುದಾನ ನೀಡಿರುವುದು ಮೇಕೆದಾಟು ಯೋಜನೆಗೆ ಅಲ್ಲ. ಬದಲಿಗೆ ಮೇಕೆದಾಟು ಪ್ರದೇಶದಲ್ಲಿರುವ ಪ್ರಾಣಿಗಳ ಜೀವ ತೆಗೆಯಲು, ಗ್ರಾಮೀಣ ಜನರ ಬದುಕಿನ ಮೇಲೆ ದಾಳಿ ಮಾಡಲು ಹಾಗೂ ಅರಣ್ಯ ನಾಶ ಮಾಡುವ ಉದ್ದೇಶಕ್ಕೆ ಸಾವಿರ ಕೋಟಿ ಘೋಷಿಸಿದ್ದಾರೆ’ ಎಂದು ಪತ್ರಕರ್ತ ಹಾಗೂ ಪರಿಸರವಾದಿ ನಾಗೇಶ ಹೆಗಡೆ ವ್ಯಂಗ್ಯವಾಡಿದರು.

‘ಮೇಕೆದಾಟುನಿಂದ ಬರಬಹುದಾದ ನೀರನ್ನು ನಾವು ಈಗಾಗಲೇ ಪೋಲು ಮಾಡುತ್ತಿದ್ದೇವೆ. ಇದೇ ಹಣವನ್ನು ಬೆಂಗಳೂರಿನ ಕೆರೆಗಳ ಹೂಳೆತ್ತುವುದು, ನಗರದಿಂದ ಹೊರಗೆ ಹರಿಯುವ ನೀರನ್ನು ಶುದ್ಧೀಕರಿಸುವುದು ಹಾಗೂ ಮಳೆನೀರು ಸಂಗ್ರಹಕ್ಕೆ ಬಳಸಿದರೆ, ಮೇಕೆದಾಟುಗಿಂತ ದುಪ್ಪಟ್ಟು ನೀರನ್ನು ಬೆಂಗಳೂರಿಗೆ ನೀಡಬಹುದು’ ಎಂದು ನಾಗೇಶ್ ಹೆಗಡೆ ಅವರು ಸಲಹೆ ನೀಡಿದರು.

‘ಶಾಲೆ ಮಾನ್ಯತೆ: ಪ್ರತಿವರ್ಷ ನವೀಕರಣ ಅನಗತ್ಯ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಅನುದಾನ ರಹಿತ ಖಾಸಗಿ ಶಾಲೆಗಳ ಮಾನ್ಯತೆಯನ್ನು ಪ್ರತಿ ವರ್ಷವೂ ನವೀಕರಿಸಲು ಅರ್ಜಿ ಸಲ್ಲಿಸುವ ಅಗತ್ಯವಿಲ್ಲ’ ಎಂದು ಹೈಕೋರ್ಟ್ ಸ್ಪಷ್ಟಪಡಿಸಿದೆ.

ಈ ಸಂಬಂಧ, ‘ನೋಂದಾಯಿತ ಅನುದಾನ ರಹಿತ ಖಾಸಗಿ ಶಾಲೆಗಳ ಆಡಳಿತ ಮಂಡಳಿಗಳ ಸಂಘ’ದ (ರುಪ್ಸಾ) ಅಧ್ಯಕ್ಷ ಲೋಕೇಶ್ವರಪ್ಪ ಹಾಗೂ ರಾಜ್ಯದ ಇತರೆ ಐದು ಶಿಕ್ಷಣ ಸಂಸ್ಥೆಗಳು ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಪಿ. ಕೃಷ್ಣ ಭಟ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಈ ಕುರಿತಂತೆ ತೀರ್ಪು ನೀಡಿದ್ದು, ‘ಅರ್ಜಿಯಲ್ಲಿ ಯಾವುದೇ ನಿರ್ದೇಶನ ನೀಡುವ ಅಗತ್ಯವಿಲ್ಲ’ ಎಂಬ ಅಭಿಪ್ರಾಯದೊಂದಿಗೆ ಅರ್ಜಿ ವಿಲೇವಾರಿ ಮಾಡಿದೆ.


‘ಕರ್ನಾಟಕ ಶಿಕ್ಷಣ ಕಾಯ್ದೆಯ-1983ರ ಕಲಂ 36ರ ಅಡಿ ಅಥವಾ ಕರ್ನಾಟಕ ಶೈಕ್ಷಣಿಕ ಶಿಕ್ಷಣ ಸಂಸ್ಥೆಗಳ (ನೋಂದಣಿ) ಅಧಿನಿಯಮ-1999ರ ಅಡಿಯಲ್ಲಾಗಲೀ ಪ್ರತಿ ವರ್ಷ ಶಾಲೆ ಮಾನ್ಯತೆ ನವೀಕರಿಸುವಂತೆ ಸೂಚಿಸುವ ಅಧಿಕಾರ ಸರ್ಕಾರಕ್ಕಿಲ್ಲ ಎಂದು ಘೋಷಿಸಬೇಕು. ಹತ್ತು ವರ್ಷಗಳಿಗೊಮ್ಮೆ ಮಾತ್ರವೇ ಮಾನ್ಯತೆ ನವೀಕರಣ ಪ್ರತಿಪಾದಿಸುವ ಶಿಕ್ಷಣ ಕಾಯ್ದೆ ನಿಯಮಗಳನ್ನು ಪಾಲಿಸುವಂತೆ ಸರ್ಕಾರ ಮತ್ತು ಶಿಕ್ಷಣ ಇಲಾಖೆಗೆ ನಿರ್ದೇಶಿಸಬೇಕು’ ಎಂದು ಅರ್ಜಿದಾರರು ಕೋರಿದ್ದರು.



ಅರ್ಜಿದಾರರ ಆರೋಪಗಳನ್ನು ಅಲ್ಲಗಳೆದಿದ್ದ ಸರ್ಕಾರ, ‘ವಿದ್ಯಾರ್ಥಿಗಳ ಸುರಕ್ಷತೆ ದೃಷ್ಟಿಯಿಂದ ಖಾಸಗಿ ಅನುದಾನಿತ ಹಾಗೂ ಅನುದಾನರಹಿತ ಆಡಳಿತ ಮಂಡಳಿಗಳು ಸುರಕ್ಷತಾ ಕ್ರಮ ಅನುಸರಿಸುವ ಕುರಿತಂತೆ ಮಾತ್ರವೇ ಇಂತಹ ಸುತ್ತೋಲೆ ಹೊರಡಿಸಿರುವುದಾಗಿ ತಿಳಿಸಿದೆ. ಮಾನ್ಯತೆ ಅವಧಿ ಕುರಿತಂತೆ ಯಾವುದೇ ವಿವಾದವಿಲ್ಲ. ಅರ್ಜಿದಾರರು ಸರ್ಕಾರದ ಸುತ್ತೋಲೆಯನ್ನು ತಪ್ಪಾಗಿ ಅರ್ಥೈಸಿಕೊಂಡು ರಿಟ್ ಅರ್ಜಿ ಸಲ್ಲಿಸಿದ್ದಾರೆ’ ಎಂದು ಆಕ್ಷೇಪಿಸಿತ್ತು.

ಕುವೆಂಪು ವಿ.ವಿ ದೂರ ಶಿಕ್ಷಣ ಫಲಿತಾಂಶಕ್ಕೆ ತಡೆ

ಪ್ರಜಾವಾಣಿ ವಾರ್ತೆ



ಪ್ರೊ.ಬಿ.ಪಿ. ವೀರಭದ್ರಪ್ಪ

ಶಿವಮೊಗ್ಗ: ದೂರ ಶಿಕ್ಷಣ ವಿಭಾಗದ 2019–20ನೇ ಸಾಲಿನ ವಿದ್ಯಾರ್ಥಿಗಳಿಗೆ ಪರೀಕ್ಷೆ ಇಲ್ಲದೇ ಪ್ರಕಟಿಸಿದ್ದ ಫಲಿತಾಂಶವನ್ನು ತಡೆ ಹಿಡಿಯಲು ಕುವೆಂಪು ವಿಶ್ವವಿದ್ಯಾಲಯ ನಿರ್ಧರಿಸಿದೆ.

ಫಲಿತಾಂಶ ಹಿಂಪಡೆಯುವ ಕುರಿತು ಸಿಂಡಿಕೇಟ್, ವಿದ್ಯಾ ವಿಷಯಕ ಪರಿಷತ್ ಸಭೆಯಲ್ಲಿ ಒಮ್ಮತದ ನಿರ್ಣಯ ಕೈಗೊಳ್ಳಲಾಗಿದೆ. ಪರೀಕ್ಷೆ ನಡೆಸದೇ ಫಲಿತಾಂಶ ಪ್ರಕಟಿಸಲು ನಿರ್ದೇಶನ ನೀಡುವಂತೆ ಕೆಲವು ವಿದ್ಯಾರ್ಥಿಗಳು ಹಿಂದೆ ಹೈಕೋರ್ಟ್ ಮೊರೆಹೋಗಿದ್ದರು. ಕೋರ್ಟ್ ಆದೇಶ ನೋಡಿಕೊಂಡು, ಕಾನೂನು ತಜ್ಞರ ಸಲಹೆ ಪಡೆದು ಡಿಸೆಂಬರ್ ಅಂತ್ಯದ ಒಳಗೆ ಪರೀಕ್ಷೆ ನಡೆಸಲಾಗುವುದು ಎಂದು ಕುಲಪತಿ ಪ್ರೊ.ಬಿ.ಪಿ. ವೀರಭದ್ರಪ್ಪ ಬುಧವಾರ ಪತ್ರಿಕಾಗೋಷ್ಠಿಯಲ್ಲಿ ಮಾಹಿತಿ ನೀಡಿದರು.

‘ಕೋವಿಡ್ ಸಮಯದಲ್ಲಿ 2019–20ನೇ ಸಾಲಿನ ವಿದ್ಯಾರ್ಥಿಗಳನ್ನು ಪರೀಕ್ಷೆ ನಡೆಸದೇ ತೇರ್ಗಡೆ ಮಾಡಲು ಯುಜಿಸಿ ಅವಕಾಶ ಕಲ್ಪಿಸಿತ್ತು. ಅಂದು ಫಲಿತಾಂಶ ಪ್ರಕಟಿಸಲು ವಿಳಂಬವಾಗಿತ್ತು. ಈಗ ಅದನ್ನು ಜಾರಿ ಮಾಡಿದ್ದೆವು. ಅದಕ್ಕೆ ತೀವ್ರ ವಿರೋಧ ವ್ಯಕ್ತವಾಗಿತ್ತು. ಈ ಕುರಿತು ಸಿಂಡಿಕೇಟ್ ಸಭೆಯಲ್ಲಿ ಸುದೀರ್ಘ ಚರ್ಚೆ ನಡೆದು ಅಂತಿಮವಾಗಿ ಫಲಿತಾಂಶ ತಡೆಹಿಡಿಯಲು ನಿರ್ಧಾರ ಕೈಗೊಳ್ಳಲಾಗಿದೆ. ಮುಂದೆ ಇಂತಹ ಅಚಾತುರ್ಯ ನಡೆಯದಂತೆ ಎಚ್ಚರ ವಹಿಸಲಾಗುವುದು’ ಎಂದರು.

ಪತ್ರಿಕಾಗೋಷ್ಠಿಯಲ್ಲಿ ಕುಲಸಚಿವೆ ಜಿ.ಅನುರಾಧಾ, ಪರೀಕ್ಷಾಂಗ ಕುಲಸಚಿವ ನವೀನ್ ಕುಮಾರ್, ಸಿಂಡಿಕೇಟ್ ಸದಸ್ಯರಾದ ಬಳ್ಳೇಕೆರೆ ಸಂತೋಷ್, ಧರ್ಮಪ್ರಸಾದ್, ರಮೇಶ್ ಬಾಬು, ರಾಮಲಿಂಗಪ್ಪ ಇದ್ದರು.

ಭಾಷೆ, ವಿಷಯ ಪ್ರಸ್ತುತಿಗೆ ಪತ್ರಿಕೆ ಓದಿ

ಸುದ್ದಿ ತಿಳಿದುಕೊಳ್ಳಲು ನೂರೆಂಟು ಆ್ಯಪ್‌ಗಳಿವೆ, ಟಿವಿ ಚಾನೆಲ್‌ಗಳಿವೆ, ವೆಬ್‌ಸೈಟ್‌ಗಳಿವೆ. ಇಂಥ ಪರಿಸ್ಥಿತಿಯಲ್ಲಿ ಪತ್ರಿಕೆಗಳನ್ನು ಏಕೆ ಓದಬೇಕು ಎನ್ನುವುದು ಹಲವರ ಪ್ರಶ್ನೆ. ಕೆಲವರಿಗೆ ಪತ್ರಿಕೆಗಳನ್ನು ಹೇಗೆ ಓದಬೇಕು ಎಂಬುದು ದೊಡ್ಡ ಸಮಸ್ಯೆ. ಪತ್ರಿಕೆಗಳನ್ನು ಏಕೆ ಮತ್ತು ಹೇಗೆ ಓದಬೇಕು ಎಂಬ ಬಗ್ಗೆ ಇಲ್ಲಿದೆ ಮಾಹಿತಿ.

ಮಾಲಾ

ಸ್ಪರ್ಧಾತ್ಮಕ ಪರೀಕ್ಷೆಗಳ ಉತ್ತರ ಪತ್ರಿಕೆಗಳನ್ನು ಮೌಲ್ಯಮಾಪನ ಮಾಡುವವರದು ಒಂದು ಆಕ್ಷೇಪ. ಅದೇನು ಅಂತ ಬರೀತಾರೋ, ವಿಷಯ ಮಂಡನೆಯ ಚಾತುರ್ಯ, ಭಾಷಾ ಬಳಕೆಯ ಔಚಿತ್ಯ ಸಪ್ಪೆಸಪ್ಪೆ. ಉತ್ತರಗಳು ಕೇವಲ ಮಾಹಿತಿಯನ್ನು ತುರುಕಿದಂತೆ ಇರುತ್ತದೆ ಎಂಬ ಸಂಗತಿ ಅವರನ್ನು ಖಾಸಗಿಯಾಗಿ ಮಾತನಾಡಿಸಿದಾಗ ವ್ಯಕ್ತವಾಗುತ್ತಿರುತ್ತದೆ.

ಈ ಮಾತಿನ ಚುಂಗು ಹಿಡಿದು ವಿಚಾರ ಮಾಡಿದಾಗ ಮಕ್ಕಳನ್ನು ಬೆಳೆಸುವ, ಭಾಷೆಯನ್ನು ಕಲಿಸುವ ಹಂತದಲ್ಲಿ ಆಗಿರುವ ಲೋಪಗಳೇ ಇದಕ್ಕೆ ಕಾರಣ ಇರಬಹುದು ಎನಿಸದಿರದು. ಪತ್ರಿಕೆಗಳು ಬರುವ ಮನೆಗಳಲ್ಲಿ ಸಹಜವಾಗಿಯೇ ಓದುವ ಆಸಕ್ತಿ ಬೆಳೆಯುತ್ತದೆ. ಸಣ್ಣ ಸುದ್ದಿ, ಕಥೆ, ಸಂಪಾದಕೀಯ ಓದುವ ಮೂಲಕ ಸಿದ್ಧವಾಗುವ ಮನಸ್ಸು ಮುಂದಿನ ದಿನಗಳಲ್ಲಿ ಸಾಹಿತ್ಯ ಕೃತಿಗಳನ್ನು ಅಥವಾ ಸಾಮಾಜಿಕ ಪುಸ್ತಕಗಳನ್ನು ಓದಿ ಅರ್ಥೈಸಿಕೊಳ್ಳುವ ಮಟ್ಟಕ್ಕೆ ವಿಕಸಿತಗೊಳ್ಳುತ್ತದೆ. ಕೇವಲ ಕಲಾ ನಿಕಾಯಕ್ಕೆ ಮಾತ್ರವಲ್ಲ, ವಿಜ್ಞಾನದಲ್ಲಿ ಆಸಕ್ತಿ ಇರುವವರಿಗೂ ಸಮಕಾಲೀನ ಬೆಳವಣಿಗೆಗಳನ್ನು ತಿಳಿದುಕೊಳ್ಳಲು ಪತ್ರಿಕೆಗಳ ಓದು ಅತ್ಯುತ್ತಮ ಮಾರ್ಗ.

ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಸಿದ್ಧತೆ ಆರಂಭಿಸುವ ಹಲವರು ಕೇಳಿಸಿಕೊಳ್ಳುವ ಮೊದಲ ಮಾತು 'ಪತ್ರಿಕೆಗಳನ್ನು ಓದಬೇಕು' ಎನ್ನುವುದೇ ಆಗಿರುತ್ತದೆ. ಆದರೆ ಬಹುತೇಕರದ್ದು ಯುದ್ಧಕಾಲೇ ಶಸ್ತ್ರಾಭ್ಯಾಸ. ಇಂಥವರು ಮಾಹಿತಿಗಳನ್ನು ಸಂಗ್ರಹಿಸಬಹುದು. ಆದರೆ ಬಾಲ್ಯದಿಂದಲೇ ಪತ್ರಿಕೆಗಳನ್ನು ಓದುವ ಹವ್ಯಾಸ ಬೆಳೆಸಿಕೊಂಡವರಲ್ಲಿ ಇರುವಷ್ಟು ಭಾಷಾಬಳಕೆಯ ಸಾಮರ್ಥ್ಯ ಮತ್ತು ವಿಷಯ ವಿಶ್ಲೇಷಣೆ, ಮಂಡನೆಯ ಚಾತುರ್ಯ ಬೆಳೆಯುವುದಿಲ್ಲ.

ದಿನಪತ್ರಿಕೆಗಳ ಓದು ನನ್ನ ಹಿಂದಿನ ಮತ್ತು ಇಂದಿನ ಬದುಕಿನ ಭಾಗವೇ ಆಗಿದೆ. ನಾನು ಪತ್ರಿಕೆಗಳನ್ನು ಓದುವಾಗ ಮಕ್ಕಳು ಅರ್ಥವಾಗಲಿ ಬಿಡಲಿ ನನ್ನೆದುರು ಕೂತು ಓದಲು ಪ್ರಯತ್ನಿಸುತ್ತಾರೆ. ಅವರಿಗಿಷ್ಟವಾದ ಚಿತ್ರಗಳ ಬಗ್ಗೆ ವಿವರ ಕೇಳುತ್ತಾರೆ. ಹೀಗೆ ಆಟದ ಜೊತೆಗೆ ಸಾಮಾನ್ಯ ಜ್ಞಾನದ ಪಾಠವೂ ನಮ್ಮ ಮನೆಯಲ್ಲಿ ನಡೆಯುತ್ತಿರುತ್ತದೆ. ನನ್ನ ಮಕ್ಕಳು ಐಎಎಸ್ ಮಾಡಬೇಕು ಎನ್ನುವ ಆಸೆ ನನಗಿದೆ. ಅದಕ್ಕೆ ದಿನಪತ್ರಿಕೆಗಳಿಗಿಂತಲೂ ಒಳ್ಳೆಯ ಬುನಾದಿ ಬೇರೆ ಯಾವುದೂ ಇಲ್ಲ ಎಂದು ಬಲ್ಲವರು ಮಾರ್ಗದರ್ಶನ ಮಾಡಿದ್ದಾರೆ.



ದಿನಪತ್ರಿಕೆಗಳನ್ನು ಓದಲೇಬೇಕೆಂಬ ನನ್ನ ನಂಬಿಕೆಗೆ ಇಂಬುಕೊಟ್ಟ ಎರಡು ಅಂಶಗಳನ್ನು ಇಲ್ಲಿ ಹಂಚಿಕೊಳ್ಳಬೇಕು ಎನಿಸುತ್ತಿದೆ. ನಿಮಗೆ ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಆಸಕ್ತಿಯಿದ್ದರೆ ಸಹಜವಾಗಿಯೇ ಜುನೈದ್ ಅಹಮದ್ ಅವರ ಹೆಸರು ಕೇಳಿರುತ್ತೀರಿ. 2018ರ ಐಎಎಸ್ ಪರೀಕ್ಷೆಯಲ್ಲಿ 3ನೇ ರ್‍ಯಾಂಕ್ ಪಡೆದ ಸಾಧಕರು ಅವರು. ಹೌ ಟು ರೀಡ್ ನ್ಯೂಸ್‌ಪೇಪರ್ (How to Read News Paper) ಎಂಬ ಅವರ ವಿಡಿಯೊ ಯುಟ್ಯೂಬ್‌ನಲ್ಲಿದೆ. ಸುಮಾರು 19 ಲಕ್ಷ ವೀಕ್ಷಣೆ ಗಳಿಸಿರುವ 15 ನಿಮಿಷಗಳ ಈ ವಿಡಿಯೊ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಸಿದ್ಧರಾಗುವವರು ಸಾಮಾನ್ಯ ಜ್ಞಾನ ಹೆಚ್ಚಿಸಿಕೊಳ್ಳುವ ದೃಷ್ಟಿಯಿಂದ ದಿನಪತ್ರಿಕೆಗಳನ್ನು ಹೇಗೆ ಓದಬೇಕು ಎಂಬ ಬಗ್ಗೆ ಇಣುಕುನೋಟ ನೀಡುತ್ತದೆ.

ದಿನಪತ್ರಿಕೆಗಳ ಪ್ರಾಮುಖ್ಯವನ್ನು ವಿವರಿಸುವ ಇದೇ ರೀತಿಯ ಮತ್ತೊಂದು ಯುಟ್ಯೂಬ್ ವಿಡಿಯೊ ರೌನಕ್ ಓಂಕಾರ್ ಅವರ ನ್ಯೂಸ್‌ಪೇಪರ್ ಬ್ಯುಸಿನೆಸ್. 1ಗಂಟೆ 15 ನಿಮಿಷದ ಈ ಸುದೀರ್ಘ ವಿಡಿಯೊದಲ್ಲಿ ಪತ್ರಿಕಾಲೋಕದ ಆಗುಹೋಗುಗಳನ್ನು ಚರ್ಚಿಸುವ ಜೊತೆಗೆ ಪತ್ರಕರ್ತರು ಮತ್ತು ಪತ್ರಿಕೆಗಳ ಪ್ರಾಮುಖ್ಯವನ್ನು ಅವರು ವಿವರಿಸಿದ್ದಾರೆ.

ದಿನಪತ್ರಿಕೆಗಳನ್ನು ಸಾಮಾನ್ಯ ಜನರು ಓದುವ ಕ್ರಮ ಬೇರೆ. ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಸಿದ್ಧರಾಗುತ್ತಿರುವವರು ಓದುವ ಕ್ರಮ ಬೇರೆ. ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಸಿದ್ಧತೆ ಮಾಡಿಕೊಳ್ಳುತ್ತಿರುವವರು ಈ ಅಂಶಗಳನ್ನು ಗಮನಿಸಿ.

- ಪ್ರತಿದಿನ ದಿನಪತ್ರಿಕೆ ಓದಿ. ಅಕಸ್ಮಾತ್ ಒಂದು ದಿನ ಓದಲು ಆಗದಿದ್ದರೆ ಮಾರನೆಯ ದಿನವಾದರೂ ಸರಿ, ಪತ್ರಿಕೆ ಓದುವುದನ್ನು ತಪ್ಪಿಸಬೇಡಿ.
- ಒಂದು ಕನ್ನಡ ಮತ್ತು ಒಂದು ಇಂಗ್ಲಿಷ್ ಪತ್ರಿಕೆಯನ್ನು ಓದುವುದನ್ನು ರೂಢಿಸಿಕೊಳ್ಳಿ
- ನಾವು ಓದಲು ಆರಿಸಿಕೊಳ್ಳುವ ಪತ್ರಿಕೆಗಳು ವಿಶ್ವಾಸಾರ್ಹವಾಗಿರಬೇಕು. ತಲಸ್ಪರ್ಶಿ ಅಧ್ಯಯನಕ್ಕೆ ಒತ್ತುಕೊಡುವ ಬರಹಗಳು ಹೆಚ್ಚಿನ ಸಂಖ್ಯೆಯಲ್ಲಿರಬೇಕು.
- ಸಂಪಾದಕೀಯ ಪುಟದ ಎಲ್ಲ ಬರಹಗಳನ್ನೂ ಓದಿ. ಈ ಬರಹಗಳು ವಿಷಯವನ್ನು ಆಳವಾಗಿ ಪರಿಶೀಲಿಸುವುದಲ್ಲದೆ, ಭಾಷಾ ಬಳಕೆಯ ಬಿಗಿ, ವಿಷಯ ಮಂಡನೆಯ ಕ್ರಮ ಅರಿತುಕೊಳ್ಳಲು ನೆರವಾಗುತ್ತದೆ.
- ಸಂಪಾದಕೀಯ ಪುಟದ ನಂತರ ಪುರವಣಿ ಬರಹಗಳನ್ನು ಗಮನಿಸಿ. ಇಲ್ಲಿಯೂ ವಿಷಯ ಶೋಧನೆ ಮತ್ತು ಭಾಷಾ ಬಳಕೆಯ ದೃಷ್ಟಿಯಿಂದ ಹಲವು ಅನುಕೂಲಗಳಿವೆ.
- ರಾಜಕೀಯಕ್ಕಿಂತಲೂ ಸರ್ಕಾರದ ಯೋಜನೆಗಳು, ಹೊಸ ಕಾಯ್ದೆಗಳು, ವ್ಯಾಪಾರ, ವಿಜ್ಞಾನ, ಕ್ರೀಡಾ ಕ್ಷೇತ್ರದ ಪ್ರಚಲಿತ ವಿದ್ಯಮಾನಗಳಿಗೆ ಹೆಚ್ಚು ಮಹತ್ವ ಕೊಡಿ. ಪರೀಕ್ಷೆಗಳ ದೃಷ್ಟಿಯಿಂದ ಜಿಯೊ ಪಾಲಿಟಿಕ್ಸ್ ವಿಚಾರದಲ್ಲಿ ಅಪ್‌ಡೇಟ್ ಆಗುವುದು ಅತ್ಯಗತ್ಯ.
- ದಿನಪತ್ರಿಕೆಗಳನ್ನು ಆಸಕ್ತಿಯಿಂದ ಓದುವ ಇತರ ಗೆಳೆಯರೊಂದಿಗೆ ಸಂಪರ್ಕದಲ್ಲಿರಿ, ದಿನದ ವಿದ್ಯಮಾನಗಳನ್ನು ಚರ್ಚಿಸಿ. ಇದರಿಂದ ವಿಷಯಗಳು ಮನದಟ್ಟಾಗಲು ಅನುಕೂಲವಾಗುತ್ತದೆ
- ಪ್ರಚಲಿತ ವಿದ್ಯಮಾನಗಳ ಬಗ್ಗೆ ಒಂದು ಡೈರಿ ನಿರ್ವಹಿಸಿ.

ಸಾಮಾನ್ಯ ಜ್ಞಾನ

ಮಾದರಿ ಪ್ರಶ್ನೋತ್ತರ

ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಸಹಾಯಕ ಪ್ರಾಧ್ಯಾಪಕರ ಹುದ್ದೆಗಳ ನೇಮಕಾತಿಗಾಗಿ ಮಾರ್ಚ್ 12ರಂದು ಸ್ಪರ್ಧಾತ್ಮಕ ಪರೀಕ್ಷೆ ನಡೆಯುತ್ತಿದೆ. ಕರ್ನಾಟಕ ರಾಜ್ಯ ಪೊಲೀಸ್ ಇಲಾಖೆಯ ವಿಶೇಷ ಮೀಸಲು ಸಬ್‌ಇನ್‌ಸ್ಪೆಕ್ಟರ್ (ಕೆಎಸ್‌ಆರ್‌ಪಿ ಮತ್ತು ಐಆರ್‌ಬಿ) ಹಾಗೂ ಕರ್ನಾಟಕ ರಾಜ್ಯ ಕೈಗಾರಿಕಾ ಭದ್ರತಾ ಪಡೆಯ ಸಬ್‌ಇನ್‌ಸ್ಪೆಕ್ಟರ್ ಹುದ್ದೆಗಳ ನೇಮಕಾತಿಗಾಗಿ ಶೀಘ್ರದಲ್ಲೇ ಸ್ಪರ್ಧಾತ್ಮಕ ಪರೀಕ್ಷೆಗಳು ನಡೆಯಲಿವೆ. ಈ ಮೂರು ಪರೀಕ್ಷೆಗಳಲ್ಲಿರುವ 'ಸಾಮಾನ್ಯ ಜ್ಞಾನ' ವಿಷಯಕ್ಕೆ ಸಂಬಂಧಿಸಿದ ಮಾದರಿ ಪ್ರಶ್ನೋತ್ತರಗಳನ್ನು ಇಲ್ಲಿ ನೀಡಲಾಗಿದೆ.

ಭಾಗ- 12

1. ಕೆಳಗಿನ ಹೇಳಿಕೆಗಳನ್ನು ಗಮನಿಸಿ

1. ಛತ್ರಪತಿ ಶಿವಾಜಿಯ ಮಗ ರಾಜಾರಾಮನಿಗೆ ಆಶ್ರಯ ಕೊಟ್ಟು, ಮೊಘಲ ದೊರೆಗೆ ಸೆಡ್ಡು ಹೊಡೆದ ಕನ್ನಡನಾಡಿನ ಮಹಾರಾಣಿ ಕೆಳದಿ ಚೆನ್ನಮ್ಮರ ಪಟ್ಟಾಭಿಷೇಷಕವಾಗಿ 350 ವರ್ಷಗಳಾಗಿವೆ.
2. ಕೆಳದಿ ಚೆನ್ನಮ್ಮ 350 ವರ್ಷಗಳ ಹಿಂದೆಯೇ ಸತಿ ಸಹಗಮನ ಪದ್ಧತಿಯನ್ನು ವಿರೋಧಿಸಿದ್ದರು. ಅಂದರೆ ರಾಜಾರಾಮ್ ಮೋಹನ ರಾಯರಿಗಿಂತ ಹಿಂದೆಯೇ ಸತಿ ಸಹಗಮನ ಪದ್ಧತಿಯನ್ನು ವಿರೋಧಿಸಿದ್ದರು.
3. ಫೆಬ್ರುವರಿ 27, 1672ರಲ್ಲಿ ಕವಲೇದುರ್ಗದಲ್ಲಿ ಚೆನ್ನಮ್ಮ ಅವರ ಪಟ್ಟಾಭಿಷೇಕ ಮಹೋತ್ಸವ ನಡೆದಿತ್ತು. ರಾಣಿ ಚೆನ್ನಮ್ಮ 1672 ರಿಂದ 1697ರವರೆಗೆ ಕೆಳದಿಯನ್ನು ಆಳಿದ್ದರು.
4. ಕೆಳದಿ ಚೆನ್ನಮ್ಮನ ಪಟ್ಟಾಭಿಷೇಕದ ದಿನವನ್ನು ಮುಂದಿನ ವರ್ಷ ಸರ್ಕಾರದ ವತಿಯಿಂದ ಶಿವಮೊಗ್ಗ ಜಿಲ್ಲೆಯ ಸಾಗರ ತಾಲ್ಲೂಕಿನ ಕೆಳದಿಯಲ್ಲಿ ಅದ್ದೂರಿಯಾಗಿ ಆಚರಿಸಲಾಗುವುದು ಎಂದು ಕೆಳದಿ ರಾಣಿ ಚೆನ್ನಮ್ಮರ ಪಟ್ಟಾಭಿಷೇಕದ 350ನೇ ವರ್ಷಾಚರಣೆ ಸಂದರ್ಭದಲ್ಲಿ ರಾಜ್ಯ ಸರ್ಕಾರ ಘೋಷಿಸಿದೆ.
5. ಕೆಳದಿ ಚೆನ್ನಮ್ಮ ಮತ್ತು ಬ್ರಿಟಿಷರಿಗೂ ನಡೆದ ಹೋರಾಟದಲ್ಲಿ ಸಾಗರ ಪಟ್ಟಣ ನಾಶವಾಗಿತ್ತು. ಆದರೆ ಬ್ರಿಟಿಷ್ ಸೇನಾನಿಯ ಹತ್ಯೆಯಾಗಿತ್ತು.

ಮೇಲಿನ ಯಾವೆಲ್ಲಾ ಹೇಳಿಕೆಗಳು ಸರಿಯಾಗಿವೆ?

ಎ. ಹೇಳಿಕೆ 1ರಿಂದ 5ರ ತನಕ ಎಲ್ಲವೂ ಸರಿಯಾಗಿವೆ
ಬಿ. ಹೇಳಿಕೆ 1, 2 ,4 ಮತ್ತು 5 ಮಾತ್ರ ಸರಿಯಾಗಿವೆ
ಸಿ. ಯಾವ ಹೇಳಿಕೆಯೂ ಸರಿಯಾಗಿಲ್ಲ
ಡಿ. 1, 2, 3 ಮತ್ತು 4ನೇ ಹೇಳಿಕೆಗಳು ಸರಿಯಾಗಿವೆ

ಉತ್ತರ: ಡಿ

2. ಕೇಂದ್ರ ಕಾನೂನು ಕಾರ್ಯದರ್ಶಿಯೊಬ್ಬರನ್ನು ದೆಹಲಿ ಹೈಕೋರ್ಟ್ ನ್ಯಾಯಮೂರ್ತಿಗಳಾಗಿ ನೇಮಕ ಮಾಡಲಾಗಿದೆ. ಇದೇ ಮೊದಲ ಬಾರಿಗೆ ಕಾನೂನು ಕಾರ್ಯದರ್ಶಿಯವನ್ನು ನ್ಯಾಯಮೂರ್ತಿಯಾಗಿ ನೇಮಿಸಲಾಗಿದೆ. ಹಾಗಾದರೆ ಅವರು ಯಾರು?

ಎ. ಡಿ.ಎನ್. ಪಟೇಲ್
ಬಿ. ಅನೂಪ್ ಕುಮಾರ್ ಮೆಂದಿರತ್ತಾ
ಸಿ. ವಿಪಿನ್ ಸಿಂಗ್
ಡಿ. ಎಂ.ಎನ್. ಭಂಡಾರಿ

ಉತ್ತರ: ಬಿ

3. ಕರ್ನಾಟಕ ತಂತ್ರಜ್ಞಾನ ಸಂಸ್ಥೆಯಾಗಿ (Karnataka Institue of Technology) ಎಷ್ಟು ಸರ್ಕಾರಿ ಎಂಜಿನಿಯರಿಂಗ್ ಕಾಲೇಜು ಗಳನ್ನು ಉನ್ನತೀಕರಿಸಲು ಪ್ರತಿಷ್ಠಿತ ವಿದೇಶಿ ವಿಶ್ವವಿದ್ಯಾಲಯ ಗಳೊಂದಿಗೆ ಒಪ್ಪಂದ ಮಾಡಿಕೊಳ್ಳುವುದಾಗಿ ಬಜೆಟ್‌ನಲ್ಲಿ ಘೋಷಿಸಲಾಯಿತು?

ಎ. ಏಳು ಬಿ. ಎಂಟು ಸಿ. ಹತ್ತು ಡಿ. ಒಂಬತ್ತು

ಉತ್ತರ: ಎ

4. ಭಾರತವು ಶ್ರೀಲಂಕಾಕ್ಕೆ ತೈಲ ಕೊರತೆ ನೀಗಿಸಲು ಹಣ ನೀಡಿ ಸಹಾಯ ಮಾಡಿದೆ. 26 ವರ್ಷದಲ್ಲಿಯೇ ಸುದೀರ್ಘ ವಿದ್ಯುತ್ ಕಡಿತ ಮಾಡುವ ಮೂಲಕ ಶ್ರೀಲಂಕಾ ತನ್ನ ಆರ್ಥಿಕ ಬಿಕ್ಕಟ್ಟನ್ನು ಜಗತ್ತಿಗೆ ತೋರಿಸಿದೆ. ಪ್ರಸ್ತುತ ಆ ದೇಶದಲ್ಲಿ ಆರ್ಥಿಕ ತುರ್ತುಪರಿಸ್ಥಿತಿ ಹೇರಲಾಗಿದೆ. ಹಾಗಾದರೆ ಯಾವಾಗಿನಿಂದ ಶ್ರೀಲಂಕಾದಲ್ಲಿ ಆರ್ಥಿಕ ತುರ್ತುಪರಿಸ್ಥಿತಿ ಇದೆ?

ಎ. 2020ರ ಸೆಪ್ಟೆಂಬರ್ ಬಿ. 20211 ಜನವರಿ
ಸಿ. 2022 ಜನವರಿ ಡಿ. 2019 ಅಕ್ಟೋಬರ್

ಉತ್ತರ: ಎ



ರಾಮನ್ ಪರಿಣಾಮ (ರಾಮನ್ ಎಫೆಕ್ಟ್) ವಿವರಿಸುತ್ತಿರುವ ವಿಜ್ಞಾನಿ ಸಿ.ವಿ.ರಾಮನ್

- **ವಿಜ್ಞಾನಿ ಸರ್ ಸಿ.ವಿ. ರಾಮನ್ 1928ರ ಫೆಬ್ರುವರಿ 28ರಂದು 'ಬೆಳಕಿನ ಚದುರುವಿಕೆ'ಯ ಪರಿಣಾಮವನ್ನು ವಿವರಿಸಿದ ದಿನವನ್ನು 'ರಾಷ್ಟ್ರೀಯ ವಿಜ್ಞಾನ ದಿನ' ಎಂದು ಆಚರಿಸಲಾಗುತ್ತದೆ. 1930ರಲ್ಲಿ ಇವರಿಗೆ ನೊಬೆಲ್ ಪ್ರಶಸ್ತಿಯೂ ಬಂತು. ಹಾಗಾದರೆ ರಾಮನ್ ಬೆಳಕಿನ ಚದುರುವಿಕೆಯ ಪರಿಣಾಮವನ್ನು ಎಲ್ಲಿ ವಿವರಿಸಿದ್ದರು?**

ಎ. ಬೆಂಗಳೂರು ಬಿ. ಕೊಲ್ಕತ್ತಾ
ಸಿ. ಮುಂಬೈ ಡಿ. ದೆಹಲಿಯ ಐಐಟಿ

ಉತ್ತರ: ಎ

(ಮಾಹಿತಿ: Spardha Bharati UPSC ಯೂಟ್ಯೂಬ್ ಚಾನೆಲ್)

ಪ್ರಜಾವಾಣಿ ನೋಡಿಯೊ — 'ನಿಮಗಿದು ಗೊತ್ತೇ?' ಹಾಗೂ ಮತ್ತಷ್ಟು 'ಸಾಮಾನ್ಯ ಜ್ಞಾನ'ದ ಪ್ರಶ್ನೋತ್ತರಕ್ಕಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಪಿಯುಸಿ ಪರೀಕ್ಷೆ ದಿಕ್ಸೂಚಿ


ಬಿಂದು ಮತ್ತು ರೇಖೆಗಳು

ಮಾದರಿ ಪ್ರಶ್ನೋತ್ತರ

ಗಣಿತಶಾಸ್ತ್ರ

18) **$f(x) = 3 + |x|$, $x \in R$ ಉತ್ಪನ್ನದ, ಸ್ಥಳೀಯ ಕನಿಷ್ಠ ಬೆಲೆಯನ್ನು ಕಂಡುಹಿಡಿಯಿರಿ.**

ಉತ್ತರ:– ದತ್ತ ಉತ್ಪನ್ನವು, $x=0$ ಬಿಂದುವಿನಲ್ಲಿ ನಿಶ್ಪನ್ನವಾಗುವುದಿಲ್ಲ ಎಂಬುದನ್ನು ಗಮನಿಸಿದಾಗ. ಎರಡನೆಯ ನಿಶ್ಪನ್ನದ ಪರೀಕ್ಷೆ ವಿಫಲವಾಗುತ್ತದೆ. ಈಗ ಮೊದಲನೆಯ ನಿಶ್ಪನ್ನದ ಪರೀಕ್ಷೆಯನ್ನು ಪ್ರಯತ್ನಿಸಿದಾಗ. 0 ಬಿಂದುವು f ನ ನಿರ್ಣಾಯಕ ಬಿಂದುವಾಗಿದೆ.



0ನ ಎಡಕ್ಕೆ $f(x) = 3 - x$. ಆದರಿಂದ, $f'x = 1 -< 0$ ಮತ್ತು

0ನ ಬಲಕ್ಕೆ $fx = 3 + x$. ಆದ್ದರಿಂದ $f'x = 1 > 0$

ಆದ್ದರಿಂದ $x = 0$ ಬಿಂದುವು ಸ್ಥಳೀಯ ಕನಿಷ್ಠ ಬೆಲೆಯ ಬಿಂದುವಾಗಿದೆ ಮತ್ತು ಸ್ಥಳೀಯ ಕನಿಷ್ಠ ಬೆಲೆಯು $f(0) = 3$.

19) ಎರಡು ಧನಾತ್ಮಕ ಸಂಖ್ಯೆಗಳ ಮೊತ್ತ 15. ಅವುಗಳ ವರ್ಗಗಳ ಮೊತ್ತ ಕನಿಷ್ಠವಾಗಬೇಕಾದರೆ, ಆ ಸಂಖ್ಯೆಗಳನ್ನು ಕಂಡುಹಿಡಿಯಿರಿ.

ಉತ್ತರ: ಆ ಸಂಖ್ಯೆಗಳ ಪೈಕಿ, ಒಂದು x ಇರಲಿ, ಮತ್ತೊಂದು ಸಂಖ್ಯೆ $15 - x$ ಆಗಿರುತ್ತದೆ.

ಅವುಗಳ ವರ್ಗಗಳ ಮೊತ್ತವು $S(x)$ ಆಗಿರಲಿ. ಆಗ

$$s(x) = x^2 + (15 - x)^2 = 2x^2 - 30x + 225$$


ಅಥವಾ $\begin{cases} s'(x) = 4x - 30 \\ s''(x) = 4 \end{cases}$

$s'(x) = 0$ ಆದಾಗ $x = \frac{15}{2}$, ಮತ್ತು $s''\left(\frac{15}{2}\right) = 4 > 0$

∴ಎರಡನೆಯ ನಿಶ್ಪನ್ನದ ಪರೀಕ್ಷೆಯಿಂದ, $x = \frac{15}{2}$ ಸ್ಥಳೀಯ ಕನಿಷ್ಠ ಬೆಲೆಯ ಬಿಂದುವಾಗಿರುತ್ತದೆ. ಆದ್ದರಿಂದ ಸಂಖ್ಯೆಗಳು, $\frac{15}{2}$ ಮತ್ತು $15 - \frac{15}{2} = \frac{15}{2}$ ಆದಾಗ, ವರ್ಗಗಳ ಮೊತ್ತವು ಕನಿಷ್ಠವಾಗಿರುತ್ತದೆ

20) **A ಮತ್ತು B ಬಿಂದುಗಳಲ್ಲಿ, AP ಮತ್ತು BQ, ಎರಡು ಲಂಬ ಕಂಬಗಳಿದ್ದು, AP = 16ಮೀ, BQ = 22ಮೀ, ಮತ್ತು AB = 20ಮೀ R ಎಂಬುದು AB ಮೇಲಿನ ಒಂದು ಬಿಂದು. $RP^2 + RQ^2$ ಬೆಲೆಯು ಕನಿಷ್ಠವಾಗಬೇಕಾದರೆ, R ಬಿಂದುವಿನಿಂದ A ಬಿಂದುವಿಗೆ ಇರಬೇಕಾದ ದೂರವನ್ನು ಕಂಡುಹಿಡಿಯಿರಿ**

ಉತ್ತರ:– R ಎಂಬುದು ABಯ ಮೇಲಿನ ಬಿಂದು ಮತ್ತು



$AR = x$ ಆಗಿರಲಿ. ಆದ್ದರಿಂದ $RB = (20 - x)$.

$RP^2 = AR^2 + AP^2$ ಮತ್ತು $RQ^2 = RB^2 + BQ^2$

ಆದ್ದರಿಂದ $RP^2 + RQ^2 = AR^2 + AP^2 + RB^2 + BQ^2$

$= x^2 + (16)^2 + (20 - x)^2 + (22)^2$

$= 2x^2 - 40x + 1140$

∴$S'(x) = 4x - 40 = -$ ಮತ್ತು $S''(x) = 4$

ಈಗ $S'(x) = 0 = -$ ಆದಾಗ $x = 10$ ಮತ್ತು $S'(10) = 4 > 0$

ಆದ್ದರಿಂದ ಎರಡನೆಯ ನಿಶ್ಪನ್ನದ ಪರೀಕ್ಷೆಯಿಂದ, $x = 10$ ಎಂಬುದು S ನ ಸ್ಥಳೀಯ ಕನಿಷ್ಠ ಬೆಲೆಯ ಬಿಂದು. ಆದ್ದರಿಂದ R ನಿಂದ A ಗೆ ಕನಿಷ್ಠ ದೂರವು $AR = x = 10$ಮೀ.

21) ಒಂದು ಅಪಾಚೆ ಹೆಲಿಕಾಪ್ಟರ್ ಹಾರುತ್ತಿರುವ ವಕ್ರ ರೇಖೆಯ ಸಮೀಕರಣವು $y = x^2 + 7$. (3, 7) ಬಿಂದುವಿನಲ್ಲಿ ಇರುವ ಒಬ್ಬ ಸಿಪಾಯಿಯು, ಹೆಲಿಕಾಪ್ಟರ್ ತನ್ನಿಂದ ಅತ್ಯಂತ ಹತ್ತಿರದಲ್ಲಿದ್ದಾಗ ಶೂಟ್ ಮಾಡಲು ಬಯಸುತ್ತಾನೆ. ಆ ಕನಿಷ್ಠ ದೂರವನ್ನು ಕಂಡುಹಿಡಿಯಿರಿ.

ಉತ್ತರ:– x ನ ಪ್ರತಿಯೊಂದು ಬೆಲೆಗೆ, ಹೆಲಿಕಾಪ್ಟರ್ ಇರುವ ಬಿಂದುವು $(x, x^2 + 7)$ ಆಗಿರುತ್ತದೆ. ಆದ್ದರಿಂದ ಸಿಪಾಯಿ ಹಾಗೂ ಹೆಲಿಕಾಪ್ಟರ್ ನಡುವೆ ಇರುವ ದೂರವು

$$\sqrt{(x-3)^2 + (x^2+7-7)^2} = \sqrt{(x-3)^2 + x^4}$$

$f'(x) = (x-3)^2 + x^4$ ಆಗಿರಲಿ

ಅಥವಾ

$$f'(x) = 2(x-3) + 4x^3 = 2(x-1)(2x^2 + 2x + 3)$$

ಆದ್ದರಿಂದ

$f'(x) = 0$ ಆದಾಗ $x = 1$. ಏಕೆಂದರೆ $2x^2 + 2x + 3 = 0$ ಸಮೀಕರಣಕ್ಕೆ ವಾಸ್ತವ ಮೂಲಗಳಿರುವುದಿಲ್ಲ, ಹಾಗೂ ಅಂತರಾಳದ ಯಾವುದೇ ತುದಿ ಬಿಂದುಗಳಿರುವುದಿಲ್ಲ. ಆದ್ದರಿಂದ $x = 1$, ಏಕಮಾತ್ರ ನಿರ್ಣಾಯಕ ಬಿಂದು.

ಈ ಬಿಂದುವಿನಲ್ಲಿ $f(1) = (1-3)^2 + (1)^4 = 5$. ಆದ್ದರಿಂದ ಸಿಪಾಯಿ ಹಾಗೂ ಹೆಲಿಕಾಪ್ಟರ್ ನಡುವಿನ ದೂರವು $\sqrt{f(1)} = \sqrt{5}$

$\sqrt{5}$ ಗರಿಷ್ಠ ಅಥವಾ ಕನಿಷ್ಠ ಬೆಲೆ ಆಗಬಹುದು. ಆದರೆ

$$\sqrt{f(0)} = \sqrt{(0-3)^2 + 0^4} = 3 \rangle \sqrt{5}$$

ಆದ್ದರಿಂದ $\sqrt{5}$, $\sqrt{fx}$ ಕನಿಷ್ಠ ದೂರವಾಗಿರುತ್ತದೆ. ಆದ್ದರಿಂದ ಸಿಪಾಯಿ ಮತ್ತು ಹೆಲಿಕಾಪ್ಟರ್ ನಡುವಿನ ಕನಿಷ್ಠ ದೂರವು $\sqrt{5}$.

ಸಹಕಾರ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ, ಬೆಂಗಳೂರು

ಪ್ರಜಾವಾಣಿ ನೋಡಿಯೊ — ದ್ವಿತೀಯ ಪಿಯುಸಿ ಗಣಿತಶಾಸ್ತ್ರದ ಆಂಗ್ಲ ಭಾಷೆಯ ಮಾದರಿ ಪ್ರಶ್ನೋತ್ತರಕ್ಕಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಎಸ್ಸೆಸ್ಸೆಲ್ಸಿ ಪರೀಕ್ಷೆ ದಿಕ್ಸೂಚಿ

ಅಧ್ಯಾಯ 13: ಸಂಖ್ಯಾಶಾಸ್ತ್ರ

ಗಣಿತಶಾಸ್ತ್ರ

ಪ್ರಮುಖಾಂಶಗಳು

- ವರ್ಗೀಕೃತ ದತ್ತಾಂಶಗಳ ಸರಾಸರಿ: $\bar{x} = \frac{\sum f_i x_i}{\sum f_i}$
- ಪ್ರತಿ ವರ್ಗಾಂತರಕ್ಕೆ ಆವೃತ್ತಿಗಳನ್ನು ಹಂಚುವಾಗ ದತ್ತಾಂಶಗಳು ಯಾವುದೇ ವರ್ಗಾಂತರದ ಮೇಲ್ಮಿತಿಯಾಗಿದ್ದರೆ ಅದನ್ನು ಮುಂದಿನ ವರ್ಗಾಂತರಕ್ಕೆ ಪರಿಗಣಿಸಬೇಕಾಗುತ್ತದೆ.
- ಬಹುಲಕ $= l + \left[\frac{f_i - f_0}{2f_i - f_0 - f_2}\right] X h$
- ವರ್ಗೀಕೃತ ದತ್ತಾಂಶಗಳ ಮಧ್ಯಾಂಕ $= l + \left[\frac{\frac{n}{2} - cf}{f}\right] X h$
- ಕೇಂದ್ರೀಯ ಪ್ರವೃತ್ತಿಗಳ ಮೂರು ಅಳತೆಗಳ ನಡುವೆ ಇರುವ ಪ್ರಯೋಗಿಕ ಸಂಬಂಧ: 3 ಮಧ್ಯಾಂಕ = ಬಹುಲಕ + 2 ಸರಾಸರಿ

ಪ್ರಶ್ನೋತ್ತರಗಳು

1. ಒಂದು ಪ್ರದೇಶದ 25 ಕುಟುಂಬಗಳ ಪ್ರತಿನಿತ್ಯದ ಆಹಾರದ ವೆಚ್ಚವನ್ನು ಈ ಕೆಳಗಿನ ಕೋಷ್ಟಕವು ತೋರಿಸುತ್ತದೆ.

ದಿನನಿತ್ಯದ ವೆಚ್ಚ (ರೂ.ಗಳಲ್ಲಿ)	100–150	150–200	200–250	250–300	300–350
ಕುಟುಂಬಗಳ ಸಂಖ್ಯೆ	4	5	12	2	2

ನೇರ ವಿಧಾನದಿಂದ ಪ್ರತಿನಿತ್ಯದ ಆಹಾರದ ವೆಚ್ಚದ ಸರಾಸರಿಯನ್ನು ಕಂಡುಹಿಡಿಯಿರಿ.

ಪರಿಹಾರ:

CI	f_i	x_i	$f_i x_i$
100–150	4	125	500
150–200	5	175	875
200–250	12	225	2700
250–300	2	275	550
300–350	2	325	650
Total	$\sum f_i = 25$		$\sum f_i x_i = 5275$

ಸರಾಸರಿ $\bar{x} = \frac{\sum f_i x_i}{\sum f_i} = \frac{5275}{25} = 211$

2. ಈ ಕೆಳಕಂಡ ದತ್ತಾಂಶಗಳ ಬಹುಲಕವನ್ನು ಕಂಡುಹಿಡಿಯಿರಿ.

ವರ್ಗಾಂತರ	1–3	3–5	5–7	7–9	9–11
ಆವೃತ್ತಿ	6	9	2	2	1

ಪರಿಹಾರ: ಬಹುಲಕವಿರುವ ವರ್ಗಾಂತರ: 3–5

ಬಹುಲಕವಿರುವ ವರ್ಗಾಂತರದ ಕೆಳಮಿತಿ : $l=3$

ವರ್ಗಾಂತರದ ಗಾತ್ರ : $h=2$

ಬಹುಲಕವಿರುವ ವರ್ಗಾಂತರದ ಆವೃತ್ತಿ: $f_i = 9$

ಬಹುಲಕವಿರುವ ವರ್ಗಾಂತರದ ಹಿಂದಿನ ವರ್ಗಾಂತರದ ಆವೃತ್ತಿ: $f_0 = 6$

ಬಹುಲಕವಿರುವ ವರ್ಗಾಂತರದ ಮುಂದಿನ ವರ್ಗಾಂತರದ ಆವೃತ್ತಿ: $f_2 = 2$

$$\text{ಬಹುಲಕ} = l + \left[\frac{f_i - f_0}{2f_i - f_0 - f_2}\right] X h$$

$$= 3 + \left[\frac{9 - 6}{2(9) - 6 - 2}\right]$$


$$= 3 + \left[\frac{3}{18 - 8}\right]$$

$$= 3 + \left[\frac{3}{10}\right] = 3.3$$

3. ಒಬ್ಬ ವಿಮಾ ಪಾಲಿಸಿ ಏಜೆಂಟನು ಪಡೆದ 35 ಪಾಲಿಸಿದಾರರ ವಯಸ್ಸುಗಳ ವಿತರಣೆಯ ದತ್ತಾಂಶಗಳು ಕೆಳಗಿನಂತೆ ಇವೆ. ಈ ದತ್ತಾಂಶಗಳಿಗೆ 'ಕಡಿಮೆ ವಿಧಾನ'ದ ಓಜೀವ್ ರಚಿಸಿ.


ವಯಸ್ಸು (ವರ್ಷಗಳಲ್ಲಿ	20 ಕ್ಕಿಂತ ಕಡಿಮೆ	25 ಕ್ಕಿಂತ ಕಡಿಮೆ	30 ಕ್ಕಿಂತ ಕಡಿಮೆ	35 ಕ್ಕಿಂತ ಕಡಿಮೆ	40 ಕ್ಕಿಂತ ಕಡಿಮೆ	45 ಕ್ಕಿಂತ ಕಡಿಮೆ	50 ಕ್ಕಿಂತ ಕಡಿಮೆ
ಪಾಲಿಸಿದಾರರ ಸಂಖ್ಯೆ	2	6	12	16	20	25	35

ಪರಿಹಾರ:



ಪ್ರಜಾವಾಣಿ ನೋಡಿಯೊ — ಹತ್ತನೇ ತರಗತಿ ಗಣಿತಶಾಸ್ತ್ರದ 'ಸ್ಟ್ಯಾಟಿಸ್ಟಿಕ್ಸ್' ಅಧ್ಯಾಯಕ್ಕಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಶ್ರೀನಿವಾಸ ಡಿ. ಶೆಟ್ಟಿ, ಶಿಕ್ಷಣ ಸಂಯೋಜಕರು, ಬಿಇಒ ಕಚೇರಿ, ಅರಕಲಗೂಡು



❦ ಸುಭಾಷಿತ ❦

ಯಾವ ವ್ಯಕ್ತಿ ತನ್ನ ತಪ್ಪನ್ನು ತಿದ್ದಿಕೊಳ್ಳಲು ತಾನಾಗಿಯೇ ಹೋರಾಟ ಮಾಡುತ್ತಾನೋ, ಅವನನ್ನು ಸೋಲಿಸಲು ಯಾರಿಂದಲೂ ಸಾಧ್ಯವಿಲ್ಲ.

-ಚಾಣಕ್ಯ

ಉಪನಗರ ರೈಲು ಕಾಮಗಾರಿ ವಿಳಂಬ ಧೋರಣೆ ಸಲ್ಲದು

ಬಸ್ ಹಾಗೂ ಮೆಟ್ರೊ ಸೌಕರ್ಯಗಳಿಗೆ ಹೋಲಿಸಿದರೆ, ಅತ್ಯಂತ ಕಡಿಮೆ ಖರ್ಚಿನಲ್ಲಿ ಸಂಪರ್ಕದ ಕೊಂಡಿಯಾಗಬಲ್ಲ ಪರಿಸರಸ್ನೇಹಿ ಹಾಗೂ ಸುಸ್ಥಿರ ಸಾರಿಗೆ ವ್ಯವಸ್ಥೆಯೆಂದರೆ ಅದು ಉಪನಗರ ರೈಲು. ಬೆಂಗಳೂರಿನ ಆಂತರಿಕ ಸಂಚಾರ ವ್ಯವಸ್ಥೆ ಮೇಲಿನ ಒತ್ತಡ ತಗ್ಗಿಸುವುದಕ್ಕೆ ಹಾಗೂ ಸುತ್ತಮುತ್ತಲಿನ ಗ್ರಾಮಾಂತರ ಭಾಗಗಳನ್ನು ಸಂಪರ್ಕಿಸುವುದಕ್ಕೆ ನಗರದಲ್ಲಿ ಈಗಿರುವ ರೈಲು ಸೌಕರ್ಯ ಏನೇನೂ ಸಾಲದು. ಒಟ್ಟು ಸಾರ್ವಜನಿಕ ಸಂಚಾರದಲ್ಲಿ ಶೇಕಡ 2ರಷ್ಟು ಹೊರೆಯನ್ನು ಮಾತ್ರ ಈ ಸೌಕರ್ಯ ನಿಭಾಯಿಸುತ್ತಿದೆ. ನಗರಕ್ಕೆ ಪ್ರತ್ಯೇಕ ಉಪನಗರ ರೈಲು ಯೋಜನೆ ಬೇಕು ಎಂಬುದು ನಾಲ್ಕು ದಶಕಗಳ ಕನಸು. 1983ರಿಂದಲೂ ಈ ಬಗ್ಗೆ ಚರ್ಚೆಯಾಗುತ್ತಲೇ ಇದೆ, ಅದಿನ್ನೂ ಕಾರ್ಯರೂಪಕ್ಕೆ ಬಂದಿಲ್ಲ. ನಗರದ ಜನರ ಬೇಡಿಕೆಗೆ ಮಣಿದ ಕೇಂದ್ರ ಸರ್ಕಾರವು 2019ರ ಬಜೆಟ್‌ನಲ್ಲಿ ಉಪನಗರ ರೈಲು ಯೋಜನೆ ಅನುಷ್ಠಾನದ ಭರವಸೆ ನೀಡಿತು. ₹ 15,767 ಕೋಟಿ ಅಂದಾಜುವೆಚ್ಚದ ಉಪನಗರ ರೈಲು ಯೋಜನೆಗೆ ಕೇಂದ್ರ ಸರ್ಕಾರದ ಆರ್ಥಿಕ ವ್ಯವಹಾರಗಳಿಗೆ ಸಂಬಂಧಿಸಿದ ಸಚಿವ ಸಂಪುಟ ಸಮಿತಿಯು 2020ರ ಅಕ್ಟೋಬರ್‌ನಲ್ಲೇ ಅನುಮೋದನೆ ನೀಡಿದೆ. ಈ ಯೋಜನೆಗೆ ರಾಜ್ಯ ಸರ್ಕಾರವು ಮೊದಲ ಕಂತಿನಲ್ಲಿ ₹ 850 ಕೋಟಿ ಅನುದಾನವನ್ನು 2021–22ನೇ ಸಾಲಿನ ಬಜೆಟ್‌ನಲ್ಲಿ ಒದಗಿಸಿದೆ. ಯೋಜನೆ ಅನುಷ್ಠಾನದ ಹೊಣೆಯನ್ನು ಕರ್ನಾಟಕ ರೈಲ್ವೆ ಮೂಲಸೌಕರ್ಯ ಅಭಿವೃದ್ಧಿ ನಿಗಮಕ್ಕೆ (ಕೆ-ರೈಡ್) ವಹಿಸಲಾಗಿದೆ. ನಾಲ್ಕು ಪ್ರಮುಖ ಕಾರಿಡಾರ್‌ಗಳನ್ನು ಒಳಗೊಂಡ ಒಟ್ಟು 148.17 ಕಿ.ಮೀ. ಉದ್ದದ ರೈಲು ಹಳಿ ಜಾಲ ನಿರ್ಮಿಸುವ ಈ ಯೋಜನೆಯ ಅನುಷ್ಠಾನಕ್ಕೆ ಆರು ವರ್ಷಗಳ ಕಾಲಮಿತಿ ನಿಗದಿ ಮಾಡಲಾಗಿತ್ತು. ಈ ಯೋಜನೆಗೆ ಎದುರಾಗಿದ್ದ ಪ್ರಮುಖ ಆಡಳಿತಾತ್ಮಕ ಅಡೆತಡೆಗಳು ನಿವಾರಣೆಯಾಗಿ ಒಂದೂವರೆ ವರ್ಷ ಕಳೆದಿದೆ. ಆದರೂ ಕಾಮಗಾರಿ ಇನ್ನೂ ಆರಂಭವಾಗಿಲ್ಲ. ‘ಬೈಯಪ್ಪನಹಳ್ಳಿ–ಚಿಕ್ಕಬಾಣಾವರ ಕಾರಿಡಾರ್‌ನ ಸಿವಿಲ್ ಕಾಮಗಾರಿಯ ಟೆಂಡರ್ ಪ್ರಕ್ರಿಯೆ ಶೀಘ್ರವೇ ಪೂರ್ಣಗೊಳ್ಳಲಿದ್ದು, ಮುಂದಿನ ತಿಂಗಳು ಕಾಮಗಾರಿ ಆರಂಭಿಸುತ್ತೇವೆ’ ಎಂದು ಕೆ-ರೈಡ್ ತಿಳಿಸಿದೆ. ಈ ಯೋಜನೆ ವಿಳಂಬವಾದಷ್ಟೂ ಸಮಸ್ಯೆ ಎದುರಿಸುವುದು ನಗರದ ನಿವಾಸಿಗಳು.



ಈ ಯೋಜನೆಯ ಕಾಮಗಾರಿಗಳು ಗಡುವಿನೊಳಗೆ ಅನುಷ್ಠಾನ ಆಗುವಂತೆ ನೋಡಿಕೊಳ್ಳಬೇಕು

ಜಗತ್ತಿನ ಪ್ರಮುಖ ನಗರಗಳ ಸಂಚಾರ ವ್ಯವಸ್ಥೆ ಕುರಿತು ನೆದರ್‌ಲೆಂಡ್ಸ್‌ನ ಸಂಸ್ಥೆಯೊಂದು ಅಧ್ಯಯನ ನಡೆಸಿತ್ತು. ಆ ಅಧ್ಯಯನದ ಪ್ರಕಾರ, ಬೆಂಗಳೂರು ಅತ್ಯಂತ ಕೆಟ್ಟ ಸಂಚಾರ ವ್ಯವಸ್ಥೆ ಇರುವ ನಗರಗಳ ಪಟ್ಟಿಯಲ್ಲಿ ಸೇರಿದೆ. ಇಲ್ಲಿನ ನಿವಾಸಿಗಳು ವಾಹನ ದಟ್ಟಣೆ ಸಮಸ್ಯೆಯಿಂದಾಗಿ ಪ್ರತಿವರ್ಷ ಅಗತ್ಯಕ್ಕಿಂತ ಸರಾಸರಿ 243 ಗಂಟೆಗಳನ್ನು ಹೆಚ್ಚುವರಿಯಾಗಿ ರಸ್ತೆಗಳಲ್ಲಿ ಕಳೆಯುತ್ತಾರೆ ಎಂದು ಅಧ್ಯಯನವು ವಿಶ್ಲೇಷಿಸಿದೆ. ಕೇಂದ್ರ ವಸತಿ ಮತ್ತು ನಗರ ವ್ಯವಹಾರಗಳ ಸಚಿವಾಲಯವು ಬಿಡುಗಡೆ ಮಾಡಿದ್ದ ‘ಸುಲಲಿತ ಜೀವನ ನಿರ್ವಹಣೆ ಸೂಚ್ಯಂಕ–2020’ರಲ್ಲಿ ದೇಶದಲ್ಲೇ ಬೆಂಗಳೂರು ಮೊದಲ ಸ್ಥಾನ ಪಡೆದಿತ್ತು. ಆದರೆ, ಸುರಕ್ಷಿತ ಸಾರ್ವಜನಿಕ ಸಾರಿಗೆ ಕುರಿತ ಸೂಚ್ಯಂಕದಲ್ಲಿ ತೀರಾ ಹಿಂದುಳಿದಿತ್ತು. ಈ ಸೂಚ್ಯಂಕದಲ್ಲಿ ಮೊದಲ ಸ್ಥಾನ ಪಡೆದ ಚೆನ್ನೈ 79.80 ಅಂಕ ಗಳಿಸಿದ್ದರೆ, ಬೆಂಗಳೂರಿಗೆ ಕೇವಲ 48.40 ಅಂಕಗಳು ಬಂದಿದ್ದವು. ಇದು ಬೆಂಗಳೂರಿನಲ್ಲಿ ಸಾರ್ವಜನಿಕ ಸಾರಿಗೆ ವ್ಯವಸ್ಥೆ ಎಂತಹ ಶೋಚನೀಯ ಸ್ಥಿತಿಯಲ್ಲಿದೆ ಎಂಬುದಕ್ಕೆ ಕನ್ನಡಿ ಹಿಡಿಯುತ್ತದೆ.

ನಗರದಲ್ಲಿ ನೋಂದಣಿಯಾಗಿರುವ ವಾಹನಗಳ ಸಂಖ್ಯೆ 80 ಲಕ್ಷ ದಾಟಿದೆ. ಕಳೆದ ಮೂರು ವರ್ಷಗಳಲ್ಲಿ 20 ಲಕ್ಷಕ್ಕೂ ಅಧಿಕ ವಾಹನಗಳು ನೋಂದಣಿಯಾಗಿವೆ. ಇದರಿಂದ ಸಂಚಾರ ದಟ್ಟಣೆ ಮೇಲೆ ಮತ್ತಷ್ಟು ಒತ್ತಡ ಸೃಷ್ಟಿಯಾಗಿರುವುದು ಒಂದೆಡೆಯಾದರೆ ಪರಿಸರ ಮಾಲಿನ್ಯ ಹೆಚ್ಚಳಕ್ಕೂ ಇದು ಕಾರಣವಾಗುತ್ತಿದೆ. ಸಾರ್ವಜನಿಕ ಸಾರಿಗೆ ಬಲಪಡಿಸದೇ ಇರುವ ಕಾರಣಕ್ಕಾಗಿಯೇ ಬೆಂಗಳೂರಿನಲ್ಲಿ ಖಾಸಗಿ ವಾಹನಗಳ ಮೇಲಿನ ಅವಲಂಬನೆ ಹೆಚ್ಚುತ್ತಿದೆ. ಸಂಚಾರ ದಟ್ಟಣೆ ಸಮಸ್ಯೆಯಿಂದ ಮುಕ್ತಿ ಪಡೆಯಲು ಸಾರ್ವಜನಿಕ ಸಾರಿಗೆ ವ್ಯವಸ್ಥೆಯನ್ನು ಬಲಪಡಿಸುವುದೊಂದೇ ಮಾರ್ಗ. ನಗರದಲ್ಲಿರುವ ವಾಹನಗಳಲ್ಲಿ ಶೇ 60ರಷ್ಟು ದ್ವಿಚಕ್ರವಾಹನಗಳು. ಬಡವರು ಹಾಗೂ ಮಧ್ಯಮ ವರ್ಗದ ಜನರೇ ದ್ವಿಚಕ್ರ ವಾಹನವನ್ನು ಹೆಚ್ಚಾಗಿ ನೆಚ್ಚಿಕೊಂಡಿರುತ್ತಾರೆ. ಜನರಿಗೆ ಕೈಗೆಟಕುವ ಬೆಲೆಯಲ್ಲಿ ಪ್ರಯಾಣ ಮಾಡಲು ಸಾಧ್ಯವಾಗುವಂತಹ ಸಾರಿಗೆ ವ್ಯವಸ್ಥೆಯನ್ನು ನಗರದಲ್ಲಿ ರೂಪಿಸಬೇಕಾಗಿದೆ. ಈ ಉದ್ದೇಶ ಈಡೇರಿಸುವುದಕ್ಕೆ ಉಪನಗರ ರೈಲು ವ್ಯವಸ್ಥೆಯಷ್ಟು ಸೂಕ್ತವಾದ ಸೌಕರ್ಯ ಬೇರೊಂದಿಲ್ಲ. ಸಂಚಾರ ದಟ್ಟಣೆಯಲ್ಲಿ ಸಿಲುಕಿ ಹೈರಾಣಾಗಿರುವ ನಗರ ನಿವಾಸಿಗಳ ಬದುಕನ್ನು ಇದು ತಕ್ಕಮಟ್ಟಿಗೆ ಸಹನೀಯಗೊಳಿಸಬಲ್ಲುದು. ಕೆ-ರೈಡ್ ಸಂಸ್ಥೆಯು ಇನ್ನಾದರೂ ಎಚ್ಚೆತ್ತು ಉಪನಗರ ರೈಲು ಯೋಜನೆಯ ಕಾಮಗಾರಿಗಳು ಗಡುವಿನೊಳಗೆ ಅನುಷ್ಠಾನ ಆಗುವಂತೆ ನೋಡಿಕೊಳ್ಳಬೇಕು. ರಾಜ್ಯ ಸರ್ಕಾರವೂ ಈ ಯೋಜನೆಯ ಅನುಷ್ಠಾನಕ್ಕೆ ಅಗತ್ಯವಾದ ನೆರವನ್ನು ಒದಗಿಸುವುದರ ಜೊತೆಗೆ ಕಾಮಗಾರಿ ಚುರುಕುಗೊಳಿಸುವುದಕ್ಕೆ ಅಗತ್ಯ ಕ್ರಮ ಕೈಗೊಳ್ಳಬೇಕು.

ದಿನದ ಟ್ವೀಟ್


ಆಚರಣೆಯ ರೀತಿ ತರವೇ?



ಮಹಿಳಾ ದಿನಾಚರಣೆಯು ಹೆಚ್ಚಿನವರಿಗೆ ಫ್ರೆಂಡ್‌ಶಿಪ್ ಡೇ, ವ್ಯಾಲೆಂಟೈನ್ಸ್ ಡೇ ರೀತಿಯಲ್ಲೇ ಒಂದು ಸಂಭ್ರಮಾಚರಣೆಯ ದಿನವಷ್ಟೇ... ಕಾರ್ಪೊರೇಟ್ ಸಂಸ್ಥೆಗಳಲ್ಲಿ ಸಹ ಕಾರ್ಯನಿರತ ಸ್ಥಳಗಳಲ್ಲಿ ಮಹಿಳೆಯರು ಎದುರಿಸುತ್ತಿರುವ ಸಮಸ್ಯೆಗಳಿಗೆ ಒತ್ತು ನೀಡುವ ಬದಲು, ಅದನ್ನು ಸಂಭ್ರಮದ ದಿನವನ್ನಾಗಿ ಆಚರಿಸುತ್ತಾರೆ.

ಸಂತೋಷ್ ಕುಮಾರ್, ಐ.ಟಿ. ಉದ್ಯೋಗಿ

ಕಿಡಿನುಡಿ



ಶ್ರೀಪೆರಂಬದೂರಿನಲ್ಲಿ 1991ರಲ್ಲಿ ರಾಜೀವ್ ಗಾಂಧಿ ಮತ್ತು 18 ಪೊಲೀಸ್ ಸಿಬ್ಬಂದಿಯ ಹತ್ಯೆಗೆ ಕಾರಣರಾದ ಹಂತಕರ ತಂಡದ ಸದಸ್ಯನನ್ನು– ಅಪರಾಧಿಯ ಮನವಿಯನ್ನು ಆಲಿಸಲು ಮದ್ರಾಸ್ ಹೈಕೋರ್ಟ್ ನಿರಾಕರಿಸಿದ ನಂತರವೂ– ಸುಪ್ರೀಂ ಕೋರ್ಟ್ ಜಾಮೀನಿನ ಮೇಲೆ ಬಿಡುಗಡೆ ಮಾಡಿದೆ. ಮೋದಿ ನೇತೃತ್ವದ ಸರ್ಕಾರದ ಪರವಾಗಿ ಹಾಜರಿದ್ದ ಎಎಸ್‌ಜಿ ಅವರಿಂದ ಅಟಾರ್ನಿ ಜನರಲ್ ವೇಣುಗೋಪಾಲ್ ಅವರು ವಿವರಣೆ ಕೇಳಬೇಕು. ಒಂದುವೇಳೆ ಅವರು ಹಾಜರಾಗದಿದ್ದರೆ ಕೂಡಲೇ ಅವರನ್ನು ವಜಾ ಮಾಡಬೇಕು.

ಸುಬ್ರಮಣಿಯನ್ ಸ್ವಾಮಿ, ರಾಜ್ಯಸಭಾ ಸದಸ್ಯ, ಬಿಜೆಪಿ ಮುಖಂಡ

25 ವರ್ಷಗಳ ಹಿಂದೆ

ಸೋಮವಾರ, 10-3-1997

• ಬಿಜೆಪಿ ನಿರ್ಣಯ ಸೋಲಿಗೆ ಪ್ರಧಾನಿ– ಗುಪ್ತಾ ಚರ್ಚೆ

ನವದೆಹಲಿ, ಮಾ. 9 (ಪಿಟಿಐ)– ಉತ್ತರ ಪ್ರದೇಶ ರಾಜ್ಯಪಾಲ ರೊಮೇಶ್ ಭಂಡಾರಿ ಅವರನ್ನು ವಾಪಸ್ ಕರೆಸಿಕೊಳ್ಳಬೇಕೆಂಬ ಬಿಜೆಪಿ ನಿರ್ಣಯವನ್ನು ಎದುರಿಸಲು ಸಂಯುಕ್ತ ರಂಗ ಸರ್ಕಾರದ ಕಾರ್ಯತಂತ್ರ ಕುರಿತು ಪ್ರಧಾನಿ ಎಚ್.ಡಿ. ದೇವೇಗೌಡ ಮತ್ತು ಗೃಹ ಸಚಿವ ಇಂದ್ರಜಿತ್ ಗುಪ್ತಾ ಅವರ ಮಧ್ಯೆ ನಡೆದ ಉನ್ನತ ಮಟ್ಟದ ಸಭೆಯಲ್ಲಿ ಇಂದು ಪುನರ್ವಿಮರ್ಶಿಸಲಾಯಿತು.

ನಿರ್ಣಯದ ಸೋಲಿಗೆ ಉನ್ನತ ಆದ್ಯತೆ ನೀಡಬೇಕು ಎಂದು ಈ ಸಭೆಯಲ್ಲಿ ನಿರ್ಧರಿಸಲಾಯಿತು ಎಂದು ತಿಳಿದುಬಂದಿದೆ.

ಚುರುಕಿನ ರಾಜಕೀಯ ಚಟುವಟಿಕೆಗಳ ದಿನವಾದ ಇಂದು ವಿವಾದಾತ್ಮಕ ರಾಜ್ಯಪಾಲ ಭಂಡಾರಿ ಅವರೂ ದೇವೇಗೌಡ ಮತ್ತು ಗುಪ್ತಾ ಅವರನ್ನು ಪ್ರತ್ಯೇಕವಾಗಿ ಭೇಟಿಯಾಗಿದ್ದರು.

• ಭಾರತ– ಪಾಕ್ ಸಂಬಂಧ ಸುಧಾರಣೆ ನಿರೀಕ್ಷೆ

ನವದೆಹಲಿ, ಮಾ. 9 (ಪಿಟಿಐ)– ಕಳೆದ ಕೆಲವು ವರ್ಷಗಳಿಂದ ನನೆಗುದಿಗೆ ಬಿದ್ದಿದ್ದ ದ್ವಿಪಕ್ಷೀಯ ಮಾತುಕತೆಗಳನ್ನು ಮುಂದುವರಿಸಲು ಭಾರತ ಹಾಗೂ ಪಾಕಿಸ್ತಾನ ಒಪ್ಪಿಕೊಂಡಿರುವುದಕ್ಕೆ ಉಭಯ ರಾಷ್ಟ್ರಗಳಲ್ಲಿ ವ್ಯಾಪಕ ಸ್ವಾಗತ ವ್ಯಕ್ತವಾಗಿದೆ.

ಭಿನ್ನಾಭಿಪ್ರಾಯಗಳನ್ನು ಬಗೆಹರಿಸಿಕೊಂಡು ಪರಸ್ಪರ ಸೌಹಾರ್ದಯುತ ಸಂಬಂಧವನ್ನು ರೂಪುಗೊಳಿಸುವಲ್ಲಿ ಮಾತುಕತೆ ಸಹಕಾರಿಯಾಗಲಿದೆ ಎಂಬ ವಿಶ್ವಾಸ ಉಭಯ ದೇಶಗಳಲ್ಲಿ ಮೂಡಿದೆ.

50 ವರ್ಷಗಳ ಹಿಂದೆ

ಶುಕ್ರವಾರ, 10-3-1972

• ರಾಜ್ಯ ವಿಧಾನಸಭೆ ಚುನಾವಣೆ ಅಂತ್ಯ: ಫಲಿತಾಂಶಕ್ಕೆ ಎಲ್ಲೆಡೆ ಕಾತರ

ಬೆಂಗಳೂರು, ಮಾ. 9– ನೂರ ಒಂಬತ್ತು ಕ್ಷೇತ್ರಗಳಲ್ಲಿ ಇಂದು ನಡೆದ ಶಾಂತ ಹಾಗೂ ಬಿರುಸಿನ, ಎರಡನೇ ಸುತ್ತಿನ ಮತದಾನದೊಂದಿಗೆ ರಾಜ್ಯದಲ್ಲಿ 216 ಮಂದಿ ವಿಧಾನಸಭಾ ಸದಸ್ಯರನ್ನು ಆಯ್ಕೆ ಮಾಡುವ ಮತದಾರರ ಕರ್ತವ್ಯ ಮುಕ್ತಾಯಗೊಂಡಿತು.

ಮಾರ್ಚ್ 5ರಂದು 102 ಕ್ಷೇತ್ರಗಳಲ್ಲಿ ನಡೆದಂತೆ ಇಂದೂ ಬಹುತೇಕ ಕ್ಷೇತ್ರಗಳಲ್ಲಿ ಶೇಕಡ 50ರಿಂದ 60ರಷ್ಟು ಮತದಾನ ನಡೆದಿದೆ. ಕೆಲವು ಕ್ಷೇತ್ರಗಳಲ್ಲಿ ಶೇಕಡ 70ರಷ್ಟು ಮತಗಳು ಬಿದ್ದಿರುವ ವರದಿಗಳೂ ಇವೆ. ಕಣದಲ್ಲಿರುವ 820 ಮಂದಿ ಅಭ್ಯರ್ಥಿಗಳಿಗೆ ಇನ್ನೂ ಎರಡು ದಿನಗಳ ಕಾತರ. ಮಾರ್ಚ್ 11ರಂದು ಬೆಳಿಗ್ಗೆ ಮತಗಳ ಎಣಿಕೆ ಆರಂಭವಾಗುವುದು. ಪ್ರಾಯಶಃ ಮಧ್ಯ ರಾತ್ರಿಯೊಳಗೆ ಬಹುತೇಕ ಕ್ಷೇತ್ರಗಳ ಫಲಿತಾಂಶ ಹೊರಬೀಳುವ ನಿರೀಕ್ಷೆ ಇದೆ.

ಉಕ್ರೇನಿನ ಪರಮಾಣು ಸ್ಥಾವರ ಕೂದಲೆಳೆಯಲ್ಲಿ ಬಚಾವಾದ ಕಥನ

ಸರ್ಜಿಕಲ್ ದಾಳಿಯ ದುಸ್ಸಾಹಸ



ವಿಜ್ಞಾನ ವಿಶೇಷ

ನಾಗೇಶ ಹೆಗಡೆ

ಪ್ರಶ್ನೆ: ಮನುಷ್ಯನಿಂದಾಗಿ ಈ ಭೂಮಿಗೆ ಬರಬಹುದಾದ ಅತ್ಯಂತ ಭೀಕರ ದುರಂತ ಯಾವುದಾಗಬಹುದು?

ಉತ್ತರ: ಅತಿ ದೊಡ್ಡ ಪರಮಾಣು ಸ್ಥಾವರದ ಮೇಲೆ ಮೆಗಾಟನ್ ಸಾಮರ್ಥ್ಯದ ಪರಮಾಣು ಬಾಂಬ್ ಬೀಳುವುದು.

ಅಂಥ ದುರಂತ ಆಗಲಾರದೆಂಬ ವಿಶ್ವಾಸ ನಮಗಿದೆ ಅನ್ನಿ. ಆದರೂ ಕಳೆದ ವಾರ ರಷ್ಯಾದ ಬಾಂಬರ್ ವಿಮಾನವೊಂದು ಉಕ್ರೇನ್‌ನ (ಯುರೋಪ್‌ನ) ಅತಿ ದೊಡ್ಡ ಪರಮಾಣು ಸ್ಥಾವರದ ಮೇಲೆ ಶೆಲ್ ದಾಳಿ ನಡೆಸಿತು. ಸ್ಥಾವರದ ಮೇಲೆ ನೇರವಾಗಿ ಶೆಲ್ ಬಿದ್ದಿಲ್ಲ. ಅಲ್ಲಿಂದ 300 ಮೀಟರ್ ದೂರದ ತರಬೇತಿ ಕೇಂದ್ರದ ಮೇಲೆ ಬಿದ್ದು ಸ್ಫೋಟಗೊಂಡು ಬೆಂಕಿ ಹೊತ್ತಿಕೊಂಡಿತು. ಅಗ್ನಿಶಾಮಕ ದಳ ಅದರ ಸಮೀಪ ಕೂಡ ಹೋಗದಂತೆ ಸುತ್ತೆಲ್ಲ ಬೆಂಕಿ ಬಾಣಗಳ ಸುರಿಮಳೆ ಆಗತೊಡಗಿತ್ತು. ‘ದೇವರು ದೊಡ್ಡವನು! ನಿನ್ನೆ ರಾತ್ರಿ ಮಹಾ ಪರಮಾಣು ದುರಂತವೊಂದರಿಂದ ಭೂಮಿ ಬಚಾವಾಯಿತು’ ಎಂದು ವಿಶ್ವಸಂಸ್ಥೆಯ ಅಮೆರಿಕನ್ ರಾಯಭಾರಿ ನಿಟ್ಟುಸಿರೆಳೆದರು. ‘ನಾನು ನಿಜಕ್ಕೂ ಕಂಗಾಲಾದೆ’ ಎಂದು ಬ್ರಿಟನ್ನಿನ ಶೆಫೀಲ್ಡ್ ವಿಶ್ವವಿದ್ಯಾಲಯದ ಪರಮಾಣು ದ್ರವ್ಯತಜ್ಞರೊಬ್ಬರು ಉದ್ಗರಿಸಿದ್ದನ್ನು ಬಿಬಿಸಿ ವರದಿ ಮಾಡಿತು. ‘ಪರಮಾಣು ಸ್ಥಾವರವೇನಾದರೂ ಸ್ಫೋಟಗೊಂಡಿದ್ದರೆ ಅದು ಚೆರ್ನೊಬಿಲ್‌ಗಿಂತ ಹತ್ತು ಪಟ್ಟು ಭೀಕರ ದುರಂತ ಆಗಬಹುದಿತ್ತು’ ಎಂದರು, ಉಕ್ರೇನಿನ ವಿದೇಶಾಂಗ ಸಚಿವ ಡಿಮಿತ್ರಿ ಕುಲೇಬಾ.

ಶೆಲ್ ದಾಳಿಯ ಆ ಸುದ್ದಿಯಿಂದ ಹೊಮ್ಮಿದ ಆಘಾತದ ಅಲೆಗಳು ಪ್ರಪಂಚದ ಎಲ್ಲ ಪರಮಾಣು ತಜ್ಞರನ್ನು, ಚಿಂತಕರನ್ನು ಕಂಗೆಡಿಸಿದವು. ಎಲ್ಲ ದೇಶಗಳ ಪರಮಾಣು ಸ್ಥಾವರಗಳ ಮೇಲೆ ಕಣ್ಣಿಟ್ಟಿರುವ ‘ಅಂತಾರಾಷ್ಟ್ರೀಯ ಪರಮಾಣು ಶಕ್ತಿ ನಿಗಮ’ ಯುರೋಪಿನ ತನ್ನೆಲ್ಲ ತುರ್ತು ವೀಕ್ಷಣಾ ಕೇಂದ್ರಗಳಿಗೆ ಕಟ್ಟೆಚ್ಚರದ ಆದೇಶ ನೀಡಿತು. ಪರಮಾಣು ಸ್ಥಾವರಗಳ ಮೇಲೆ ದಾಳಿ ಮಾಡಿದರೆ ಏನೆಲ್ಲ ಭೀಕರ ಪರಿಣಾಮ ಆದೀತೆಂದು ರಷ್ಯಾಕ್ಕೆ ಸಂದೇಶ ಕಳಿಸಿ, ದಾಳಿ ನಿಲ್ಲಿಸುವಂತೆ ಕೋರಿತು.

ಪರಮಾಣು ಸ್ಥಾವರಗಳನ್ನು ತುಂಬ ಭದ್ರವಾಗಿ ಕಟ್ಟಿರುತ್ತಾರೆ. ಸಾಮಾನ್ಯ ಶೆಲ್ ದಾಳಿಗೆ ಅವು ಸುಲಭಕ್ಕೆ ಕುಸಿಯುವುದಿಲ್ಲ (ನಮ್ಮ ಕೈಗಾದಲ್ಲಿ ನಿರ್ಮಾಣ ಹಂತದಲ್ಲೇ ಗುಮ್ಮಟದ ಒಳಭಾಗದ ಕಾಂಕ್ರೀಟ್ ಕವಚ ಕುಸಿದು ಬಿದ್ದಿತ್ತು, ಆ ಮಾತು ಬೇರೆ). ಅದರಲ್ಲೂ ಈಗ ದಾಳಿಗೊಳಗಾದ ಉಕ್ರೇನಿನ ಝಪೊರೀಝಿಯಾ ಪರಮಾಣು ಸ್ಥಾವರ ಯುರೋಪ್ ಖಂಡದ ಅತಿ ದೊಡ್ಡ ಪರಮಾಣು ಸಂಕೀರ್ಣ ಎನ್ನಿಸಿದ್ದು ಅದರಲ್ಲಿನ ಆರೂ ಘಟಕಗಳು (ಒಂದೊಂದೂ 950 ಮೆಗಾವಾಟ್ ವಿದ್ಯುತ್ ಉತ್ಪಾದಿಸುವ ಘಟಕ) ಸಾಕಷ್ಟು ಗಟ್ಟಿಮುಟ್ಟಾಗಿವೆ ಎಂದು ಹೇಳಲಾಗಿದೆ. ವಿಮಾನವೇ ಬಂದಪ್ಪಳಿಸಿದರೂ ಜಪ್ಪೆನ್ನದ ಉಕ್ಕಿನ ಬಿಗಿಬಲದ ಕಾಂಕ್ರೀಟ್ ಸೂರು ಅವಕ್ಕಿದೆ. ಅದರ ಕೆಳಗಿನ ಕುಲುಮೆಯಂತೂ 20 ಸೆಂಟಿಮೀಟರ್ ದಪ್ಪದ ಉಕ್ಕಿನ ಕವಚದ ಗರ್ಭಗುಡಿ. ಅದರೊಳಗಿನ ಅಗ್ನಿಯೇ ನಿಯಂತ್ರಣ ತಪ್ಪಿ ಸಿಡಿದರೆ ಮಾತ್ರ ಅದು ಮತ್ತೊಂದು ಚೆರ್ನೊಬಿಲ್.

ಆದರೆ ಸಾಮಾನ್ಯ ಶೆಲ್ ದಾಳಿಯಿಂದ ಆ ಗರ್ಭಗುಡಿಯೂ ಒಳಗಿಂದಲೇ ಸ್ಫೋಟಿಸುವ ಸಾಧ್ಯತೆ ಇತ್ತು. ಹೇಗೆ ಗೊತ್ತೆ? ದಾಳಿಯ ಮುನ್ಸೂಚನೆ ಸಿಕ್ಕಾಕ್ಷಣ ಐದು ರಿಯಾಕ್ಟರ್‌ಗಳನ್ನು ಉಕ್ರೇನಿ ಪರಮಾಣು ಸುರಕ್ಷಾ ಅಧಿಕಾರಿಗಳು ಸ್ವಿಚಾಫ್ ಮಾಡಿದ್ದರು. ಸ್ವಿಚಾಫ್ ಎಂದರೆ ಸ್ಟವ್ ಆರಿಸಿದ ಹಾಗಲ್ಲ. ಅದರ ಕಾವು ತಂಪಾಗಲು ಕನಿಷ್ಠ 30 ಗಂಟೆ ಬೇಕು. ಆ ಅವಧಿಯಲ್ಲಿ ಹೊರಗಿನಿಂದ ನಿರಂತರ ವಿದ್ಯುತ್ ಪೂರೈಕೆ ಆಗುತ್ತಿರಲೇಬೇಕು. ಆಗಮಾತ್ರ ಒಳಗಿನ ನಿಗಿನಿಗಿ ಯುರೇನಿಯಂ ಸೌದೆಗಳನ್ನು ಮೆಲ್ಲಗೆ ಹಿಂದಕ್ಕೆಳೆದು, ಜ್ವಾಲೆಯನ್ನು ನಿಯಂತ್ರಿಸಿ ತಂಪು ಮಾಡಲು ಸಾಧ್ಯ. ಆ ಅವಧಿಯಲ್ಲಿ ವಿದ್ಯುತ್ ಪೂರೈಕೆ ಸ್ಥಗಿತಗೊಂಡರೆ ಒಳಗಿನ ಜ್ವಾಲೆ ಅನಿಯಂತ್ರಿತವಾಗಿ ಉರಿಯುತ್ತ ಹೋಗುತ್ತದೆ. ಜಪಾನಿನ ಫುಕುಶಿಮಾದಲ್ಲಿ 2011ರಲ್ಲಿ ಸುನಾಮಿಯಿಂದಾಗಿ ಹಾಗೇ ಆಗಿತ್ತು. ಇಲ್ಲಿ, ಶೆಲ್ ದಾಳಿಯಿಂದಾಗಿ ಕರೆಂಟ್ ಹೋಗಿದ್ದಿದ್ದರೆ ಐದೂ ಘಟಕಗಳು ಒಳಗಿನಿಂದಲೇ ಸ್ಫೋಟಗೊಳ್ಳುವ ಸಾಧ್ಯತೆಯಿತ್ತು.

ಶೆಲ್ ದಾಳಿಯಿಂದಾಗಿ ಇನ್ನೊಂದು ರೀತಿಯಿಂದ ಚೆರ್ನೊಬಿಲ್ ಮಾದರಿಯ ಅವಘಡ ಸಾಧ್ಯವಿತ್ತು. ಹೇಗೆಂದರೆ, ಬಾಂಬರ್ ವಿಮಾನದ ಪೈಲಟ್ ತುಂಬ ನಾಜೂಕಾಗಿ ಬೇಕಂತಲೇ ಪರಮಾಣು ಕುಲುಮೆಯಿಂದ ತುಸು ದೂರ ಶೆಲ್ ಬೀಳಿಸಿದ ಎಂತಲೇ ಇಟ್ಟುಕೊಳ್ಳೋಣ. ಜಗತ್ತಿನ ಎಲ್ಲ ಸ್ಥಾವರಗಳ ಸಮೀಪದಲ್ಲೂ ಈಜುಗೊಳದಂಥ ತೊಟ್ಟಿಗಳಲ್ಲಿ ಪರಮಾಣು ತ್ಯಾಜ್ಯಗಳನ್ನು ತಂಪುಗೊಳಿಸಲೆಂದು ಆಸಿಡ್‌ನಲ್ಲಿ ಮುಳುಗಿಸಿ ಇಟ್ಟಿರುತ್ತಾರೆ. ಅವೆಲ್ಲವೂ ಪ್ರಖರ ವಿಕಿರಣವನ್ನು ಬೀರುತ್ತಿರುವ ಯುರೇನಿಯಂ ಮತ್ತು ಪ್ಲುಟೋನಿಯಂ ಇಂಧನ ಸರಳುಗಳು. ಅಂದು ಬಿಬಿಸಿ ಬಿತ್ತರಿಸಿದ ವಿಡಿಯೊ ಮತ್ತು ಉಪಗ್ರಹ ನಕ್ಷೆಗಳಲ್ಲಿ ಅಂಥ ತೊಟ್ಟಿಗಳಿರುವ ತಾಣ ಕಾಣುತ್ತಿದೆ. ರಷ್ಯಾದ ಯೋಧರು ಬೀಳಿಸಿದ ಶೆಲ್ ತನ್ನ ಗುರಿಗಿಂತ ತುಸುವೇ ಆಚೀಚೆ ಅಪ್ಪಳಿಸಿ ತೊಟ್ಟಿಯ ದ್ರವ್ಯಗಳನ್ನು ಸಿಡಿಸಿದ್ದರೂ ತುರ್ತಾಗಿ ಇಡೀ ಸಂಕೀರ್ಣವನ್ನು ಮತ್ತು ಪಕ್ಕದ ನೀಪಾ ನದಿಯ ದಡದ ಎನರ್ಗೊಡಾರ್ ಪಟ್ಟಣವನ್ನು ಖಾಲಿ ಮಾಡಬೇಕಾಗುತ್ತಿತ್ತು.

‘ಪರಮಾಣು ಸ್ಥಾವರದ ಮೇಲೆ ನೇರ ದಾಳಿಯೇನಾದರೂ ನಡೆದರೆ ಇಡೀ ಯುರೋಪ್ ಖಾಲಿಯಾಗುತ್ತದೆ; ಎಲ್ಲರ ಅಂತ್ಯವಾಗುತ್ತದೆ’ ಎಂಬರ್ಥದಲ್ಲಿ ಉಕ್ರೇನ್ ಅಧ್ಯಕ್ಷ ಝೆಲೆನ್‌ಸ್ಕಿ ಮಾರ್ಚ್ 4ರ ಶೆಲ್ ದಾಳಿಗೆ ಪ್ರತಿಕ್ರಿಯೆ ನೀಡಿದ್ದರು. ಆದರೆ ಹಾಗೆ ಸುಲಭದಲ್ಲಿ ಎಲ್ಲರ ಅಂತ್ಯವಾಗುವುದಿಲ್ಲ. ಪರಮಾಣು ಬಾಂಬನ್ನೇ ಬೀಳಿಸಿ ಇಡೀ ಸ್ಥಾವರ ಸಂಕೀರ್ಣವನ್ನೇ (ಚೆರ್ನೊಬಿಲ್ ಅಥವಾ ಫುಕುಶಿಮಾ ಥರಾ) ಸ್ಫೋಟಿಸಿದರೂ ಅಷ್ಟು ಸುಲಭದಲ್ಲಿ ಎಲ್ಲ ಕತೆ ಮುಗಿಯುವುದಿಲ್ಲ. ಅದಕ್ಕಿಂತ ಗಂಭೀರ ಸಾಧ್ಯತೆಗಳೂ ಇವೆ. ಸಿಡಿತದ ಮೊದಲ ಕ್ಷಣಗಳಲ್ಲಿ ಸುತ್ತಲಿನ ನೂರಾರು ಚದರ ಕಿ.ಮೀ. ವ್ಯಾಪ್ತಿಯ ಎಲ್ಲವೂ ಧ್ವಂಸವಾಗುತ್ತವೆ. ಆಘಾತದ ಅಲೆಗಳು ಶರವೇಗದಲ್ಲಿ ಸಾಗಿ ದೂರದ ರೈಲು, ಹಡಗುಗಳನ್ನೂ ಪಲ್ಟಿ ಹೊಡೆಸುತ್ತವೆ. ಅಲ್ಲಲ್ಲ ಹೊಮ್ಮುವ ಬೆಂಕಿ, ಅಲ್ಲಲ್ಲಿನ ಪೆಟ್ರೋಲ್, ಡೀಸೆಲ್, ಪ್ಲಾಸ್ಟಿಕ್ ಗೋದಾಮುಗಳನ್ನೂ ಶಸ್ತ್ರಾಗಾರಗಳನ್ನೂ ಸಿಡಿಸುತ್ತ ಹೋಗುತ್ತದೆ. 2020ರ ಆಗಸ್ಟ್‌ನಲ್ಲಿ ಬೀರೂತ್ ಬಂದರಿನಲ್ಲಿ ಯಃಕಶ್ಚಿತ ರಸಗೊಬ್ಬರ ಗೋದಾಮು ಸ್ಫೋಟಿಸಿದಾಗ ಹೀಗೇ ಆಗಿತ್ತು. 270 ಜನರನ್ನು ಬಲಿ ಪಡೆದ ಆ ದುರಂತದಲ್ಲಿ ಏಳು ಸಾವಿರ ಜನರು ಗಾಯಗೊಂಡು ಮೂರು ಲಕ್ಷ ಜನರು ನಿರಾಶ್ರಿತರಾದರು. ಪರಮಾಣು ಸ್ಥಾವರ ಸ್ಫೋಟಿಸಿದರೆ ವಿಕಿರಣಪೂರಿತ ಬಿಸಿಮಳೆ, ಮಸಿಮಳೆ ಸುರಿಯುತ್ತ ಸೂರ್ಯ ರಶ್ಮಿಯೇ ಮಾಯವಾಗಿ ಅಣುಚಳಿಗಾಲ ಆವರಿಸುತ್ತದೆ. ಬದುಕಿ ಉಳಿದ ಗಾಯಾಳುಗಳ ಪಾಲಿಗೆ ನೀರು, ಹಾಲು, ಆಹಾರ ಎಲ್ಲವೂ ವಿಷಮಯವಾಗಿ, ಸಾವಿಗಾಗಿ ಜನಸ್ತೋಮ ಮೊರೆ ಇಡುವಂತಾಗುತ್ತದೆ. ಅದಕ್ಕಿಂತ ವಿಶೇಷ ಸಾಧ್ಯತೆ ಇನ್ನೊಂದಿದೆ: ಪರಮಾಣು ಬಾಂಬ್ ಸ್ಫೋಟವಾಗುತ್ತಲೆ ವಿಕಿರಣ ಮೇಘದಿಂದ ಚಿಮ್ಮಿದ ಗ್ಯಾಮಾ ಕಿರಣಗಳು ಭೂಮಿಯ ಅಯಸ್ಕಾಂತ ಕ್ಷೇತ್ರಕ್ಕೆ ತಗುಲಿದರೆ ಅದರಿಂದ ನ್ಯೂಕ್ಲಿಯರ್ ಇಲೆಕ್ಟ್ರೊ ಮೆಗ್ನೆಟಿಕ್ ತರಂಗ ಮಿಂಚಿನಂತೆ ಸುತ್ತೆಲ್ಲ ವ್ಯಾಪಿಸಿ ಎಲ್ಲ ಲೋಹದ ತಂತಿ-ಕಂಬಿಗಳಲ್ಲೂ ಹೈವೋಲ್ಟೇಜ್ ಹೊಮ್ಮಿಸುತ್ತದೆ. ರಡಾರ್‌ಗಳು, ವಿಮಾನಗಳು ಮತ್ತು ಎಲ್ಲ ಸಂಪರ್ಕ ಸಾಧನಗಳೂ ಆ ಆಘಾತಕ್ಕೆ ನಿಷ್ಕ್ರಿಯ ಆಗುತ್ತವೆ. ಜಗತ್ತಿಗೆಲ್ಲ ವಾರ್ತಾಕತ್ತಲೆ ಆವರಿಸುತ್ತದೆ. ಅದರ ದೂರಗಾಮಿ ಪರಿಣಾಮಗಳನ್ನು ಯಾರೂ ಊಹಿಸಬಹುದು.

ವಿಜ್ಞಾನದ ವರದಾನ ಪಡೆದ ಮನುಷ್ಯ ತನಗೆ ತಾನೇ ಹೀಗೆ ಭಸ್ಮಾಸುರ ಆಗದ ಹಾಗೆ ತಡೆಯಬೇಕು ಹೇಗೆ? ಪರಮಾಣು ಸ್ಥಾವರದ ಅಂಚಿನಲ್ಲಿ ತುಂಬ ನಾಜೂಕಾಗಿ ಸರ್ಜಿಕಲ್ ಶೆಲ್ ದಾಳಿ ಮಾಡಿದ ಯೋಧನಿಗೆ ಧನ್ಯವಾದ ಹೇಳೋಣವೆ? ಪೃಥ್ವಿಯನ್ನೇ ಪ್ರಪಾತದ ಅಂಚಿಗೆ ತಂದು ನಿಲ್ಲಿಸಿ ಪಾಠ ಹೇಳಿದ್ದಕ್ಕೆ?



ಚುರುಮುರಿ



ಎಣ್ಣೆ ಸುದ್ದಿ

• ಕೆ.ವಿ.ರಾಜಲಕ್ಷ್ಮಿ

‘ಮೊದಲು ಟೀವಿ ಆರಿಸಿ, ನಾವೆಲ್ಲ ಪುಸ್ತಕಗಳಲ್ಲಿ ಮಾತ್ರ ಯುದ್ಧಭೂಮಿ, ರಣರಂಗ ಅನ್ನೋದನ್ನು ಓದಿ ಕಲ್ಪನೆ ಮಾಡ್ಕೊತಿದ್ವಿ, ಈಗ ಈ ದೃಶ್ಯಾವಳಿ ನೋಡಿದ್ರೆ ಹೊಟ್ಟೆ ಉರಿದುಹೋಗುತ್ತೆ. ಬರೀ ಸಾವು ನೋವಿನ ಚಿತ್ರಣ. ಪೇಪರ್ ಓದಿ ಸಾಕು, ಕಣ್ಣಿಗೂ ಹಾನಿಯಾಗೋಲ್ಲ’ ಅತ್ತೆಯ ಖಡಕ್ ವಾರ್ನಿಂಗ್. ಅಷ್ಟರಲ್ಲಿ ಕರೆಂಟ್ ಹೋಯಿತು.

‘ವಾರದ ಹೆಚ್ಚುವರಿ ಬಟ್ಟೆ ಒಗೆಯೋದಿತ್ತು, ಕರೆಂಟು ಇಷ್ಟಕ್ಕೆ ತೆಗೀತಾರೆ, ಇನ್ಯಾವಾಗ ಬರುತ್ತೋ. ಮುಖ್ಯವಾಗಿ ಆಂಬೊಡೆಗೆ ನೆನೆಸಿದ್ದೆ’ ಒಂದೇಸಮ ಜಾಲಾಡಿದಳು.

‘ಆಂಬೊಡೆ ಅಂದ ಕೂಡಲೇ ನೆನಪಾಯ್ತು, ಅಡುಗೆ ಎಣ್ಣೆ ಬೆಲೆ ಜಾಸ್ತಿಯಾಗುತ್ತೆ. ದುಡ್ಡು ಕೊಟ್ಟರೂ ಸಿಗೋದು ಕಷ್ಟ ಅನ್ನೋ ಸ್ಥಿತಿ, ಒಬ್ಬರಿಗೆ ಮೂರೇ ಪ್ಯಾಕೆಟ್, ಹಬೆಯುಂಡೆ ಮಾಡಿಬಿಡು’ ನನ್ನಿಂದ ಸುದ್ದಿ-ಸಲಹೆ.

ನನ್ನವಳು ಇನ್ನೂ ಖಾರವಾದಳು.

‘ಪೆಟ್ರೋಲ್ ಬೆಲೆಯೂ ಏರುತ್ತೆ ಅಲ್ವಾಪ್ಪ? ನಾನೂ ಇನ್ಮೇಲೆ ಕಾಲೇಜಿಗೆ ಬಸ್ಸಲ್ಲೇ ಹೋಗ್ತೀನಿ, ಹೊರಗಡೆ ಹೋಗೋವಾಗ ಸ್ಕೂಟಿ ತೆಗೀತೀನಿ’ ಪುಟ್ಟಿ ಧಾರಾಳತನ ತೋರಿದಳು.

ಅಷ್ಟರಲ್ಲೇ ಕಂಠಿ ಬಂದ, ಕ್ಷಣಮಾತ್ರದಲ್ಲಿ ಮನೆಯ ಘಾಟಿನ ವಾತಾವರಣವನ್ನು ಗ್ರಹಿಸಿದ.

‘ಅಲ್ವೇ ಮತ್ತೆ? ಸೌಟು ಎಣ್ಣೆ ಒಗ್ಗರಣೆ ಬೀಳದಿದ್ರೆ ತುತ್ತು ಮೇಲೇರೊಲ್ಲ, ಕೊಲೆಸ್ಟ್ರಾಲ್ ಅನ್ನೋದು ಸಮಸ್ಯೆಯೇ ಅಲ್ಲ ಅಂತ ಇತ್ತೀಚಿನ ಸಂಶೋಧನೆ ಹೇಳಿದೆಯಂತೆ’ ಕಂಠಿ ತನ್ನ ಜ್ಞಾನ ಪ್ರದರ್ಶಿಸಿದ. ಮುಂದುವರಿದು ‘ಅಭಾವ ಆಗೋಕ್ಕೆ ಮುಂಚೆ ಶೇಖರಿಸಿ ಇಟ್ಟುಕೊಳ್ಳೋದು ಜಾಣತನ’ ಎಂದ.

‘ಹೇಗೆ?’ ಹುಬ್ಬೇರಿಸಿದೆ.

‘ನಿನ್ನೆ ನಾಲ್ಕೈದು ಮಳಿಗೆಗಳಲ್ಲಿ ಎಣ್ಣೆ ಖರೀದಿಸಿ ಬಾಸ್ ಮನೆಗೆ ಸಪ್ಲೈ ಮಾಡಿ ಭೇಷ್ ಅನ್ನಿಸಿಕೊಂಡೆ. ನಮ್ಮ ಮನೆಗೂ ಸಿಕ್ತು ...’

ನನ್ನವಳು ಕಣ್ಣರಳಿಸಿದಳು.

‘ಬೇಕಾದ್ರೆ ನಾನೂ ನಿನ್ನೊತೆ ಬರ್ತೀನಿ, ನಿಮ್ಮ ಮನೆಗೂ ತಂದರಾಯ್ತು’ ಎಂದು ಮುಕ್ತಾಯ ಹಾಡಿದ.

‘ಎಣ್ಣೆ ಇಲ್ಲಾಂತ ಅಡುಗೇಲಿ ರಾಜಿಯಾದ್ರೆ ಬಲಿಪಶು ನಾನೇ’ ಅಂದುಕೊಂಡು ‘ಬ್ಯಾಗ್ ಕೊಡು, ಒಂದು ಗಳಿಗೆ ಹೋಗಿ ಬರ್ತೀನಿ’ ಎಂದೆ.

ಸಂಗತ

ಬೇಕಿರುವುದು ‘ಮೇಸ್ತ್ರಿ’ಯಲ್ಲ, ಕುಲಪತಿ!

ನಮ್ಮ ವಿಶ್ವವಿದ್ಯಾಲಯಗಳಿಗೆ ತಮ್ಮ ಸ್ಥಾನದ ಅತ್ಯುನ್ನತ ಹೊಣೆಯರಿತು ಸಮರ್ಥ ಬೌದ್ಧಿಕ ನಾಯಕತ್ವ ನೀಡಬಲ್ಲ ಕುಲಪತಿಗಳ ಆಯ್ಕೆಯಾಗಬೇಕಾಗಿದೆ

• ಪ್ರೊ. ಶಿವಲಿಂಗಸ್ವಾಮಿ ಎಚ್.ಕೆ.

ರಾಜ್ಯದ ಕೆಲವು ವಿಶ್ವವಿದ್ಯಾಲಯಗಳ ಹಾಲಿ ಕುಲಪತಿಗಳ ಅಧಿಕಾರಾವಧಿ ಮುಕ್ತಾಯವಾಗುವ ಸಮಯ ಬಂದಿದೆ. ಈ ಸ್ಥಾನಗಳಿಗೆ ಮುಂದೆ ಯಾರು ಬರಬಹುದು ಎಂಬ ಊಹಾಪೋಹಗಳು ಹರಿದಾಡುತ್ತಿವೆ. ಯಾರು ಬಂದರೆ ತಮ್ಮ ಹಿತಾಸಕ್ತಿಗಳನ್ನು ಕಾಪಾಡುತ್ತಾರೆ ಎಂಬ ಹರಟೆಯಲ್ಲಿ ಸಹ ವಿಶ್ವವಿದ್ಯಾಲಯಗಳ ಮೇಷ್ಟ್ರುಗಳು ತೊಡಗುತ್ತಾರೆ. ಇದು ಸಾಲದೆಂಬಂತೆ, ಯಾರು ಬಂದರೆ ತಮ್ಮ ವಿಶ್ವವಿದ್ಯಾಲಯಕ್ಕೆ ಒಳಿತು ಎಂಬುದಕ್ಕಿಂತ, ಯಾರು ಬಂದರೆ ಯಾರಿಗೆ ಒಳಿತು ಎಂಬ ಗುಸುಗುಸು ಕೂಡ ನಡೆಯುವುದು ಸಹಜ.

ಉನ್ನತ ಶಿಕ್ಷಣದ ಉನ್ನತ ಸ್ಥಾನಗಳನ್ನು ಅಲಂಕರಿಸಲು ಬೋಧನೆ, ಸಂಶೋಧನೆ, ಪ್ರಕಟಣೆ ಮತ್ತು ಅನುಭವಗಳನ್ನು ಪ್ರಮುಖ ಮಾನದಂಡಗಳನ್ನಾಗಿ ಪರಿಗಣಿಸಲಾಗುವುದು. ಆದ್ದರಿಂದ ಪ್ರತಿಬಾರಿ ವಿಶ್ವವಿದ್ಯಾಲಯದ ಕುಲಪತಿ ಸ್ಥಾನ ಖಾಲಿ ಆಗುತ್ತಿದ್ದ ಹಾಗೆ ರೇಸಿನಲ್ಲಿ ಇರುವವರು ಬೃಹತ್ ಗಾತ್ರದ ಪ್ರೊಫೈಲುಗಳನ್ನು ಸಿದ್ಧಪಡಿಸಿಕೊಳ್ಳುತ್ತಾರೆ. ವಾಸ್ತವವಾಗಿ ಪ್ರೊಫೈಲ್ ಸಿದ್ಧಪಡಿಸಬೇಕಿರುವುದು ಒಂದು ಪ್ರಮುಖ ಶೈಕ್ಷಣಿಕ ಅಗತ್ಯ ಆಗಿರುತ್ತದೆ. ಅಂದರೆ ಅದು ಮೊದಲ ಹಂತದ ಪ್ರಯತ್ನ ಮತ್ತು ತಾವು ಅರ್ಹರು ಎಂದು ಸಾಬೀತುಪಡಿಸಲು ಪ್ರೊಫೈಲುಗಳ ಗಾತ್ರ ಮುಖ್ಯವಾಗಿರುತ್ತದೆ.

ಇದಾದ ನಂತರ ಮುಂದಿನ ಹಂತ ಅತ್ಯಂತ ಮುಖ್ಯವಾದದ್ದಾಗಿರುತ್ತದೆ. ಅದನ್ನು ‘ಲಾಬಿ ಮಾಡುವುದು’ ಎನ್ನುತ್ತಾರೆ. ಯಾರಿಗೆ ಯಾವ ವಿಶ್ವವಿದ್ಯಾಲಯದ ಮೇಲೆ ಕಣ್ಣು ಇರುತ್ತದೆಯೋ ಅಲ್ಲಿ ಸಂಖ್ಯೆಯಲ್ಲಿ ಹೆಚ್ಚಿರುವ ಪ್ರಮುಖ ಜಾತಿ, ಆ ಪ್ರದೇಶದ ಪ್ರಮುಖ ರಾಜಕಾರಣಿ ಮುಂತಾದ ಅಂಶಗಳನ್ನು ಗಮನಿಸುತ್ತಾರೆ. ಇದರ ಜೊತೆಯಲ್ಲಿ ಆ ವಿಶ್ವವಿದ್ಯಾಲಯದ ಗಾತ್ರಕ್ಕೆ ಅನುಗುಣವಾಗಿ ತಮ್ಮ ಜೇಬನ್ನು ಸಹ ಹಿಗ್ಗಿಸಿಕೊಂಡು ಮುಂದಿನ ಹಂತಕ್ಕೆ ಸಿದ್ಧರಾಗುತ್ತಾರೆ. ಮೇಲೆ ನಮೂದಿಸಿರುವ ಶೈಕ್ಷಣಿಕ ಅಗತ್ಯವು ಕುಲಪತಿ ಸ್ಥಾನಕ್ಕೆ ಅರ್ಹತೆಯನ್ನು ಗುರುತಿಸಲು ಮಾತ್ರ ಬೇಕು. ಆದರೆ ಕುಲಪತಿಯನ್ನು ಆಯ್ಕೆ ಮಾಡಲು ಇರುವ ಗುಪ್ತ ಮಾನದಂಡಗಳು ಜಾತಿ, ರಾಜಕಾರಣ ಮತ್ತು ಹಣ.

ಈ ಒಂದು ದಶಕದಲ್ಲಿ ರಾಜ್ಯದ ಕೆಲವು ವಿಶ್ವವಿದ್ಯಾಲಯಗಳಲ್ಲಿ ಕುಲಪತಿ ಸ್ಥಾನ ಅಲಂಕರಿಸಿದ್ದವರು ಗಂಭೀರ ಆರೋಪಗಳಿಗೆ ಒಳಗಾಗಿದ್ದಕ್ಕೆ ನಾವೆಲ್ಲ ಸಾಕ್ಷಿಯಾಗಿದ್ದೇವೆ. ಕುಲಪತಿ ಸ್ಥಾನದ ಜವಾಬ್ದಾರಿಯನ್ನು ಬದಿಗೊತ್ತಿ, ಅದರೊಟ್ಟಿಗೆ ಬರುವ ಅಧಿಕಾರ ನಿರಂಕುಶವಾದದ್ದು ಎಂದು ಅರ್ಥೈಸಿಕೊಳ್ಳುವ ಭ್ರಷ್ಟರು ಜ್ಞಾನ ಕೇಂದ್ರಗಳ ಸಮರ್ಥ ನಾಯಕರಾಗಬಲ್ಲರೇ? ಅಂತಹವರು ಜ್ಞಾನ ಕೇಂದ್ರವಾದ ವಿಶ್ವವಿದ್ಯಾಲಯವನ್ನು ‘ಚಿನ್ನದ ಗಣಿ’ ಎಂದು ಪರಿಭಾವಿಸುತ್ತಾರೆ.

ಉನ್ನತ ಶಿಕ್ಷಣದ ಬಗ್ಗೆ ತಲಸ್ಪರ್ಶಿ ಜಿಜ್ಞಾಸೆಯನ್ನು ನಡೆಸಿದ ಹಮ್‌ಬೋಲ್ಟ್, ಉನ್ನತ ಶಿಕ್ಷಣ ಎಂದರೆ ಉನ್ನತ ಕಲಿಕೆ. ಉನ್ನತ ಕಲಿಕೆಯ ಮೂಲ ಧ್ಯೇಯಗಳು ಸ್ವಯಂ ಕೃಷಿ, ಸ್ವಯಂ ಅಭಿವೃದ್ಧಿ ಮತ್ತು ಸ್ವಯಂ ಅಭಿವ್ಯಕ್ತಿ ಎಂದು ಅಭಿಪ್ರಾಯಪಡುತ್ತಾನೆ. ಉನ್ನತ ಶಿಕ್ಷಣ ಕೇಂದ್ರಗಳನ್ನು ಜ್ಞಾನ ಶಾಖೆಗಳು ಎಂದು ಗುರುತಿಸುವುದು ಇದೇ ಕಾರಣದಿಂದಾಗಿ. ಇಲ್ಲಿ ಕೆಲಸ ಮಾಡುವ ಅಧ್ಯಾಪಕರು ಕೇವಲ ಪಾಠ ಮಾಡುವವರಾಗಿರದೆ ವಿದ್ಯಾರ್ಥಿಗಳ ಮಾರ್ಗದರ್ಶಕರಾಗಿ, ತತ್ವಜ್ಞಾನಿಗಳಾಗಿ ಮತ್ತು ಆದರ್ಶಪ್ರಾಯರಾಗಿ ಕೆಲಸ ನಿರ್ವಹಿಸಬೇಕು.

ನೂತನ ಶಿಕ್ಷಣ ನೀತಿಯ ಅನುಷ್ಠಾನದಲ್ಲಿ ತೊಡಗಿರುವ ಸರ್ಕಾರದ ಮುಂದೆ, ವಿದ್ಯಾರ್ಥಿಗಳಿಗೆ ಬಹುಶಿಸ್ತೀಯ ಆಯಾಮಗಳಿಂದ ಕಲಿಕೆ ಸುಗಮವಾಗಲೆಂದು ಅತ್ಯುತ್ತಮ ಶೈಕ್ಷಣಿಕ ಪರಿಸರವನ್ನು ನಿರ್ಮಿಸುವುದೊಂದೇ ಗುರಿಯಾಗಿಲ್ಲ. ನೂತನ ಶಿಕ್ಷಣ ನೀತಿಯಲ್ಲಿ ಅಡಗಿರುವ ಮೂಲ ಅಂಶಗಳನ್ನು ಹಾಗೂ ಗುಣಮಟ್ಟ ಮತ್ತು ಹೊಣೆಗಾರಿಕೆಯನ್ನು ಸಂಪೂರ್ಣವಾಗಿ ಅರಿತಿರುವ ಒಬ್ಬ ದಾರ್ಶನಿಕನನ್ನು ಕುಲಪತಿಯನ್ನಾಗಿ ಆಯ್ಕೆ ಮಾಡಬೇಕಿರುವ ಬಹುಮುಖ್ಯ ಸವಾಲು ಸಹ ಇದೆ.



ಕುಲಪತಿ ಸ್ಥಾನದ ಹೊಣೆಗಾರಿಕೆಯನ್ನು ಅರಿತವ ಯೋಗ್ಯ ನಾಯಕನಾಗುತ್ತಾನೆ. ತನ್ನ ಅಧ್ಯಾಪಕ ಜೀವನದ ಅನುಭವವು ಆತನಿಗೆ ಶೈಕ್ಷಣಿಕ ದೃಷ್ಟಿಕೋನವನ್ನು ಕಟ್ಟಿಕೊಟ್ಟಿದ್ದರೆ ಮಾತ್ರ ಆತ ಜ್ಞಾನದ ಕಟ್ಟುವಿಕೆಯ ಮೂಲಕ ವಿದ್ಯಾರ್ಥಿಗಳ ಸಮಗ್ರ ಸಾಮರ್ಥ್ಯ ಕಟ್ಟುವಿಕೆಯನ್ನು ಸಾಧಿಸುತ್ತಾನೆ. ದೂರದೃಷ್ಟಿಯುಳ್ಳ ಆದರ್ಶ ಕುಲಪತಿಯಾಗುತ್ತಾನೆ.

ನ್ಯಾಷನಲ್ ಇನ್‌ಸ್ಟಿಟ್ಯೂಷನಲ್ ರ‍್ಯಾಂಕಿಂಗ್ ಫ್ರೇಮ್‌ವರ್ಕ್‌ನವರ (ಎನ್‌ಐಆರ್‌ಎಫ್) ರ‍್ಯಾಂಕಿಂಗ್, ಉನ್ನತ ಶಿಕ್ಷಣ ಕೇಂದ್ರಗಳ ಸಂಶೋಧನೆ ಮತ್ತು ಪ್ರಕಟಣೆಗಳ ಗುಣಮಟ್ಟವನ್ನು ಆಧರಿಸಿರುತ್ತದೆ. ಆದ್ದರಿಂದ ಪ್ರತೀ ವಿಶ್ವವಿದ್ಯಾಲಯಕ್ಕೆ ಬೇಕಿರುವುದು ಕಟ್ಟುವುದು, ಅಂದರೆ ಜ್ಞಾನವನ್ನು ಕಟ್ಟುವುದು. ಒಬ್ಬ ದಾರ್ಶನಿಕ ಇದನ್ನು ಅರಿತು ಬೌದ್ಧಿಕ ನಾಯಕತ್ವ ನೀಡಬಲ್ಲ. ಕಟ್ಟಡ ಕಾಮಗಾರಿ ಮಾಡಿಸುವ ಸಿವಿಲ್ ಗುತ್ತಿಗೆದಾರನ ಮನಃಸ್ಥಿತಿಯ ವ್ಯಕ್ತಿ ಅಲ್ಲ.

ಜ್ಞಾನ ಕಟ್ಟುವ ಕೆಲಸದ ಬದಲು ಕಟ್ಟಡ ಕಟ್ಟುವ ಕೆಲಸಕ್ಕೆ ಆದ್ಯತೆ, ಯೋಗ್ಯ ಅಧ್ಯಾಪಕರ ನೇಮಕಾತಿ ಬದಲು ಲಂಚಕ್ಕಾಗಿ ಯೋಗ್ಯರಲ್ಲದವರ ನೇಮಕ, ಕಮಿಷನ್ ಆಸೆಗೆ ಕಳಪೆ ಮೂಲಸೌಕರ್ಯ ಇತ್ಯಾದಿಗಳಿಗೆ ಇಡೀ ರಾಜ್ಯ ಸಾಕ್ಷಿಯಾಗಿರುವುದು ಸತ್ಯ. ಹಲವಾರು ವಿಶ್ವವಿದ್ಯಾಲಯಗಳ ಕುಲಪತಿ ಸ್ಥಾನ ತೆರವುಗೊಳ್ಳುತ್ತಿರುವ ಈ ಸಂದರ್ಭದಲ್ಲಿ, ಕಟ್ಟಡ ಕಟ್ಟುವ ‘ಮೇಸ್ತ್ರಿ’ಗಳ ಬದಲು ಜ್ಞಾನ ಕಟ್ಟುವ ದಾರ್ಶನಿಕರು ಆ ಉನ್ನತ ಸ್ಥಾನಗಳನ್ನು ಅಲಂಕರಿಸುವಂತೆ ಮಾಡಬೇಕಿರುವುದು ಸರ್ಕಾರದ ಆದ್ಯ ಕರ್ತವ್ಯವಾಗಬೇಕು.

ಲೇಖಕ: ಪ್ರಾಧ್ಯಾಪಕ, ಇಂಗ್ಲಿಷ್ ವಿಭಾಗ, ತುಮಕೂರು ವಿಶ್ವವಿದ್ಯಾಲಯ, ತುಮಕೂರು

ವಾಚಕರ ವಾಣಿ

ಶಾಸನ ತರುವವರು ಮೊದಲು ಬದಲಾಗಲಿ

ಸದನದಲ್ಲಿ ಕುಳಿತು, ‘ದೇಶದ ಬಡತನಕ್ಕೆ ಕಾಂಗ್ರೆಸ್ ಕಾರಣ’ ಎಂದು ಇವರು ಹೇಳುವುದನ್ನು, ‘ಬಿಜೆಪಿ ಕಾರಣ’ ಎಂದು ಅವರು ಹೇಳುವುದನ್ನು (ಪ್ರ.ವಾ., ಮಾರ್ಚ್ 9) ನಾವು ಇನ್ನೂ ಎಷ್ಟು ದಿನ ಕೇಳಬೇಕು? ಇತ್ತೀಚಿನ ರಾಜಕಾರಣದಲ್ಲಿ ಸಮಾಜ ಯಾರಲ್ಲೂ ವ್ಯತ್ಯಾಸವನ್ನು ಕಂಡಿಲ್ಲ. ಪಕ್ಷಭೇದ ಮರೆತು ಪ್ರತಿಯೊಬ್ಬ ರಾಜಕಾರಣಿಯೂ ತಮ್ಮನ್ನು ತಾವೇ ನೋಡಿಕೊಳ್ಳಲಿ. ಅವರ ಬಳಿಯಲ್ಲಿರುವ ಹಣ, ಆಸ್ತಿ ಬೆಟ್ಟದಷ್ಟಿದೆ. ಮಕ್ಕಳು, ಮೊಮ್ಮಕ್ಕಳು, ಮರಿಮಕ್ಕಳೂ ಕುಳಿತು ತಿನ್ನುವಷ್ಟು ಮಾಡಿಕೊಂಡಿದ್ದಾರೆ. ಚುನಾವಣೆಗೆ ನಾಮಪತ್ರ ಸಲ್ಲಿಸುವಾಗ ಅವರು ನೀಡುವ ಸಂಪತ್ತಿನ ಪಟ್ಟಿ ನೋಡಿದರೆ ಇದು ತಿಳಿಯುತ್ತದೆ.

ರಾಜಕಾರಣ ಈಗ ಉದ್ಯಮವಾಗಿ ಹೋಗಿರುವುದರಿಂದ ಅವರಲ್ಲಿ ಯಾರಿಗೂ ಈ ಬಗ್ಗೆ ಏನೂ ಅನ್ನಿಸುತ್ತಿಲ್ಲ. ದೇಶದ ಬಡತನಕ್ಕೆ ನಿಜವಾದ ಕಾರಣ ರಾಜಕಾರಣಿಗಳು ಮತ್ತು ರಾಜಕೀಯ ವ್ಯವಸ್ಥೆ. ದೊಡ್ಡ ಮರಗಳು ಬೆಳೆಯಲು ಮಣ್ಣು, ನೀರು, ಗೊಬ್ಬರದ ಅಗತ್ಯ ಇರುವಂತೆ, ರಾಜಕಾರಣಿಗಳ ಈ ಉದ್ಯಮಕ್ಕೆ ರೈತರು, ಕೂಲಿ ಕಾರ್ಮಿಕರು ಇತರ ಕರ್ಮಚಾರಿಗಳೆಲ್ಲ ಗೊಬ್ಬರವಾಗಿ ಬಳಕೆಯಾಗಿದ್ದಾರೆ. ಶಾಸನ ಮಾಡುವ ಅಧಿಕಾರ ಹೊಂದಿರುವವರು ತಾವು ಮೊದಲು ಬದಲಾಗಲಿ ಮತ್ತು ಬದಲಾವಣೆ ತರಲಿ.

ತಾ.ಸಿ.ತಿಮ್ಮಯ್ಯ, ಬೆಂಗಳೂರು

ಬೇಕು ಅರಣ್ಯ ವಿಸ್ತರಣೆ ಯೋಜನೆ

ಭೂಕಂದಾಯ ಕಾಯ್ದೆಗೆ ತಿದ್ದುಪಡಿ ತಂದು ಕೃಷಿಗೆ ಅರಣ್ಯ ಭೂಮಿಯನ್ನು ನೀಡುವ ಸೂಚನೆ ನೀಡಿದ್ದಾರೆ ಸಚಿವ ಮಾಧುಸ್ವಾಮಿ (ಪ್ರ.ವಾ., ಮಾರ್ಚ್ 9). ಭೂಹೀನ ಕೃಷಿಕರಿಗೆ ಭೂಮಿ ನೀಡುವ ಸರ್ಕಾರದ ಆಲೋಚನೆ ಸರಿಯಾಗಿದೆ. ಆದರೆ ಹೀಗೆ ಅರಣ್ಯ ಭೂಮಿಯನ್ನೇ ನೀಡುತ್ತಾ ಹೋದರೆ ಅದರ ಕೆಟ್ಟ ಪರಿಣಾಮ ನಮ್ಮ ಪರಿಸರದ ಮೇಲಾಗಿ, ನಾವು ಉಸಿರಾಡುವ ಗಾಳಿಗೂ ಅಡಚಣೆ ಉಂಟಾಗುವುದಿಲ್ಲವೇ?

ಈಗಾಗಲೇ ನಾವು ಉಸಿರಾಡುವ ಗಾಳಿಯ ಗುಣಮಟ್ಟ ಗಣನೀಯವಾಗಿ ಕುಸಿದಿರುವುದು ದೃಢಪಟ್ಟಿದೆ. ಅದರ ನಿವಾರಣೆಗಾಗಿ ಸರ್ಕಾರವು ಅರಣ್ಯ ವಿಸ್ತರಣೆಯ ಯೋಜನೆ ಹಾಕಿಕೊಳ್ಳಬೇಕೇ ವಿನಾ ಇರುವ ಅರಣ್ಯವನ್ನು ಕಳೆದುಕೊಳ್ಳಬಾರದು.

ಹುರುಕಡ್ಲಿ ಶಿವಕುಮಾರ, ಬಾಚಿಗೊಂಡನಹಳ್ಳಿ, ಹಗರಿಬೊಮ್ಮನಹಳ್ಳಿ

ಸಕಾಲಿಕ, ಶ್ಲಾಘನೀಯ ಸಲಹೆ

ವಿದ್ಯಾವಂತ ವೈದ್ಯ ದಂಪತಿ ವಿಚ್ಛೇದನ ಬಯಸಿ ಬಂದ ಪ್ರಕರಣವೊಂದರಲ್ಲಿ ಹೈಕೋರ್ಟ್ ನ್ಯಾಯಮೂರ್ತಿ ಕೃಷ್ಣ ಎಸ್. ದೀಕ್ಷಿತ್ ಅವರು, ಪತಿ– ಪತ್ನಿ ಒಂದಾಗಿ ಬಾಳುವಂತೆ ಕಳಕಳಿಯಿಂದ ತಿಳಿಹೇಳಿದ್ದು ಸಕಾಲಿಕ ಮಾತ್ರವಲ್ಲದೆ ಶ್ಲಾಘನೀಯವೂ ಆಗಿದೆ. ‘ದಾಂಪತ್ಯ ಬದುಕೆಂಬ ಮನದ ಮನೆಯಲ್ಲಿ ಹರಿದಾಡುವ ಜಿರಲೆಗಳಿಗೆ ಇನ್ನಿಲ್ಲದ ಪ್ರಾಶಸ್ತ್ಯ ನೀಡಬೇಡಿ. ಸ್ವಲ್ಪ ಸಮಯದ ಬಳಿಕ ಅವು ತಮ್ಮಷ್ಟಕ್ಕೆ ತಾವೇ ಜಾಗ ಖಾಲಿ ಮಾಡುತ್ತವೆ’ ಎಂದು ಸಹ ಅವರು ಹಿತೋಕ್ತಿ ನುಡಿದಿದ್ದಾರೆ. ನ್ಯಾಯಮೂರ್ತಿಯವರ ಈ ಸದಾಶಯಕ್ಕೆ ಪ್ರಜ್ಞಾವಂತ ನಾಗರಿಕರೆಲ್ಲರ ಸಂಪೂರ್ಣ ಸಹಮತವಿದೆ. ಆದರೆ ಮನುಷ್ಯನ ಮರ್ಕಟ ಬುದ್ಧಿಯೊಳಗಿನ ಅಹಂ ಎಂಬುದು ಜಿರಲೆಗಳಂತೆ ಅಷ್ಟೊಂದು ಸುಲಭದಲ್ಲಿ ಜಾಗ ಖಾಲಿ ಮಾಡುವಂತಹದ್ದಲ್ಲ ಎಂದು ವಿಷಾದದಿಂದ ಹೇಳಬೇಕಿದೆ.

ಜಗತ್ತಿನಲ್ಲಿ ಈವರೆಗಿನ ಬಹುತೇಕ ಕೆಡುಕುಗಳಿಗೆಲ್ಲ ವಿದ್ಯಾವಂತರೇ ಕಾರಣ ಎಂಬುದನ್ನು ಕಾಲಗರ್ಭದೊಳಗಿನ ಅಂಕಿ ಅಂಶಗಳು ಸಾಬೀತುಪಡಿಸಿವೆ. ಮನುಷ್ಯರಲ್ಲಿ ಬೌದ್ಧಿಕ ಜ್ಞಾನ ಹೆಚ್ಚಾದಂತೆ ಅದರಿಂದ ಉಂಟಾಗುವ ಕೆಡುಕುಗಳೂ ಹೆಚ್ಚುತ್ತವೆ. ವಸ್ತುಸ್ಥಿತಿ ಹೀಗಿದ್ದರೂ ನ್ಯಾಯಾಲಯದ ಮೌಲಿಕ ಸಲಹೆಗೆ ಮಣಿದ ವೈದ್ಯ ದಂಪತಿ ರಾಜಿಯಾಗಲು ಒಪ್ಪಿ, ನ್ಯಾಯಪೀಠಕ್ಕೆ ಜಂಟಿ ಜ್ಞಾಪನಾಪತ್ರ ಸಲ್ಲಿಸಿದ್ದು ಮಾತ್ರ ಆಶಾದಾಯಕ ಬೆಳವಣಿಗೆ.

ಬಿ.ಲಕ್ಕಣ್ಣ, ಬೆಂಗಳೂರು

ವರ್ಗವಾರು ವಿಂಗಡಣೆ ಸಮಂಜಸವಲ್ಲ

ಕೇಂದ್ರ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವಾಲಯ ಹಾಗೂ ಶಿಕ್ಷಣ ಇಲಾಖೆ ಸಹಯೋಗದಲ್ಲಿ 11ರಿಂದ 14 ವರ್ಷದ, ಶಾಲೆಯಿಂದ ಹೊರಗುಳಿದ ಸುಮಾರು 4 ಲಕ್ಷ ಬಾಲಕಿಯರನ್ನು ಮರಳಿ ಶಾಲೆಗೆ ಕರೆತರುವ ಉದ್ದೇಶದಿಂದ ‘ಕನ್ಯಾ ಶಿಕ್ಷಣ ಪ್ರವೇಶ ಉತ್ಸವ’ ಯೋಜನೆ ಆರಂಭಿಸಲಾಗಿದೆ. ಈ ಯೋಜನೆಗೆ ‘ಕನ್ಯಾ’ ಎನ್ನುವ ಬದಲು ‘ಬಾಲಿಕಾ ಅಥವಾ ಬೇಟಿ’ ಎಂದು ಹೆಸರಿಟ್ಟಿದ್ದರೆ ಉತ್ತಮವೆನಿಸುತ್ತಿತ್ತು. ಯಾಕೆಂದರೆ, ಕನ್ಯಾ, ಶ್ರೀಮತಿ ಎನ್ನುವ ಶಬ್ದಗಳ ಮೂಲಕ ಹೆಣ್ಣಿನ ವರ್ಗವಾರು ವಿಂಗಡಣೆ ಮಾಡುವುದು ಅಷ್ಟೊಂದು ಸಮಂಜಸ ಎನಿಸುವುದಿಲ್ಲ. ಹೆಣ್ಣುಮಕ್ಕಳಲ್ಲಿ ಎರಡೇ ವರ್ಗವಿರಬೇಕು, ಒಂದು ಬಾಲಕಿ, ಒಂದು ಮಹಿಳೆ ಅಷ್ಟೇ.

ಬಸನಗೌಡ ಪಾಟೀಲ, ಯರಗುಪ್ಪಿ, ಧಾರವಾಡ

ಅರಣ್ಯ ಸಾಗುವಳಿ: ನ್ಯಾಯ ಸಿಗಲಿ

ಅರಣ್ಯ ಭೂಮಿ ಸಾಗುವಳಿಯಲ್ಲಿರುವ ರೈತರು ಅರಣ್ಯ ಹಕ್ಕು ಕಾಯ್ದೆಯ ಅಡಿಯಲ್ಲಿ ಸಕ್ರಮೀಕರಣಕ್ಕಾಗಿ ದಾಖಲಿಸಿದ ಬಹುತೇಕ ಅರ್ಜಿಗಳು ಸಾರಾಸಗಟಾಗಿ ತಿರಸ್ಕೃತಗೊಳ್ಳುತ್ತಿವೆ. ಅಂದರೆ, ಈ ಕಾಯ್ದೆಯ ಉದ್ದೇಶವೇ ವಿಫಲಗೊಂಡಿದೆ ಎಂದರ್ಥ. ಜೀವನೋಪಾಯಕ್ಕಾಗಿ ಭೂಮಿ ಒತ್ತುವರಿ ಬೇರೆ, ಭೂಕಬಳಿಕೆ ಬೇರೆ ಎನ್ನುವ ಚರ್ಚೆ ವಿಧಾನಸಭೆಯಲ್ಲಿ ಈಗಲಾದರೂ, ರೈತ ಮಹಿಳೆಯ ಆತ್ಮಹತ್ಯೆ ಕಾರಣದಿಂದ ನಡೆದಿದ್ದು ಸ್ವಾಗತಾರ್ಹ.

ಅರಣ್ಯ ಕಾಯ್ದೆಯನ್ನು ಅಧಿಕಾರಿಗಳು ಬಡರೈತರ ವಿರುದ್ಧ ಬೇಕಾಬಿಟ್ಟಿ ಅಮಾನವೀಯವಾಗಿ ಪ್ರಯೋಗಿಸಿದ್ದಾರೆ. ನೂರಾರು ಕಿಲೊ ಮೀಟರುಗಳ ದೂರದಿಂದ ಬಡಪಾಯಿ ರೈತರು ಬೆಂಗಳೂರಿನ ಭೂಕಬಳಿಕೆ ತಡೆ ನ್ಯಾಯಾಲಯಕ್ಕೆ ಅಲೆದಾಡುತ್ತಿದ್ದಾರೆ. ಈ ಕಾರಣದಿಂದಲೇ ಅವರ ಸಾಲದ ಹೊರೆ ಇನ್ನೂ ಭಾರವಾಗುತ್ತಿದೆ. ಮೊದಲು ರೈತರ ಮೇಲಿನ ಈ ಪ್ರಕರಣಗಳನ್ನು ಹಿಂಪಡೆಯಬೇಕು. ಈ ಕರಾಳ ಶಾಸನವನ್ನು ರೈತರ ವಿರುದ್ಧ ಜಾರಿಗೊಳಿಸಿದ ಅಧಿಕಾರಿಗಳ ಮೇಲೆ ಕ್ರಮ ಕೈಗೊಳ್ಳಬೇಕಾದ ಅಗತ್ಯವೂ ಇದೆ.

ಅರಣ್ಯ ಸಂರಕ್ಷಣಾ ಕಾಯ್ದೆಯಲ್ಲೂ ಈ ರೀತಿಯ ಪ್ರಕರಣಗಳು ಅರಣ್ಯ ಸಾಗುವಳಿಯಲ್ಲಿರುವವರ ವಿರುದ್ಧ ದಾಖಲಾಗಿವೆ. ಅರಣ್ಯ ಹಕ್ಕು ಕಾಯ್ದೆ- 2006ರ ಪ್ರಕಾರ, ಅರ್ಜಿದಾರರು ಎಪ್ಪತ್ತೈದು ವರ್ಷದ ದಾಖಲು ಸಾಕ್ಷ್ಯ ಒದಗಿಸುವ ಕಲಂ ರದ್ದಾದರೆ ಮಾತ್ರ ಅರಣ್ಯ ಸಾಗುವಳಿಯಲ್ಲಿ ಇರುವವರಿಗೆ ನ್ಯಾಯ ಸಿಗಬಹುದು.

ಬಿ.ಆರ್.ಜಯಂತ್, ಸಾಗರ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ಮೀಸಲಾತಿ ಭಿಕ್ಷೆಯಲ್ಲ ಸಂವಿಧಾನಬದ್ಧ ಹಕ್ಕು

• ಎಚ್.ಎನ್.ನಾಗಮೋಹನದಾಸ್



ಭಾರತ ದೇಶದಲ್ಲಿ ಅನೇಕ ಮತಗಳು, 4,635 ಜಾತಿಗಳು ಮತ್ತು ಉಪ ಜಾತಿಗಳಿವೆ. ಹುಟ್ಟುತ್ತಾ ಒಂದು ಜಾತಿಯನ್ನು ಕಟ್ಟಲಾಯಿತು ಮತ್ತು ಜಾತಿಗೊಂದು ಕಸುಬನ್ನು ಕಡ್ಡಾಯಗೊಳಿಸಲಾಯಿತು. ಜಾತಿ ಬದಲಾಯಿಸುವಂತಿಲ್ಲ. ಜಾತಿ ಜಾತಿಯ ನಡುವೆ ಸಂಬಂಧ ಬೆಳೆಸುವಂತಿಲ್ಲ ಮತ್ತು ಪಂಕ್ತಿ ಭೋಜನ ಮಾಡುವಂತಿಲ್ಲ. ಸಾಲದೆಂದು ಜಾತಿ ಮತ್ತು ಕಸುಬನ್ನು ವಂಶ ಪಾರಂಪರ್ಯ ಮಾಡಲಾಗಿದೆ.

ಜಾತಿ ವ್ಯವಸ್ಥೆಯಲ್ಲಿ ಒಂದು ವಿಧವಾದ ಕೆಲಸದ ವಿಭಜನೆಯನ್ನು ಕಾಣಬಹುದು. ವಿದ್ಯೆ ಬುದ್ಧಿಯ ಗುತ್ತಿಗೆದಾರರನ್ನಾಗಿ ಬ್ರಾಹ್ಮಣರನ್ನು, ಯುದ್ಧ ಮತ್ತು ಆಡಳಿತ ನಡೆಸುವುದಕ್ಕೆ ಕ್ಷತ್ರಿಯರನ್ನು, ವಾಣಿಜ್ಯ ಮತ್ತು ಕೈಗಾರಿಕೆಗಳನ್ನು ನಡೆಸುವುದಕ್ಕೆ ವೈಶ್ಯರನ್ನು ನೇಮಿಸಲಾಯಿತು. ಸಾಮಾಜಿಕ ವ್ಯವಸ್ಥೆಯ ಕೊನೆಯಲ್ಲಿರುವ ಶೂದ್ರರನ್ನು ಅತ್ಯಂತ ಕಷ್ಟ ಮತ್ತು ಕೊಳಕಿನ ಕೆಲಸ ಮಾಡುವ ಗುಲಾಮರನ್ನಾಗಿ ಮಾಡಲಾಯಿತು. ಈ ರೀತಿಯಾಗಿ ಶ್ರಮ ವಿಭಜನೆಯಿಂದ ಮೊದಲ ಮೂರು ವರ್ಣಗಳು ಆಳುವವರಾಗಿಯೂ, ನಾಲ್ಕನೆಯವರಾದ ಶೂದ್ರರು ಆಳಲ್ಪಡುವವರಾಗಿಯೂ ರೂಪುಗೊಂಡರು. ಚಾತುರ್ವರ್ಣ್ಯದ ಹೊರಗೆ ಅಸ್ಪೃಶ್ಯರೆಂಬ ಸಾಮಾಜಿಕ ವರ್ಗಗಳನ್ನು ನಿರ್ಮಿಸಲಾಯಿತು.

ಜಾತಿ- ಜಾತಿಗಳ ನಡುವೆ ರಾಜಕೀಯ, ಆರ್ಥಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕ ಅಸಮಾನತೆ ಕಾಣಬಹುದು. ಪ್ರಬಲ ಜಾತಿಗಳು, ಮೇಲ್ವರ್ಗಗಳು, ತುಳಿತಕ್ಕೆ ಒಳಗಾದ ಜಾತಿಗಳು, ತಳವರ್ಗಗಳು, ಜಾತಿ ಮತ್ತು ವರ್ಗ ಬೆರೆತುಹೋಗಿರುವ ಒಂದು ಅಸಮಾನ ಸಾಮಾಜಿಕ ವ್ಯವಸ್ಥೆ ನಮ್ಮದು.

ಜಾತಿ ಅಸಮಾನತೆಯನ್ನು ನಿವಾರಿಸಲೆಂದು ನಮ್ಮ ಸಂವಿಧಾನದಲ್ಲಿ ರಾಜಕೀಯ, ಶೈಕ್ಷಣಿಕ ಮತ್ತು ಔದ್ಯೋಗಿಕ ಕ್ಷೇತ್ರಗಳಲ್ಲಿ ಮೀಸಲಾತಿಯನ್ನು ಒದಗಿಸಲಾಗಿದೆ. ಮೀಸಲಾತಿ ಎಂಬುದು ಬಡತನ ನಿರ್ಮೂಲನಾ ಕಾರ್ಯಕ್ರಮ ಅಲ್ಲ ಅಥವಾ ಜಾತಿಗಳ ವಿನಾಶದ ಕಾರ್ಯಕ್ರಮವೂ ಅಲ್ಲ. ಪ್ರಾತಿನಿಧ್ಯ ವಂಚಿತರಿಗೆ ಪ್ರಾತಿನಿಧ್ಯವನ್ನು ನೀಡುವುದು ಮೀಸಲಾತಿ. ಇದೊಂದು ಭಿಕ್ಷೆಯಲ್ಲ, ಬದಲಿಗೆ ಅದೊಂದು ಮಾನವ ಹಕ್ಕು ಮತ್ತು ಸಂವಿಧಾನದ ಹಕ್ಕು.

ಕಳೆದ 73 ವರ್ಷಗಳಿಂದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳು ಶಾಸಕಾಂಗ, ಶೈಕ್ಷಣಿಕ ಮತ್ತು ಸಾರ್ವಜನಿಕ ವಲಯದ ಉದ್ಯೋಗದಲ್ಲಿ ಮೀಸಲಾತಿಯನ್ನು ಅನುಭವಿಸಿಕೊಂಡು ಬರುತ್ತಿವೆ. ಕೇಂದ್ರ ಸರ್ಕಾರ ಮಂಡಲ್ ವರದಿಯನ್ನು ಆಧರಿಸಿ 1990ರಲ್ಲಿ ಹಿಂದುಳಿದ ವರ್ಗಗಳಿಗೆ ಶೇ 27ರಷ್ಟು ಮೀಸಲಾತಿಯನ್ನು ಶಿಕ್ಷಣ ಮತ್ತು ಉದ್ಯೋಗದಲ್ಲಿ ನೀಡಿತು. ಆದರೆ, ಹಿಂದುಳಿದ ವರ್ಗಗಳಿಗೆ ರಾಜಕೀಯ ಮೀಸಲಾತಿಯನ್ನು ನೀಡಲಿಲ್ಲ. ಕರ್ನಾಟಕದಲ್ಲಿ ಹಿಂದುಳಿದ ವರ್ಗಗಳು ಶೇ 32ರಷ್ಟು ಮೀಸಲಾತಿಯನ್ನು ಶಿಕ್ಷಣ ಮತ್ತು ಉದ್ಯೋಗದಲ್ಲಿ ಪಡೆಯುತ್ತಿದ್ದಾರೆ.

ಸಂವಿಧಾನದ 73 ಮತ್ತು 74ನೇ ತಿದ್ದುಪಡಿಗೆ ಅನುಗುಣವಾಗಿ 'ಕರ್ನಾಟಕ ಪಂಚಾಯತ್ ರಾಜ್ ಕಾಯ್ದೆ-1993' ಅನ್ನು ಜಾರಿಗೆ ತರಲಾಯಿತು. ಈ ಕಾಯ್ದೆಯಲ್ಲಿ ಮೂರು ಹಂತದ ಅಂದರೆ ಗ್ರಾಮ ಪಂಚಾಯತಿ, ತಾಲ್ಲೂಕು ಪಂಚಾಯಿತಿ ಮತ್ತು ಜಿಲ್ಲಾ ಪಂಚಾಯಿತಿ ಎಂಬ ಸಂಸ್ಥೆಗಳು ಅಸ್ತಿತ್ವಕ್ಕೆ ಬಂದವು. ಈ ಸಂಸ್ಥೆಗಳಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ, ಹಿಂದುಳಿದ ವರ್ಗಗಳು ಮತ್ತು ಮಹಿಳೆಯರಿಗೆ ಮೀಸಲಾತಿ ಕಲ್ಪಿಸಲಾಯಿತು.

ಕೇವಲ ಈ ಸಂಸ್ಥೆಗಳ ಸ್ಥಾನಗಳಿಗೆ ಮಾತ್ರವಲ್ಲ ಅಧ್ಯಕ್ಷ ಮತ್ತು ಉಪಾಧ್ಯಕ್ಷ ಸ್ಥಾನಗಳಿಗೂ ಮೀಸಲಾತಿ ನೀಡಲಾಗಿದೆ. ಮುಂದುವರೆದು ಮಹಾನಗರ ಪಾಲಿಕೆ, ನಗರಸಭೆ, ಪುರಸಭೆ ಮತ್ತು ಪಟ್ಟಣ ಪಂಚಾಯಿತಿಗಳಲ್ಲಿ ಮೀಸಲಾತಿಯನ್ನು ನೀಡಲಾಗಿದೆ. ಈ ರೀತಿಯಾಗಿ ಹಿಂದುಳಿದ ವರ್ಗಗಳು ಸಹ ಸ್ಥಳೀಯ ಸಂಸ್ಥೆಗಳಲ್ಲಿ ರಾಜಕೀಯ ಮೀಸಲಾತಿಯನ್ನು ಅನುಭವಿಸಿಕೊಂಡು ಬರುತ್ತಿದ್ದಾರೆ.



ಸುಪ್ರೀಂ ಕೋರ್ಟ್ 2021ರಲ್ಲಿ ವಿಕಾಸ್ ಕೃಷ್ಣರಾವ್ ಗಾವಳಿ ಪ್ರಕರಣದಲ್ಲಿ ಮಹಾರಾಷ್ಟ್ರ ಸರ್ಕಾರ ಸ್ಥಳೀಯ ಸಂಸ್ಥೆಗಳಲ್ಲಿ ಹಿಂದುಳಿದ ವರ್ಗಗಳಿಗೆ ನೀಡಿದ್ದ ಮೀಸಲಾತಿಯನ್ನು ರದ್ದುಗೊಳಿಸಿದೆ. ಮುಂದುವರೆದು ಯಾರು ಹಿಂದುಳಿದವರು ಎಂಬುದನ್ನು ಪರಿಶೀಲಿಸಿ ಗುರುತಿಸುವ ಕ್ರಮ ಕೈಗೊಳ್ಳಬೇಕು ಎಂದು ಆದೇಶಿಸಿದೆ. ಅಲ್ಲಿಯವರೆಗೆ ಹಿಂದುಳಿದ ವರ್ಗಗಳಿಗೆ ಮೀಸಲಿಟ್ಟಿರುವ ಕ್ಷೇತ್ರಗಳನ್ನು ಸಾಮಾನ್ಯ ಕ್ಷೇತ್ರಗಳೆಂದು ಪರಿಗಣಿಸಿ ಚುನಾವಣೆಗಳನ್ನು ನಡೆಸಲೂ ಆದೇಶಿಸಿದೆ

ಸ್ಥಳೀಯ ಸಂಸ್ಥೆಗಳಲ್ಲಿ ಪರಿಶಿಷ್ಟ ಜಾತಿ ಶೇ 18, ಪರಿಶಿಷ್ಟ ಪಂಗಡ ಶೇ 5 ಮತ್ತು ಹಿಂದುಳಿದ ವರ್ಗಗಳಿಗೆ ಶೇ 33ರಷ್ಟು ಮೀಸಲಾತಿ ನೀಡಲಾಗಿತ್ತು. ಸುಪ್ರೀಂ ಕೋರ್ಟ್ 2010ರಲ್ಲಿ ಕೆ.ಕೃಷ್ಣಮೂರ್ತಿ ಪ್ರಕರಣದಲ್ಲಿ ವಿಧಿಸಿರುವ ಶೇ 50ರ ಮಿತಿಯನ್ನು ಉಲ್ಲಂಘಿಸಲಾಗಿದೆ ಎಂಬ ಕಾರಣಕ್ಕೆ ಕರ್ನಾಟಕ ಸರ್ಕಾರ ನೀಡಿರುವ ಒಟ್ಟು ಶೇ 56ರಷ್ಟು ಮೀಸಲಾತಿಯನ್ನು ರದ್ದುಗೊಳಿಸಿತು. ಅದರ ಪರಿಣಾಮವಾಗಿ ಕರ್ನಾಟಕ ಸರ್ಕಾರ ಹಿಂದುಳಿದ ವರ್ಗಗಳಲ್ಲಿ ಮೀಸಲಾತಿಯನ್ನು ಶೇ 33ರಿಂದ ಶೇ 27ಕ್ಕೆ ಇಳಿಸಿತು.

ಮೀಸಲಾತಿಯ ಜೊತೆಗೆ ಇತರೆ ಕಾನೂನುಗಳು, ಯೋಜನೆಗಳು ಮತ್ತು ಕಾರ್ಯಕ್ರಮಗಳ ಅನುಷ್ಠಾನದ ಪರಿಣಾಮವಾಗಿ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಹಿಂದುಳಿದ ಜನರ ಸ್ಥಿತಿಗಳಲ್ಲಿ ಅನೇಕ ಸುಧಾರಣೆಗಳನ್ನು ಹಾಗೂ ಅಭಿವೃದ್ಧಿಯನ್ನು ಕಾಣಬಹುದು. ಇಂದು ಈ ವರ್ಗದ ಜನ ಸಮಾಜದ ಎಲ್ಲ ಕ್ಷೇತ್ರಗಳಲ್ಲಿ ಹಾಗೂ ರಂಗಗಳಲ್ಲಿ ಪ್ರವೇಶಿಸಿದ್ದಾರೆ. ಒಂದಷ್ಟು ಜನರಿಗೆ ಶಿಕ್ಷಣ, ಉದ್ಯೋಗ, ಆಡಳಿತದಲ್ಲಿ ಪ್ರಾತಿನಿಧ್ಯ, ಮನೆ, ಜಮೀನು ಇತ್ಯಾದಿಗಳು ಲಭ್ಯವಾಗಿ ಈ ವರ್ಗಗಳಿಗೆ ಜೀವನದಲ್ಲಿ ಸ್ವಲ್ಪಮಟ್ಟದ ಸುಧಾರಣೆಯನ್ನು ಕಾಣಬಹುದು. ಆದರೂ ಸಾಧಿಸಬೇಕಾದ್ದು ಬೆಟ್ಟದಷ್ಟಿದೆ.

ಪರಿಸ್ಥಿತಿ ಹೀಗಿರುವಾಗ ಸುಪ್ರೀಂ ಕೋರ್ಟ್ 2021ರಲ್ಲಿ ವಿಕಾಸ್ ಕೃಷ್ಣರಾವ್ ಗಾವಳಿ ಪ್ರಕರಣದಲ್ಲಿ ಮಹಾರಾಷ್ಟ್ರ ಸರ್ಕಾರ ಸ್ಥಳೀಯ ಸಂಸ್ಥೆಗಳಲ್ಲಿ ಹಿಂದುಳಿದ ವರ್ಗಗಳಿಗೆ ನೀಡಿದ್ದ ಮೀಸಲಾತಿಯನ್ನು ರದ್ದುಗೊಳಿಸಿದೆ. ಮುಂದುವರೆದು ಯಾರು ಹಿಂದುಳಿದವರು ಎಂಬುದನ್ನು ಪರಿಶೀಲಿಸಿ ಗುರುತಿಸುವ ಕ್ರಮ ಕೈಗೊಳ್ಳಬೇಕು ಎಂದು ಆದೇಶಿಸಿದೆ. ಅಲ್ಲಿಯವರೆಗೆ ಹಿಂದುಳಿದ ವರ್ಗಗಳಿಗೆ ಮೀಸಲಿಟ್ಟಿರುವ ಕ್ಷೇತ್ರಗಳನ್ನು ಸಾಮಾನ್ಯ ಕ್ಷೇತ್ರಗಳೆಂದು ಪರಿಗಣಿಸಿ ಚುನಾವಣೆಗಳನ್ನು ನಡೆಸಲೂ ಆದೇಶಿಸಿದೆ.

ತದನಂತರ ರಾಹುಲ್ ರಮೇಶ್ ವಾಘ್ ಪ್ರಕರಣದಲ್ಲಿ ಸುಪ್ರೀಂ ಕೋರ್ಟ್ ವಿಕಾಸ್ ಕೃಷ್ಣರಾವ್ ಪ್ರಕರಣದಲ್ಲಿ ನೀಡಿರುವ ತೀರ್ಪು ದೇಶದ ಎಲ್ಲ ರಾಜ್ಯಗಳು ಹಾಗೂ ಕೇಂದ್ರಾಡಳಿತ ಪ್ರದೇಶಗಳಿಗೆ ಅನ್ವಯವಾಗುತ್ತದೆ ಎಂಬುದಾಗಿ ಸ್ಪಷ್ಟಪಡಿಸಿದೆ.

ಇಂದು ಕರ್ನಾಟಕ ರಾಜ್ಯದ ಬೆಂಗಳೂರು ಮಹಾನಗರ ಪಾಲಿಕೆ, ಜಿಲ್ಲಾ ಪಂಚಾಯಿತಿ ಮತ್ತು ತಾಲ್ಲೂಕು ಪಂಚಾಯಿತಿಗಳ ಅವಧಿ ಮುಗಿದು ಒಂದು ವರ್ಷಕ್ಕಿಂತ ಹೆಚ್ಚು ಸಮಯವಾಗಿದೆ. ಈ ಸಂಸ್ಥೆಗಳಲ್ಲಿ ಕೋವಿಡ್ ಕಾರಣ ಚುನಾವಣೆ ಮುಂದೂಡಲಾಗುತ್ತಿದೆ. ಚುನಾವಣೆ ನಡೆಸೋಣವೆಂದರೆ ಸುಪ್ರೀಂ ಕೋರ್ಟ್ ತೀರ್ಪು ಅಡ್ಡಿ ಬರುತ್ತದೆ. ಇಂತಹ ಸಂದಿಗ್ಧ ಪರಿಸ್ಥಿತಿಯಲ್ಲಿ ಒಬಿಸಿ ಮೀಸಲಾತಿ ಚರ್ಚೆಗೆ ಒಳಗಾಗಿದೆ.

ಫಲಾನುಭವಿಗಳು ನಿಜವಾಗಿಯೂ ಹಿಂದುಳಿದವರೇ, ಯಾವ ಜಾತಿಯನ್ನು ಯಾವ ಪಟ್ಟಿಗೆ ಸೇರಿಸಬೇಕು, ಯಾವ ಜಾತಿಯನ್ನು ಯಾವ ಪ್ರವರ್ಗಕ್ಕೆ ಸೇರಿಸಬೇಕು ಮತ್ತು ಯಾವ ಜಾತಿಗಳನ್ನು ಹಿಂದುಳಿದ ಪಟ್ಟಿಯಿಂದ ತೆಗೆಯಬೇಕು ಎಂಬ ವಿಷಯದಲ್ಲಿ ವೈಜ್ಞಾನಿಕ ಮಾನದಂಡಗಳನ್ನು ರೂಪಿಸಬೇಕಾದರೆ ಅಗತ್ಯವಾಗಿ ಮಾಹಿತಿಯನ್ನು ಸಂಗ್ರಹಿಸಬೇಕಾಗುತ್ತದೆ.

ಆದರೆ, ಇಂದು ನಮ್ಮಲ್ಲಿ ಅಗತ್ಯ ಮಾಹಿತಿ ಇಲ್ಲ. ಬ್ರಿಟಿಷರ ಆಡಳಿತದಲ್ಲಿ ಭಾರತ ದೇಶದಲ್ಲಿ ಜನಗಣತಿ ಪ್ರಾರಂಭವಾಯಿತು. 1881ರಿಂದ 1931ರವರೆಗೆ ಜನಗಣತಿ ಹಾಗೂ ಜಾತಿ ಗಣತಿ ನಡೆಸಲಾಯಿತು. ಸ್ವಾತಂತ್ರ್ಯ ಬಂದ ನಂತರ 1951ರಿಂದ 2011ರವರೆಗೆ ನಡೆದಿರುವ ಜನಗಣತಿಯ ಜೊತೆಯಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಜನರ ಜಾತಿ ಗಣತಿಯನ್ನು ನಡೆಸಲಾಗಿದೆ. ಆದರೆ ಹಿಂದುಳಿದ ವರ್ಗಗಳ ಹಾಗೂ ಇತರೆ ಜಾತಿಗಳ ಗಣತಿಯನ್ನು ನಡೆಸಲಿಲ್ಲ.

ಮಂಡಲ್ ವರದಿ ಜಾರಿಗೆ ಬಂದ ನಂತರ ಹಿಂದುಳಿದ ವರ್ಗಗಳ ಜಾತಿ ಗಣತಿ ನಡೆಸಬೇಕೆಂಬ ಧ್ವನಿ ಕೇಳಿಬಂತು. ಆದರೆ, ಕೇಂದ್ರ ಸರ್ಕಾರ ಒಂದಲ್ಲ ಒಂದು ನೆಪವೊಡ್ಡಿ ಜಾತಿ ಗಣತಿ ನಡೆಸಿಲ್ಲ. 2011ರಲ್ಲಿ ಕೇಂದ್ರ ಸರ್ಕಾರ ಸುಮಾರು ₹5,000 ಕೋಟಿ ಹಣ ಖರ್ಚು ಮಾಡಿ ಜಾತಿಗಳ ಸಾಮಾಜಿಕ ಮತ್ತು ಆರ್ಥಿಕ ಸಮೀಕ್ಷೆಯನ್ನು ನಡೆಸಿದೆ.

ಆದರೆ, ಕೇಂದ್ರ ಸರ್ಕಾರ ಹಲವು ನೆಪಗಳನ್ನು ನೀಡಿ ಈ ಸಮೀಕ್ಷೆಯನ್ನು ಬಿಡುಗಡೆ ಮಾಡಲಿಲ್ಲ. 2021ರಲ್ಲಿ ನಡೆಯಬೇಕಾಗಿದ್ದ ಜನಗಣತಿಯನ್ನು ಕೋವಿಡ್ ಕಾರಣದಿಂದ ಮುಂದೂಡಲಾಗಿದೆ. ಮುಂದೆ ನಡೆಯಬೇಕಾಗಿರುವ ಜನಗಣತಿಯ ಜೊತೆಗೆ ಜಾತಿ ಗಣತಿಯ ನಡೆಸಬೇಕೆಂದು ಜನರ ಒತ್ತಡವಿದೆ. ಆದರೆ, ಕೇಂದ್ರ ಸರ್ಕಾರ ಜಾತಿ ಗಣತಿ ನಡೆಸಲು ಸಾಧ್ಯವಿಲ್ಲ ಎಂದು ಹೇಳುತ್ತಿದೆ. ಇಂತಹ ಪರಿಸ್ಥಿತಿಯಲ್ಲಿ ಹಿಂದುಳಿದ ವರ್ಗಗಳಿಗೆ ಈ ಹಿಂದೆ ನೀಡಿರುವ ಮೀಸಲಾತಿಯನ್ನು ಮುಂದುವರಿಸಬೇಕಾಗಿದೆ. ಮಾಹಿತಿ ಸಂಗ್ರಹವಾಗುವವರೆಗೂ ಯಥಾಸ್ಥಿತಿಯನ್ನು ಮುಂದುವರಿಸಿಕೊಂಡು ಹೋಗಬೇಕಾಗಿದೆ. ಈ ದೃಷ್ಟಿಯಿಂದ ಸುಪ್ರೀಂ ಕೋರ್ಟ್ ತನ್ನ ತೀರ್ಪನ್ನು ಪುನರ್ ಪರಿಶೀಲಿಸಬೇಕಾಗಿದೆ.

ನಮ್ಮ ಸಂವಿಧಾನದ ಅನುಚ್ಛೇದ 246ರಲ್ಲಿ ಜನಗಣತಿ ನಡೆಸುವುದನ್ನು ಕೇಂದ್ರ ಸರ್ಕಾರದ ಅಧಿಕಾರದ ವ್ಯಾಪ್ತಿಗೆ ಒಳಪಡಿಸಲಾಗಿದೆ. ರಾಜ್ಯ ಸರ್ಕಾರಗಳಿಗೆ ಜನಗಣತಿ ಮತ್ತು ಜಾತಿ ಗಣತಿ ನಡೆಸುವ ಅಧಿಕಾರವಿಲ್ಲ. ಆದರೆ, ಕರ್ನಾಟಕ ರಾಜ್ಯದ ಹಿಂದುಳಿದ ವರ್ಗಗಳ ಆಯೋಗ ನಡೆಸಿದ ಸಾಮಾಜಿಕ, ಆರ್ಥಿಕ, ಶೈಕ್ಷಣಿಕ ಸಮೀಕ್ಷೆಯ ವರದಿಯನ್ನು ಇದುವರೆಗೂ ಸರ್ಕಾರ ಸ್ವೀಕರ ಮಾಡಲೇ ಇಲ್ಲ. ಕೂಡಲೇ ಈ ಸಮೀಕ್ಷೆ ವರದಿಯನ್ನು ಸ್ವೀಕಾರ ಮಾಡಿ, ಸುಪ್ರೀಂ ಕೋರ್ಟ್‌ಗೆ ಮನವರಿಕೆ ಮಾಡಿ, ಹಿಂದುಳಿದ ವರ್ಗಗಳ ಹಿತ ಕಾಪಾಡುವ ರಾಜಕೀಯ ಇಚ್ಛಾಶಕ್ತಿಯನ್ನು ಪ್ರದರ್ಶಿಸಬೇಕು.

ಅಧಿಕಾರ ವಿಕೇಂದ್ರೀಕರಣ ಭಾರತ ಸಂವಿಧಾನದ ಮೂಲ ತತ್ವ. ಅಧಿಕಾರ ವಿಕೇಂದ್ರೀಕರಣದಿಂದ ಪಾರದರ್ಶಕತೆಯನ್ನು ಸಾಧಿಸಬಹುದು ಮತ್ತು ಗ್ರಾಮಾಂತರ ಪ್ರದೇಶದ ಪ್ರಗತಿಯನ್ನು ಸಾಧಿಸಬಹುದು ಎಂಬ ಸತ್ಯವನ್ನು ಅನುಭವದಿಂದ ಕಂಡುಕೊಳ್ಳಲಾಯಿತು. ಜನರು ಸರ್ಕಾರದ ಎಲ್ಲ ಹಂತದ ತೀರ್ಮಾನಗಳ ಪ್ರಕ್ರಿಯೆಗಳಲ್ಲಿ ತೊಡಗಿಸಿಕೊಂಡಾಗ ಮಾತ್ರ ಬಲಿಷ್ಠವಾದ ಪ್ರಜಾಪ್ರಭುತ್ವ ಕಟ್ಟಲು ಸಾಧ್ಯ. 'ಕಾಲ ಕಾಲಕ್ಕೆ ಚುನಾವಣೆಗಳು ನಡೆಯಬೇಕು ಮತ್ತು ಅದು ಸಂವಿಧಾನದ ಮೂಲ ತತ್ವ' ಎಂದು ಇಂದಿರಾಗಾಂಧಿ ಪ್ರಕರಣದಲ್ಲಿ ಸುಪ್ರೀಂ ಕೋರ್ಟ್ ಘೋಷಿಸಿದೆ. ಇಲ್ಲವೆಂದರೆ ಅತಿವೃಷ್ಟಿ, ಅನಾವೃಷ್ಟಿ, ಯುದ್ಧ, ತುರ್ತು ಪರಿಸ್ಥಿತಿ ಇತ್ಯಾದಿಗಳನ್ನು ನೆಪ ಮಾಡಿ, ಚುನಾವಣೆಗಳನ್ನು ಮುಂದೂಡಲಾಗುತ್ತಿತ್ತು.

ವಿಕಾಸ್ ಕೃಷ್ಣರಾವ್ ಪ್ರಕರಣದ ತೀರ್ಪನ್ನು ನೆಪಮಾಡಿ ಸ್ಥಳೀಯ ಸಂಸ್ಥೆಗಳ ಚುನಾವಣೆಗಳನ್ನು ಮುಂದೂಡುವುದು ಅಥವಾ ಹಿಂದುಳಿದ ವರ್ಗಗಳಿಗೆ ಮೀಸಲಾತಿ ನೀಡದೆ, ಸಾಮಾನ್ಯ ಕ್ಷೇತ್ರಗಳೆಂದು ಪರಿಗಣಿಸಿ ಚುನಾವಣೆಗಳನ್ನು ನಡೆಸುವುದು ಸಂವಿಧಾನದ ಮೂಲ ತತ್ವವಾದ ಪ್ರಜಾಪ್ರಭುತ್ವ ಮತ್ತು ಸಾಮಾಜಿಕ ನ್ಯಾಯಕ್ಕೆ ದ್ರೋಹ ಬಗೆದಂತೆ. ಕರ್ನಾಟಕ ರಾಜ್ಯ ಸರ್ಕಾರ ಸೂಕ್ತ ಕ್ರಮಗಳನ್ನು ಕೈಗೊಂಡು ಸಂವಿಧಾನದ ಆಶಯಗಳನ್ನು ಎತ್ತಿ ಹಿಡಿಯಬೇಕು ಮತ್ತು ಹಿಂದುಳಿದ ವರ್ಗಗಳ ಹಿತವನ್ನು ಕಾಪಾಡುವ ರಾಜಕೀಯ ಇಚ್ಛಾಶಕ್ತಿಯನ್ನು ಪ್ರದರ್ಶಿಸಬೇಕು.

ಲೇಖಕರು: ಹೈಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ

ಏನಿದು ಮೂರು ಹಂತದ ಪರಿಶೀಲನೆ?

ಸ್ಥಳೀಯ ಸಂಸ್ಥೆಗಳ ಚುನಾವಣೆಗಳಲ್ಲಿ ಹಿಂದುಳಿದ ವರ್ಗಗಳಿಗೆ ಮೀಸಲಾತಿ ಕಲ್ಪಿಸುವ ಮೊದಲು ಮೂರು ಹಂತದ ಪರಿಶೀಲನೆ ನಡೆಸುವಂತೆ ಕೆ. ಕೃಷ್ಣಮೂರ್ತಿ ಮತ್ತು ಕೇಂದ್ರ ಸರ್ಕಾರದ ನಡುವಿನ ಪ್ರಕರಣದಲ್ಲಿ ಸುಪ್ರೀಂಕೋರ್ಟ್ 2010ರ ಮೇ 11ರಂದು ನಿರ್ದೇಶನ ನೀಡಿತ್ತು. ಅದನ್ನು ಕಡ್ಡಾಯವಾಗಿ ಪಾಲಿಸುವಂತೆ ಸುಪ್ರೀಂಕೋರ್ಟ್ 2022ರ ಜನವರಿ 19ರಂದು ಎಲ್ಲ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಿಗೆ ತಾಕೀತು ಮಾಡಿದೆ. ನ್ಯಾಯಾಲಯ ಹೇಳಿರುವ ಮೂರು ಹಂತದ ಪರಿಶೀಲನೆಯು ಹೀಗಿದೆ...

1) ಪ್ರತ್ಯೇಕವಾದ ಆಯೋಗವೊಂದನ್ನು ನೇಮಕ ಮಾಡಿ, ಅದರ ಮೂಲಕ ಆ ಸಮಯದಲ್ಲಿ ರಾಜ್ಯದೊಳಗಿನ ವಿವಿಧ ಸಮುದಾಯಗಳ ರಾಜಕೀಯ ಹಿಂದುಳಿದಿರುವಿಕೆಯನ್ನು ಗುರುತಿಸಲು ನಿಖರ ಅಂಕಿಅಂಶಗಳೊಂದಿಗೆ ವಿಸ್ತೃತವಾದ ವಿಚಾರಣೆ ನಡೆಸಿ, ವರದಿ ಪಡೆಯುವುದು

2) ಆಯೋಗದ ಶಿಫಾರಸುಗಳನ್ನು ಆಧರಿಸಿ ಸ್ಥಳೀಯ ಸಂಸ್ಥೆಗಳವಾರು ಪ್ರತ್ಯೇಕವಾಗಿ ವಿವಿಧ ಸಮುದಾಯಗಳಿಗೆ ಮೀಸಲಾತಿಯನ್ನು ನಿಗದಿ ಮಾಡುವುದು

3) ಇಂತಹ ಯಾವುದೇ ಪ್ರಕರಣದಲ್ಲಿ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಹಿಂದುಳಿದ ವರ್ಗಗಳಿಗೆ ಮೀಸಲಿಡುವ ಒಟ್ಟು ಸ್ಥಾನಗಳ ಸಂಖ್ಯೆಯು ಶೇಕಡ 50ರಷ್ಟನ್ನು ಮೀರದಂತೆ ನಿಯಂತ್ರಿಸುವುದು



ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ 64

ಪರಮ ಪವಿತ್ರ ಭಸ್ಮದ ಮಹಿಮೆ

ಈಗ ಸೂತಮುನಿ ಪರಮಪವಿತ್ರವಾದ ಭಸ್ಮದ ಮಹಿಮೆಯನ್ನು ತಿಳಿಸುತ್ತಾನೆ.

ಸಕಲ ಮಂಗಳವನ್ನೂ ಉಂಟುಮಾಡುವ ಭಸ್ಮದಲ್ಲಿ ಮಹಾಭಸ್ಮ ಮತ್ತು ಸ್ವಲ್ಪಭಸ್ಮ ಅಂತ ಎರಡು ವಿಧ. ಎರಡು ಭಸ್ಮಗಳಲ್ಲಿಯೂ ಅನೇಕ ವಿಧವಿದೆ. ಮಹಾಭಸ್ಮದಲ್ಲಿ ಶ್ರೌತಭಸ್ಮ, ಸ್ಮಾರ್ತಭಸ್ಮ, ಲೌಕಿಕ ಭಸ್ಮ ಎಂದು ಮೂರು ವಿಧ. ಸ್ವಲ್ಪ ಭಸ್ಮದಲ್ಲಿ ಅನೇಕ ವಿಧಗಳಿವೆ.

ಶ್ರೌತ ಮತ್ತು ಸ್ಮಾರ್ತಭಸ್ಮಗಳನ್ನು ಗುರುವರ್ಯರು ಧರಿಸಬೇಕು. ಮಿಕ್ಕವರು ಲೌಕಿಕಭಸ್ಮವನ್ನು ಧರಿಸಬೇಕು. ಗುರುವರ್ಯರು ಮಂತ್ರಪೂರ್ವಕವಾಗಿ ಭಸ್ಮ ಧರಿಸಿದರೆ, ಸಾಮಾನ್ಯರು ಮಂತ್ರವಿಲ್ಲದೆ ಹಾಗೆಯೇ ಧರಿಸಬಹುದು. ಹಸುವಿನ ಸಗಣಿಯನ್ನು ಅಗ್ನಿಯಲ್ಲಿ ಸುಟ್ಟು ಭಸ್ಮ ಮಾಡುವುದರಿಂದ ಭಸ್ಮವನ್ನು ಅಗ್ನಿಯಿಂದ ಹುಟ್ಟಿದ್ದು ಅನ್ನಲಾಗುತ್ತೆ. ಅಗ್ನಿಹೋತ್ರದಿಂದಾದ ಭಸ್ಮವನ್ನೂ ಧರಿಸಬಹುದು. ಮಿಕ್ಕ ಜ್ಯೋತಿಷ್ಟೋಮಾದಿಯಾಗಗಳಲ್ಲಾದ ಭಸ್ಮಗಳಿಂದ ತ್ರಿಪುಂಡ್ರವನ್ನು ಧರಿಸಬಹುದು.

ಜಾಬಾಲೋಪನಿಷತ್ತಿನಲ್ಲಿರುವ 'ಅಗ್ನಿರಿತಿ ಭಸ್ಮ' ಎಂಬ ಏಳು ಮಂತ್ರಗಳಿಂದ ಪ್ರತ್ಯೇಕವಾಗಿ ಭಸ್ಮವನ್ನು ನೀರಿನಲ್ಲಿ ಕಲಸಿ ಹಚ್ಚಬೇಕು. ಬ್ರಹ್ಮಚಾರಿ ಮೊದಲಾದ ಆಶ್ರಮಿಗಳೂ ಗುರುವರ್ಯರೂ ಮಂತ್ರಪೂರ್ವಕವಾಗಿಯಾಗಲೀ ಮಂತ್ರವಿಲ್ಲದೆಯಾಗಲೀ ಭಸ್ಮತ್ರಿಪುಂಡ್ರವನ್ನು ಧರಿಸಬೇಕೆಂದು ಜಾಬಾಲರು ಹೇಳಿದ್ದಾರೆ. ಭಸ್ಮತ್ರಿಪುಂಡ್ರವನ್ನು ಅಡ್ಡವಾಗಿ ಧರಿಸಬೇಕು. ಮುಕ್ತಿಯನ್ನಪೇಕ್ಷಿಸುವವರು ಪ್ರಮಾದದಿಂದಲೂ ಭಸ್ಮತ್ರಿಪುಂಡ್ರ ಧಾರಣೆಯನ್ನು ಮಾಡದಿರಬಾರದು ಎಂದು ಜಾಬಾಲಶ್ರುತಿಯಲ್ಲಿ ಹೇಳಲಾಗಿದೆ.

ಭಸ್ಮವನ್ನು ತಿರ್ಯಕ್ತ್ರಿಪುಂಡ್ರವಾಗಿ ಅಂದರೆ, ಅಡ್ಡವಾಗಿ ಮೂರು ಪಟ್ಟೆಗೆರೆಗಳನ್ನು ಶಿವ, ವಿಷ್ಣು, ಪಾರ್ವತಿದೇವಿ, ಸರಸ್ವತಿ, ಲಕ್ಷ್ಮಿದೇವಿ ಮುಂತಾದ ದೇವತೆಗಳೂ ಧರಿಸುವರು. ಆದ್ದರಿಂದ ಜಗತ್ತಿನ ಎಲ್ಲರೂ ಭಸ್ಮವನ್ನು ತ್ರಿಪುಂಡ್ರವಾಗಿ ಧರಿಸಬೇಕು. ಭಸ್ಮವನ್ನು ಸುಮ್ಮನೆ ಮೇಲೆ ಧರಿಸುವುದಾಗಲಿ ಮತ್ತು ತ್ರಿಪುಂಡ್ರಧಾರಣವನ್ನು ಶ್ರದ್ಧೆಯಿಲ್ಲದೆ ಆಚರಿಸುವುದಾಗಲಿ ಮಾಡಬಾರದು. ಭಸ್ಮೋದ್ಧೂಲನ ಮತ್ತು ತ್ರಿಪುಂಡ್ರಗಳನ್ನು ಶ್ರದ್ಧೆಯಿಂದ ಧರಿಸದಿರುವವರಿಗೆ ಕೋಟಿ ಜನ್ಮಗಳಾದರೂ ಸಂಸಾರದಿಂದ ಬಿಡುಗಡೆ ಆಗಲಾರದು; ನೂರು ಕೋಟಿ ಜನ್ಮಗಳಾದರೂ ಶಿವಜ್ಞಾನ ಲಭಿಸುವುದಿಲ್ಲ. ಭಸ್ಮೋದ್ಧೂಲನ ಮತ್ತು ತ್ರಿಪುಂಡ್ರಗಳನ್ನು ಶ್ರದ್ಧೆಯಿಂದ ಧರಿಸದಿರುವವರು ಮಹಾಪಾಪಗಳನ್ನು ಮಾಡಿದವರೆಂದು ಶಾಸ್ತ್ರಸಿದ್ಧಾಂತ ಹೇಳುತ್ತದೆ. ಶ್ರದ್ಧೆಯಿಂದ ಧರಿಸದವರು ಮಾಡುವ ಆಚಾರವೆಲ್ಲವೂ ಅನಿಷ್ಟವಾದ ಫಲವನ್ನೇ ಕೊಡುವುದು. ಮಹಾಪಾಪಗಳನ್ನು ಮಾಡಿದವರಿಗೆ ಮಾತ್ರ ಶಿವನಲ್ಲಿ, ಭಸ್ಮತ್ರಿಪುಂಡ್ರ ಮತ್ತು ಉದ್ಧೂಲನಗಳ ಬಗ್ಗೆ ದ್ವೇಷವುಂಟಾಗುವುದು.

ಶಿವನನ್ನುದ್ದೇಶಿಸಿ ಅಗ್ನಿಕಾರ್ಯವನ್ನು ಮಾಡಿ ಭಸ್ಮರಕ್ಷೆಯನ್ನು ಧಾರಣಮಾಡಿದರೆ ಸರ್ವಪಾಪದಿಂದ ಮುಕ್ತರಾಗುವರು. ಶುದ್ಧವಾದ ಬಿಳಿಯ ಭಸ್ಮವನ್ನು ನಿತ್ಯವೂ ಮೂರು ಸಂಧ್ಯಾಕಾಲಗಳಲ್ಲಿ ಮೂರು ಗೆರೆಗಳಾಗಿ ಯಾರು ಧರಿಸುವರೋ ಅವರು ಪಾಪಗಳನ್ನು ಕಳೆದುಕೊಂಡು ಶಿವನೊಡನೆ ವಿಹರಿಸುವರು. ಬಿಳಿಯ ಭಸ್ಮವನ್ನು ಹಣೆಯಲ್ಲಿ ಮೂರು ಪಟ್ಟೆಯಾಗಿ ಧರಿಸಿದವರು ಮರಣಾನಂತರ ಸ್ವರ್ಗವನ್ನು ಸೇರುವರು.

ಭಸ್ಮವನ್ನು ಧರಿಸದೆ ಶಿವಷಡಕ್ಷರಮಂತ್ರವನ್ನು ಜಪಿಸಕೂಡದು. ಭಸ್ಮತ್ರಿಪುಂಡ್ರವನ್ನು ವಿಧಿವತ್ತಾಗಿ ಧರಿಸಿಯೇ ಜಪವನ್ನು ಮಾಡಬೇಕು. ಕ್ರೂರನಾದರೂ ನೀಚನಾದರೂ ಮಹಾಪಾಪಿಯಾದರೂ ಮೂರ್ಖನೂ ಪತಿತನೂ ಆದರೂ ವಿಭೂತಿಯನ್ನು ಧರಿಸಿದವನು ಯಾವ ದೇಶದಲ್ಲಿ ವಾಸಿಸುವನೋ, ಆ ದೇಶವು ಸಕಲ ತೀರ್ಥಗಳ ಮತ್ತು ಯಾಗಗಳ ಸಾನ್ನಿಧ್ಯವುಳ್ಳದುದಾಗಿ ಪವಿತ್ರತಮವಾಗುವುದು.

ತ್ರಿಪುಂಡ್ರವನ್ನು ಧರಿಸುವ ವ್ಯಕ್ತಿ ಪಾಪಿಷ್ಠನಾಗಿದ್ದರೂ ಅವನನ್ನು ದೇವತೆಗಳೂ ಅಸುರರೂ ಆದರಿಸುವರು. ಇನ್ನು ಪಾಪವಿಲ್ಲದೆ ಶುದ್ಧಾತ್ಮನೂ ಶ್ರದ್ಧೆಯುಳ್ಳವನೂ ಆದವನು ತ್ರಿಪುಂಡ್ರವನ್ನು ಧರಿಸಿದರೆ ಪವಿತ್ರನೂ ಪೂಜ್ಯನೂ ಆಗುವನೆಂಬುದರಲ್ಲಿ ಸಂದೇಹವೇ ಬೇಡ ಅಂತ ಸ್ಪಷ್ಟಪಡಿಸುತ್ತಾನೆ. ವಿಭೂತಿಯನ್ನು ಧರಿಸಿರುವ ಶಿವಜ್ಞಾನಿಯು ಅಕಸ್ಮಾತ್ತಾಗಿ ಯಾವುದಾದರೊಂದು ದೇಶಕ್ಕೆ ಹೋದರೂ, ಆ ದೇಶವು ಸದಾ ತೀರ್ಥಗಳ ಸಾನ್ನಿಧ್ಯವುಳ್ಳದ್ದಾಗುವುದು. ಆದ್ದರಿಂದ ತಿಳಿವಳಿಕೆಯುಳ್ಳವರು ಸದಾ ಭಸ್ಮವನ್ನು ಧರಿಸಬೇಕು. ಲಿಂಗವನ್ನು ಸದಾ ಅರ್ಚಿಸಬೇಕು. ಶಿವಷಡಕ್ಷರಮಂತ್ರವನ್ನು ಸದಾ ಜಪಿಸಬೇಕು. ತ್ರಿಮೂರ್ತಿಗಳೂ ಮುನಿಗಳೂ ದೇವತೆಗಳೂ ಭಸ್ಮಧಾರಣದ ಮಹಿಮೆಯನ್ನು ವರ್ಣಿಸಲಾರರು. ಧರ್ಮ ಆಚರಿಸದವನೂ, ಕರ್ಮವನ್ನು ಮಾಡದವನೂ ಸಹ ಒಂದು ಬಾರಿ ಭಸ್ಮವನ್ನು ಧರಿಸುವುದರಿಂದಲೇ ಪಾಪವಿಲ್ಲದವನಾಗುತ್ತಾನೆ. ಯಾರು ಭಸ್ಮವನ್ನು ಧರಿಸದೆ ಕರ್ಮವನ್ನು ಆಚರಿಸುವರೋ, ಆ ಮಾನವರಿಗೆ ಕೋಟಿ ಜನ್ಮಗಳಾದರೂ ಈ ಸಂಸಾರದಿಂದ ಮುಕ್ತಿ ಲಭಿಸಲಾರದು ಎಂದು ಹೇಳುತ್ತಾನೆ ಸೂತಮುನಿ.

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ


9606038256

ಉಕ್ರೇನ್‌ನಿಂದ ಜನರನ್ನು ತೆರವು ಮಾಡುತ್ತಿರುವ ವಿಮಾನವೊಂದರ ಒಳಕ್ಕೆ ರಷ್ಯಾ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ಹತ್ತಿ ಹೋಗುತ್ತಿದ್ದಾರೆ ಎನ್ನಲಾದ ವಿಡಿಯೊವೊಂದು ವೈರಲ್ ಆಗಿದೆ. ಯುದ್ಧಪೀಡಿತ ದೇಶದಿಂದ ಭಾರತಕ್ಕೆ ವಾಪಸಾಗಲು ವಿಮಾನ ಹತ್ತಿರುವ ಭಾರತೀಯ ವಿದ್ಯಾರ್ಥಿಗಳನ್ನು ಪುಟಿನ್ ಅವರು ಖುದ್ದಾಗಿ ಭೇಟಿ ಮಾಡಿದ್ದಾರೆ ಎಂದು ಈ ವಿಡಿಯೊಗೆ ವಿವರಣೆ ನೀಡಲಾಗಿದೆ. ಭಾರತಕ್ಕೆ ಮತ್ತು ಪ್ರಧಾನಿ ನರೇಂದ್ರ ಮೋದಿ ಅವರಿಗೆ ಪುಟಿನ್ ಅವರು ನೀಡುತ್ತಿರುವ ಗೌರವ ಇದು ಎಂದು ಈ ವಿಡಿಯೊ ಹಂಚಿಕೊಂಡಿರುವವರು ವಿಶ್ಲೇಷಿಸಿದ್ದಾರೆ.



ಈ ವಿಡಿಯೊದಲ್ಲಿ ಇರುವ ವ್ಯಕ್ತಿ ಪುಟಿನ್ ಅಲ್ಲ. ಅವರು ರೊಮೇನಿಯಾದ ಭಾರತ ರಾಯಭಾರಿ ರಾಹುಲ್ ಶ್ರೀವಾತ್ಸವ ಎಂದು ಆಲ್ಟ್ ನ್ಯೂಸ್ ವರದಿ ಮಾಡಿದೆ. ಫೆಬ್ರುವರಿ 26ರಂದು ಎಎನ್‌ಐ ಸುದ್ದಿಸಂಸ್ಥೆ ಈ ವಿಡಿಯೊವನ್ನು ಟ್ವೀಟ್ ಮಾಡಿದೆ. ಉಕ್ರೇನ್‌ನಲ್ಲಿ ಸಿಲುಕಿರುವ ಭಾರತೀಯರನ್ನು ಕರೆತರಲು ಭಾರತ ಸರ್ಕಾರ ಹಗಲು ರಾತ್ರಿ ಶ್ರಮಿಸುತ್ತಿದೆ ಎಂದು ಅವರು ಶ್ರೀವಾತ್ಸವ ಅವರು ಹೇಳಿರುವುದು ವಿಡಿಯೊದಲ್ಲಿ ಉಲ್ಲೇಖವಾಗಿದೆ. ಉಕ್ರೇನ್‌ನಿಂದ ಸ್ಥಳಾಂತರ ಸಾಧ್ಯವಾಗದ ವಿದ್ಯಾರ್ಥಿಗಳನ್ನು ಕುರಿತೂ ಅವರು ಮಾತನಾಡಿರುವುದು ವಿಡಿಯೊದಲ್ಲಿ ದಾಖಲಾಗಿದೆ.

ಗುಂಡಣ್ಣ



ಬೆರಗಿನ ಬೆಳಕು



ಗುರುರಾಜ ಕರಜಗಿ

ಸ್ವಇಚ್ಛೆಯ ಭಕ್ತಿ

ದೇವರದಿದೆಲ್ಲ ದೇವರಿಗೆಲ್ಲವೆಂದೊರಲು |
ತಾವುದನುಮವನ ನಿರ್ಣಯಕೆ ಬಿಡದೆಯೆ ತಾಂ ||
ದಾವನ್ತಬಡುತ ತನ್ನಿಚ್ಛೆಯನೆ ಘೋಷಿಸುವ |
ಭಾವವೆಂತಹ ಭಕುತಿ? - ಮಂಕುತಿಮ್ಮ || 581 ||

ಪದ-ಅರ್ಥ: ದೇವರದಿದೆಲ್ಲ = ದೇವರದು + ಇದೆಲ್ಲ, ದೇವರಿಗೆಲ್ಲವೆಂದೊರಲುತಾವುದನಮವನ = ದೇವರಿಗೆ + ಎಲ್ಲ + ಒರಲುತ + ಯಾವುದನ್ + ಅವನ, ದಾವನ್ತಪಡುತ = ಧಾವಂತ ಪಡುತ್ತ, ಭಾವವೆಂತಹ = ಭಾವ + ಎಂತಹ.

ವಾಚ್ಯಾರ್ಥ: ಇದೆಲ್ಲ ದೇವರದೆ, ದೇವರದೆ ಎಲ್ಲ ಎಂದು ಕೂಗುತ್ತ ಯಾವುದನ್ನು ಅವನ ನಿರ್ಣಯಕ್ಕೆ ಬಿಡದೆ, ತಾನೇ ಧಾವಂತವನ್ನು ಪಡುತ್ತ, ತನ್ನ ಇಚ್ಛೆಯನ್ನೇ ನಡೆಸುವ ಭಾವ ಎಂತಹ ಭಕ್ತಿ?

ವಿವರಣೆ: ನನ್ನ ಗೆಳೆಯರೊಬ್ಬರು ಉತ್ತರಪ್ರದೇಶದ, ಸೀತಾಪೂರ ಗ್ರಾಮದಲ್ಲಿಯ ಖಬೀಸ್ ಬಾಬಾರವರ ದೇವಸ್ಥಾನಕ್ಕೆ ಹೋಗಿದ್ದರು. ಅವರ ದೈವಶ್ರದ್ಧೆ ಮೂಢನಂಬಿಕೆಯಾಗುವಷ್ಟು ಬಲವಾದದ್ದು. ಅಲ್ಲಿ ಹೋಗಿ ಪೂಜೆ ಮಾಡಿದ ಮೇಲೆ ಅಲ್ಲಿಯ ಶಿಷ್ಯರು ಇವರಿಗೆ ಪ್ರಸಾದಕ್ಕೆ ತಂದದ್ದನ್ನು ಕೊಡಿ ಎಂದರಂತೆ. ಇವರು ಭಕ್ತಿಯಿಂದ ಹಣ್ಣು, ತೆಂಗಿನಕಾಯಿ ಮತ್ತು ಹೂವುಗಳನ್ನು ಕೊಟ್ಟರು. ಆಗ ಅಲ್ಲಿಯವರು, 'ಇದೆಲ್ಲಾ ಬೇಡ, ಇಲ್ಲಿಯ ವಿಶೇಷ ನೈವೇದ್ಯವನ್ನು ತಂದಿದ್ದೀರಾ?' ಎಂದು ಕೇಳಿದರು. ಇವರು ತಮ್ಮಿಂದ ಆ ಪ್ರಸಾದವನ್ನು ತರದಿದ್ದುದು ಅಪಚಾರವಾಯಿತೇನೋ ಎಂದು ಭಯಪಟ್ಟು, 'ಇಲ್ಲಿಯ ವಿಶೇಷ ನೈವೇದ್ಯ ನನಗೆ ತಿಳಿದಿಲ್ಲ. ಏನದು?' ಎಂದು ಕೇಳಿದರು. ಅವರು ಕೊಟ್ಟ ಉತ್ತರ ಇವರನ್ನು ಗಾಬರಿ ಮಾಡಿತು. ಅವರು ಹೇಳಿದರು, 'ಸ್ವಾಮಿ, ಇಲ್ಲಿ ಹಣ್ಣು ಕಾಯಿಗಳ ನೈವೇದ್ಯವಿಲ್ಲ. ಕೇವಲ ಮದ್ಯವನ್ನೇ ನೈವೇದ್ಯ ಮಾಡಬೇಕು. ವಿದೇಶಿ ಮದ್ಯವಾದರೆ ಇನ್ನೂ ಉತ್ತಮ'.

ಇಂಥದ್ದನ್ನು ನಾವೆಲ್ಲ ಕೇಳಿದ್ದೇವೆ, ಕಂಡಿದ್ದೇವೆ. ಇಂಥ ದೇವರಿಗೆ ಇಂಥದೇ ಪ್ರಸಾದ. ದೇವರಿಗೆ ಈ ತರಹದ ಪೂಜೆಯೇ ಆಗಬೇಕು. ಅದಾಗದಿದ್ದರೆ ಅಪಚಾರ. ದೇವರು ಕೋಪಗೊಂಡರೆ ಅನಾಹುತ ತಪ್ಪಿದ್ದಲ್ಲ. ಈ ಪರಿಯ ಭಯವನ್ನು ಸೃಷ್ಟಿಮಾಡಿದ್ದೇವೆ. ಮಾಡುವುದೆಲ್ಲ ದೇವರಿಗೇ ತಾನೇ ಎಂದು ಧಾವಂತಪಟ್ಟು ಸಾಲ ಮಾಡಿಯಾದರೂ ಪೂಜೆ, ಪುನಸ್ಕಾರ ಮಾಡಿಸಿ, ದೇವರು ತೃಪ್ತನಾದ ಎಂದು ಸಮಾಧಾನಪಡುತ್ತೇವೆ.

ದೇವರು ಎನ್ನುವ ತತ್ವ ಎಲ್ಲದರ ಅಂತರಂಗದಲ್ಲಿ ಹಾಸಿ ಹರವಿದ ತಥ್ಯ. ಅದು ವಿಶ್ವದ ಆದಿ ಅಂತ್ಯಗಳಲ್ಲಿ ನೆಲೆಸಿದ ತತ್ವ. ಆ ತತ್ವ ಬರೀ ಬಯಲು. ಆದರೆ ಮುಂದೆ ಕೆಲವರು ದೇವರ ಚಿಂತನೆಯನ್ನು ವ್ಯಾಪಾರ ಮಾಡಿಕೊಂಡರು. ಅದಕ್ಕೆ ಜನರ ಭಯವೇ ಬಂಡವಾಳ. ಜನ ಹೆದರಿದಷ್ಟೂ ಉತ್ಪನ್ನ ಹೆಚ್ಚು. ಆದ್ದರಿಂದ ಇಂಥ ದೇವರಿಗೆ ಇಂಥ ಸೇವೆಯೇ ಆಗಬೇಕು. ಇಂಥ ಯಜ್ಞವನ್ನೇ ಮಾಡಬೇಕು. ಅಂದರೆ ದೇವರು ಸುಪ್ರೀತನಾಗುತ್ತಾನೆ ಎಂದೆಲ್ಲ ಹೇಳಿದರು. ಪ್ರಪಂಚದ ವಸ್ತುವೆಲ್ಲ ಅವನದೇ ಆಗಿರುವಾಗ, ನೀವು ನೀಡುವ ಅನ್ನ, ಸಕ್ಕರೆ, ಹಣ್ಣು ಯಾರದ್ದು? ಈಗ ನಿಮಗೆ ಸಾಡೇಸಾತಿ ಶನಿ ಇದೆ. ಇನ್ನೂ ಏಳೂವರೆ ವರ್ಷ ಕಷ್ಟ ತಪ್ಪಿದ್ದಲ್ಲ. ಅದರ ಪರಿಹಾರಕ್ಕೆ ಈ ಪೂಜೆ ಮಾಡಬೇಕು ಎಂದು ಶೋಷಿಸುತ್ತೇವೆ. ದೇವರನ್ನು ತಂದೆ-ತಾಯಿ ಎಂದು ಕರೆಯುತ್ತೇವೆ. ನಮ್ಮ ತಂದೆ-ತಾಯಿಯರು ಇಷ್ಟು ನಿಷ್ಕರುಣಿಗಳಾದಾರೇ?

ಅದಕ್ಕೆ ಈ ಕಗ್ಗ ಹೇಳುತ್ತದೆ, ಎಲ್ಲವೂ ದೇವರದೇ, ಎಲ್ಲವೂ ದೇವರಿಗೇ ಎನ್ನುತ್ತ ಯಾವುದನ್ನೂ ಭಗವಂತನ ನಿರ್ಣಯಕ್ಕೆ ಬಿಡದೆ, ತಮ್ಮ ಇಚ್ಛೆಯನ್ನೇ ಅವನ ಇಚ್ಛೆಯೆಂದು ಹೇರುವುದು ಭಕ್ತಿಯೇ?

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಗುರುವಾರ ಮಾರ್ಚ್ 10, 2022

ಶ್ರೀ ಪ್ಲವನಾಮ ಸಂವತ್ಸರ ಉತ್ತರಾಯಣ - ಶಿಶಿರ ಋತು ಕುಂಭ ಮಾಸದ 26 ನೇ ದಿನ
ತಿಥಿ: (ಫಾಲ್ಗುಣ ಶುಕ್ಲ) ಅಷ್ಟಮಿ ಗಂ. 29-35 ನಕ್ಷತ್ರ: ರೋಹಿಣಿ ಗಂ. 11-30 ಯೋಗ: ಪ್ರೀತಿ ಗಂ. 26-13, ಕರಣ: ವಿಷ್ಟಿ ಗಂ. 16-15. ರಾಹುಕಾಲ : ಮಧ್ಯಾಹ್ನ 01:30 - 03:00
ಸೂರ್ಯೋದಯ : 06-44 ಸೂರ್ಯಾಸ್ತ : 06-37 ಮುಸ್ಲಿಂ ದಿನಾಂಕ : 06 ಶಬನ್ ದಿನ ಭವಿಷ್ಯ: ಹೋಲಾಷ್ಟಕ ಅದೃಷ್ಟ ಸಂಖ್ಯೆ: 4, 9

ಮೇಷ: ನಿಮ್ಮ ಸಹೋದ್ಯೋಗಿಯೊಬ್ಬರು ವೃತ್ತಿಗೆ ಅನುಕೂಲವಾಗುವಂತಹ ಉತ್ತಮ ಉಪಾಯಗಳನ್ನು ನೀಡಲಿದ್ದು ಅವರ ಅನುಭವವನ್ನು ನಿಮ್ಮೊಂದಿಗೆ ಹಂಚಿಕೊಳ್ಳಲಿದ್ದಾರೆ. ಹೃದಯದ ಮಾತಿಗೆ ಬೆಲೆ ಕೊಡುವುದು ಬಹಳ ಮುಖ್ಯ.

ವೃಷಭ: ರಾಜಕೀಯ ವ್ಯಕ್ತಿಗಳಿಂದ ಸಾಮಾಜಿಕವಾದ ಕಾರ್ಯ ಸಾಧಿಸಿಕೊಳ್ಳುವಲ್ಲಿ ನಿಮ್ಮ ಪಾತ್ರ ಮುಖ್ಯವಾಗಿರಲಿದೆ. ಬಂಧುಗಳಿಂದ ಉಡುಗೊರೆಯ ರೂಪದಲ್ಲಿ ದ್ರವ್ಯಲಾಭ. ಪರಿಣಿತರಿಗೆ ಶಿಕ್ಷಣ ವೃತ್ತಿ ದೊರೆಯುವ ಸಂಭವವಿದೆ.

ಮಿಥುನ: ಮಕ್ಕಳ ಆಸೆಗೆ ಅಡ್ಡಗಾಲು ಹಾಕಿ ಮನಸ್ಸನ್ನು ನೋವಿಸುವ ಕೆಲಸವನ್ನು ಮಾಡದಿರಿ. ಅಧಿಕಾರಸ್ಥರು ಹಾಗೂ ನಿಮ್ಮ ಹಿರಿಯ ನೌಕರರ ಜತೆ ನಿಮ್ಮ ಸ್ನೇಹ ಸಂಬಂಧ ಹೆಚ್ಚಾಗಿ ಬೆಳೆದು ವೃತ್ತಿಯಲ್ಲಿ ನವ ಉಲ್ಲಾಸ ಮೂಡಲಿದೆ.

ಕರ್ಕಾಟಕ: ನಿಮ್ಮ ಈ ದಿನದ ಕೆಲಸಗಳಿಗೆ ಆತ್ಮಸ್ಥೈರ್ಯ ಬಹಳ ಅಗತ್ಯವಾಗುವುದು. ಕ್ರೀಡಾಸಕ್ತರಿಗೆ ಅಥವಾ ಕ್ರೀಡಾಪಟುಗಳಿಗೆ ಇಂದು ಶುಭದಾಯಕ ದಿನ. ಕಲಾವಿದರಿಗೆ ಕಿರುತೆರೆಯಲ್ಲಿ ಅಭಿನಯಿಸಲು ಅವಕಾಶಗಳು ಲಭಿಸುವುದು.

ಸಿಂಹ: ಯೋಜನಾ ಬದ್ಧವಾದ ಕೆಲಸವನ್ನು ರೂಪಿಸದಿದ್ದರೆ ಈ ದಿನದ ನಿಮ್ಮ ಶ್ರಮ ವ್ಯರ್ಥವಾಗಲಿದೆ. ಕಟ್ಟಡ ನಿರ್ಮಾಣದ ಕೆಲಸಗಾರರಿಗೆ ವೃತ್ತಿಯಲ್ಲಿ ಬೇಸರ ಹುಟ್ಟಬಹುದು. ಕುಲ ಕಸುಬುಗಳು ನಿಮ್ಮ ಅಭ್ಯುದಯಕ್ಕೆ ಕಾರಣವಾಗುತ್ತದೆ.

ಕನ್ಯಾ: ನಿಮ್ಮನ್ನು ನೀವೇ ಪ್ರಶ್ನಿಸಿಕೊಳ್ಳುವ ಸಮಯ ಎದುರಾಗುವುದು. ಮಾಡಿದ ಪಾಪದ ಫಲ ಅನುಭವಕ್ಕೆ ಬರಲಿದೆ. ಅಸಹಾಯಕ ಪರಿಸ್ಥಿತಿಯನ್ನು ತಂದುಕೊಳ್ಳಬೇಡಿ. ದತ್ತಾತ್ರೇಯರ ಆರಾಧನೆಯಿಂದ ಜ್ಞಾನ ಸಂಪಾದನೆ.

ತುಲಾ: ವಾಹನ ಚಾಲನೆಯಲ್ಲಿ ಹೆಚ್ಚಿನ ಮುತುವರ್ಜಿ ವಹಿಸಿ. ಸಹೋದರರ ಜೊತೆ ಉತ್ತಮ ಬಾಂಧವ್ಯವನ್ನು ಹೊಂದುವುದರಿಂದ ಹೆಚ್ಚಿನ ಕಾರ್ಯಗಳಲ್ಲಿ ಅನುಕೂಲ ಇರುವುದು. ಸ್ನೇಹ ಸಂಬಂಧಗಳಿಗೆ ಹೆಚ್ಚಿನ ಪ್ರಾಮುಖ್ಯತೆ ನೀಡಿ.

ವೃಶ್ಚಿಕ: ನಿರಂತರ ಕೆಲಸಗಳಿಂದಾಗಿ ದಣಿದ ನಿಮಗೆ ಇಂದಿನ ಸ್ವಲ್ಪಮಟ್ಟಿನ ಬಿಡುವು ಆರಾಮವೆನಿಸುವುದು. ಕಚೇರಿಯಲ್ಲಿ ಎಲ್ಲರೊಂದಿಗೆ ಸಂತೋಷವಾಗಿರುವಿರಿ. ಮನೆ ನಿರ್ಮಾಣದ ಕೆಲಸ ಪೂರ್ತಿಗೊಳ್ಳುವ ಹಂತ ತಲುಪಲಿದೆ.

ಧನು: ಸಹಾಯಕ ದರ್ಜೆಯವರಲ್ಲಿ ಕೆಲಸ ಮಾಡಿಸಿಕೊಳ್ಳುವ ಬದಲು ಸ್ವಂತವಾಗಿ ಕೆಲಸ ಮಾಡುವುದು ಉತ್ತಮವೆಂದು ಅನಿಸಲಿದೆ. ಆದರೆ ಈ ಪ್ರಯತ್ನ ಸದ್ಯಕ್ಕೆ ಸರಿಯಲ್ಲ. ಸಿದ್ಧ ಉಡುಪು ಮಾರಾಟಗಾರರಿಗೆ ವಿಶೇಷ ಲಾಭ.

ಮಕರ: ಧಾರ್ಮಿಕ ಕೆಲಸಗಳಿಗಾಗಿ ಖರ್ಚುಗಳಿದ್ದರೂ ದೈವಬಲದಿಂದ ಎಲ್ಲಾ ವ್ಯವಹಾರಗಳಲ್ಲಿ ಉತ್ತಮ ಧನಾದಾಯ. ನಿಮ್ಮ ಭಾವನೆಗಳಿಗೆ ಉತ್ತಮ ಪ್ರಶಂಸೆ ಸಿಗುವ ದಿನ. ಹಣ್ಣು ಹಂಪಲುಗಳ ಬೆಳೆಗಾರರಿಗೆ ಕೀಟಬಾಧೆ ಇರಬಹುದು.

ಕುಂಭ: ನಿಮ್ಮಲ್ಲಿದ್ದ ಅಭದ್ರತೆಯ ಭಾವ ಈ ದಿನದಲ್ಲಿಯೇ ಬಿಟ್ಟು ಹೋಗಲಿದೆ. ಕೃಷಿಕರು ಕೈ ಬಿಟ್ಟಿರುವ ಯೋಜನೆಗಳನ್ನು ಮತ್ತೆ ಮುಂದುವರೆಸುವ ಅವಕಾಶ ಬರಲಿದೆ ಹಾಗು ಪೂರಕವಾದ ವಾತಾವರಣ ನಿರ್ಮಾಣವಾಗುವುದು.


ಮೀನ: ಸ್ವ ಸಾಮರ್ಥ್ಯದಿಂದ ಗುರಿ ಸಾಧಿಸಿದ ಹೆಮ್ಮೆ ನಿಮ್ಮದಾಗಲಿದೆ. ನಡೆದು ಹೋದ ಸಂಗತಿಗಳ ಅಥವಾ ದುರ್ಘಟನೆಗಳ ಬಗ್ಗೆ ಯೋಚಿಸದೆ ಕಾರ್ಯ ಪ್ರವೃತ್ತರಾದಲ್ಲಿ ಜಯ ಸಾಧ್ಯ. ವಿರೋಧಿಗಳು ನಿಮ್ಮನ್ನು ಏನೂ ಮಾಡಲಾರರು.

ಪದಬಂಧ 4893

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಬೇಸಾಯವನ್ನು ಹೀಗೂ ಹೇಳುವರು (4)
3. ಉಗ್ರವಾದ ಹೊಡೆದಾಟ (4)
5.ಕಡೆದ ಮೊಸರು (3)
6.ನನಗದು ಬೇಕು ಎಂದು ತೆಗೆದುಕೊಂಡ ಹಣ (3)
8.ಕಷ್ಟವಲ್ಲದದು ಇದು! (3)
9.ಸಭೆಯಲ್ಲಿ ಕುಳಿತಿರುವವ (3)
10.ವಿಸ್ತಾರವಾದ ನಿರೂಪಣೆ (3)
11.ಕೈತೋಟ ಇಲ್ಲಿದೆ (3)
12.ಸಾಗಿಸುವಿಕೆಗೊಂದು ಪರ್ಯಾಯ ಪದ (3)
14.ಬವಣೆ ಪಟ್ಟು ಒಟ್ಟಿರುವ ಮೆದೆ (3)
16.ಕಲೆಯಿಂದ ಕೂಡಿದ ಆಹ್ವಾನ ಪತ್ರ (4)
17.ಮನಸ್ಸಿಗೆ ತಾಗುವಂತೆ ಹೇಳಿದ ಮಾತು (4)

ಮೇಲಿಂದ ಕೆಳಕ್ಕೆ
1.ವ್ಯವಸಾಯಗಾರನು ತೋಡಿಕೊಂಡಿರುವ ದುಃಖ (3)
2.ಮೃತ್ಯು ದೇವತೆಯಿದು (2)
3.ಹಲಗೆ ಸಲುವಾಗಿಯೇ ಈ ದ್ವೇಷ ! (2)
4.ತಿರುಗಿದಾಗ ಕಾಣಿಸಿದ ಕರಂಡಕ (3)
7.ಕೆಟ್ಟ ಅಹಂಕಾರವಿದು (5)
8.ಅಕ್ಕಸಾಲಿ ಇಲ್ಲಿದ್ದಾನೆ (5)
11.ಉದಯ ಕಾಲದಲ್ಲಿ ಹಿಡಿದಿಟ್ಟ ನೀರು (3)
13.ಎಲ್ಲೆ ಬಳಿ ತಲೆದೋರಿದ ಶೀತ (3)
14.ಅಬಲೆ ಬೀಸಿದ ಜಾಲ! (2)
15.ನಾವೆಲ್ಲ ನೋಡಿದ ಹಡಗು ಉಲ್ಟಾ ಆಗಿದೆಯಲ್ಲ! (2)



4892ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ಅನುಸ್ವಾರ 3.ಪರಿತ್ಯಾಗ 5.ಮಸಣ 7.ಜ್ಯೋತಿ 8.ಕತೆ 11.ಯಮ 13.ಶಂಕೆ 14.ರಕುತ 16.ರಿಕ್ತಹಸ್ತ 17.ತಿರಸ್ಕಾರ

ಮೇಲಿಂದ ಕೆಳಕ್ಕೆ: 1.ಅತಿರೇಕ 2.ರಮ 3.ಪಣ 4.ಗರತಿ 6.ಸಗೋತ್ರ 7.ಜ್ಯೋತಿರ್ಮಯ 9.ತೆಗಳಿಕೆ 10.ಚಬುಕು 12.ಮಮಕಾರ 13.ಶಂಕರಿ 14.ರಸ್ತ 15.ತತಿ

ಸುಡೊಕು 5279

3	5		7		2		8	
						3		4
	7	8	3		9		1	
1		4	8				2	3
				3				
8		7			1		5	9
2		3	9		6	5		8
		6						
	8		5		4		3	2


ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5278 ಸುಡೊಕು

5	6	3	9	2	7	8	1	4
8	1	7	6	5	4	2	3	9
4	2	9	3	8	1	7	5	6
2	4	6	7	1	3	9	8	5
3	9	1	8	4	5	6	7	2
7	5	8	2	9	6	3	4	1
6	8	5	1	7	9	4	2	3
1	3	2	4	6	8	5	9	7
9	7	4	5	3	2	1	6	8

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	16,013
ಇಂದಿನ ಅಂತ್ಯ	16,345
▲	332
ದಿನದ ಗರಿಷ್ಠ	16,418

ವಿನಿಮಯ ದರ

$ ಡಾಲರ್	76.60
£ ಪೌಂಡ್	100.65
€ ಯುರೊ	83.95
¥ ಯೆನ್ (100ಕ್ಕೆ)	66

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು

100 ಮೊಟ್ಟೆಗೆ	₹370
12 ಮೊಟ್ಟೆಗೆ	₹50

ಮೈಸೂರು

100 ಮೊಟ್ಟೆಗೆ	₹370

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1610 (1560)
ಸೋಯಾ (ರಿಫೈನ್ಡ್)	₹1610 (1565)
ಸೂರ್ಯಕಾಂತಿ (ರಿಫೈನ್ಡ್)	1750 (1725)
ಪಾಮೋಲಿನ್	₹1597 (1545)

ಈರುಳ್ಳಿ ಧಾರಣೆ

(ಕ್ವಿಂಟಲ್‌ಗೆ)

ದಪ್ಪ	₹1500-2700
ಮಧ್ಯಮ	₹1000-1500
ಸಣ್ಣ	₹500-1000

ತೆಂಗು ಧಾರಣೆ (ಸಾವಿರಕ್ಕೆ)

ಮಂಗಳೂರು

1ನೇ ದರ್ಜೆ	₹18000-20000
2ನೇ ದರ್ಜೆ	₹10000-16000

ತಿಪಟೂರು ಕೊಬ್ಬರಿ

(ಕ್ವಿಂಟಲ್‌ಗೆ)

ಕನಿಷ್ಠ	₹16000
ಗರಿಷ್ಠ	₹17800
ಮಾದರಿ	₹17300
ಒಟ್ಟು ಆವಕ (ಕ್ವಿಂಟಲ್)	1,692.48

ಹಣಕಾಸು, ಐ.ಟಿ. ವಲಯದ ಷೇರುಗಳ ಉತ್ತಮ ವಹಿವಾಟು

ಸೆನ್ಸೆಕ್ಸ್, ನಿಫ್ಟಿ ಶೇ 2ಕ್ಕೂ ಹೆಚ್ಚು ಗಳಿಕೆ

ಮುಂಬೈ (ಪಿಟಿಐ): ತೈಲ ಮತ್ತು ಅನಿಲ, ಹಣಕಾಸು ಹಾಗೂ ಐ.ಟಿ. ವಲಯದ ಷೇರುಗಳ ಉತ್ತಮ ಗಳಿಕೆಯಿಂದಾಗಿ ದೇಶದ ಷೇರುಪೇಟೆಗಳಲ್ಲಿ ಸತತ ಎರಡನೇ ದಿನವೂ ಸೂಚ್ಯಂಕಗಳು ಏರಿಕೆ ಕಂಡವು.

ಉಕ್ರೇನ್ ಮೇಲಿನ ರಷ್ಯಾದ ದಾಳಿಯನ್ನು ಕೊನೆಗೊಳಿಸಲು ರಾಜತಾಂತ್ರಿಕ ಪ್ರಯತ್ನಗಳು ನಡೆಯುತ್ತಿವೆ ಎನ್ನುವ ವರದಿಗಳಿಂದಾಗಿ ಬುಧವಾರದ ವಹಿವಾಟು ಸಕಾರಾತ್ಮಕವಾಗಿ ಅಂತ್ಯವಾಯಿತು.

ಮುಂಬೈ ಷೇರುಪೇಟೆ ಸಂವೇದಿ ಸೂಚ್ಯಂಕ ಸೆನ್ಸೆಕ್ಸ್ 1,223 ಅಂಶಗಳ ಗಳಿಕೆಯೊಂದಿಗೆ 54,647 ಅಂಶಗಳಲ್ಲಿ ವಹಿವಾಟು ಅಂತ್ಯಗೊಳಿಸಿತು. ಫೆಬ್ರುವರಿ 25ರ ನಂತರ ದಿನದ ವಹಿವಾಟಿನಲ್ಲಿ ಆಗಿರುವ ಗರಿಷ್ಠ ಏರಿಕೆ ಇದಾಗಿದೆ. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 332 ಅಂಶ ಹೆಚ್ಚಾಗಿ 16,345 ಅಂಶಗಳಲ್ಲಿ ವಹಿವಾಟು ಅಂತ್ಯವಾಯಿತು.



ಉಕ್ರೇನ್‌ಗೆ ನ್ಯಾಟೊ ಸದಸ್ಯತ್ವ ನೀಡುವಂತೆ ಕೇಳುವುದಿಲ್ಲ ಎಂದು ಅದರ ಅಧ್ಯಕ್ಷ ವೊಲೊಡಿಮಿರ್ ಝೆಲೆನ್‌ಸ್ಕಿ ಹೇಳಿರುವುದು ದೇಶದ ಷೇರುಪೇಟೆಗಳ ಓಟಕ್ಕೆ ಕಾರಣವಾಯಿತು ಎಂದು ಎಲ್‌ಕೆಪಿ ಸೆಕ್ಯುರಿಟೀಸ್‌ನ ಸಂಶೋಧನಾ ಮುಖ್ಯಸ್ಥ ಎಸ್. ರಂಗನಾಥನ್ ಅಭಿಪ್ರಾಯಪಟ್ಟಿದ್ದಾರೆ.

ಮತದಾನೋತ್ತರ ಸಮೀಕ್ಷೆಗಳಿಗೆ ದೇಶಿ ಷೇರುಪೇಟೆಯು ಸಕಾರಾತ್ಮಕವಾಗಿ ಸ್ಪಂದಿಸುತ್ತಿದ್ದು, ಅದೇ ರೀತಿಯಲ್ಲಿ ಫಲತಾಂಶವೂ ಪ್ರಕಟವಾಗುವ ನಿರೀಕ್ಷೆಯಲ್ಲಿದೆ. ಅಲ್ಪಾವಧಿಯಲ್ಲಿ ಚುನಾವಣಾ ಫಲಿತಾಂಶ ಮತ್ತು ಜಾಗತಿಕ ವಿದ್ಯಮಾನಗಳ ಪ್ರಭಾವಕ್ಕೆ ಒಳಗಾಗಿ ಸಕಾರಾತ್ಮಕ ಅಥವಾ ನಕಾರಾತ್ಮಕ ವಹಿವಾಟು ನಡೆಯಲಿದೆ ಎಂದು ಜಿಯೋಜಿತ್ ಫೈನಾನ್ಶಿಯಲ್ ಸರ್ವಿಸಸ್‌ನ ಸಂಶೋಧನಾ ಮುಖ್ಯಸ್ಥ ವಿನೋದ್ ನಾಯರ್ ಹೇಳಿದ್ದಾರೆ.

ರೂಪಾಯಿ: ಕರೆನ್ಸಿ ವಿನಿಮಯ ಮಾರುಕಟ್ಟೆಯಲ್ಲಿ ಅಮೆರಿಕದ ಡಾಲರ್ ಎದುರು ರೂಪಾಯಿ ಮೌಲ್ಯ 38 ಪೈಸೆ ಹೆಚ್ಚಾಗಿ ಒಂದು ಡಾಲರ್‌ಗೆ ₹ 76.62ರಂತೆ ವಿನಿಮಯಗೊಂಡಿತು. ಬ್ರೆಂಟ್ ಕಚ್ಚಾ ತೈಲ ದರ ಶೇ 1.22ರಷ್ಟು ಇಳಿಕೆ ಆಗಿದ್ದು, ಒಂದು ಬ್ಯಾರಲ್‌ಗೆ 126.4 ಡಾಲರ್‌ಗಳಿಗೆ ತಲುಪಿದೆ.

ಚಿನ್ನದ ಬೆಲೆ ₹ 427 ಏರಿಕೆ

ನವದೆಹಲಿ (ಪಿಟಿಐ): ಇಲ್ಲಿನ ಚಿನಿವಾರ ಪೇಟೆಯಲ್ಲಿ 10 ಗ್ರಾಂ ಚಿನ್ನದ ಬೆಲೆಯು ₹ 427ರಷ್ಟು ಹೆಚ್ಚಾಗಿದ್ದು ₹ 54,377ಕ್ಕೆ ತಲುಪಿದೆ.

ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಚಿನ್ನದ ಬೆಲೆ ಜಾಸ್ತಿ ಆಗಿರುವುದೇ ಇದಕ್ಕೆ ಕಾರಣ ಎಂದು ಎಚ್‌ಡಿಎಫ್‌ಸಿ ಸೆಕ್ಯುರಿಟೀಸ್ ತಿಳಿಸಿದೆ. ಬೆಳ್ಳಿಯ ಬೆಲೆಯು ಕೆ.ಜಿ.ಗೆ ₹ 710ರಷ್ಟು ಹೆಚ್ಚಾಗಿ ₹ 72,028ಕ್ಕೆ ತಲುಪಿದೆ.

ಆಸ್ತಿ ನಗದೀಕರಣಕ್ಕೆ ಪ್ರತ್ಯೇಕ ಕಂಪನಿ: ಸಂಪುಟ ಅನುಮತಿ

ನವದೆಹಲಿ (ಪಿಟಿಐ): ಖಾಸಗಿಯವರಿಗೆ ಮಾರಾಟ ಆಗಲಿರುವ ಅಥವಾ ನಷ್ಟದಲ್ಲಿರುವ ಸರ್ಕಾರಿ ಸ್ವಾಮ್ಯದ ಕಂಪನಿಗಳು ಹಾಗೂ ಏಜೆನ್ಸಿಗಳ ಹೆಚ್ಚುವರಿ ಜಮೀನು ಮತ್ತು ಕಟ್ಟಡಗಳ ನಗದೀಕರಣಕ್ಕೆ ರಾಷ್ಟ್ರೀಯ ಜಮೀನು ನಗದೀಕರಣ ಕಾರ್ಪೊರೇಷನ್ (ಎನ್‌ಎಲ್‌ಎಂಸಿ) ಆರಂಭಿಸಲು ಕೇಂದ್ರ ಸಚಿವ ಸಂಪುಟವು ಬುಧವಾರ ಒಪ್ಪಿಗೆ ನೀಡಿದೆ.

ಎನ್‌ಎಲ್‌ಎಂಸಿಯನ್ನು ಕೇಂದ್ರ ಸರ್ಕಾರಿ ಸ್ವಾಮ್ಯದ ಕಂಪನಿಯನ್ನಾಗಿ ಆರಂಭಿಸಲಾಗುತ್ತದೆ. ಇದು ಕೇಂದ್ರ ಸರ್ಕಾರದ ಒಡೆತನದ ಉದ್ಯಮಗಳ ಬಳಿಯಿರುವ ಹೆಚ್ಚುವರಿ ಜಮೀನು ಮತ್ತು ಕಟ್ಟಡಗಳ ನಗದೀಕರಣದ ಹೊಣೆ ಹೊತ್ತುಕೊಳ್ಳುತ್ತದೆ ಎಂದು ಪ್ರಕಟಣೆ ತಿಳಿಸಿದೆ.

ಪ್ರಮುಖವಲ್ಲದ ಆಸ್ತಿಗಳ ನಗದೀಕರಣದ ಮೂಲಕ ಸರ್ಕಾರಕ್ಕೆ ಗಣನೀಯ ಪ್ರಮಾಣದ ವರಮಾನ ಸಂಗ್ರಹಿಸಲು ಸಾಧ್ಯವಾಗುತ್ತದೆ ಎಂದು ಕೂಡ ಪ್ರಕಟಣೆಯಲ್ಲಿ ಹೇಳಲಾಗಿದೆ.

'ಕೇಂದ್ರ ಸರ್ಕಾರದ ಉದ್ಯಮಗಳ ಬಳಿ ಹೆಚ್ಚುವರಿಯಾಗಿ, ಬಳಕೆಯಲ್ಲಿ ಇಲ್ಲದ ಜಮೀನು ಮತ್ತು ಕಟ್ಟಡಗಳು ಬಹಳ ಇವೆ. ಖಾಸಗಿಯವರಿಗೆ ಮಾರಾಟ ಆಗಲಿರುವ ಮತ್ತು ಸ್ಥಗಿತಗೊಳ್ಳಲಿರುವ ಕೇಂದ್ರೋದ್ಯಮಗಳ ಇಂತಹ ಆಸ್ತಿಗಳನ್ನು ನಗದೀಕರಣಕ್ಕೆ ಬಳಸಿಕೊಂಡರೆ, ಆ ಉದ್ಯಮಗಳ ಮೌಲ್ಯ ಹೆಚ್ಚಳಕ್ಕೆ ನೆರವಾಗುತ್ತದೆ' ಎಂದು ಕೂಡ ಅದು ಹೇಳಿದೆ.

ಸಮರ್ಪಕವಾಗಿ ಬಳಕೆಯಾಗದ ಆಸ್ತಿಗಳನ್ನು ಒಳ್ಳೆಯ ರೀತಿಯಲ್ಲಿ ಬಳಸಿಕೊಳ್ಳಲು ಇದರಿಂದ ಸಾಧ್ಯವಾಗುತ್ತದೆ. ಇದರಿಂದಾಗಿ ಖಾಸಗಿ ವಲಯದಿಂದ ಹೂಡಿಕೆಗೆ ಉತ್ತೇಜನ ನೀಡಿದಂತೆ ಆಗುತ್ತದೆ. ಹೊಸ ಆರ್ಥಿಕ ಚಟುವಟಿಕೆಗಳು ಶುರುವಾಗುತ್ತವೆ ಎಂದು ಮೂಲಗಳು ಹೇಳಿವೆ.

ಎಲ್‌ಐಸಿ ಐಪಿಒ: ಸೆಬಿ ಒಪ್ಪಿಗೆ

ನವದೆಹಲಿ (ಪಿಟಿಐ): ಭಾರತೀಯ ಜೀವ ವಿಮಾ ನಿಗಮದ (ಎಲ್‌ಐಸಿ) ಐಪಿಒಗೆ ಸಂಬಂಧಿಸಿದ ಕರಡು ದಾಖಲೆ ಪತ್ರಗಳಿಗೆ ಭಾರತೀಯ ಷೇರುಪೇಟೆ ನಿಯಂತ್ರಣ ಮಂಡಳಿ (ಸೆಬಿ) ಒಪ್ಪಿಗೆ ನೀಡಿದೆ ಎಂದು ಮೂಲಗಳು ಹೇಳಿವೆ.

ಇದರಿಂದಾಗಿ ಕೇಂದ್ರ ಸರ್ಕಾರಕ್ಕೆ ₹ 63 ಸಾವಿರ ಕೋಟಿ ಬಂಡವಾಳ ಸಂಗ್ರಹಿಸಲು ಅನುಕೂಲ ಆಗಲಿದ್ದು, ಪ್ರಸಕ್ತ ಹಣಕಾಸು ವರ್ಷದಲ್ಲಿ ಷೇರು ವಿಕ್ರಯದ ಗುರಿ ತಲುಪಲು ನೆರವಾಗಲಿದೆ ಎಂದು ತಿಳಿಸಿವೆ.

ಎಲ್‌ಐಸಿಯು ಫೆಬ್ರುವರಿ 13ರಂದು ಕರಡು ದಾಖಲೆ ಪತ್ರಗಳನ್ನು ಸಲ್ಲಿಸಿತ್ತು. ಸೆಬಿಯು ಅತ್ಯಂತ ವೇಗವಾಗಿ, ಒಂದು ತಿಂಗಳಿಗೂ ಕಡಿಮೆ ಅವಧಿಯಲ್ಲಿ ಕಂಪನಿಯೊಂದರ ಕರಡು ಕರಡು ದಾಖಲೆ ಪತ್ರಗಳಿಗೆ ಅನುಮತಿ ನೀಡಿರುವುದು ಇದೇ ಮೊದಲು. ಕರಡು ದಾಖಲೆ ಪತ್ರದಲ್ಲಿ ಎಲ್‌ಐಸಿಯ ಮಾರುಕಟ್ಟೆ ಮೌಲ್ಯದ ಬಗ್ಗೆ ಮಾಹಿತಿ ನೀಡಿಲ್ಲ. ನಿಗಮದ ಮಾರುಕಟ್ಟೆ ಮೌಲ್ಯವು ಇಂದಿನ ಆಸ್ತಿಗಳ ಮೌಲ್ಯ ಹಾಗೂ ಭವಿಷ್ಯದ ಲಾಭಗಳ ಇಂದಿನ ಮೌಲ್ಯದ ಮೂರು ಪಟ್ಟು ಅಥವಾ ಸುಮಾರು ₹ 16 ಲಕ್ಷ ಕೋಟಿ ಇರಬಹುದು ಎಂದು ಮೂಲಗಳು ಹೇಳಿವೆ.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ	
ಸಕಲೇಶಪುರ	
ಕೂಳೆ	430-450
ನಡುಗೋಲು	500-550
ರಾಶಿ	600-650
ರಾಶಿ ಉತ್ತಮ	650-700
ಜರಡಿ	750-800
ಹೆರಕಿದ್ದು	1100-1150
ಹಸಿರು ಸಾಧಾರಣ	600-700
ಹಸಿರು ಉತ್ತಮ	900-950
ಹಸಿರು ಅತಿ ಉತ್ತಮ	1200-1250
ಕಾಳು ಮೆಣಸು	500
ಅಡಿಕೆ	
ಬಂಟ್ವಾಳ	
ಕೋಕ	12500-25000
ಹೊಸತು	27500-45000
ಹಳತು	46000-53000
ಕುಮಟ	
ಚಿಪ್ಪು	23869-29019
ಕೋಕ	16019-26109
ಫ್ಯಾಕ್ಟರಿ	10169-18929
ಹಳೆಚಾಲಿ	46019-47599
ಹೊಸಚಾಲಿ	35509-39799
ಪುತ್ತೂರು	
ಕೋಕ	11000-26000
ಹೊಸತು	27500-45000
ಸಿದ್ದಾಪುರ	
ಬಿಳಿಗೋಟು	22899-30899
ಚಾಲಿ	44099-44099
ಕೋಕ	21899-28133
ಹೊಸಚಾಲಿ	36399-40111
ಕೆಂಪುಗೋಟು	28699-32499
ರಾಶಿ	42689-46312
ತಟ್ಟಿಬೆಟ್ಟೆ	38499-42699
ಶಿರಸಿ	
ಬೆಟ್ಟೆ	37019-45699
ಬಿಳಿಗೋಟು	14190-31289
ಚಾಲಿ	33099-41099
ರಾಶಿ	33699-48163
ಶಿವಮೊಗ್ಗ	
ಬೆಟ್ಟೆ	47009-50230
ಗೊಬರಲು	17700-33569
ರಾಶಿ	43000-45699
ಸರಕು	56009-74896
ಚನ್ನಗಿರಿ ತುಮ್ಕೋಸ್	
ರಾಶಿ	44099-45799
ಬೆಟ್ಟೆ	32629-37299
ರಾಮನಗರ ರೇಷ್ಮೆ	
ಮಿಶ್ರತಳಿ	400-788
ದ್ವಿತಳಿ	495-986

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	---	15800	15800	232.90 ಸೆಂಟ್ಸ್
ಎಸಿ	---	7800	7900	
ಆರ್‌ಪಿ	---	8200	8500	ಲಂಡನ್
ಆರ್‌ಸಿ	---	3825	3900	2094 ಡಾಲರ್ಸ್

ಉದಯಂ ಬ್ರ್ಯಾಂಡ್‌ಗೆ ಶಿವಣ್ಣ ರಾಯಭಾರಿ

ಪ್ರಜಾವಾಣಿ ವಾರ್ತೆ


ಶಿವರಾಜ್ ಕುಮಾರ್

ಬೆಂಗಳೂರು: ಧೋತಿ ಮತ್ತು ಅಂಗಿಗಳನ್ನು ಸಿದ್ಧಪಡಿಸುವ 'ಉದಯಂ' ಕಂಪನಿಯು ನಟ ಶಿವರಾಜ್ ಕುಮಾರ್ ಅವರ ಜೊತೆ ಒಪ್ಪಂದ ಮಾಡಿಕೊಂಡಿದೆ. ಇದರ ಅನ್ವಯ, ಶಿವರಾಜ್ ಕುಮಾರ್ ಅವರು ಕಂಪನಿಯ ಬ್ರ್ಯಾಂಡ್ ರಾಯಭಾರಿ ಆಗಲಿದ್ದಾರೆ.

ತೆರೆಯ ಮೇಲೆಯೂ, ತೆರೆಯ ಹಿಂದೆಯೂ ಹೀರೊ ಆಗಿರುವ ಶಿವಣ್ಣ ಅವರ ಜೊತೆ ಪಾಲುದಾರಿಕೆ ಹೊಂದುತ್ತಿರುವುದು ಸಂತಸದ ವಿಚಾರ ಎಂದು ಕಂಪನಿಯು ಪ್ರಕಟಣೆಯಲ್ಲಿ ಹೇಳಿದೆ. 'ನನ್ನ ಪಾಲಿಗೆ ಉದಯಂ ಒಂದು ಬ್ರ್ಯಾಂಡ್ ಮಾತ್ರ ಆಗಿರದೆ, ಸ್ಫೂರ್ತಿಯೂ ಹೌದು' ಎಂದು ಶಿವರಾಜ್ ಕುಮಾರ್ ಹೇಳಿರುವುದಾಗಿ ಪ್ರಕಟಣೆ ತಿಳಿಸಿದೆ.

ಮುಂಬೈ ಧಾರಣೆ

ಶೇಂಗಾ

9-3-2022

ಜಾವಾ 70/80(ಹೊಸ)	11350-11400
ಜಾವಾ 80/90(ಹೊಸ)	10550-10600
ದಪ್ಪ ಮಧ್ಯಪ್ರದೇಶ(ಹೊಸ)	10500-10600
ದಪ್ಪ ಗುಜರಾತ್(ಹೊಸ)	9200-9300

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1620 (1570)
ಒಂದು ವಾರದ ಡೆಲಿವರಿ	1615 (1565)
ಸೋಯಾ ಕಚ್ಚಾ	1600 (1550)
ಪಾಮ್ ವಾರದ ಡೆಲಿವರಿ	1595 (1543)
ಸೂರ್ಯಕಾಂತಿ ಎಣ್ಣೆ ಕಚ್ಚಾ	--- (---)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
52,700 (53,450)
ಬೆಳ್ಳಿ ಕೆ.ಜಿ 70,700 (70,950)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಫಲಿತಾಂಶಕ್ಕೂ ಮುನ್ನ ಅಭ್ಯರ್ಥಿಗಳ ಮೇಲೆ ನಿಗಾ; ರೆಸಾರ್ಟ್‌ನಲ್ಲಿ ಕಾಂಗ್ರೆಸ್ ಅಭ್ಯರ್ಥಿಗಳು

ಗೋವಾ, ಉತ್ತರಾಖಂಡ: ಆಪರೇಷನ್ ಕಮಲ ಭೀತಿ

ಪಣಜಿ, ಲಖನೌ (ಪಿಟಿಐ): ತಮ್ಮ ಅಭ್ಯರ್ಥಿಗಳು ಸಂಭಾವ್ಯ ಆಪರೇಷನ್ ಕಮಲಕ್ಕೆ ಒಳಗಾಗುವುದನ್ನು ತಪ್ಪಿಸಲು ಮುಂಜಾಗ್ರತೆ ವಹಿಸಿರುವ ರಾಜಕೀಯ ಪಕ್ಷಗಳು, ಫಲಿತಾಂಶ ಪ್ರಕಟಣೆಗೂ ಮುನ್ನ ರೆಸಾರ್ಟ್ ವಾಸ್ತವ್ಯ ಶುರು ಮಾಡಿವೆ.

ಗೋವಾದಲ್ಲಿ ಅತಂತ್ರ ವಿಧಾನಸಭೆ ಏರ್ಪಡಲಿದೆ ಎಂದು ಮತದಾನೋತ್ತರ ಸಮೀಕ್ಷೆಗಳು ಭವಿಷ್ಯ ನುಡಿದಿರುವ ಹಿನ್ನೆಲೆಯಲ್ಲಿ ಕಾಂಗ್ರೆಸ್ ಹಾಗೂ ಆಮ್ ಆದ್ಮಿ ಪಕ್ಷಗಳು ತಮ್ಮ ಅಭ್ಯರ್ಥಿಗಳಿಗೆ ಸುರಕ್ಷಿತ ಜಾಗ ಗೊತ್ತು ಮಾಡಿವೆ. ಉತ್ತರಾಖಂಡದಲ್ಲೂ ಶಾಸಕರನ್ನು ಸೆಳೆಯುವ ಸಾಧ್ಯತೆಯಿರುವುದರಿಂದ ಅಲ್ಲಿನ ಕಾಂಗ್ರೆಸ್ ಘಟಕವು ಪಕ್ಷದ ಅಭ್ಯರ್ಥಿಗಳನ್ನು ಕಾಂಗ್ರೆಸ್ ಆಡಳಿತವಿರುವ ಛತ್ತೀಸ್‌ಗಡ ಹಾಗೂ ರಾಜಸ್ಥಾನಕ್ಕೆ ಕಳುಹಿಸಲು ಮುಂದಾಗಿದೆ.

ಗೋವಾದಲ್ಲಿ 2017ರ ಘಟನೆ ಮರುಕಳಿಸುವುದನ್ನು ತಡೆಯಲು ಕಾಂಗ್ರೆಸ್ ಯತ್ನಿಸುತ್ತಿದೆ. ಅತಿಹೆಚ್ಚು ಸ್ಥಾನ ಪಡೆದಿದ್ದರೂ ಕಾಂಗ್ರೆಸ್‌ಗೆ ಅಧಿಕಾರ ಹಿಡಿಯಲು ಸಾಧ್ಯವಾಗಿರಲಿಲ್ಲ. ಇತರೆ ಪಕ್ಷಗಳು ಹಾಗೂ ಕಾಂಗ್ರೆಸ್ ಶಾಸಕರನ್ನು ಸೆಳೆದಿದ್ದ ಬಿಜೆಪಿ, ರಾಜ್ಯದಲ್ಲಿ ಅಧಿಕಾರಕ್ಕೇರಿತ್ತು. ಇದಕ್ಕೆ ಈ ಬಾರಿ ಅವಕಾಶ ನೀಡಬಾರದು ಎಂದು ನಿರ್ಧರಿಸಿರುವ ಕಾಂಗ್ರೆಸ್, ತನ್ನ ಅಭ್ಯರ್ಥಿಗಳನ್ನು ಪಣಜಿಯಿಂದ 5 ಕಿಲೋಮೀಟರ್ ದೂರದಲ್ಲಿರುವ ಬಂಬೋಲಿಮ್ ಗ್ರಾಮದ ಐಷಾರಾಮಿ ರೆಸಾರ್ಟ್‌ಗೆ ಕಳುಹಿಸಿದೆ.

ರೆಸಾರ್ಟ್‌ನಲ್ಲಿ ಈಗಾಗಲೇ ವಾಸ್ತವ್ಯ ಹೂಡಿರುವ ಪಕ್ಷದ ಕೆಲವು ಅಭ್ಯರ್ಥಿಗಳನ್ನು ಗುರುವಾರ ಮತ ಎಣಿಕೆ ನಡೆಯಲಿರುವ ಕೇಂದ್ರಗಳಿಗೆ ಕಳುಹಿಸದಿರುವ ಸಾಧ್ಯತೆಯಿದೆ ಎಂದು ಕಾಂಗ್ರೆಸ್‌ನ ಹಿರಿಯ ಮುಖಂಡರೊಬ್ಬರು ತಿಳಿಸಿದ್ದಾರೆ. ಆದರೆ ಎಲ್ಲ ಅಭ್ಯರ್ಥಿಗಳು ಮತ ಎಣಿಕೆ ಕೇಂದ್ರಗಳಿಗೆ ತೆರಳಲಿದ್ದಾರೆ ಎಂದು ಮೈಕೆಲ್ ಲೋಬೊ ಹೇಳಿದ್ದಾರೆ.

ಮಂಗಳವಾರ ರಾತ್ರಿಯೇ ಎಲ್ಲ ಅಭ್ಯರ್ಥಿಗಳು ತಮ್ಮ ಲಗೇಜ್‌ನೊಂದಿಗೆ ರೆಸಾರ್ಟ್ ತಲುಪಿರುವುದನ್ನು ಕಾಂಗ್ರೆಸ್ ಖಚಿತಪಡಿಸಿಕೊಂಡಿದೆ. ಅತಂತ್ರ ವಿಧಾನಸಭೆ ಉಂಟಾಗಿ, ಸರ್ಕಾರ ರಚನೆ ವಿಳಂಬವಾದರೆ, ಸಾಕಷ್ಟು ದಿನಗಳವರೆಗೆ ಅಭ್ಯರ್ಥಿಗಳು ರೆಸಾರ್ಟ್‌ನಲ್ಲಿ ಉಳಿಯಬೇಕಾಗಬಹುದು ಎಂದು ಅವರಿಗೆ ತಿಳಿಸಲಾಗಿದೆ.

ಎಎಪಿ ಯತ್ನ: ಗೋವಾದಲ್ಲಿ ಹೆಚ್ಚು ಸ್ಥಾನಗಳನ್ನು ಗೆಲ್ಲುವ ನಿರೀಕ್ಷೆ ಇಲ್ಲದಿದ್ದರೂ, ಆಮ್ ಆದ್ಮಿ ಪಕ್ಷ ಜಾಗರೂಕತೆ ವಹಿಸಿದೆ. ಕಾಂಗ್ರೆಸ್ ರೀತಿ, ತನ್ನ ಅಭ್ಯರ್ಥಿಗಳನ್ನು ರಾಜ್ಯದ ವಿವಿಧ ಕಡೆಗಳಲ್ಲಿ ಪ್ರತ್ಯೇಕವಾಗಿ ಇರಿಸಿದೆ. ಎಲ್ಲರ ಮೇಲೆ ನಿಗಾ ವಹಿಸಲಾಗಿದೆ ಎಂದು ಎನ್‌ಡಿಟಿವಿ ವರದಿ ಮಾಡಿದೆ.

ಉತ್ತರಾಖಂಡದಲ್ಲೂ ರೆಸಾರ್ಟ್ ಜಪ: ಉತ್ತರಾಖಂಡದಲ್ಲಿ ಗೆಲುವಿಗೆ ಬಿಜೆಪಿ ಪ್ರಯಾಸಪಡಲಿದೆ ಎಂದು ಬಹುತೇಕ ಮತಗಟ್ಟೆ ಸಮೀಕ್ಷೆಗಳು ಅಭಿಪ್ರಾಯಪಟ್ಟಿವೆ. ಶಾಸಕರನ್ನು ಬಿಜೆಪಿ ಸೆಳೆಯುವ ಸಾಧ್ಯತೆಯಿದೆ ಎಂಬುದನ್ನು ಗ್ರಹಿಸಿರುವ ಕಾಂಗ್ರೆಸ್, ತನ್ನ ಅಭ್ಯರ್ಥಿಗಳನ್ನು ರೆಸಾರ್ಟ್‌ಗೆ ಸ್ಥಳಾಂತರಿಸಲು ನಿರ್ಧರಿಸಿದೆ. ಅಭ್ಯರ್ಥಿಗಳನ್ನು ರೆಸಾರ್ಟ್‌ಗೆ ಕಳುಹಿಸಲು ಗೋವಾ ಕಾಂಗ್ರೆಸ್ ಘಟಕ ನಿರ್ಧರಿಸಿದ ಮರುದಿನ ಉತ್ತರಾಖಂಡದ ಕಾಂಗ್ರೆಸ್ ಘಟಕ ಸಹ ಈ ನಿರ್ಧಾರಕ್ಕೆ ಬಂದಿದೆ.

ಕಾಂಗ್ರೆಸ್ ಆಡಳಿತ ಇರುವ ಛತ್ತೀಸ್‌ಗಡ ಹಾಗೂ ರಾಜಸ್ಥಾನಕ್ಕೆ ಅಭ್ಯರ್ಥಿಗಳನ್ನು ಕಳುಹಿಸಲು ಕಾಂಗ್ರೆಸ್ ಮುಂದಾಗಿದೆ. 'ಯಾವುದೇ ಅಪಾಯಕ್ಕೆ ಒಡ್ಡಿಕೊಳ್ಳಲು ನಾವು ಸಿದ್ಧರಿಲ್ಲ. ಸರ್ಕಾರ ರಚಿಸಲು ಯಾವ ಹಂತಕ್ಕಾದರೂ ಬಿಜೆಪಿ ಇಳಿಯಬಹುದು. ಹೀಗಾಗಿ ನಾವು ಜಾಗರೂಕವಾಗಿ ಇರಬೇಕಾದ ಅಗತ್ಯವಿದೆ' ಎಂದು ಹಿರಿಯ ಕಾಂಗ್ರೆಸ್ ಮುಖಂಡರೊಬ್ಬರು ಡೆಹ್ರಾಡೂನ್‌ನಲ್ಲಿ ಬುಧವಾರ ಹೇಳಿದ್ದಾರೆ.

ಕಾಂಗ್ರೆಸ್ ರಾಜ್ಯಸಭಾ ಸದಸ್ಯ ದೀಪೇಂದ್ರ ಹೂಡಾ ಸೇರಿದಂತೆ ಹಲವು ನಾಯಕರು ಡೆಹ್ರಾಡೂನ್‌ನಲ್ಲಿ ಸರಣಿ ಸಭೆ ನಡೆಸಿ, ಕಾರ್ಯತಂತ್ರಗಳ ಬಗ್ಗೆ ಚರ್ಚೆ ನಡೆಸಿದ್ದಾರೆ ಎಂದು ಮೂಲಗಳು ತಿಳಿಸಿವೆ. 'ಬಿಜೆಪಿಯವರು ಸಂಪರ್ಕಿಸಲು ಸಾಧ್ಯವಾಗದಂತಹ ಸುರಕ್ಷಿತ ಜಾಗಗಳಿಗೆ ಅಭ್ಯರ್ಥಿಗಳನ್ನು ಸ್ಥಳಾಂತರಿಸಲಾಗುತ್ತದೆ. ಅವರು ಪಕ್ಷದ ವೀಕ್ಷಕರ ನಿಗಾವಣೆಯಲ್ಲಿ ಇರಲಿದ್ದಾರೆ' ಎಂದು ಮುಖಂಡರೊಬ್ಬರು ತಿಳಿಸಿದ್ದಾರೆ.


ಮತ ಎಣಿಕೆಯ ಮುನ್ನಾದಿನಾದ ಬುಧವಾರ ಪಂಜಾಬ್‌ನ ಜಲಂಧರ್‌ನಲ್ಲಿ ಸಿಹಿ ತಿಂಡಿಗಳನ್ನು ಸಿದ್ಧಪಡಿಸಲಾಯಿತು –ಪಿಟಿಐ ಚಿತ್ರ


ಸರ್ಕಾರ ರಚನೆ ಕಾರ್ಯತಂತ್ರ ಬಿರುಸು


ಗೋವಾದಲ್ಲಿ ಅತಂತ್ರ ವಿಧಾನಸಭೆ ಉಂಟಾದರೆ ಬೆಂಬಲ ನೀಡುವಂತೆ ಆಮ್ ಆದ್ಮಿ ಪಕ್ಷದ ಜೊತೆ ಮಾತುಕತೆ ನಡೆಯುತ್ತಿದೆ ಎಂದು ಕಾಂಗ್ರೆಸ್ ಬುಧವಾರ ತಿಳಿಸಿದೆ. ರಾಜ್ಯ ಕಾಂಗ್ರೆಸ್ ಘಟಕದ ಅಧ್ಯಕ್ಷ ಗಿರೀಶ್ ಚೋಡನಕರ್ ಅವರು ಇದನ್ನು ಖಚಿತಪಡಿಸಿದ್ದಾರೆ. ಆಮ್ ಆದ್ಮಿ ಪಕ್ಷವು ಬಿಜೆಪಿಗೆ ಬೆಂಬಲ ನೀಡುವ ಮಾತೇ ಇಲ್ಲ. ಎಂಜಿಪಿ ಸಹ ಕಾಂಗ್ರೆಸ್‌ಗೆ ಬೆಂಬಲ ನೀಡಲಿದೆ ಎಂದು ಗಿರೀಶ್ ಹೇಳಿದ್ದಾರೆ.

ಬಿಜೆಪಿ ಹಾಗೂ ಕಾಂಗ್ರೆಸ್ ಪಕ್ಷಗಳೆರಡರ ಜೊತೆಯಲ್ಲೂ ಮಾತುಕತೆ ನಡೆಯುತ್ತಿದೆ ಎಂದು ಗೋವಾದ ಹಳೆಯ ಪ್ರಾದೇಶಿಕ ಪಕ್ಷವಾದ ಎಂಜಿಪಿ ಬುಧವಾರ ತಿಳಿಸಿದೆ. 'ಆದರೆ ಮೈತ್ರಿಪಕ್ಷ ಟಿಎಂಸಿ ಜೊತೆ ಚರ್ಚಿಸಿದ ಬಳಿಕವೇ ಯಾರ ಜೊತೆ ಮೈತ್ರಿ ಎಂದು ನಿರ್ಧರಿಸಲಾಗುತ್ತದೆ ಎಂಬುದಾಗಿ ಮುಖಂಡ ಸುದಿನ್ ಧವಳಿಕರ್ ಹೇಳಿದ್ದಾರೆ' ಎಂದು ಎನ್‌ಡಿಟಿವಿ ವರದಿ ಮಾಡಿದೆ.

ಬಿಜೆಪಿಗೆ ಭಾರಿ ಗೆಲುವು: ಸಮೀಕ್ಷೆ

ಉತ್ತರ ಪ್ರದೇಶದಲ್ಲಿ ಬಿಜೆಪಿಗೆ ಭಾರಿ ಬಹುಮತ ಸಿಗಲಿದೆ ಎಂದು ಲೋಕನೀತಿ–ಸಿಎಸ್‌ಡಿಎಸ್ ಮತಗಟ್ಟೆ ಸಮೀಕ್ಷೆ ಅಭಿಪ್ರಾಯಪಟ್ಟಿದೆ. ಮತ ಎಣಿಕೆಗೆ ಒಂದು ದಿನ ಬಾಕಿಯಿರುವಾಗ ಈ ಸಮೀಕ್ಷೆ ಪ್ರಕಟವಾಗಿದ್ದು, ಬಿಜೆಪಿ ಮೈತ್ರಿಕೂಟವು ಶೇ 43ರಷ್ಟು ಮತಗಳನ್ನು ಪಡೆಯಲಿದೆ ಎಂದು ಅಭಿಪ್ರಾಯಪಟ್ಟಿದೆ.


ನಮಗೆ ಪ್ಲಾನ್ ಬಿ ಅಥವಾ ಪ್ಲಾನ್ ಸಿ ಅಗತ್ಯವಿಲ್ಲ. ನಾವು ಸ್ಪಷ್ಟ ಬಹುಮತ ಪಡೆಯುವುದು ಖಚಿತ. ನಮ್ಮ ಶಾಸಕರನ್ನು ಸೆಳೆದುಕೊಳ್ಳುವ ಬಿಜೆಪಿ ತಂತ್ರಗಾರಿಕೆ ಫಲ ನೀಡುವುದಿಲ್ಲ
ಹರೀಶ್ ರಾವತ್, ಉತ್ತರಾಖಂಡ ಕಾಂಗ್ರೆಸ್ ಮುಖ್ಯಮಂತ್ರಿ ಅಭ್ಯರ್ಥಿ


ಗುರುವಾರ ಸಂಜೆ 4 ಗಂಟೆಗೆ ಎಲ್ಲವೂ ಗೊತ್ತಾಗಲಿದೆ. ಟಿಎಂಸಿ ಜೊತೆ ಮಾತುಕತೆ ನಡೆಸಿ, ಗೋವಾದಲ್ಲಿ ಯಾರ ಜೊತೆ ಮೈತ್ರಿ ಮಾಡಿಕೊಳ್ಳಬೇಕು ಎಂದು ನಿರ್ಧರಿಸಲಾಗುತ್ತದೆ
ಸುದಿನ್ ಧವಳಿಕರ್, ಎಂಜಿಪಿ ಮುಖಂಡ

ಇವಿಎಂ ಸಾಗಣೆಯಲ್ಲಿ ಲೋಪ

ಒಂದನೇ ಪುಟದಿಂದ....

'ಅಧಿಕಾರಿಗಳನ್ನು ಕರೆದು, ಪೆಟ್ಟಿಗೆಗಳನ್ನು ತೆಗೆಸಲಾಯಿತು. ಅದರಲ್ಲಿ ಮತ ಯಂತ್ರಗಳು, ಶಾಯಿಯ ಬಾಟಲಿಗಳು ಮತ್ತು ಮತಯಂತ್ರ ಸೀಲ್ ಮಾಡಲು ಬಳಸುವ ವಸ್ತುಗಳು ಇದ್ದವು. ಅವುಗಳನ್ನು ಪರಿಶೀಲಿಸಿದ ನಂತರ ಅಧಿಕಾರಿಗಳು ಮತಯಂತ್ರಗಳನ್ನು ವಶಕ್ಕೆ ಪಡೆದುಕೊಂಡಿದ್ದಾರೆ' ಎಂದು ಸಮಾಜವಾದಿ ಪಕ್ಷವು ಹೇಳಿದೆ.

ಈ ಸಂಬಂಧ ಬರೇಲಿ ಜಿಲ್ಲಾಧಿಕಾರಿ ಶಿವಕಾಂತ್ ದ್ವಿವೇದಿ ಸ್ಪಷ್ಟನೆ ನೀಡಿದ್ದಾರೆ. 'ಅಧಿಕಾರಿಗಳ ತಪ್ಪಿನಿಂದ ಹೀಗಾಗಿದೆ. ಮತಯಂತ್ರಗಳನ್ನು ಸಾಗಿಸಲು ಕಸ ಸಾಗಿಸುವ ವಾಹನವನ್ನು ಬಳಸಲಾಗಿದೆ. ಇದರಿಂದ ರಾಜಕೀಯ ಪಕ್ಷಗಳ ನಾಯಕರು ಗೊಂದಲಕ್ಕೆ ಈಡಾಗಿದ್ದಾರೆ. ಇಲ್ಲಿ ನಿಯಮಗಳ ಪಾಲನೆಯಲ್ಲಿ ಲೋಪವಾಗಿದೆ. ಆದರೆ ಮತಯಂತ್ರಗಳನ್ನು ತಿರುಚಲಾಗಿಲ್ಲ' ಎಂದು ಅವರು ಹೇಳಿದ್ದಾರೆ. ಆದರೆ, ಕಸ ಸಾಗಿಸುವ ವಾಹನದಲ್ಲೇ ಮತಯಂತ್ರಗಳಿದ್ದ ಪೆಟ್ಟಿಗೆಗಳನ್ನು ಬಿಟ್ಟಿದ್ದು ಏಕೆ ಎಂಬ ಬಗ್ಗೆ ಅವರು ಯಾವುದೇ ಸ್ಪಷ್ಟನೆ ನೀಡಿಲ್ಲ.

ಚುನಾವಣಾ ಕರ್ತವ್ಯದಲ್ಲಿ ಇರದ ವಾಹನದಲ್ಲಿ ಮತಯಂತ್ರ: ಮಂಗಳವಾರ ಏಳನೇ ಹಂತದಲ್ಲಿ ಮತದಾನ ನಡೆದ ಸೋನಭದ್ರಾ ಜಿಲ್ಲೆಯಲ್ಲಿ, ಚುನಾವಣಾ ಕರ್ತವ್ಯಕ್ಕೆ ನಿಯೋಜಿತವಾಗದೇ ಇದ್ದ ವಾಹನದಲ್ಲಿ ಮತಯಂತ್ರಗಳನ್ನು ಸಾಗಿಸಲಾಗಿದೆ. ಸಮಾಜವಾದಿ ಪಕ್ಷದ ಕಾರ್ಯಕರ್ತರು ತಡೆದು ನಿಲ್ಲಿಸಿದ್ದಾರೆ. ಆ ವಾಹನದಲ್ಲಿ ಘೋರವಾಲ್ ಮತಗಟ್ಟೆ ಸಂಖ್ಯೆ 400ರಲ್ಲಿ ಬಳಸಲಾಗಿದ್ದ ಮತಯಂತ್ರಗಳು ಇದ್ದ ಮತಪೆಟ್ಟಿಗೆ ಪತ್ತೆಯಾಗಿದೆ.

ಕರ್ತವ್ಯಕ್ಕೆ ನಿಯೋಜನೆ ಆಗದೇ ಇದ್ದ ವಾಹನದಲ್ಲಿ ಮತಯಂತ್ರ ಸಾಗಿಸುತ್ತಿರುವ ಬಗ್ಗೆ, ವಾಹನದಲ್ಲಿ ಇದ್ದ ರಿಟರ್ನಿಂಗ್ ಅಧಿಕಾರಿಯನ್ನು ಪ್ರಶ್ನಿಸಲಾಗಿದೆ. ಅವರು ಖಾಸಗಿ ವಾಹನದಲ್ಲಿ ಮತಯಂತ್ರ ಸಾಗಿಸುತ್ತಿದ್ದೇವೆ ಎಂದು ಹೇಳಿದ್ದಾರೆ. ಈ ದೃಶ್ಯವಿರುವ ವಿಡಿಯೊವನ್ನು ಸಮಾಜವಾದಿ ಪಕ್ಷವು ಟ್ವೀಟ್ ಮಾಡಿದೆ.

ಅಖಿಲೇಶ್ ವಿರುದ್ಧ ಬಿಜೆಪಿ ದೂರು: ಅಖಿಲೇಶ್ ಯಾದವ್ ಅವರು ಮತಯಂತ್ರಗಳಿಗೆ ಸಂಬಂಧಿಸಿದಂತೆ ಸುಳ್ಳುಸುದ್ದಿ ಹರಡುತ್ತಿದ್ದಾರೆ. ಅವರ ವಿರುದ್ಧ ಕ್ರಮ ತೆಗೆದುಕೊಳ್ಳಿ ಎಂದು ಕೇಂದ್ರ ಸಚಿವರಾದ ಧರ್ಮೇಂದ್ರ ಪ್ರಧಾನ್, ಅನುರಾಗ್ ಠಾಕೂರ್ ಮತ್ತು ಮುಕ್ತಾರ್ ಅಬ್ಬಾಸ್ ನಖ್ವಿ ಅವರು ಚುನಾವಣಾ ಆಯೋಗಕ್ಕೆ ದೂರು ನೀಡಿದ್ದಾರೆ.

ಕರ್ತವ್ಯದಿಂದ ಬಿಡುಗಡೆ

ಸಮಾಜವಾದಿ ಪಕ್ಷ ನೀಡಿದ ದೂರಿನ ಹಿನ್ನೆಲೆಯಲ್ಲಿ ಉತ್ತರ ಪ್ರದೇಶದ ಮೂವರು ಅಧಿಕಾರಿಗಳನ್ನು ಚುನಾವಣಾ ಕರ್ತವ್ಯದಿಂದ ಬಿಡುಗಡೆ ಮಾಡಿ ಚುನಾವಣಾ ಆಯೋಗ ಆದೇಶ ಹೊರಡಿಸಿದೆ. ವಾರಾಣಸಿಯ ಇವಿಎಂ ನೋಡಲ್ ಅಧಿಕಾರಿಯಾಗಿದ್ದ ಹೆಚ್ಚುವರಿ ಜಿಲ್ಲಾಧಿಕಾರಿ ನಳಿನಿ ಕಾಂತ್ ಸಿಂಗ್, ಬರೇಲಿಯ ಹೆಚ್ಚುವರಿ ಚುನಾವಣಾ ಅಧಿಕಾರಿ ವಿ.ಕೆ ಸಿಂಗ್ ಹಾಗೂ ಸೋನಭದ್ರದ ರಿಟರ್ನಿಂಗ್ ಅಧಿಕಾರಿ ರಮೇಶ್ ಕುಮಾರ್ ಅವರನ್ನು ಚುನಾವಣಾ ಕರ್ತವ್ಯದಿಂದ ಬಿಡುಗಡೆ ಮಾಡಲಾಗಿದೆ.

'ಎಂವಿಎ ನಾಯಕರ ಮೇಲೆ ಕಣ್ಣಿಡಲು ಕೇಂದ್ರ ತನಿಖಾ ಸಂಸ್ಥೆಗಳ ಬಳಕೆ'

ಪ್ರಜಾವಾಣಿ ವಾರ್ತೆ

ಮುಂಬೈ: ಮಹಾರಾಷ್ಟ್ರದಲ್ಲಿ ಮಹಾ ವಿಕಾಸ್ ಅಘಾಡಿ (ಎಂವಿಎ) ಮತ್ತು ಪ್ರತಿಪಕ್ಷ ಬಿಜೆಪಿ ನಡುವಿನ ಆರೋಪ ಮತ್ತು ಪ್ರತ್ಯಾರೋಪಗಳ ನಡುವೆ, 'ಆಡಳಿತಾರೂಢ ಮೈತ್ರಿಕೂಟದ ನಾಯಕರ ಮೇಲೆ ಕಣ್ಣಿಡಲು ಕೇಂದ್ರ ತನಿಖಾ ಸಂಸ್ಥೆಗಳನ್ನು ಬಳಸಿಕೊಳ್ಳಲಾಗುತ್ತಿದೆ' ಎಂದು ಎನ್‌ಸಿಪಿ ಅಧ್ಯಕ್ಷ ಶರದ್ ಪವಾರ್ ಬುಧವಾರ ಶಂಕೆ ವ್ಯಕ್ತಪಡಿಸಿದ್ದಾರೆ.


ಶರದ್ ಪವಾರ್

ಪ್ರತಿಪಕ್ಷದ ನಾಯಕ ದೇವೇಂದ್ರ ಫಡಣವೀಸ್ ಅವರು ವಿಧಾನಸಭೆಯ ಉಪಾಧ್ಯಕ್ಷ ನರಹರಿ ಜಿರ್ವಾಲ್ ಅವರಿಗೆ ಪೆನ್ ಡ್ರೈವ್ ಸಲ್ಲಿಸಿದ ಒಂದು ದಿನದ ನಂತರ ಪವಾರ್ ಅವರು ಈ ರೀತಿ ಶಂಕೆ ವ್ಯಕ್ತಪಡಿಸಿ ಹೇಳಿಕೆ ನೀಡಿದ್ದಾರೆ.

ಈ ಪೆನ್ ಡ್ರೈವ್‌ನಲ್ಲಿ ಒಟ್ಟು 125 ಗಂಟೆಗಳ ವಿಡಿಯೊ ಫೂಟೇಜ್ ಇದ್ದು, ಎಂವಿಎ ನಾಯಕರು ದೇವೇಂದ್ರ ಫಡಣವೀಸ್ ಮತ್ತು ಮಾಜಿ ಸಚಿವ ಗಿರೀಶ್ ಮಹಾಜನ್ ಅವರನ್ನು ಬಂಧಿಸಲು ಸಂಚು ರೂಪಿಸಿದ್ದಾರೆ ಎನ್ನುವ ವಿವರಗಳಿವೆ ಎನ್ನಲಾಗಿದೆ.

ಈ ಬಗ್ಗೆ ಬುಧವಾರ ಮಾತನಾಡಿದ ಪವಾರ್, 'ಪ್ರತ್ಯಕ್ಷವಾಗಿ, ಪರೋಕ್ಷವಾಗಿ ವಿಡಿಯೊದಲ್ಲಿ ನನ್ನ ಹೆಸರನ್ನು ಉಲ್ಲೇಖಿಸಲಾಗಿದ್ದು, ಅದಕ್ಕೂ ನನಗೂ ಸಂಬಂಧವಿಲ್ಲ. ಯಾರೇ ಆಗಲಿ ಒಬ್ಬರನ್ನು ಈ ರೀತಿಯಾಗಿ ಮುಗಿಸಲು ಸಾಧ್ಯವಿಲ್ಲ. 125 ಗಂಟೆಗಳ ರೆಕಾರ್ಡಿಂಗ್ ಇರುವುದು ಒಂದು ವೇಳೆ ನಿಜವಾಗಿದ್ದರೆ, ಕೇಂದ್ರ ಸರ್ಕಾರದ ಅಡಿಯಲ್ಲಿರುವ ಕೇಂದ್ರ ತನಿಖಾ ಸಂಸ್ಥೆಗಳನ್ನು ಎಂವಿಎ ಮತ್ತು ಅದರ ಮೈತ್ರಿಕೂಟದ ನಾಯಕರ ಮೇಲೆ ಬಳಸುವುದನ್ನು ತಳ್ಳಿಹಾಕಲಾಗದು. ಆದರೆ, ರಾಜ್ಯ ಸರ್ಕಾರವು ಈ ರೆಕಾರ್ಡಿಂಗ್ ಟೇಪ್‌ಗಳ ಸತ್ಯಾಸತ್ಯತೆಯ ತನಿಖೆ ಮಾಡಲಿದೆ ಎನ್ನುವ ಬಗ್ಗೆ ನನಗೆ ಖಾತ್ರಿಯಿದೆ' ಎಂದರು.

'ಆದರೂ, ಫಡಣವೀಸ್ ಮತ್ತು ಅವರ ಸಹೋದ್ಯೋಗಿಗಳು ಸುಮಾರು 125 ಗಂಟೆಗಳ ವಿಡಿಯೊ ರೆಕಾರ್ಡಿಂಗ್ ಮಾಡಿರುವುದು ಶ್ಲಾಘನೀಯ' ಎಂದು ಶರದ್ ಪವಾರ್ ವ್ಯಂಗ್ಯವಾಗಿ ನುಡಿದರು. 'ಕೇಂದ್ರ ತನಿಖಾ ಸಂಸ್ಥೆಗಳ ದುರುಪಯೋಗದ ಬಗ್ಗೆ ಶಿವಸೇನಾದ ರಾಜ್ಯಸಭಾ ಸಂಸದ ಸಂಜಯ್ ರಾವುತ್ ಅವರ ದೂರಿನ ಬಗ್ಗೆ ಪ್ರಧಾನಿ ಮೋದಿ ಅವರು ಗಮನ ಹರಿಸುತ್ತಾರೆ ಎಂಬ ಭರವಸೆ ಇದೆ' ಎಂದೂ ಆಶಿಸಿದರು.

ನವಾಬ್ ಮಲಿಕ್ ರಾಜೀನಾಮೆಗೆ ಪಟ್ಟು; ಬಿಜೆಪಿ ನಾಯಕರು ಪೊಲೀಸ್ ವಶಕ್ಕೆ

ಮುಂಬೈ: ಹಣ ಅಕ್ರಮ ವರ್ಗಾವಣೆ ಪ್ರಕರಣದಲ್ಲಿ ನ್ಯಾಯಾಂಗ ಬಂಧನದಲ್ಲಿರುವ ಸಚಿವ ನವಾಬ್ ಮಲಿಕ್ ಅವರ ರಾಜೀನಾಮೆಗೆ ಬಿಗಿಪಟ್ಟು ಹಿಡಿದು ಬುಧವಾರ ಪ್ರತಿಭಟನೆ ನಡೆಸಿದ ಬಿಜೆಪಿ ನಾಯಕ ದೇವೇಂದ್ರ ಫಡಣವೀಸ್ ಸೇರಿದಂತೆ ಪಕ್ಷದ ಪ್ರಮುಖರನ್ನು ಮುಂಬೈ ಪೊಲೀಸರು ವಶಕ್ಕೆ ಪಡೆದರು.

ಐತಿಹಾಸಿಕ ಆಜಾದ್ ಮೈದಾನದಲ್ಲಿ ಬೃಹತ್ ಪ್ರತಿಭಟನೆ ನಡೆಸಿದ ವಿಧಾನಸಭೆಯ ವಿರೋಧ ಪಕ್ಷದ ನಾಯಕ ದೇವೇಂದ್ರ ಫಡಣವೀಸ್, ವಿಧಾನ ಪರಿಷತ್ತಿನಲ್ಲಿ ಪ್ರತಿಪಕ್ಷ ನಾಯಕನಾಗಿರುವ ಪ್ರವೀಣ್ ದಾರೇಕರ್, ಬಿಜೆಪಿ ರಾಜ್ಯ ಅಧ್ಯಕ್ಷ ಚಂದ್ರಕಾಂತ್ ಪಾಟೀಲ್, ಮಾಜಿ ಸಚಿವರಾದ ಸುಧೀರ್ ಮುಂಗಂಟಿವಾರ್, ಚಂದ್ರಶೇಖರ್ ಬವಾಂಕುಲೆ ಹಾಗೂ ನಿತೇಶ್ ರಾಣೆ, ಆಶಿಶ್ ಶೇಲಾರ್, ಕಿರಿತ್ ಸೋಮಯ್ಯ, ಮೋಹಿತ್ ಭಾರತೀಯ, ಪ್ರಸಾದ್ ಲಾಡ್ ಅವರನ್ನು ಪೊಲೀಸರು ವಶಕ್ಕೆ ಪಡೆದರು.

ಬಂಧಿತರನ್ನು ಮೆಟ್ರೊ ಸಿನಿಮಾ ಬಳಿಯಿಂದ ಯಲ್ಲೋ ಗೇಟ್ ಪೊಲೀಸ್ ಠಾಣೆಗೆ ವ್ಯಾನಿನಲ್ಲಿ ಕರೆದೊಯ್ದ ಪೊಲೀಸರು, ನಂತರ ಜಾಮೀನಿನ ಮೇಲೆ ಬಿಡುಗಡೆ ಮಾಡಿದರು.

ರಾಜಕೀಯ ಲೆಕ್ಕಾಚಾರ ನಿರ್ಧರಿಸಲಿದೆ ಫಲಿತಾಂಶ

ಬಿಜೆಪಿ ವರ್ಚಸ್ಸು, ಕಾಂಗ್ರೆಸ್‌ನ ನಾಯಕತ್ವ, ಎಎಪಿ ನೆಲೆ ವಿಸ್ತರಣೆ ವಿಚಾರಗಳಿಗೆ ಸಿಗಲಿದೆ ಸ್ಪಷ್ಟತೆ

● ಶೆಮಿನ್ ಜಾಯ್

ನವದೆಹಲಿ: ಗುರುವಾರ ನಡೆಯಲಿರುವ ಐದು ರಾಜ್ಯಗಳ ವಿಧಾನ ಸಭಾ ಚುನಾವಣೆಯ ಮತ ಎಣಿಕೆಯು 690 ಕ್ಷೇತ್ರಗಳ 6,944 ಅಭ್ಯರ್ಥಿಗಳ ಹಣೆಬರಹವನ್ನು ಮಾತ್ರ ಬರೆಯುವುದಿಲ್ಲ. ಇದು 2024ರ ಸಾರ್ವತ್ರಿಕ ಚುನಾವಣೆಗೆ ತೆಗೆದುಕೊಳ್ಳಬೇಕಾದ ರಾಜಕೀಯ ತೀರ್ಮಾನಗಳನ್ನೂ ನಿರ್ಧರಿಸುತ್ತದೆ. ಹೀಗಾಗಿ ಐದು ರಾಜ್ಯಗಳ ಫಲಿತಾಂಶವನ್ನು ಎಲ್ಲ ಪಕ್ಷಗಳು ಉಸಿರು ಬಿಗಿಹಿಡಿದು ಕಾಯುತ್ತಿವೆ.

ಉತ್ತರ ಪ್ರದೇಶ, ಗೋವಾ, ಪಂಜಾಬ್, ಉತ್ತರಾಖಂಡ ಹಾಗೂ ಮಣಿಪುರ ವಿಧಾನಸಭಾ ಚುನಾವಣೆಯ ಮತ ಎಣಿಕೆ ಗುರುವಾರ ಬೆಳಿಗ್ಗೆ 8ರಿಂದ ಆರಂಭವಾಗಲಿದೆ. ಮತ ಎಣಿಕೆ ಆರಂಭವಾದ ಒಂದೆರಡು ಗಂಟೆಗಳಲ್ಲಿ ಚಿತ್ರಣ ಲಭ್ಯವಾಗುವ ನಿರೀಕ್ಷೆಯಿದೆ. ಮತ ಎಣಿಕೆಗೆ ಚುನಾವಣಾ ಆಯೋಗವು ಎಲ್ಲ ಸಿದ್ಧತೆಗಳನ್ನು ಮಾಡಿಕೊಂಡಿದೆ.

ಚುನಾವಣೆಯಲ್ಲಿ ಬಿಜೆಪಿ ಹಾಗೂ ಎಎಪಿ ಗೆಲ್ಲಲಿವೆ ಎಂದು ಮತದಾನೋತ್ತರ ಸಮೀಕ್ಷೆಗಳು ಹೇಳಿದ್ದರೂ, ಬಿಜೆಪಿ, ಕಾಂಗ್ರೆಸ್ ಹಾಗೂ ಪ್ರಾದೇಶಿಕ ಪಕ್ಷಗಳಾದ ಎಸ್‌ಪಿ, ಬಿಎಸ್‌ಪಿ, ಟಿಎಂಸಿ, ಅಕಾಲಿದಳಗಳಿಗೆ ಈ ಫಲಿತಾಂಶ ನಿರ್ಣಾಯಕವಾಗಿದೆ. ಇದೇ ಜುಲೈನಲ್ಲಿ ನಡೆಯಲಿರುವ ರಾಷ್ಟ್ರಪತಿ ಚುನಾವಣೆ ಹಾಗೂ ಬಿಜೆಪಿಯೇತರ ಪಕ್ಷಗಳು ಒಂದೇ ವೇದಿಕೆಯಡಿ ಬರುವ ಪ್ರಕ್ರಿಯೆಯನ್ನು ಈ ಫಲಿತಾಂಶ ಪ್ರಭಾವಿಸಲಿದೆ ಎಂದು ವಿಶ್ಲೇಷಿಸಲಾಗಿದೆ.

ಪಂಜಾಬ್ ಹೊರತುಪಡಿಸಿ ಉಳಿದ ನಾಲ್ಕು ರಾಜ್ಯಗಳಲ್ಲಿ ಅಧಿಕಾರದಲ್ಲಿರುವ ಬಿಜೆಪಿಯು, ಈ ಬಾರಿ ಒಂದು ರಾಜ್ಯವನ್ನು ಕಳೆದುಕೊಂಡರೂ ಅದು ಪಕ್ಷಕ್ಕೆ ದೊಡ್ಡ ನಷ್ಟ. ಅತಿ ಹೆಚ್ಚು ವಿಧಾನಸಭಾ ಕ್ಷೇತ್ರಗಳನ್ನು ಹೊಂದಿರುವ ಉತ್ತರಪ್ರದೇಶದ ಫಲಿತಾಂಶದ ಮೇಲೆ ಎಲ್ಲರ ಗಮನ ಕೇಂದ್ರೀಕೃತವಾಗಿವೆ. 'ದೆಹಲಿಗೆ ಹೋಗುವ ರಸ್ತೆಯು ಲಖನೌ ಮೂಲಕವೇ ಹಾದುಹೋಗಬೇಕು' ಎಂಬ ರಾಜಕೀಯ ವಿಶ್ಲೇಷಕರ ಮಾತು, ಉತ್ತರಪ್ರದೇಶದ ಫಲಿತಾಂಶದ ಮಹತ್ವವನ್ನು ವಿವರಿಸುತ್ತದೆ.

ಉತ್ತರ ಪ್ರದೇಶದಲ್ಲಿ ಸ್ಪಷ್ಟ ಗೆಲುವು ದಾಖಲಿಸುವುದು ಹಾಗೂ ಗೋವಾ, ಉತ್ತರಾಖಂಡ, ಮಣಿಪುರದಲ್ಲಿ ಆಡಳಿತ ವಿರೋಧಿ ಅಲೆಯನ್ನು ಮೆಟ್ಟಿನಿಂತು ಅಧಿಕಾರ ಉಳಿಸಿಕೊಳ್ಳುವುದು ಬಿಜೆಪಿಗೆ ಕಠಿಣ ಹಾದಿ ಎಂದು ವಿಶ್ಲೇಷಿಸಲಾಗಿದೆ. ಉತ್ತರ ಪ್ರದೇಶದಲ್ಲಿ ಒಂದು ವೇಳೆ ಕಡಿಮೆ ಅಂತರದಲ್ಲಿ ಬಿಜೆಪಿಯು ಗೆದ್ದರೆ, ಯೋಗಿ ಆದಿತ್ಯನಾಥ ಅವರು ಹೊಸ ಮುಖ್ಯಮಂತ್ರಿ ಆಯ್ಕೆಗೆ ದಾರಿ ಮಾಡಿಕೊಡಲಿದ್ದಾರೆಯೇ ಎಂಬುದನ್ನೂ ಈ ಫಲಿತಾಂಶ ನಿರ್ಧರಿಸಲಿದೆ.

ಈ ಬಾರಿ ಸಮಾಜವಾದಿ ಪಕ್ಷವು ಉತ್ತಮ ಸಾಧನೆ ಮಾಡುವ ನಿರೀಕ್ಷೆಯಿದ್ದರೂ, ಆಡಳಿತಾರೂಢ ಬಿಜೆಪಿಯನ್ನು ಅದು ಅಧಿಕಾರದಿಂದ ಕೆಳಗಿಳಿಸುವಲ್ಲಿ ಯಶಸ್ವಿಯಾಗುವುದೇ ಎಂಬುದನ್ನು ಕೊನೆಯ ಹಂತದ ಮತಎಣಿಕೆ ನಿರ್ಧರಿಸಲಿದೆ. ರಾಜ್ಯದಲ್ಲಿ ಹಿಂದೊಮ್ಮೆ ಅಧಿಕಾರ ಹಿಡಿದಿದ್ದ ಎಸ್‌ಪಿ, ಮತ್ತೆ ಗದ್ದುಗೆಗೆ ಏರಲು ಕಾಯುತ್ತಿದೆ.

ಮತದಾನೋತ್ತರ ಸಮೀಕ್ಷೆಗಳಲ್ಲಿ ಸ್ಥಾನ ಪಡೆಯದ ಕಾಂಗ್ರೆಸ್, ಉತ್ತರಾಖಂಡ, ಗೋವಾ, ಪಂಜಾಬ್ ಹಾಗೂ ಮಣಿಪುರದಲ್ಲಿ ಅಚ್ಚರಿಯ ಫಲಿತಾಂಶದ ನಿರೀಕ್ಷೆಯಲ್ಲಿದೆ. ಒಂದೆರಡನ್ನು ಹೊರತುಪಡಿಸಿದರೆ, ಬೇರಾವ ಮತಗಟ್ಟೆ ಸಮೀಕ್ಷೆಗಳು ಕಾಂಗ್ರೆಸ್ ಯಾವ ರಾಜ್ಯದಲ್ಲೂ ಬಹಮತದ ಸನಿಹಕ್ಕೆ ಬರಲಿದೆ ಎಂದು ಹೇಳಿಲ್ಲ.


ವಾರಾಣಸಿಯ ಪಹಾಡಿಯಾ ಮತಎಣಿಕೆ ಕೇಂದ್ರದ ಎದುರು ಬಿಗಿಭದ್ರತೆ ಕಲ್ಪಿಸಲಾಗಿದೆ –ಪಿಟಿಐ ಚಿತ್ರ

ಏನಾಗಲಿದೆ ಕಾಂಗ್ರೆಸ್ ಸ್ಥಿತಿ?

ಚುನಾವಣೆಯಲ್ಲಿ ಒಂದು ವೇಳೆ ಕಾಂಗ್ರೆಸ್ ದುರ್ಬಲ ಪ್ರದರ್ಶನ ನೀಡಿದಲ್ಲಿ, ಪ್ರತಿಪಕ್ಷಗಳು ಒಗ್ಗಟ್ಟಾಗುವ ಪ್ರಕ್ರಿಯೆಯಲ್ಲಿ ಪಕ್ಷ ಮತ್ತೆ ಏಕಾಂಗಿಯಾಗಲಿದೆ. ಇದು ಕಾಂಗ್ರೆಸ್ ನಾಯಕತ್ವದ ಮೇಲೂ ಪ್ರಭಾವ ಬೀರಲಿದ್ದು, ಸೋನಿಯಾ ಗಾಂಧಿ ಕುಟುಂಬವು ಬಿಕ್ಕಟ್ಟು ಎದುರಿಸಲು ಕಾರಣವಾಬಹುದು. ಕಾಂಗ್ರೆಸ್‌ನಲ್ಲಿ ನಾಯಕತ್ವ ಬದಲಾವಣೆಗೆ ಆಗ್ರಹಿಸಿದ್ದ ಜಿ–23 ಅಭಿಯಾನಕ್ಕೆ ಬಲ ಸಿಕ್ಕಂತಾಗುತ್ತದೆ.

ಗೋವಾದಲ್ಲಿ ಕಾಂಗ್ರೆಸ್ ಗೆದ್ದರೆ, ಅದು ಬಿಜೆಪಿ ಮೇಲೆ ಮಾತ್ರ ಪರಿಣಾಮ ಬೀರುವುದಿಲ್ಲ. ಅದು ತೃಣಮೂಲ ಕಾಂಗ್ರೆಸ್ ಪಕ್ಷ ರಾಷ್ಟ್ರ ಮಟ್ಟದಲ್ಲಿ ನೆಲೆಯೂರುವ ಆಕಾಂಕ್ಷೆಯನ್ನೂ ಪ್ರಭಾವಿಸುತ್ತದೆ. ಹಾಗೆಯೇ ಪಂಜಾಬ್‌ನಲ್ಲಿ ಎಎಪಿ ದಾಖಲಿಸುವ ಗೆಲುವು, ಕಾಂಗ್ರೆಸ್ ಹಾಗೂ ಅಕಾಲಿದಳಗಳಿಗೆ ತೊಡಕಾಗಲಿದೆ.

ಮತಗಟ್ಟೆ ಸಮೀಕ್ಷೆಯಂತೆ ಪಂಜಾಬ್‌ನಲ್ಲಿ ಎಎಪಿ ಗೆಲ್ಲಲಿದೆ ಎಂಬುದು ನಿಜವಾಗುವುದಿಲ್ಲ ಎಂಬುದು ಕಾಂಗ್ರೆಸ್ ನಂಬಿಕೆ. ಸಮೀಕ್ಷೆಗಳು ಭವಿಷ್ಯ ನುಡಿದಂತೆ ಪಕ್ಷದ ಸಂಖ್ಯಾಬಲವು 30–40 ಸ್ಥಾನಗಳಿಗೆ ಕುಸಿದರೆ, ಅಮರಿಂದರ್ ಸಿಂಗ್ ಅವರು ಕಾಂಗ್ರೆಸ್ ಶಾಸಕರನ್ನು ಸೆಳೆಯಲಿದ್ದಾರೆಯೇ ಎಂಬ ಕುತೂಹಲ ಇದೆ. ಉತ್ತರಾಖಂಡ, ಗೋವಾದ ಮೇಲೆ ಕಾಂಗ್ರೆಸ್ ಹೆಚ್ಚು ಗಮನ ಕೇಂದ್ರೀಕರಿಸಿದೆ. ಹಿರಿಯ ಮುಖಂಡರಾದ ಭೂಪೇಶ್ ಬಘೇಲ್, ಪಿ.ಚಿದಂಬರಂ ಹಾಗೂ ಡಿ.ಕೆ. ಶಿವಕುಮಾರ್ ಅವರನ್ನು ವಿಶೇಷ ವೀಕ್ಷಕರಾಗಿ ಪಕ್ಷ ನಿಯೋಜಿಸಿದ್ದು, ಕಾರ್ಯತಂತ್ರ ರೂಪಿಸುತ್ತಿದೆ.


ಬಣ್ಣದ ಲೋಕ

ಹೋಳಿ ಹಬ್ಬದ ಹಿನ್ನೆಲೆಯಲ್ಲಿ ಉತ್ತರಪ್ರದೇಶ ಸಂಭಲ್‌ನಲ್ಲಿ ಕಾರ್ಮಿಕರು ಗುಲಾಲುಗಳನ್ನು ಬಿಸಿಲಿನಲ್ಲಿ ಒಣಗಿಸಿದರು –ಪಿಟಿಐ ಚಿತ್ರ

ಮಲ್ಯ ವಿಚಾರಣೆ ನಾಳೆಗೆ ಮುಂದೂಡಿಕೆ

ನವದೆಹಲಿ: ₹9 ಸಾವಿರ ಕೋಟಿಗೂ ಅಧಿಕ ಮೊತ್ತದ ಬ್ಯಾಂಕ್ ಸಾಲವಂಚನೆ ಪ್ರಕರಣದ ಆರೋಪಿ, ವಿದೇಶಕ್ಕೆ ಪರಾರಿಯಾಗಿರುವ ಉದ್ಯಮಿ ವಿಜಯ್ ಮಲ್ಯ ಅವರ ವಿರುದ್ಧದ ನ್ಯಾಯಾಂಗ ನಿಂದನೆ ಅರ್ಜಿಯ ವಿಚಾರಣೆಯನ್ನು ಸುಪ್ರೀಂ ಕೋರ್ಟ್ ಗುರುವಾರಕ್ಕೆ ಮುಂದೂಡಿದೆ.

ನ್ಯಾಯಮೂರ್ತಿಗಳಾದ ಯು.ಯು. ಲಲಿತ್, ಎಸ್. ರವೀಂದ್ರ ಭಟ್ ಮತ್ತು ಪಿ.ಎಸ್. ನರಸಿಂಹ ಅವರನ್ನೊಳಗೊಂಡ ಪೀಠವು ನ್ಯಾಯಾಂಗ ನಿಂದನೆ ಪ್ರಕರಣದ ವಿಚಾರಣೆಯನ್ನು ಗುರುವಾರಕ್ಕೆ ಮುಂದೂಡಿತು. ಹಿರಿಯ ವಕೀಲ ಮತ್ತು ಅಮಿಕಸ್ ಕ್ಯೂರಿ ಜೈದೀಪ್ ಗುಪ್ತಾ ಅವರು ಮತ್ತೊಂದು ಪ್ರಕರಣದ ವಾದದಲ್ಲಿ ನಿರತರಾಗಿರುವ ಕಾರಣ ಪ್ರಕರಣದ ವಿಚಾರಣೆಯನ್ನು ಮುಂದೂಡುವಂತೆ ಕೋರಿದ್ದರು.

'ಕೋವೊವ್ಯಾಕ್ಸ್' ಲಸಿಕೆಗೆ ಡಿಸಿಜಿಐ ಅನುಮತಿ

ನವದೆಹಲಿ (ಪಿಟಿಐ): 12-17 ವರ್ಷ ವಯಸ್ಸಿನವರಿಗಾಗಿ ಸೀರಂ ಇನ್‌ಸ್ಟಿಟ್ಯೂಟ್ ಆಫ್ ಇಂಡಿಯಾ (ಎಸ್‌ಐಐ) ಅಭಿವೃದ್ಧಿಪಡಿಸಿರುವ 'ಕೋವೊವ್ಯಾಕ್ಸ್' ಲಸಿಕೆಯನ್ನು ತುರ್ತು ಸಂದರ್ಭದಲ್ಲಿ ಬಳಸಲು ಭಾರತೀಯ ಔಷಧ ಮಹಾನಿಯಂತ್ರಕರು (ಡಿಸಿಜಿಐ) ಅನುಮತಿ ನೀಡಿದ್ದಾರೆ ಎಂದು ಅಧಿಕೃತ ಮೂಲಗಳು ಬುಧವಾರ ತಿಳಿಸಿವೆ.

12 ರಿಂದ 17 ವರ್ಷದವರಿಗೆ ಕೋವೊವ್ಯಾಕ್ಸ್ ಲಸಿಕೆಯನ್ನು ತುರ್ತು ಬಳಕೆಗೆ ಅನುಮತಿ ನೀಡಬಹುದು ಎಂದು ತಜ್ಞರ ಸಮಿತಿ ಕಳೆದ ವಾರ ಶಿಫಾರಸು ಮಾಡಿತ್ತು. ಈ ಶಿಫಾರಸು ಆಧರಿಸಿ ಡಿಸಿಜಿಐ ಕೆಲವು ಷರತ್ತುಗಳನ್ನು ವಿಧಿಸಿ ಬಳಕೆಗೆ ಅನುಮತಿ ನೀಡಿದೆ.

18 ವರ್ಷಕ್ಕಿಂತ ಕಡಿಮೆ ವಯಸ್ಸಿನವರಲ್ಲಿ ಬಳಕೆಗಾಗಿ ನಿಯಂತ್ರಕರ ಅನುಮೋದನೆಯನ್ನು ಪಡೆದ 4ನೇ ಲಸಿಕೆ ಇದಾಗಿದೆ.

15 ವರ್ಷದೊಳಗಿನವರಿಗೆ ಲಸಿಕೆ ಹಾಕುವ ಬಗ್ಗೆ ಸರ್ಕಾರ ಇನ್ನೂ ನಿರ್ಧಾರ ಕೈಗೊಂಡಿಲ್ಲ. ಲಸಿಕೆಯ ಹೆಚ್ಚುವರಿ ಅಗತ್ಯತೆ ಹಾಗೂ ಈ ವಯೋಮಾನದ ಸಂಖ್ಯೆ ಕುರಿತು ನಿರಂತರವಾಗಿ ಪರಿಶೀಲಿಸಲಾಗುತ್ತದೆ ಎಂದು ಆರೋಗ್ಯ ಸಚಿವಾಲಯ ಹೇಳಿದೆ.

ಪಶ್ಚಿಮ ಬಂಗಾಳ ವಿಧಾನಸಭೆಯಲ್ಲಿ ಬಿಜೆಪಿ ಸದಸ್ಯರಿಂದ ಗದ್ದಲ

ಮಮತಾ ವಿರುದ್ಧ ಹರಿಹಾಯ್ದ ಧನಕರ್

ಪ್ರಜಾವಾಣಿ ವಾರ್ತೆ

'ಕೋಲ್ಕತ್ತ (ಪಿಟಿಐ): ಪಶ್ಚಿಮ ಬಂಗಾಳ ವಿಧಾನಸಭೆಯಲ್ಲಿ ಬಿಜೆಪಿ ಸದಸ್ಯರ ಪ್ರತಿಭಟನೆಯಿಂದ ಉಂಟಾದ ಗದ್ದಲದ ನಡುವೆಯೂ ಭಾಷಣ ಮುಂದುವರಿಸುವಂತೆ ರಾಜ್ಯಪಾಲರಿಗೆ ಮನವಿ ಮಾಡಿದ ತಮ್ಮ ಪಕ್ಷದ ಶಾಸಕರನ್ನು ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರು ಮಂಗಳವಾರ ಹೊಗಳಿರುವುದಕ್ಕೆ ರಾಜ್ಯಪಾಲ ಜಗದೀಪ್ ಧನಕರ್ ಕಿಡಿಕಾರಿದ್ದಾರೆ.

ಮಮತಾ ಬ್ಯಾನರ್ಜಿಯನ್ನು ಬುಧವಾರ ತರಾಟೆಗೆ ತೆಗೆದುಕೊಂಡಿರುವ ರಾಜ್ಯಪಾಲರು, ಸೋಮವಾರ ನಡೆದ ಘಟನೆಯ ವೇಳೆ ಸದನದಲ್ಲಿ ಸಚಿವರು ಮತ್ತು ಆಡಳಿತಾರೂಢ ಟಿಎಂಸಿ ಶಾಸಕರು ಘೇರಾವ್ ಮಾಡಿದರು ಎಂದು ಸಿಡಿಮಿಡಿಗೊಂಡಿದ್ದಾರೆ.

ಮಮತಾ ತಮ್ಮ ಪಕ್ಷದ ಶಾಸಕಿಯರನ್ನು ಶ್ಲಾಘಿಸಿರುವ ವಿಡಿಯೊ ತುಣುಕು ಲಗತ್ತಿಸಿ ಟ್ವೀಟ್ ಮಾಡಿರುವ ಧನಕರ್ 'ರಾಜ್ಯಪಾಲರಿಗೆ ಘೇರಾವ್ ಅಥವಾ ದಿಗ್ಬಂಧನ ಹಾಕುವುದನ್ನು ಯಾವುದೇ ರೀತಿಯಿಂದಲೂ ಸಮರ್ಥಿಸಿಕೊಳ್ಳಲು ಸಾಧ್ಯವಿಲ್ಲ. ಸದನದಲ್ಲಿ 'ಅವ್ಯವಸ್ಥೆ' ಇದ್ದಾಗ ಗೌರವಾನ್ವಿತ ಮುಖ್ಯಮಂತ್ರಿ ಏನನ್ನು ಶ್ಲಾಘಿಸುತ್ತಿದ್ದಾರೆ, ನಾವು ಎತ್ತ ಸಾಗುತ್ತಿದ್ದೇವೆ ಎನ್ನುವುದನ್ನು ಇದು ಪ್ರತಿಬಿಂಬಿಸುತ್ತದೆ. ಪ್ರಜಾಪ್ರಭುತ್ವವನ್ನು ಉಳಿಸಲು ನಾವೆಲ್ಲರೂ ಕೆಲಸ ಮಾಡಬೇಕಾಗಿದೆ' ಎಂದು ಚಾಟಿ ಬೀಸಿದ್ದಾರೆ.

ಈ ಬಗ್ಗೆ ಸ್ಪೀಕರ್‌ಗೂ ಪತ್ರ ಬರೆದಿರುವ ರಾಜ್ಯಪಾಲರು, 'ಪ್ರತಿಪಕ್ಷಗಳ ಅಶಿಸ್ತಿನ ಪ್ರತಿಭಟನೆಗೆ ಸಾಕ್ಷಿಯಾದ ಸದನದ ಅವ್ಯವಸ್ಥೆಗೆ ಮತ್ತಷ್ಟು ಇಂಬು ನೀಡುವುದರಲ್ಲಿ ತೊಡಗಿರುವುದು ವಿಪರ್ಯಾಸ' ಎಂದು ಬೇಸರ ವ್ಯಕ್ತಪಡಿಸಿದರು.

ರಾಜ್ಯಪಾಲರ ಟ್ವೀಟ್‌ಗೆ ಪ್ರತಿಕ್ರಿಯಿಸಿರುವ ಟಿಎಂಸಿ ವಕ್ತಾರ ಕುನಾಲ್ ಘೋಷ್, 'ರಾಜ್ಯಪಾಲರು ಈ ಟ್ವೀಟ್ ಮೂಲಕ ಬಿಜೆಪಿಯೊಂದಿಗಿನ ತಮ್ಮ ನಂಟನ್ನು ಬಹಿರಂಗಪಡಿಸಿದ್ದಾರೆ. ಕರ್ತವ್ಯ ಪೂರ್ಣಗೊಳಿಸದೆ ಬಜೆಟ್ ಅಧಿವೇಶನವನ್ನು ಮಧ್ಯದಲ್ಲೇ ತೊರೆಯುವುದು ಅವರ ಮೂಲ ಉದ್ದೇಶವಾಗಿತ್ತು. ಇದನ್ನು ಶಾಸಕಿಯರು ತಡೆದಿದ್ದರು' ಎಂದು ಅವರು ಹೇಳಿದರು.

ಮಾರ್ಚ್ 7ರಂದು ರಾಜ್ಯಪಾಲರು ಭಾಷಣ ಮಾಡುವ ವೇಳೆ ಈ ಇಬ್ಬರು ಶಾಸಕರು ಸೇರಿದಂತೆ ವಿರೋಧ ಪಕ್ಷವಾದ ಬಿಜೆಪಿ ಸದಸ್ಯರು ಗದ್ದಲವನ್ನುಂಟು ಮಾಡಿದರು. ಇದರಿಂದ ಬೇಸರಗೊಂಡ ರಾಜ್ಯಪಾಲರು ತಮ್ಮ ಭಾಷಣದ ಮೊದಲ ಮತ್ತು ಕೊನೆ ಸಾಲನ್ನು ಮಾತ್ರ ಓದಿ ಸದನದಿಂದ ಹೊರ ನಡೆದಿದ್ದರು.

ಈ ಘಟನೆ ಸಂಬಂಧ ತಮ್ಮನ್ನು ಭೇಟಿಯಾಗಿ ವಿವರಣೆ ನೀಡುವಂತೆ ಧನಕರ್ ಅವರು ಒಂದು ದಿನದ ಹಿಂದೆ ಸ್ಪೀಕರ್ ಜಗದೀಪ್ ಬಿಮನ್ ಬ್ಯಾನರ್ಜಿ ಅವರಿಗೆ ಸೂಚಿಸಿದ್ದರು.

ಬಜೆಟ್ ಅಧಿವೇಶನ: ರಾಜ್ಯಪಾಲರ ಭಾಷಣಕ್ಕೆ ಅಡ್ಡಿ; ಬಿಜೆಪಿ ಶಾಸಕರ ಅಮಾನತು

ಕೋಲ್ಕತ್ತ (ಪಿಟಿಐ): ಪಶ್ಚಿಮ ಬಂಗಾಳದ ವಿಧಾನಸಭೆಯಲ್ಲಿ ರಾಜ್ಯಪಾಲ ಜಗದೀಪ್ ಧನಕರ್ ಅವರ ಭಾಷಣಕ್ಕೆ ಅಡ್ಡಿಪಡಿಸಿದ ಆರೋಪದ ಮೇಲೆ ಬಿಜೆಪಿ ಶಾಸಕರಾದ ಸುದೀಪ್ ಮುಖೋಪಾಧ್ಯಾಯ ಮತ್ತು ಮಿಹಿರ್ ಗೋಸ್ವಾಮಿ ಅವರನ್ನು ಬಜೆಟ್ ಅಧಿವೇಶನದ ಉಳಿದ ಅವಧಿಗೆ ಅಮಾನತುಗೊಳಿಸಲಾಗಿದೆ.


ಧನಕರ್

ಶಾಸಕರ ಅಮಾನತಿಗೆ ಸಂಬಂಧಿಸಿದಂತೆ ಸಂಸದೀಯ ವ್ಯವಹಾರಗಳ ಸಚಿವ ಪಾರ್ಥ ಚಟರ್ಜಿ ಅವರು ಮಂಡಿಸಿದ ಪ್ರಸ್ತಾವನೆಯನ್ನು ಸ್ಪೀಕರ್ ಬಿಮನ್ ಬ್ಯಾನರ್ಜಿ ಮತಕ್ಕೆ ಹಾಕಿದರು. ಧ್ವನಿ ಮತದ ಮೂಲಕ ಪ್ರಸ್ತಾವನೆಯನ್ನು ಅಂಗೀಕರಿಸಲಾಯಿತು.

ಸಂಕ್ಷಿಪ್ತ ಸುದ್ದಿ

ಸಾಂಪ್ರದಾಯಿಕ ಔಷಧ ಕೇಂದ್ರಕ್ಕೆ ಅನುಮೋದನೆ

ನವದೆಹಲಿ: ಸಾಂಪ್ರದಾಯಿಕ ಔಷಧ ಪದ್ಧತಿಯನ್ನು ಜಾಗತಿಕವಾಗಿ ಉತ್ತೇಜಿಸಲು ನೆರವಾಗುವ ನಿಟ್ಟಿನಲ್ಲಿ, ವಿಶ್ವ ಆರೋಗ್ಯ ಸಂಸ್ಥೆ (ಡಬ್ಲ್ಯುಎಚ್‌ಒ) ಜತೆಗಿನ ಒಪ್ಪಂದಕ್ಕೆ ಕೇಂದ್ರ ಸರ್ಕಾರ ಸಮ್ಮತಿ ಸೂಚಿಸಿದೆ.

ಈ ಒಪ್ಪಂದದ ಅನ್ವಯ ಗುಜರಾತ್‌ನ ಜಾಮ್‌ನಗರದಲ್ಲಿ ವಿಶ್ವ ಆರೋಗ್ಯ ಸಂಸ್ಥೆ (ಡಬ್ಲ್ಯುಎಚ್‌ಒ)ಯ ಜಾಗತಿಕ ಸಾಂಪ್ರದಾಯಿಕ ಔಷಧ ಕೇಂದ್ರವನ್ನು ಸ್ಥಾಪಿಸಲು ಕೇಂದ್ರ ಸಚಿವ ಸಂಪುಟವು ಬುಧವಾರ ಅನುಮೋದನೆ ನೀಡಿದೆ.

ಸಾಂಪ್ರದಾಯಿಕ ಔಷಧದ ಬಳಕೆಯನ್ನು ಪ್ರಚುರಪಡಿಸುವ ಮೊದಲ ಹಾಗೂ ಜಗತ್ತಿನ ಏಕೈಕ ಕೇಂದ್ರದ ಆರಂಭಕ್ಕೆ ಮಾಡಿಕೊಂಡಿರುವ ಈ ಒಪ್ಪಂದವು ಆಯುರ್ವೇದ ಔಷಧ ಪದ್ಧತಿಯ ಅಭಿವೃದ್ಧಿಗೆ ಸಹಕಾರಿಯಾಗಲಿದೆ. ಕೇಂದ್ರ ಸರ್ಕಾರದ ಆಯುಷ್ ಸಚಿವಾಲಯದ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸಲಿರುವ ಈ ಕೇಂದ್ರವು, ಸಾಂಪ್ರದಾಯಿಕ ಔಷಧದ ಗುಣಮಟ್ಟ, ಸುರಕ್ಷತೆ, ಬಳಕೆ ಹಾಗೂ ಲಭ್ಯತೆಯನ್ನು ಖಚಿತಪಡಿಸುವುದಲ್ಲದೆ, ಜಾಗತಿಕವಾಗಿ ಅಗತ್ಯವಿರುವ ಪೂರಕ ಪರಿಕರಗಳ ಮಾರ್ಗಸೂಚಿ ಅಭಿವೃದ್ಧಿ ಹಾಗೂ ದತ್ತಾಂಶ ಸಂಗ್ರಹಕ್ಕೆ ನೆರವಾಗಲಿದೆ.

ರಾಜೀವ್ ಗಾಂಧಿ ಹಂತಕನಿಗೆ ಜಾಮೀನು

ನವದೆಹಲಿ: ಕೇಂದ್ರ ಸರ್ಕಾರದ ವಿರೋಧದ ನಡುವೆಯೂ ಮಾಜಿ ಪ್ರಧಾನಿ ರಾಜೀವ್ ಗಾಂಧಿ ಅವರ ಹತ್ಯೆ ಪ್ರಕರಣದಲ್ಲಿ ಶಿಕ್ಷೆಗೊಳಗಾದ ಹಂತಕ ಎ.ಜಿ. ಪೆರರಿವಾಳನ್ ಅವರಿಗೆ ಬುಧವಾರ ಸುಪ್ರೀಂ ಕೋರ್ಟ್ ಜಾಮೀನು ಮಂಜೂರು ಮಾಡಿದೆ.

ಪೆರರಿವಾಳನ್‌ಗೆ ವಿಧಿಸಿದ್ದ ಮರಣದಂಡನೆ ಶಿಕ್ಷೆಯನ್ನು ಈಗಾಗಲೇ ಜೀವಾವಧಿಗೆ ಇಳಿಸಲಾಗಿದೆ. ಅವರ ಕ್ಷಮಾದಾನ ಅರ್ಜಿಯ ನಿರ್ಧಾರದಲ್ಲಿನ ವಿಳಂಬವನ್ನು ಉಲ್ಲೇಖಿಸಿ ಮತ್ತು ಹೆಚ್ಚಿನ ಪ್ರಯೋಜನವನ್ನು ಪಡೆಯಲು ಸಾಧ್ಯವಿಲ್ಲ ಎಂದು ಕೇಂದ್ರ ಸರ್ಕಾರ ವಾದಿಸಿತ್ತು.

ಇಂಡಿಯನ್ ಏರ್‌ಲೈನ್ಸ್ ವಿಮಾನ ಅಪಹರಿಸಿದ್ದ ಉಗ್ರನ ಹತ್ಯೆ

ನವದೆಹಲಿ (ಪಿಟಿಐ): 1999ರಲ್ಲಿ ಇಂಡಿಯನ್ ಏರ್‌ಲೈನ್ಸ್ ವಿಮಾನ ಅಪಹರಿಸಿದ್ದ ಉಗ್ರ ಮಿಸ್ತ್ರಿ ಜಹೂರ್ ಇಬ್ರಾಹಿಂನನ್ನು ಪಾಕಿಸ್ತಾನದ ಕರಾಚಿಯಲ್ಲಿ ಅಪರಿಚಿತ ಬಂದೂಕುಧಾರಿಯೊಬ್ಬ ಗುಂಡಿಕ್ಕಿ ಹತ್ಯೆ ಮಾಡಿದ್ದಾನೆ.

ಈತ, 1999ರಲ್ಲಿ ಇಂಡಿಯನ್ ಏರ್‌ಲೈನ್ಸ್ ವಿಮಾನ ಐಸಿ-814 ಅಪಹರಿಸಿದ್ದ ಉಗ್ರರಲ್ಲಿ ಒಬ್ಬ. 15 ಸಿಬ್ಬಂದಿ ಹಾಗೂ 176 ಪ್ರಯಾಣಿಕರಿದ್ದ ಇಂಡಿಯನ್ ಏರ್‌ಲೈನ್ಸ್ ವಿಮಾನವನ್ನು ನೇಪಾಳದಿಂದ ಐವರು ಅಪಹರಣಕಾರರು ಅಪಹರಿಸಿದ್ದರು ಎಂದು ಭಾರತೀಯ ಗುಪ್ತಚರ ಇಲಾಖೆಯ ಅಧಿಕಾರಿಗಳು ತಿಳಿಸಿದ್ದಾರೆ.

ಉಗ್ರ ಮಿಸ್ತ್ರಿ ಜಹೂರ್ ಇಬ್ರಾಹಿಂ ಹಲವು ವರ್ಷಗಳಿಂದ ತಲೆಮರೆಸಿಕೊಂಡಿದ್ದ.

ಹಂದಿಯ ಹೃದಯ ಕಸಿ: ವ್ಯಕ್ತಿ ಸಾವು

ವಾಷಿಂಗ್ಟನ್ (ಎಎಫ್‌ಪಿ): ಹಂದಿಯ ಹೃದಯ ಕಸಿ ಮಾಡಿಸಿಕೊಂಡಿದ್ದ ವಿಶ್ವದ ಮೊದಲ ವ್ಯಕ್ತಿ ಡೇವಿಡ್ ಬೆನೆಟ್ (57) ಮೃತಪಟ್ಟಿದ್ದಾರೆ.

ಅಮೆರಿಕದ ಮೇರಿಲ್ಯಾಂಡ್ ವಿಶ್ವವಿದ್ಯಾಲಯದ ವೈದ್ಯಕೀಯ ಕಾಲೇಜಿನ ತಜ್ಞ ವೈದ್ಯರು, ಹೃದಯ ಸಂಬಂಧಿ ರೋಗದಿಂದ ಬಳಲುತ್ತಿದ್ದ ಬೆನೆಟ್ ಅವರಿಗೆ ಜನವರಿ 7ರಂದು ಹಂದಿಯ ಹೃದಯ ಕಸಿ ಮಾಡಿದ್ದರು. ಶಸ್ತ್ರ ಚಿಕಿತ್ಸೆ ನಡೆದ ಮೂರು ದಿನಗಳಲ್ಲೇ ಬೆನೆಟ್ ಚೇತರಿಸಿಕೊಂಡಿದ್ದರು. ದುರದೃಷ್ಟವಶಾತ್ ಅವರು ಮಾರ್ಚ್ 8ರಂದು ಮೃತಪಟ್ಟಿದ್ದಾರೆ ಎಂದು ಮೇರಿಲ್ಯಾಂಡ್ ವಿಶ್ವವಿದ್ಯಾಲಯ ಬುಧವಾರ ಹೇಳಿಕೆಯಲ್ಲಿ ತಿಳಿಸಿದೆ.

'ಶಸ್ತ್ರಚಿಕಿತ್ಸೆಯ ನಂತರ, ಕಸಿ ಮಾಡಲಾದ ಹೃದಯವು ಯಾವುದೇ ತೊಂದರೆಯ ಲಕ್ಷಣಗಳಿಲ್ಲದೆ ಹಲವು ವಾರಗಳವರೆಗೆ ಉತ್ತಮವಾಗಿ ಕಾರ್ಯನಿರ್ವಹಿಸಿತ್ತು' ಎಂದು ಅದು ಹೇಳಿದೆ.

ಐಇಡಿ ಸ್ಫೋಟ: ಒಬ್ಬ ಸಾವು, 15 ಮಂದಿ ಗಾಯ

ಪ್ರಜಾವಾಣಿ ವಾರ್ತೆ

ಜಮ್ಮು: ಇಲ್ಲಿನ ಉಧಂಪುರ ಜಿಲ್ಲಾ ನ್ಯಾಯಾಲಯ ಸಂಕೀರ್ಣ ಸಮೀಪದ ಸ್ಲಾಥಿಯಾ ಚೌಕ್ ಬಳಿ ಬುಧವಾರ ಸಂಭವಿಸಿದ ಸುಧಾರಿತ ಸ್ಫೋಟಕ ಸಾಮಗ್ರಿ (ಐಇಡಿ) ಸ್ಫೋಟದಲ್ಲಿ ನಾಗರಿಕರೊಬ್ಬರು ಮೃತಪಟ್ಟಿದ್ದು, 15 ಮಂದಿ ಗಾಯಗೊಂಡಿದ್ದಾರೆ.

'ಈ ಘಟನೆ ಮಧ್ಯಾಹ್ನ 1.50ರ ಸುಮಾರಿಗೆ ನಡೆದಿದ್ದು, ವ್ಯಕ್ತಿಯೊಬ್ಬರು ಮೃತಪಟ್ಟಿದ್ದು, 15 ಮಂದಿ ಗಾಯಗೊಂಡಿದ್ದಾರೆ. ಗಾಯಾಳುಗಳನ್ನು ಉಧಂಪುರ ಆಸ್ಪತ್ರೆಗೆ ದಾಖಲಿಸಲಾಗಿದ್ದು, ಎಲ್ಲರ ಆರೋಗ್ಯ ಸ್ಥಿರವಾಗಿದೆ. ಗಾಯಗೊಂಡವರಲ್ಲಿ ಮಹಿಳೆ, 8 ತಿಂಗಳ ಮಗು ಹಾಗೂ ರಾಜಸ್ಥಾನದ ನಿವಾಸಿಯೊಬ್ಬರು ಇದ್ದಾರೆ' ಎಂದು ಉಧಂಪುರ ಜಿಲ್ಲಾಧಿಕಾರಿ ಕನ್ವಲ್ ಚಿಬ್ ತಿಳಿಸಿದರು.

ಘಟನಾ ಸ್ಥಳ ಪರಿಶೀಲಿಸಿದ ಬಳಿಕ ಸುದ್ದಿಗಾರರಿಗೆ ಪ್ರತಿಕ್ರಿಯಿಸಿದ ಜಮ್ಮು ಎಡಿಜಿಪಿ ಮುಖೇಶ್ ಸಿಂಗ್ 'ಈ ಸ್ಫೋಟದ ಬಗ್ಗೆ ಉಪ ಪೊಲೀಸ್ ವರಿಷ್ಠಾಧಿಕಾರಿ ಸತೇಶ್ ಭಾರದ್ವಾಜ್ ನೇತೃತ್ವದ ರಾಜ್ಯ ತನಿಖಾ ಸಂಸ್ಥೆಯ (ಎಸ್‌ಐಎ) ತಂಡವು ತನಿಖೆ ನಡೆಸುತ್ತಿದೆ' ಎಂದು ಹೇಳಿದರು.

ಸುಳ್ಳಿಗೆ ಸತ್ಯ ‘ಪ್ರತ್ಯಸ್ತ್ರ’ವಾಗಲಿ

ಪ್ರಜಾವಾಣಿ ವಾರ್ತೆ



ಬೆಂಗಳೂರು: ‘ರಾಜ್ಯ ಬಿಜೆಪಿ ಸರ್ಕಾರ ಸುಳ್ಳಿನ ಮೂಲಕ ತನ್ನ ಸಾಧನೆಯನ್ನು ಬಿಂಬಿಸಿಕೊಳ್ಳುತ್ತಿದೆ. ನಾವು ಸತ್ಯವನ್ನು ಬಿಚ್ಚಿಡುವ ಮೂಲಕ ಪ್ರತ್ಯಸ್ತ್ರ ಪ್ರಯೋಗಿಸಬೇಕು’ ಎಂದು ಪಕ್ಷದ ಶಾಸಕರಿಗೆ ಕಾಂಗ್ರೆಸ್ ಶಾಸಕಾಂಗ ಪಕ್ಷದ ನಾಯಕ ಸಿದ್ದರಾಮಯ್ಯ ಪಾಠ ಮಾಡಿದರು.

ಬುಧವಾರ ರಾತ್ರಿ ನಡೆದ ಪಕ್ಷದ ಶಾಸಕಾಂಗ ಸಭೆಯಲ್ಲಿ ಮಾತನಾಡಿದ ಅವರು, ‘ರಾಜ್ಯ ಸರ್ಕಾರ ಮಂಡಿಸಿದ 2022–23ನೇ ಸಾಲಿನ ಬಜೆಟ್ ಬಗ್ಗೆ ಎಲ್ಲ ಶಾಸಕರು ಅಧ್ಯಯನ ಮಾಡಿಕೊಂಡು ಸದನದ ಕಲಾಪದಲ್ಲಿ ಭಾಗವಹಿಸಬೇಕು’ ಎಂದು ಸಲಹೆ ನೀಡಿದರು.

‘ಕಲಾಪದಲ್ಲಿ ಎಲ್ಲ ಶಾಸಕರು ಸಕ್ರಿಯವಾಗಿ ಭಾಗವಹಿಸಬೇಕು. ಈ ಸರ್ಕಾರ ಹಲವು ಯೋಜನೆಗಳನ್ನು ಕೈಬಿಟ್ಟಿದೆ. ಈ ಬಗ್ಗೆ ಮಧ್ಯಮಾವಧಿ ವಿತ್ತೀಯ ಯೋಜನೆಯ ವರದಿಯಲ್ಲಿರುವ ಅಂಶಗಳ ಬಗ್ಗೆ ಎಲ್ಲ ಶಾಸಕರು ತಿಳಿದುಕೊಳ್ಳಬೇಕು. ಸರ್ಕಾರ ಸಾಲದ ಸುಳಿಯಲ್ಲಿದೆ. ಈ ಎಲ್ಲ ವಿಷಯಗಳನ್ನು ಅರಿತುಕೊಂಡು ಸರ್ಕಾರಕ್ಕೆ ಉತ್ತರ ನೀಡಬೇಕು’ ಎಂದೂ ಸಲಹೆ ನೀಡಿದ್ದಾರೆ.

ಯುವತಿಯ ವಿಚಾರಕ್ಕೆ ನಡೆದ ಜಗಳದಲ್ಲಿ ಯುವಕನ ಕೊಲೆ ಮಾಡಿ ಪರಾರಿ

ಕೊಲೆ ಆರೋಪಿಗಳ ಕಾಲಿಗೆ ಗುಂಡೇಟು

ಪ್ರಜಾವಾಣಿ ವಾರ್ತೆ



ಅದ್ನಾನ್ ಖಾನ್



ಸೈಯದ್ ಮೋಯಿನ್

ಅಪರಾಧ ಸುದ್ದಿ

ಬೆಂಗಳೂರು: ಯುವತಿಯ ವಿಚಾರಕ್ಕೆ ಸಂಬಂಧಿಸಿದಂತೆ ಮಾರಕಾಸ್ತ್ರಗಳಿಂದ ಯುವಕನನ್ನು ಕೊಲೆ ಮಾಡಿ ಪರಾರಿಯಾಗಿದ್ದ ಇಬ್ಬರು ಆರೋಪಿಗಳನ್ನು ಪುಲಕೇಶಿನಗರ ಪೊಲೀಸರು ಕಾಲಿಗೆ ಗುಂಡೇಟು ಹೊಡೆದು ಬಂಧಿಸಿದ್ದಾರೆ.

‘ಶಿವಾಜಿನಗರದ ಸೈಯದ್ ಮೊಯಿನ್ ಖಾನ್ (20) ಹಾಗೂ ಭಾರತೀನಗರದ ಅದ್ನಾನ್ ಖಾನ್ (19) ಬಂಧಿತರು. ಇವರನ್ನು ಚಿಕಿತ್ಸೆಗಾಗಿ ಬೌರಿಂಗ್ ಆಸ್ಪತ್ರೆಗೆ ದಾಖಲಿಸಲಾಗಿದೆ. ಉಳಿದ ಆರೋಪಿಗಳಾದ ಶಿವಾಜಿ ನಗರದ ಅರ್ಬಾಜ್ (19), ಮಜರ್ (18) ಹಾಗೂ ಸೈಯದ್ ಶಕೀಬ್ (20)’ ಅವರನ್ನೂ ಬಂಧಿಸಲಾಗಿದೆ’ ಎಂದು ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

‘ಕಾಡುಗೊಂಡನಹಳ್ಳಿ ನಿವಾಸಿ ಮೊಹಮ್ಮದ್ ಉಸ್ಮಾನ್ ಕೊಲೆಯಾದ ಯುವಕ. ಯುವತಿಯೊಬ್ಬಳ ಜೊತೆ ಉಸ್ಮಾನ್ ಸಿನಿಮಾಕ್ಕೆ ಹೋಗಿದ್ದ. ಇದರಿಂದ ಕುಪಿತಗೊಂಡಿದ್ದ ಮೊಯಿನ್, ಆತನ ಕೊಲೆಗೆ ಸಂಚು ರೂಪಿಸಿದ್ದ. ಠಾಣೆ ವ್ಯಾಪ್ತಿಯ ಮಾಸ್ಕ್ ರಸ್ತೆ ಬಳಿ ಮಂಗಳವಾರ ರಾತ್ರಿ 11.30ರ ಸುಮಾರಿಗೆ ಎರಡು ಗುಂಪುಗಳ ನಡುವೆ ಗಲಾಟೆ ನಡೆದಿತ್ತು. ಈ ವೇಳೆ ಮೊಯಿನ್ ಮಾರಕಾಸ್ತ್ರಗಳಿಂದ ಉಸ್ಮಾನ್ ಮೇಲೆ ಹಲ್ಲೆ ನಡೆಸಿದ್ದ. ಗಂಭೀರವಾಗಿ ಗಾಯಗೊಂಡಿದ್ದ ಆತನನ್ನು ಬೌರಿಂಗ್ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಚಿಕಿತ್ಸೆಗೆ ಸ್ಪಂದಿಸದೆ ಮೃತಪಟ್ಟಿದ್ದ’ ಎಂದು ಮಾಹಿತಿ ನೀಡಿದರು.

‘ಆರೋಪಿಗಳ ಪತ್ತೆಗಾಗಿ ಪಿಎಸ್‌ಐಗಳಾದ ಆನಂದ್ ಮತ್ತು ರೂಮಾನ್ ನೇತೃತ್ವದಲ್ಲಿ ವಿಶೇಷ ತಂಡ ರಚಿಸಲಾಗಿತ್ತು. ಆರೋಪಿಗಳು ಕಲ್ಪಹಳ್ಳಿ ಬಳಿ ಅಡಗಿ ಕುಳಿತಿರುವ ಬಗ್ಗೆ ಮಾಹಿತಿ ಲಭಿಸಿತ್ತು. ಇದರ ಆಧಾರದಲ್ಲಿ ಬುಧವಾರ ಬೆಳಿಗ್ಗೆ 5.30ರ ಸುಮಾರಿಗೆ ತಂಡವು ಸ್ಥಳಕ್ಕೆ ಹೋಗಿತ್ತು. ಸಿಬ್ಬಂದಿಯ ವಾಹನ ಕಂಡೊಡನೆ ಅವರು ಪರಾರಿಯಾಗಲು ಯತ್ನಿಸಿದ್ದರು. ಬಂಧಿಸಲು ಹೋದವರ ಮೇಲೆ ಮಾರಕಾಸ್ತ್ರಗಳಿಂದ ಹಲ್ಲೆಗೆ ಮುಂದಾಗಿದ್ದರು. ಇದರಿಂದ ಕಾನ್‌ಸ್ಟೆಬಲ್ ಒಬ್ಬರಿಗೆ ಗಾಯವಾಗಿತ್ತು’ ಎಂದು ಹೇಳಿದರು.

‘ಆನಂದ್ ಹಾಗೂ ರೂಮಾನ್ ಅವರು ಶರಣಾಗುವಂತೆ ಆರೋಪಿಗಳಿಗೆ ಸೂಚಿಸಿದ್ದರು. ಹೀಗಿದ್ದರೂ ಅವರು ಸಿಬ್ಬಂದಿ ಮೇಲೆ ಹಲ್ಲೆಗೆ ಮುಂದಾಗಿದ್ದರು. ಹೀಗಾಗಿ ಗಾಳಿಯಲ್ಲಿ ಒಂದು ಸುತ್ತಿನ ಗುಂಡು ಹಾರಿಸಲಾಗಿತ್ತು. ಸಿಬ್ಬಂದಿಯ ಮಾತು ಲೆಕ್ಕಿಸದೆ ಅವರು ಮತ್ತೊಮ್ಮೆ ಹಲ್ಲೆಗೆ ಪ್ರಯತ್ನಿಸಿದ್ದರು. ಆತ್ಮರಕ್ಷಣೆಗಾಗಿ ಪಿಎಸ್‌ಐಗಳು ಅವರ ಕಾಲಿಗೆ ಗುಂಡು ಹೊಡೆದಿದ್ದರು. ಕುಸಿದು ಬಿದ್ದ ಇಬ್ಬರನ್ನೂ ಬಂಧಿಸಿ ಬಳಿಕ ಆಸ್ಪತ್ರೆಗೆ ದಾಖಲಿಸಲಾಯಿತು’ ಎಂದು ವಿವರಿಸಿದರು.

ಮನೆ ಬಾಗಿಲ ಚಿಲಕ ಮುರಿದು ಕಳವು ಮಾಡಿದ್ದವ ಬಂಧನ

ಬೆಂಗಳೂರು: ಮನೆಯ ಬಾಗಿಲಿನ ಚಿಲಕ ಮುರಿದು ಚಿನ್ನಾಭರಣ ಕಳವು ಮಾಡಿ ಪರಾರಿಯಾಗಿದ್ದ ಆರೋಪಿಯನ್ನು ಕಾಮಾಕ್ಷಿಪಾಳ್ಯ ಠಾಣೆ ಪೊಲೀಸರು ಬಂಧಿಸಿದ್ದಾರೆ. ಆತನಿಂದ ₹14 ಲಕ್ಷ ಮೌಲ್ಯದ 288 ಗ್ರಾಂ ಚಿನ್ನಾಭರಣ ಜಪ್ತಿ ಮಾಡಲಾಗಿದೆ.

‘ವೈಟ್‌ಫೀಲ್ಡ್ ನಿವಾಸಿ ಲೋಕನಾಥ್ ಯಾನೆ ರವಿ (48) ಬಂಧಿತ ಆರೋಪಿ. ಬೀಗ ಹಾಕಿರುವ ಮನೆಗಳನ್ನು ಗುರುತಿಸುತ್ತಿದ್ದ ಈತ ರಾತ್ರಿ ಹೊತ್ತಿನಲ್ಲಿ ಕಳವು ಮಾಡಿ ಬಳಿಕ ತಲೆಮರೆಸಿಕೊಳ್ಳುತ್ತಿದ್ದ’ ಎಂದು ಪೊಲೀಸರು ತಿಳಿಸಿದ್ದಾರೆ.

‘ಠಾಣೆ ವ್ಯಾಪ್ತಿಯಲ್ಲಿ ವಾಸವಿದ್ದ ವ್ಯಕ್ತಿಯೊಬ್ಬರು ಫೆಬ್ರುವರಿ 15ರಂದು ಮನೆಗೆ ಬೀಗ ಹಾಕಿ ಹೊರಗೆ ಹೋಗಿದ್ದರು. ಈ ವೇಳೆ ಬಾಗಿಲ ಚಿಲಕ ಮುರಿದು ಒಳ ನುಗ್ಗಿದ್ದ ಆರೋಪಿಯು ಚಿನ್ನ ಹಾಗೂ ಬೆಳ್ಳಿಯ ವಸ್ತುಗಳನ್ನು ಕದ್ದು ಪರಾರಿಯಾಗಿದ್ದ’ ಎಂದು ಅವರು ಹೇಳಿದ್ದಾರೆ.

‘ಕಾಮಾಕ್ಷಿಪಾಳ್ಯ, ವಿಜಯನಗರ ಹಾಗೂ ಕೆ.ಪಿ. ಅಗ್ರಹಾರ ಠಾಣೆ ವ್ಯಾಪ್ತಿಯಲ್ಲಿ ಕಳವು ಮಾಡಿರುವುದಾಗಿ ವಿಚಾರಣೆ ವೇಳೆ ಆತ ಒಪ್ಪಿಕೊಂಡಿದ್ದಾನೆ’ ಎಂದು ಮಾಹಿತಿ ನೀಡಿದ್ದಾರೆ.



ಆರೋಪಿಯಿಂದ ಜಪ್ತಿ ಮಾಡಿರುವ ಚಿನ್ನಾಭರಣ

ಶೀಲ ಶಂಕಿಸಿ ಪತ್ನಿಯ ಕೊಲೆ: ಗಂಡನ ಬಂಧನ

ಬೆಂಗಳೂರು: ಪತ್ನಿಯ ಶೀಲ ಶಂಕಿಸಿ ಬೆಲ್ಟ್‌ನಿಂದ ಕುತ್ತಿಗೆ ಬಿಗಿದು ಕೊಲೆ ಮಾಡಿದ್ದ ಆರೋಪಿಯನ್ನು ಎಚ್‌ಎಎಲ್ ಠಾಣೆ ಪೊಲೀಸರು ಬಂಧಿಸಿದ್ದಾರೆ.

‘ರಾಯಚೂರಿನ ನಾಗಮ್ಮ (37) ಮೃತ ಮಹಿಳೆ. ಕ್ಯಾಬ್ ಚಾಲಕನಾಗಿರುವ ಆರೋಪಿ ನೀಲಕಂಠನನ್ನು (38) ಬಂಧಿಸಿ ವಿಚಾರಣೆ ನಡೆಸುತ್ತಿದ್ದೇವೆ’ ಎಂದು ಪೊಲೀಸರು ತಿಳಿಸಿದ್ದಾರೆ.

‘ನಾಗಮ್ಮ ಹಾಗೂ ನೀಲಕಂಠ 17 ವರ್ಷದ ಹಿಂದೆ ವಿವಾಹವಾಗಿದ್ದರು. ದಂಪತಿಗೆ 8 ಹಾಗೂ 6 ವರ್ಷದ ಹೆಣ್ಣು ಮಕ್ಕಳಿದ್ದರು. ಠಾಣೆ ವ್ಯಾಪ್ತಿಯ ಕಾಳಪ್ಪ ಲೇಔಟ್‌ನಲ್ಲಿ ಕುಟುಂಬ ವಾಸವಿತ್ತು. ಮನೆಕೆಲಸ ಮಾಡುತ್ತಿದ್ದ ಪತ್ನಿಯ ಶೀಲ ಶಂಕಿಸಿ ಆರೋಪಿಯು ಆಗಾಗ ಗಲಾಟೆ ಮಾಡುತ್ತಿದ್ದ. ಇದೇ ವಿಚಾರಕ್ಕೆ ಮಂಗಳವಾರ ಇಬ್ಬರ ನಡುವೆ ಜಗಳವಾಗಿತ್ತು. ಕೋಪಗೊಂಡ ನಾಗಮ್ಮ ವಿಚ್ಛೇದನ ನೀಡುವುದಾಗಿ ಹೆದರಿಸಿದ್ದಳು. ಇದರಿಂದ ಕೆರಳಿದ್ದ ಆತ ಕೊಲೆ ಮಾಡಿದ್ದ. ವಿಚಾರಣೆ ವೇಳೆ ಇದನ್ನು ತಿಳಿಸಿದ್ದಾನೆ’ ಎಂದು ಪೊಲೀಸರು ಮಾಹಿತಿ ನೀಡಿದರು.

ಸುದ್ದಿ 2 ನಿಮಿಷ

ಚಲನಚಿತ್ರ ವಾಣಿಜ್ಯ ಮಂಡಳಿಗೆ ಚುನಾವಣೆ ನಡೆಸಲು ಆದೇಶ

ಬೆಂಗಳೂರು: ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿಯ ಕಾರ್ಯಕಾರಿ ಸಮಿತಿ ಚುನಾವಣೆ ಪ್ರಕ್ರಿಯೆಯನ್ನು ಕೂಡಲೇ ಆರಂಭಿಸಿ, 2022ರ ಏ.15ರೊಳಗಾಗಿ ಚುನಾವಣೆ ನಡೆಸುವಂತೆ ಬೆಂಗಳೂರು ನಗರ ಜಿಲ್ಲೆ 4ನೇ ವಲಯದ ಸಂಘಗಳ ಜಿಲ್ಲಾ ನೋಂದಣಾಧಿಕಾರಿಯಾದ ಎಸ್.ಜಿ. ಮಂಜುನಾಥ ಸಿಂಗ್ ಆದೇಶಿಸಿದ್ದಾರೆ.

ಈ ಕುರಿತು ಮಂಡಳಿ ಅಧ್ಯಕ್ಷರಿಗೆ ಮಂಜುನಾಥ ಸಿಂಗ್ ಆದೇಶ ಪ್ರತಿ ರವಾನಿಸಿದ್ದಾರೆ. ಚುನಾವಣೆ ನಡೆಸದೇ ಇದ್ದಲ್ಲಿ, ಈಗಾಗಲೇ ಸಮಿತಿಯ ಅವಧಿ ಮುಗಿದಿರುವ ಕಾರಣ ಆಡಳಿತಾಧಿಕಾರಿ ನೇಮಕಕ್ಕೆ ಸರ್ಕಾರಕ್ಕೆ ಶಿಫಾರಸು ಮಾಡಲಾಗುವುದು ಎಂದು ಆದೇಶದಲ್ಲಿ ಉಲ್ಲೇಖಿಸಲಾಗಿದೆ. ಪ್ರಸ್ತುತ ಲಭ್ಯವಿರುವ ಮತದಾರರ ಪಟ್ಟಿಯನ್ವಯ ಕೂಡಲೇ ಚುನಾವಣೆ ನಡೆಸಲು ಸೂಚಿಸಲಾಗಿದ್ದು, ತಕ್ಷಣವೇ ಈ ಕುರಿತು ವರದಿ ಸಲ್ಲಿಸಲೂ ಆದೇಶಿಸಲಾಗಿದೆ.

ಚಲನಚಿತ್ರ ವಾಣಿಜ್ಯ ಮಂಡಳಿಗೆ ಶೀಘ್ರದಲ್ಲೇ ಚುನಾವಣೆ ನಡೆಸಬೇಕು ಎಂದು ಒತ್ತಾಯಿಸಿ ಮಂಡಳಿಯ 50 ಸದಸ್ಯರು ಜಿಲ್ಲಾ ನೋಂದಣಾಧಿಕಾರಿಗೆ ಫೆಬ್ರುವರಿಯಲ್ಲಿ ಮನವಿ ಪತ್ರ ನೀಡಿದ್ದರು.

ಧಮ್ಮಪದ ಉತ್ಸವಕ್ಕೆ ಚಾಲನೆ



ಬೆಂಗಳೂರು: ಆಚಾರ್ಯ ಬುದ್ಧರಕ್ಷಿತ ಭಂತೇಜಿ ಅವರ ಜನ್ಮಶತಮಾನೋತ್ಸವದ ಸ್ಮರಣಾರ್ಥ ಮಹಾ ಬೋಧಿ ಸೊಸೈಟಿಯು ನಗರದಲ್ಲಿ ಒಂದು ತಿಂಗಳು ಹಮ್ಮಿಕೊಂಡಿರುವ ಧಮ್ಮಪದ ಉತ್ಸವಕ್ಕೆ ಚಾಲನೆ ದೊರೆತಿದೆ.

ಲಡಾಖ್‌ನ ಸಂಸದ ಜಮ್ಯಾಂಗ್ ತ್ಸೆರಿಂಗ್ ನಮ್ಗ್ಯಾಲ್ ಅವರು ಈ ಉತ್ಸವ ಉದ್ಘಾಟಿಸಿದರು. ‘ಜಗತ್ತಿನಾದ್ಯಂತ ಬೌದ್ಧ ಧರ್ಮವು ಹರಡಿಕೊಂಡಿದೆ. ಅಹಿಂಸೆ, ದಯೆ, ಪ್ರೀತಿ ಮತ್ತು ಶಾಂತಿಯ ತತ್ವಗಳನ್ನು ಒಳಗೊಂಡಿರುವ ಈ ಧರ್ಮ ಎಲ್ಲರಿಗೂ ದಾರಿದೀಪವಾಗಿದೆ’ ಎಂದು ಹೇಳಿದರು. ಅವರು ಮಿಜೋರಾಂ ರಾಜ್ಯದ ವಿಹಾರಕ್ಕೆ ಬುದ್ಧನ ಪ್ರತಿಮೆಯನ್ನು ದಾನ ನೀಡಿದರು.

ಬೌದ್ಧ ಧರ್ಮದ ಮುಖಂಡ ವೆಂ. ಲಾಮಾ ನೊಚೋಕ್ ತ್ಸೆಪಾಲ್, ಮಹಾಬೋಧಿ ಸೊಸೈಟಿಯ ಪ್ರಧಾನ ವ್ಯವಸ್ಥಾಪಕ ಪುಂಚೋಕ್ ದೋರ್ಜಿ ವಜಿರಾ, ಮಹಾಬೋಧಿ ಸಂಶೋಧನಾ ಕೇಂದ್ರದ ನಿರ್ದೇಶಕ ಬುದ್ಧದತ್ತ, ರಂಗಕರ್ಮಿ ಬಿ.ವಿ. ರಾಜಾರಾಮ್, ಬೌದ್ಧ ವಾಸ್ತುಶಿಲ್ಪಿ ಚಂದ್ರಶೇಖರ್ ಇದ್ದರು.

ಈಜಿಪುರ ಮೇಲ್ಸೇತುವೆ: ಗುತ್ತಿಗೆದಾರರ ವಿರುದ್ಧ ಎಫ್‌ಐಆರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋರಮಂಗಲದ ಈಜಿಪುರ ಜಂಕ್ಷನ್‌ನಿಂದ ಕೇಂದ್ರೀಯ ಸದನ ನಡುವಿನ ಮೇಲ್ಸೇತುವೆ ಕಾಮಗಾರಿಯನ್ನು ಟೆಂಡರ್ ಷರತ್ತಿನಂತೆ ಅನುಷ್ಠಾನಗೊಳಿಸದ ಸಿಂಪ್ಲೆಕ್ಸ್ ಇನ್‌ಫ್ರಾಸ್ಟ್ರಕ್ಚರ್ ಲಿಮಿಟೆಡ್ ಸಂಸ್ಥೆಯ ಮಾಲೀಕ ರಾಜೀವ್ ಮುಂದ್ರಾ ವಿರುದ್ಧ ಬಿಬಿಎಂಪಿಯು ಕೋರಮಂಗಲ ಠಾಣೆಯಲ್ಲಿ ದೂರು ನೀಡಿದ್ದು, ಮಂಗಳವಾರ ಎಫ್‌ಐಆರ್ ದಾಖಲಾಗಿದೆ.

ಒಟ್ಟು 2.5 ಕಿಲೋ ಮೀಟರ್ ಉದ್ದದ ಮೇಲ್ಸೇತುವೆ ಕಾಮಗಾರಿಯನ್ನು ಬಿಬಿಎಂಪಿಯು ಸಿಂಪ್ಲೆಕ್ಸ್ ಇನ್‌ಫ್ರಾಸ್ಟ್ರಕ್ಚರ್ ಲಿಮಿಟೆಡ್ ಸಂಸ್ಥೆಗೆ 2017ರ ಮೇ 4ರಂದು ಗುತ್ತಿಗೆ ನೀಡಿದೆ. ಗುತ್ತಿಗೆ ಒಪ್ಪಂದದ ಪ್ರಕಾರ 2019ರ ನವೆಂಬರ್ 4ರ ಒಳಗೆ ಕಾಮಗಾರಿ ಪೂರ್ಣಗೊಳ್ಳಬೇಕಿತ್ತು. ಈ ಅವಧಿಯನ್ನು ವಿಸ್ತರಿಸಿ 2021ರ ಮಾ 31ರ ಒಳಗೆ ಕಾಮಗಾರಿ ಪೂರ್ಣಗೊಳಿಸುವಂತೆ ಗುತ್ತಿಗೆ ಸಂಸ್ಥೆಗೆ ಬಿಬಿಎಂಪಿ ಸೂಚಿಸಿತ್ತು. ಆದರೆ, ಕಾಮಗಾರಿ ಅರ್ಧಕ್ಕೆ ಸ್ಥಗಿತಗೊಂಡಿದೆ. ಈ ಸಂಬಂಧ ಆದಿನಾರಾಯಣ ಶೆಟ್ಟಿ ಎಂಬವರು ಹೈಕೋರ್ಟ್‌ಗೆ ರಿಟ್ ಅರ್ಜಿ ಸಲ್ಲಿಸಿದ್ದರು. ಈ ಅರ್ಜಿಯ ವಿಚಾರಣೆ ಸಂದರ್ಭದಲ್ಲಿ ಮುಖ್ಯ ನ್ಯಾಯಮೂರ್ತಿ ನೇತೃತ್ವದ ಪೀಠ ಕಾಮಗಾರಿ ವಿಳಂಬದ ಬಗ್ಗೆ ತೀವ್ರ ಅತೃಪ್ತಿ ವ್ಯಕ್ತಪಡಿಸಿತ್ತು. ಆ ಬಳಿಕ ಬಿಬಿಎಂಪಿಯ ಕೋರಿಕೆ ಮೇರೆಗೆ ಸರ್ಕಾರ ಈ ಕಾಮಗಾರಿಯ ಗುತ್ತಿಗೆಯನ್ನು ರದ್ದುಪಡಿಸಿದೆ.

ಈ ಕಾಮಗಾರಿ ಸಂಬಂಧ ಬಿಬಿಎಂಪಿ ಯಾವುದೇ ಬಿಲ್‌ಗಳನ್ನು ಪಾಲಿಕೆ ಬಾಕಿ ಉಳಿಸಿಕೊಂಡಿಲ್ಲ. ಇದುವರೆಗೆ ಒಟ್ಟು 14 ಬಿಲ್‌ಗಳನ್ನು ಗುತ್ತಿಗೆದಾರರಿಗೆ ಪಾವತಿ ಮಾಡಿದ್ದು, ಒಟ್ಟು ₹ 75.11 ಕೋಟಿ ಸಂದಾಯವಾಗಿದೆ. ₹ 203.20 ಕೋಟಿ ವೆಚ್ಚದ ಕಾಮಗಾರಿ ಇದಾಗಿದೆ.



ಜಯಕಲ್ಯಾಣಿ ಹಾಗೂ ಸತೀಶ್ ಅವರು ಆರಗ ಜ್ಞಾನೇಂದ್ರ ಅವರನ್ನು ಭೇಟಿ ಮಾಡಿದರು

ತಮಿಳುನಾಡು ಸಚಿವರ ಪುತ್ರಿಯಿಂದ ಗೃಹ ಸಚಿವರ ಭೇಟಿ: ರಕ್ಷಣೆಗೆ ಮನವಿ

ಬೆಂಗಳೂರು: ತಮಿಳುನಾಡಿನ ಮುಜರಾಯಿ ಸಚಿವರ ಪುತ್ರಿ ಜಯಕಲ್ಯಾಣಿ ಹಾಗೂ ಅವರ ಪತಿ ಸತೀಶ್ ಅವರು ಗೃಹ ಸಚಿವ ಆರಗ ಜ್ಞಾನೇಂದ್ರ ಅವರನ್ನು ಭೇಟಿ ಮಾಡಿ ಪೊಲೀಸ್ ರಕ್ಷಣೆ ಒದಗಿಸುವಂತೆ ಮನವಿ ಮಾಡಿದರು.

‘ಎಂಬಿಬಿಎಸ್ ಪದವೀಧರೆಯಾಗಿರುವ ನಾನು ಸತೀಶ್ ಅವರನ್ನು ಪ್ರೀತಿಸಿ ವಿವಾಹವಾಗಿದ್ದೇನೆ. ನಮ್ಮಿಬ್ಬರ ಮದುವೆಗೆ ಮನೆಯವರ ವಿರೋಧವಿದ್ದು, ಇಬ್ಬರನ್ನು ಬೇರೆ ಮಾಡುವ ಉದ್ದೇಶದಿಂದ ಪತಿಯ ವಿರುದ್ಧ ಇಲ್ಲಸಲ್ಲದ ದೂರುಗಳನ್ನು ದಾಖಲಿಸಿ ಹೆದರಿಸಲಾಗುತ್ತಿದೆ. ಮನೆಯವರಿಂದ ನಮಗೆ ಜೀವಬೆದರಿಕೆಯೂ ಇದೆ. ಹೀಗಾಗಿ ಸೂಕ್ತ ರಕ್ಷಣೆ ನೀಡಿ’ ಎಂದು ಜಯಕಲ್ಯಾಣಿ ಸಚಿವರ ಬಳಿ ವಿನಂತಿಸಿಕೊಂಡಿದ್ದಾರೆ.

ಇದಕ್ಕೂ ಮುನ್ನ ನಗರ ಪೊಲೀಸ್ ಆಯುಕ್ತ ಕಮಲ್ ಪಂತ್ ಅವರನ್ನು ಭೇಟಿಯಾಗಿದ್ದ ದಂಪತಿ, ರಕ್ಷಣೆ ಕೋರಿ ಮನವಿ ಸಲ್ಲಿಸಿತ್ತು.

ಗುಜರಿ ವಸ್ತು ಮಾರಾಟಕ್ಕೂ ಆ್ಯಪ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮನೆ ಬಾಗಿಲಿಗೆ ಅಗತ್ಯ ವಸ್ತುಗಳನ್ನು ಆ್ಯಪ್‌ಗಳ ಮೂಲಕ ಆರ್ಡರ್ ಮಾಡಿ ತರಿಸಿಕೊಳ್ಳುವಂತೆಯೇ ಗುಜರಿ ವಸ್ತುಗಳನ್ನು ಮನೆ ಬಾಗಿಲಿನಲ್ಲೇ ಮಾರಾಟ ಮಾಡಲು ಆ್ಯಪ್ ತಕ್ಷಣವೇ ಬರಲಿದೆ.

ಕೆ.ಆರ್.ಮಾರ್ಕೆಟಿಂಗ್ ಹೆಸರಿನ ಕಂಪನಿಯೊಂದು ಹಳೇ ಪೇಪರ್, ನೋಟ್ ಬುಕ್, ಕಾಟನ್ ಬಾಕ್ಸ್‌ಗಳು, ಹಳೇ ಎಲೆಕ್ಟ್ರಾನಿಕ್ ವಸ್ತುಗಳು, ಪಾತ್ರೆಗಳು, ಅಲ್ಯುಮಿನಿಯಂ, ಹಿತ್ತಾಳೆ, ತಾಮ್ರದ ವಸ್ತುಗಳನ್ನು ಖರೀದಿಸಲು ಹೊಸ ಆ್ಯಪ್ ಮತ್ತು ವೆಬ್‌ಸೈಟ್ ತೆರೆದಿದೆ.

‘ಕೆ.ಆರ್.ಮಾರ್ಕೆಟಿಂಗ್ ಕಂಪನಿ www.mojocart.in ವೆಬ್‌ಸೈಟ್ ಹೊಂದಿದ್ದು, Mojo Cart ಆ್ಯಪ್ ಕೂಡ ಅಭಿವೃದ್ಧಿಪಡಿಸಿದೆ. ಅಥವಾ ಕಾಲ್ ಸೆಂಟರ್ ಸಂಖ್ಯೆ 99992 14340 ಮಿಸ್ಡ್ ಕಾಲ್ ನೀಡಿದರೂ ಮನೆ ಬಾಗಿಲಿಗೆ ಕಂಪನಿಯ ಸಿಬ್ಬಂದಿ ಬರಲಿದ್ದಾರೆ’ ಎಂದು ಸಂಸ್ಥೆಯ ಮುಖ್ಯಸ್ಥ ಟಿ.ಶ್ರೀನಿವಾಸ್ ತಿಳಿಸಿದ್ದಾರೆ.

ಸ್ಥಳೀಯರ ಶಾಂತಿ ಭಂಗ: ನಾಲ್ವರ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸ್ಥಳೀಯರು ಹಾಗೂ ಸಾರ್ವಜನಿಕರ ನೆಮ್ಮದಿಗೆ ಭಂಗ ಉಂಟು ಮಾಡುತ್ತಿದ್ದ ನಾಲ್ವರು ಆರೋಪಿಗಳನ್ನು ಸಿಸಿಬಿ ಪೊಲೀಸರು ಬಂಧಿಸಿದ್ದಾರೆ.

ಬನ್ನೇರುಘಟ್ಟ ಮುಖ್ಯರಸ್ತೆಯ ಬಿಳೇಕಳ್ಳಿಯ ವೈ.ನವೀನ್ (36), ದೇವರಚಿಕ್ಕನಹಳ್ಳಿ 10ನೇ ತಿರುವಿನಲ್ಲಿ ವಾಸವಿರುವ ನವೀನ್ ವಿನೋದ್ (28), ಕೋಡಿಚಿಕ್ಕನಹಳ್ಳಿಯ ಕೆ.ವಿ. ನಾಗರಾಜ (37) ಹಾಗೂ ಅನ್ನಸಂದ್ರಪಾಳ್ಯದ ಸೈಯದ್ ಬ್ಲಾಕ್‌ನ ಮೊಹಮ್ಮದ್ ಮೊಯಿನ್ (29) ಬಂಧಿತರು.

‘ಆರೋಪಿಗಳ ವಿರುದ್ಧ ಮೈಕೊ ಲೇಔಟ್, ಬೊಮ್ಮನಹಳ್ಳಿ ಹಾಗೂ ಎಚ್‌ಎಎಲ್ ಠಾಣೆಗಳಲ್ಲಿ ಪ್ರಕರಣ ದಾಖಲಿಸಿ ಕ್ರಮ ಜರುಗಿಸಲಾಗಿದೆ’ ಎಂದು ಪೊಲೀಸರು ತಿಳಿಸಿದ್ದಾರೆ.

‘ಯುದ್ಧ ಬೇಡ, ಬುದ್ಧ ಬೇಕು’

ಪ್ರಜಾವಾಣಿ ವಾರ್ತೆ



ಕೆ.ಆರ್‌ಪುರದ ಅಂಬೇಡ್ಕರ್ ಪ್ರತಿಮೆ ಬಳಿ ಬುದ್ಧಭೂಮಿ ಪ್ರತಿಷ್ಠಾನ ಟ್ರಸ್ಟ್ ಹಾಗೂ ದಲಿತ ಸಂಘಟನೆಯ ಕಾರ್ಯಕರ್ತರು ಸಾಂಕೇತಿಕವಾಗಿ ಪ್ರತಿಭಟನೆ ನಡೆಸಿದರು

ಕೆ.ಆರ್.ಪುರ: ‘ಇಡೀ ಮಾನವ ಕುಲಕ್ಕೆ ಶಾಂತಿಯ ಸಂದೇಶ ನೀಡಿ ವಿಶ್ವಕ್ಕೆ ಶಾಂತಿ ಪಸರಿಸಿದ ವಿಶ್ವಗುರು ಬುದ್ಧನ ಆಶಯದಂತೆ ರಷ್ಯಾ ಮತ್ತು ಉಕ್ರೇನ್ ಯುದ್ಧ ನಿಲ್ಲಿಸಲು ವಿಶ್ವಸಂಸ್ಥೆ ಮಧ್ಯಸ್ಥಿಕೆ ವಹಿಸಬೇಕು’ ಎಂದು ದೊಡ್ಡಬನಹಳ್ಳಿಯ ಬುದ್ಧಭೂಮಿ ಪ್ರತಿಷ್ಠಾನ ಟ್ರಸ್ಟ್ ಅಧ್ಯಕ್ಷ ಎಂ.ಆರ್.ವೆಂಕಟೇಶ್ ಒತ್ತಾಯಿಸಿದರು.

ಇಲ್ಲಿನ ಡಾ.ಬಿ.ಆರ್.ಅಂಬೇಡ್ಕರ್ ಪ್ರತಿಮೆ ಮುಂಭಾಗದಲ್ಲಿ ಬುದ್ಧ ಭೂಮಿ ಪ್ರತಿಷ್ಠಾನ ಟ್ರಸ್ಟ್ ಆಯೋಜಿಸಿದ್ದ ‘ಯುದ್ಧ ಬೇಡ, ಬುದ್ಧ(ಶಾಂತಿ) ಬೇಕು’ ಎಂಬ ಪ್ರತಿಭಟನಾ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

‘ಹಿಟ್ಲರ್ ರೀತಿಯಲ್ಲಿ ರಷ್ಯಾ ಸರ್ವಾಧಿಕಾರಿ ಧೋರಣೆ ತೋರುತ್ತಿದೆ. ಈ ರೀತಿಯ ಯುದ್ಧಗಳಿಂದ ಮುಂದಿನ ದಿನಗಳಲ್ಲಿ ಪರಿಸರ ನಾಶವಾಗಲಿದೆ. ಪರಿಸರ ಮತ್ತು ಪ್ರಪಂಚ ಉಳಿಯಬೇಕೆಂದರೆ ಬುದ್ಧನ ಶಾಂತಿ ಸಂದೇಶವನ್ನು ವಿಶ್ವಸಂಸ್ಥೆ ಅಳವಡಿಸಿಕೊಂಡು ಶಾಂತಿ ಕಾಪಾಡಬೇಕು’ ಎಂದರು.

ದಲಿತ ಮುಖಂಡ ಗಂಗನಬೀಡು ವೆಂಕಟಸ್ವಾಮಿ, ‘ರಷ್ಯಾ ಮತ್ತು ಉಕ್ರೇನ್ ಮಧ್ಯೆ ನಡೆಯುತ್ತಿರುವ ಯುದ್ಧದಲ್ಲಿ ಭಾರತೀಯ ನಾಗರಿಕರು ಹಾಗೂ ವಿದ್ಯಾರ್ಥಿಗಳು ಸಿಲುಕಿದ್ದಾರೆ. ಅವರೆಲ್ಲರನ್ನು ಸುರಕ್ಷಿತವಾಗಿ ಕರೆತರುವ ಪ್ರಯತ್ನ ಮಾಡಬೇಕು’ ಎಂದರು.

ದಮ್ಮಚಾರಿ ಬೆನ್ನಿಗಾನಹಳ್ಳಿ ರಾಮಚಂದ್ರ, ದಲಿತ ಮುಖಂಡ ಬಿ.ಎಂ. ವೆಂಕಟೇಶ್, ಪಿ.ಎಂ.ಚೆನ್ನಾಸ್ವಾಮಿ, ನಾರಾಯಣಸ್ವಾಮಿ, ಬೆಳತ್ತೂರು ರಮೇಶ್, ಮಹೇಂದ್ರ, ನಾಗರಾಜ್ ಇದ್ದರು.

ಕೋವಿಡ್ ನಿಯಂತ್ರಣ: ಮುನ್ನೆಚ್ಚರಿಕಾ ಕ್ರಮಕ್ಕೆ ಸೂಚನೆ


ಪ್ರಜಾವಾಣಿ ವಾರ್ತೆ


ಬೆಂಗಳೂರು: ಕೊರೊನಾ ಪ್ರಕರಣಗಳು ಕಡಿಮೆಯಾಗಿದ್ದರಿಂದ ಶೈಕ್ಷಣಿಕ, ಆರ್ಥಿಕ ಸೇರಿದಂತೆ ವಿವಿಧ ಚಟುವಟಿಕೆಗಳು ಪುನರಾರಂಭವಾಗಿವೆ. ಶೀತ ಜ್ವರ ಮಾದರಿಯ ಅನಾರೋಗ್ಯ ಸಮಸ್ಯೆ (ಐಎಲ್‌ಐ), ತೀವ್ರ ಉಸಿರಾಟದ ಸಮಸ್ಯೆ (ಸಾರಿ) ಇರುವವರಿಗೆ ಕೋವಿಡ್ ಪರೀಕ್ಷೆ ಸೇರಿ ವಿವಿಧ ಮುನ್ನೆಚ್ಚರಿಕೆ ಕ್ರಮಗಳನ್ನು ಪಾಲಿಸಬೇಕೆಂದು ಆರೋಗ್ಯ ಇಲಾಖೆ ಸೂಚಿಸಿದೆ.

ಈ ಬಗ್ಗೆ ಇಲಾಖೆಯ ಪ್ರಧಾನ ಕಾರ್ಯದರ್ಶಿ ಟಿ.ಕೆ. ಅನಿಲ್ ಕುಮಾರ್ ಸುತ್ತೋಲೆ ಹೊರಡಿಸಿದ್ದಾರೆ. ‘ಅಪಾರ್ಟ್‌ಮೆಂಟ್ ಸಮುಚ್ಚಯಗಳಲ್ಲಿ ವಾಸಿಸುವವರು ಹೊರಾಂಗಣದಲ್ಲಿದ್ದಾಗ ಅಂತರ ಕಾಯ್ದುಕೊಳ್ಳುವಿಕೆ ಸೇರಿ ವಿವಿಧ ನಿಯಮಗಳನ್ನು ಪಾಲಿಸಬೇಕು. ಅಪಾರ್ಟ್‌ಮೆಂಟ್ ಸಮುಚ್ಚಯ ಕ್ಷೇಮಾಭಿವೃದ್ಧಿ ಸಂಘದ ಮುಖ್ಯಸ್ಥರು ಈ ಬಗ್ಗೆ ಕ್ರಮವಹಿಸಬೇಕು. ಹೋಟೆಲ್‌ಗಳು, ಚಿತ್ರಮಂದಿರಗಳು, ಕಚೇರಿಗಳು ಸೇರಿದಂತೆ ವಿವಿಧ ಮುಚ್ಚಿದ ಪ್ರದೇಶಗಳಲ್ಲಿ ಸೂಕ್ತ ಗಾಳಿ, ಬೆಳಕಿನ ವ್ಯವಸ್ಥೆ ಇರಬೇಕು’ ಎಂದು ತಿಳಿಸಿದ್ದಾರೆ.

‘ಸಾರ್ವಜನಿಕ, ರಾಜಕೀಯ ಸಮಾರಂಭಗಳಲ್ಲಿ ಕೋವಿಡ್ ನಿಯಮಗಳು ಪಾಲನೆಯಾಗುವಂತೆ ಆಯೋಜಕರು ನೋಡಿಕೊಳ್ಳಬೇಕು. ಕೊರೊನಾ ಸೋಂಕಿತರ ನೇರ ಹಾಗೂ ಪರೋಕ್ಷ ಸಂಪರ್ಕಿತರನ್ನು ಪತ್ತೆ ಮಾಡಿ, ಪರೀಕ್ಷೆಗೆ ಒಳಪಡಿಸಲು ಕ್ರಮವಹಿಸಬೇಕು. ಯಾವುದೇ ಅಪಾರ್ಟ್‌ಮೆಂಟ್ ಸಮುಚ್ಚಯ, ಪ್ರದೇಶಗಳಲ್ಲಿ 5 ಅಥವಾ ಅದಕ್ಕಿಂತ ಹೆಚ್ಚಿನ ಸಂಖ್ಯೆಯಲ್ಲಿ ಪ್ರಕರಣಗಳು ವರದಿಯಾದಲ್ಲಿ ಅದನ್ನು ನಿರ್ಬಂಧಿತ ವಲಯ ಎಂದು ಗುರುತಿಸಬೇಕು’ ಎಂದು ಹೇಳಿದ್ದಾರೆ.

‘ಪ್ರತ್ಯೇಕವಾಸ, ಮನೆ ಆರೈಕೆಗೆ ಒಳಗಾದವರನ್ನು ದಿನಬಿಟ್ಟು ದಿನ ಸಂಪರ್ಕಿಸಿ, ಚಿಕಿತ್ಸೆಯ ಸರದಿ ನಿರ್ಧಾರ ಮಾಡಬೇಕು. ಹೆಚ್ಚಿನ ಚಿಕಿತ್ಸೆ ಅಗತ್ಯವಿದ್ದಲ್ಲಿ ಆಸ್ಪತ್ರೆಗೆ ದಾಖಲಿಸಬೇಕು’ ಎಂದರು.





ಸುಮಲತಾ ಕಾರಿನ ಚಾಲಕನಿಗೆ ಥಳಿತ

ಸಾಲಿಗ್ರಾಮ (ಮೈಸೂರು ಜಿಲ್ಲೆ): ಮುಂಜನಹಳ್ಳಿ ಗ್ರಾಮದ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಭೂಮಿಪೂಜೆ ನೆರವೇರಿಸುವ ಸಂಬಂಧ ಬುಧವಾರ ಜೆಡಿಎಸ್ ಕಾರ್ಯಕರ್ತರಿಗೂ, ಮಂಡ್ಯ ಸಂಸದೆ ಸುಮಲತಾ ಬೆಂಬಲಿಗರ ನಡುವೆ ಘರ್ಷಣೆ ನಡೆದಿದೆ.

ಗುಂಪೊಂದು ಸುಮಲತಾ ಕಾರು ಚಾಲಕ ನಂಜುಂಡ ಅವರನ್ನು ಥಳಿಸಿ ಗಾಯಗೊಳಿಸಿದೆ. ಈ ಕುರಿತು ಸುಮಲತಾ, ಜೆಡಿಎಸ್ ಕಾರ್ಯಕರ್ತರಾದ ಅನೀಫ್ ಗೌಡ, ಧನು ಹಾಗೂ ಇತರೆ 7 ಮಂದಿ ವಿರುದ್ಧ ಪಟ್ಟಣದ ಠಾಣೆಯಲ್ಲಿ ದೂರು ದಾಖಲಿಸಿದ್ದಾರೆ.

‘ಕ್ಷೇತ್ರದ ಶಾಸಕ ಸಾ.ರಾ.ಮಹೇಶ್ ಅನುಪಸ್ಥಿತಿಯಲ್ಲಿ ಭೂಮಿಪೂಜೆ ನೆರವೇರಿಸಬಾರದು’ ಎಂದು ಜೆಡಿಎಸ್ ಕಾರ್ಯಕರ್ತರು ಸುತ್ತುವರೆದು ಘೋಷಣೆ ಕೂಗಿದರು. ಆದರೆ, ಸುಮಲತಾ ಬೆಂಬಲಿಗರು ಹಾಗೂ ಕಾಂಗ್ರೆಸ್ ಕಾರ್ಯಕರ್ತರು ‘ಇದು ಸಂಸದರ ನಿಧಿಯಿಂದ ಮಾಡುತ್ತಿರುವ ಕಾಮಗಾರಿ. ಹೀಗಾಗಿ, ಶಾಸಕರು ಇಲ್ಲದೆಯೂ ಭೂಮಿಪೂಜೆ ನೆರವೇರಿಸಬಹುದು’ ಎಂದು ಹೇಳಿದಾಗ ಘರ್ಷಣೆ ಆರಂಭವಾಗಿದೆ.

ಸುಮಲತಾ ಅವರು ರಾತ್ರಿ ಸಾಲಿಗ್ರಾಮ ಠಾಣೆಗೆ ಬಂದು ಜೆಡಿಎಸ್ ಕಾರ್ಯಕರ್ತರ ವಿರುದ್ಧ ಪ್ರಕರಣ ದಾಖಲಿಸಿದರು. ಅವರೊಂದಿಗೆ ಕಾಂಗ್ರೆಸ್ ಮುಖಂಡರಾದ ಡಿ.ರವಿಶಂಕರ್, ಹರದನಹಳ್ಳಿ ಮಂಜುಪ್ಪ, ತಂದ್ರೆ ದಿಲೀಪ್, ಸಾಲಿಗ್ರಾಮ ಚಂದ್ರಶೇಖರ್ ಹಾಗೂ ಬಿಜೆಪಿ ಮುಖಂಡರೂ ಇದ್ದರು.

ಮಕ್ಕಳ ನಾಪತ್ತೆ ಪ್ರಕರಣ: ವರದಿ ಸಲ್ಲಿಕೆಗೆ ನಿರ್ದೇಶನ

ಬೆಂಗಳೂರು: ರಾಜ್ಯ ಸರ್ಕಾರದ ಅಧೀನದಲ್ಲಿರುವ ಬಾಲಮಂದಿರಗಳಿಂದ ಮಕ್ಕಳು ನಾಪತ್ತೆಯಾಗಿರುವ ಪ್ರಕರಣಕ್ಕೆ ಸಂಬಂಧಿಸಿದಂತೆ ಮಾಹಿತಿ ನೀಡಲು ರಾಜ್ಯ ಸರ್ಕಾರ ಎರಡು ವಾರಗಳ ಕಾಲಾವಕಾಶ ಕೋರಿದೆ.

ರಾಜ್ಯದ ಸರ್ಕಾರಿ ಬಾಲಮಂದಿರಗಳಿಂದ 141 ಮಕ್ಕಳು ನಾಪತ್ತೆಯಾಗಿರುವ ಕುರಿತಂತೆ ಕೋಲಾರದ ಕೆ.ಸಿ. ರಾಜಣ್ಣ ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ಋತುರಾಜ್ ಅವಸ್ಥಿ ನೇತೃತ್ವದ ವಿಭಾಗೀಯ ನ್ಯಾಯಪೀಠ ಬುಧವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಸರ್ಕಾರದ ಪರ ವಕೀಲರು, ‘ಬಾಲಮಂದಿರಗಳಿಂದ ಮಕ್ಕಳು ಮಕ್ಕಳು ಕಾಣೆಯಾಗದಂತೆ ಅಗತ್ಯ ಕ್ರಮಗಳನ್ನು ಕೈಗೊಳ್ಳುವಂತೆ ಈಗಾಗಲೇ ಸುತ್ತೋಲೆ ಹೊರಡಿಸಲಾಗಿದೆ. ನಾಪತ್ತೆಯಾಗಿರುವ ವಿಚಾರವಾಗಿ ರಾಜ್ಯದ ಎಲ್ಲ ಜಿಲ್ಲೆಗಳಿಂದ ಮಾಹಿತಿ ಕೇಳಲಾಗಿದೆ. ಹಾಗಾಗಿ, ಎರಡು ವಾರಗಳ ಕಾಲಾವಕಾಶ ನೀಡಬೇಕು‘ ಎಂದು ಕೋರಿದರು.

ಇದನ್ನು ಮಾನ್ಯ ಮಾಡಿದ ನ್ಯಾಯಪೀಠ, ‘ಮಕ್ಕಳು ಕಾಣೆಯಾಗಿರುವ ಅಂಕಿಅಂಶದ ಜತೆಗೆ ಮಕ್ಕಳು ನಾಪತ್ತೆಯಾಗದಂತೆ ಏನೆಲ್ಲಾ ಪರಿಣಾಮಕಾರಿ ಕ್ರಮ ಕೈಗೊಳ್ಳಲಾಗಿದೆ ಎಂಬುದರ ವರದಿ ಸಲ್ಲಿಸಿ’ ಎಂದು ನಿರ್ದೇಶಿಸಿ, ವಿಚಾರಣೆಯನ್ನು ಇದೇ 29ಕ್ಕೆ ಮುಂದೂಡಿದೆ.

ಸಂಕ್ಷಿಪ್ತ ಸುದ್ದಿ

ಬೆಂಕಿ: ತಪ್ಪಿದ ಅನಾಹುತ

ಬೆಂಗಳೂರು: ಗಾಂಧಿನಗರದಲ್ಲಿರುವ ಸುಖಸಾಗರ ಹೋಟೆಲ್‌ನ 5 ಮತ್ತು 6ನೇ ಮಹಡಿಗಳಲ್ಲಿ ಬುಧವಾರ ಮಧ್ಯಾಹ್ನ ಆಕಸ್ಮಿಕವಾಗಿ ಬೆಂಕಿ ಹೊತ್ತಿಕೊಂಡಿದ್ದು, ಪಿಎಸ್‌ಐ ಸಮಯಪ್ರಜ್ಞೆಯಿಂದಾಗಿ ಅನಾಹುತವೊಂದು ತಪ್ಪಿದೆ.

‘ಹೋಟೆಲ್‌ನ ಮಹಡಿಯಿಂದ ದಟ್ಟ ಹೊಗೆ ಹೊರಹೊಮ್ಮುತ್ತಿದ್ದುದನ್ನು ಗಮನಿಸಿದ ಪಿಎಸ್‌ಐ ರವಿ, ಅಗ್ನಿಶಾಮಕ ದಳದ ಸಿಬ್ಬಂದಿಗೆ ವಿಷಯ ಮುಟ್ಟಿಸಿದ್ದಾರೆ. ಎರಡು ವಾಹನಗಳಲ್ಲಿ ಸ್ಥಳಕ್ಕೆ ಬಂದ ಸಿಬ್ಬಂದಿ ಸುಮಾರು 1 ಗಂಟೆ 30 ನಿಮಿಷ ಕಾರ್ಯಾಚರಣೆ ನಡೆಸಿ ಬೆಂಕಿ ನಂದಿಸಿದ್ದಾರೆ’ ಎಂದು ಪಶ್ಚಿಮ ವಿಭಾಗದ ಡಿಸಿಪಿ ಸಂಜೀವ್ ಪಾಟೀಲ ತಿಳಿಸಿದ್ದಾರೆ. ‘ಹೋಟೆಲ್‌ನಲ್ಲಿದ್ದ 200 ಮಂದಿಯನ್ನೂ ಸ್ಥಳಾಂತರಿಸಲಾಯಿತು.’ ಎಂದಿದ್ದಾರೆ.

ಆಯತಪ್ಪಿ ಬಿದ್ದು ಗಾರೆ ಕೆಲಸಗಾರ ಸಾವು

ಬೆಂಗಳೂರು: ನಿರ್ಮಾಣ ಹಂತದ ಕಟ್ಟಡದ ಮೇಲಿಂದ ಆಯತಪ್ಪಿ ಬಿದ್ದು ಗಾಯಗೊಂಡಿದ್ದ ಗಾರೆ ಕೆಲಸಗಾರ, ತಮಿಳುನಾಡಿನ ಏಳುಮಲೈ (47) ಆಸ್ಪತ್ರೆಯಲ್ಲಿ ಬುಧವಾರ ಮೃತಪಟ್ಟಿದ್ದಾರೆ.

‘ಕಟ್ಟಡದ ಮಾಲೀಕ ಮುನಿರಾಜು ಬಾಬು, ಶಿವಶಂಕರ್ ಚೌಧರಿ, ಗುತ್ತಿಗೆದಾರರಾದ ಸತಿವೇಲು ಮತ್ತು ವಡಿವೇಲು ವಿರುದ್ಧ ಪ್ರಕರಣ ದಾಖಲಿಸಲಾಗಿದೆ’ ಎಂದು ಪೊಲೀಸರು ತಿಳಿಸಿದ್ದಾರೆ.

ರಾಮನಗರದ ಜಾನಪದ ಲೋಕದಲ್ಲಿ ಕಾರ್ಯಕ್ರಮ

12ರಿಂದ ಪ್ರವಾಸಿ ಜಾನಪದ ಲೋಕೋತ್ಸವ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ಜಾನಪದ ಪರಿಷತ್ತು ವತಿಯಿಂದ ರಾಮನಗರದ ಜಾನಪದ ಲೋಕದಲ್ಲಿ ಇದೇ 12 ಮತ್ತು 13ರಂದು ‘ಪ್ರವಾಸಿ ಜಾನಪದ ಲೋಕೋತ್ಸವ’ ಹಾಗೂ ಕರಕುಶಲ ಪ್ರದರ್ಶನ ಮತ್ತು ಮಾರಾಟ ಮೇಳ ನಡೆಯಲಿದೆ.


ಬುಧವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಜಾನಪದ ಪರಿಷತ್ತಿನ ಅಧ್ಯಕ್ಷ ಟಿ.ತಿಮ್ಮೇಗೌಡ,‘ಜಾನಪದ ಲೋಕೋತ್ಸವದ ಎರಡೂ ದಿನ ಬೆಳಿಗ್ಗೆ 9ರಿಂದ ರಾತ್ರಿ 10 ಗಂಟೆವರೆಗೆ ಜಾನಪದ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯಲಿವೆ’ ಎಂದರು.

‘12ರ ಬೆಳಿಗ್ಗೆ 10.30ಕ್ಕೆ ಅನ್ನದಾನೇಶ್ವರನಾಥ ಸ್ವಾಮೀಜಿ ಸಾನ್ನಿಧ್ಯದಲ್ಲಿ ಕಾರ್ಯಕ್ರಮಕ್ಕೆ ಕನ್ನಡ ಮತ್ತು ಸಂಸ್ಕೃತಿ ಸಚಿವ ವಿ.ಸುನಿಲ್ ಕುಮಾರ್ ಚಾಲನೆ ನೀಡಲಿದ್ದಾರೆ. ಜಾನಪದ ಅಕಾಡೆಮಿ ಅಧ್ಯಕ್ಷರಾದ ಮಂಜಮ್ಮ ಜೋಗತಿ ಕರಕುಶಲ ಮೇಳ ಉದ್ಘಾಟಿಸಲಿದ್ದಾರೆ. ಅತಿಥಿಗಳಾಗಿ ಸಂಸದ ಡಿ.ಕೆ.ಸುರೇಶ್, ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಸೇರಿದಂತೆ ಹಲವರು ಭಾಗವಹಿಸಲಿದ್ದಾರೆ’ ಎಂದು ಮಾಹಿತಿ ನೀಡಿದರು.

‘13ರಂದು ಸಂಜೆ 5 ಗಂಟೆಗೆ ನಡೆಯುವ ಸಮಾರೋಪದಲ್ಲಿ ಜಾನಪದ ಕ್ಷೇತ್ರದ ಸಾಧಕರಿಗೆ ಉನ್ನತ ಶಿಕ್ಷಣ ಸಚಿವ ಸಿ.ಎನ್.ಅಶ್ವತ್ಥನಾರಾಯಣ ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ. ಅತಿಥಿಗಳಾಗಿ ಶಾಸಕಿ ಅನಿತಾ ಕುಮಾರಸ್ವಾಮಿ, ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ.ಕುಮಾರಸ್ವಾಮಿ, ಸಿ.ಪಿ.ಯೋಗೇಶ್ವರ್, ‘ಪ್ರಜಾವಾಣಿ’ ಕಾರ್ಯನಿರ್ವಾಹಕ ಸಂಪಾದಕ ರವೀಂದ್ರ ಭಟ್ಟ ಸೇರಿದಂತೆ ಗಣ್ಯರು ಭಾಗವಹಿಸಲಿದ್ದಾರೆ’ ಎಂದರು.

ಜಾನಪದ ತಂಡಗಳಿಂದ ಪ್ರದರ್ಶನ: ‘ವೀರಗಾಸೆ ಕುಣಿತ, ಚಿಲಿಪಿಲಿಗೊಂಬೆ ನೃತ್ಯ, ಜಗ್ಗಲಿಗೆ ಮೇಳ, ನಂದಿ ಧ್ವಜ ಕುಣಿತ, ಪೂಜಾ ಕುಣಿತ, ಚಿಣ್ಣರ ಜನಪದ ನೃತ್ಯ, ಕಾಡುಗೊಲ್ಲರ ಕೊರವಂಜಿ ಕೋಲಾಟ, ಜೇನು ಕುರುಬರ ಅಡಲೆಮರ ಕುಣಿತ, ಜೋಗತಿ ನೃತ್ಯ, ಹಗಲುವೇಷ, ಕಣಿ ವಾದನ, ಬೇಡರ ವೇಷ, ಹೆಜ್ಜೆ ಕುಣಿತ ಕೋಲಾಟ, ಕರಗ ಕುಣಿತ, ತೊಗಲು ಗೊಂಬೆ ಕರಿಭಂಟನ ಕಾಳಗ, ಡೊಳ್ಳು ಕುಣಿತ, ಹಾಡು ಮೇಳ, ಜನಪದ ನೃತ್ಯ, ಗಾಯನ ಸೇರಿದಂತೆ ಜಾನಪದ ಕಲೆಗಳ ಪ್ರದರ್ಶನ ಇರಲಿದೆ’ ಎಂದು ತಿಮ್ಮೇಗೌಡ ಹೇಳಿದರು.

27 ಮಂದಿಗೆ ಪ್ರಶಸ್ತಿ



ಶಿವಾನಂದ ಹೆಗಡೆ



ಬಿ.ಎ.ವಿವೇಕ ರೈ



ಎಂ.ಬೈರೇಗೌಡ



ಪುಟ್ಟಲಕ್ಕಮ್ಮ

ಜಾನಪದ ಅಕಾಡೆಮಿಯಿಂದ ನೀಡಲಾಗುವ ₹25 ಸಾವಿರ ನಗದು ಸಹಿತ ವಾರ್ಷಿಕ ಪ್ರಶಸ್ತಿಗಳಿಗೆ ಯಕ್ಷಗಾನ ಕಲಾವಿದ ಕೆರೆಮನೆ ಶಿವಾನಂದ ಹೆಗಡೆ (ಎಚ್.ಎಲ್.ನಾಗೇಗೌಡ ಜಾನಪದ ಲೋಕಶ್ರೀ ಪ್ರಶಸ್ತಿ), ಜಾನಪದ ವಿದ್ವಾಂಸ ಬಿ.ಎ.ವಿವೇಕ ರೈ (ಜೀ.ಶಂ.ಪರಮಶಿವಯ್ಯ ಜಾನಪದ ಪ್ರಶಸ್ತಿ), ₹15 ಸಾವಿರ ನಗದು ಸಹಿತ ಪ್ರಶಸ್ತಿಗೆ ಎಂ.ಬೈರೇಗೌಡ (ಜಿ.ನಾರಾಯಣ ಜಾನಪದ ಲೋಕ ಪ್ರಶಸ್ತಿ), ಜನಪದ ಹಾಡುಗಾರ್ತಿ ಪುಟ್ಟಲಕ್ಕಮ್ಮ (ಲಕ್ಷ್ಮಮ್ಮ ನಾಗೇಗೌಡ ಪ್ರಶಸ್ತಿ) ಅವರನ್ನು ಆಯ್ಕೆ ಮಾಡಲಾಗಿದೆ.

₹10 ಸಾವಿರ ನಗದು ಪ್ರಶಸ್ತಿಗೆ ಹೊನ್ನೂರು ಗೌರಮ್ಮ (ಸೋಬಾನೆ ಚಿಕ್ಕಮ್ಮ ಪ್ರಶಸ್ತಿ), ಭೀಮಪ್ಪ ಯಲ್ಲಪ್ಪ ಪೂಜಾರ (ದೊಡ್ಡಮನೆ ಪ್ರಶಸ್ತಿ), ಸುಭಾಷ್ ಚಂದ್ರ ಹೊಸಮನಿ (ದೊಡ್ಡಮನೆ ಲಿಂಗೇಗೌಡ ಪ್ರಶಸ್ತಿ), ಮಾಧು ನಾಯ್ಕ, ಕೆಂಪಮ್ಮ ಚಿಕ್ಕಮರೀಗೌಡ (ದೊಡ್ಡಆಲಹಳ್ಳಿ ಗೌರಮ್ಮ ಕೆಂಪೇಗೌಡ ಪ್ರಶಸ್ತಿ) ಆಯ್ಕೆಯಾಗಿದ್ದಾರೆ.

‘ಜಾನಪದ ಲೋಕ ಪ್ರಶಸ್ತಿ’ಗೆ ದೊಂಬರ ಹುಚ್ಚಪ್ಪ ಕೊಟ್ಟ, ವಿ.ಈ.ಲೋಕೇಶ್, ಶರಣಮ್ಮ ಪಿ.ಸಜ್ಜನ, ನ್ಯೂಸ್ಬಿ ಮತ್ತು ಚಿಟ್ಟಿನ್‌ಬಿ, ಹನುಮಂತಗೌಡ ಬೊಮ್ಮಗೌಡ, ಭೋಜ ಪೂಜಾರಿ, ಸೋಮವ್ವ ಲಮಾಣಿ, ಕೊಟ್ಗೆ ಹಾಲೇಶಪ್ಪ, ಸಿದ್ದೇಗೌಡ, ಹೊನ್ನಯ್ಯ, ಶಂಕರಪ್ಪ ರಾಮಪ್ಪ ಸಂಕಣ್ಣವರ, ಕೇಶಿ ಗೋವಿಂದಗೌಡ, ನೀಲಪ್ಪ ಚೌದರಿ, ಬಿ.ಟಿ.ಮಾನವ, ಜಂಬಣ್ಣ ಶಂಕ್ರಪ್ಪ ಹಸಮಕಲ್, ರಂಗಯ್ಯ ಅವರನ್ನು ಆಯ್ಕೆ ಮಾಡಲಾಗಿದೆ ಎಂದು ಪ್ರಕಟಣೆ ತಿಳಿಸಿದೆ.

ಮೆರಿಲ್‌ಬೋನ್ ಕ್ರಿಕೆಟ್ ಕ್ಲಬ್‌ನಿಂದ ನಿಯಮದಲ್ಲಿ ಬದಲಾವಣೆ

‘ಮಂಕಡಿಂಗ್’ ಇನ್ನು ಮುಂದೆ ರನ್‌ಔಟ್



ಜೋಸ್ ಬಟ್ಲರ್ ಅವರನ್ನು ಮಂಕಡಿಂಗ್ ರನೌಟ್ ಮಾಡಿದ್ದ ಅಶ್ವಿನ್ –ಸಂಗ್ರಹ ಚಿತ್ರ

ಲಂಡನ್ (ಪಿಟಿಐ): ಕ್ರಿಕೆಟ್‌ನಲ್ಲಿ ಇನ್ನು ಮುಂದೆ ನಾನ್‌ಸ್ಟ್ರೈಕರ್ ಬ್ಯಾಟರ್‌ಗಳು ಬಹಳ ಎಚ್ಚರಿಕೆಯಿಂದ ಇರಬೇಕು. ಏಕೆಂದರೆ, ’ಮಂಕಡಿಂಗ್’ ಮಾಡುವುದು ಕ್ರೀಡಾಸ್ಫೂರ್ತಿಗೆ ವಿರುದ್ಧವಾದ ನಡೆಯಲ್ಲ. ಅದನ್ನು ರನ್‌ಔಟ್ ಎಂದೇ ಪರಿಗಣಿಸಲಾಗುವುದೆಂದು ಮೆರಿಲ್‌ಬೋನ್ ಕ್ರಿಕೆಟ್ ಕ್ಲಬ್ (ಎಂಸಿಸಿ) ಬುಧವಾರ ತಿಳಿಸಿದೆ.

ಎಂಸಿಸಿಯು ಕ್ರಿಕೆಟ್ ನಿಯಮಾವಳಿಯಲ್ಲಿ ಮಹತ್ವದ ಪರಿಷ್ಕರಣೆ ಮಾಡಿದೆ. ಅದರಲ್ಲಿ ಪ್ರಮುಖವಾಗಿ ಬಹುಚರ್ಚಿತವಾದ ಮಂಕಡಿಂಗ್ ನಿಯಮವೂ ಒಂದು. ಅಲ್ಲದೇ ಬೌಲರ್‌ಗಳು ಚೆಂಡಿನ ಹೊಳಪು ಹೆಚ್ಚಿಸಲು ಎಂಜಲು ಅಥವಾ ಬೆವರು ಲೇಪನ ಮಾಡುವುದನ್ನೂ ಶಾಶ್ವತವಾಗಿ ನಿಷೇಧಿಸಲಾಗಿದೆ.

ಏನಿದು ಮಂಕಡ್ ರನ್‌ಔಟ್?: ಮಂಕಡಿಂಗ್ ಸುದೀರ್ಘ ಕಾಲದಿಂದ ಬಹಳಷ್ಟು ಚರ್ಚೆಗೆ ಗ್ರಾಸವಾಗಿತ್ತು. ನಾನ್‌ಸ್ಟ್ರೈಕರ್ ತುದಿಯಲ್ಲಿರುವ ಬ್ಯಾಟರ್, ಬೌಲರ್ ಎಸೆತ ಹಾಕುವ ಮುನ್ನವೇ ಕ್ರೀಸ್ ಬಿಟ್ಟಿದ್ದರೆ ರನ್‌ಔಟ್ ಮಾಡುವುದನ್ನು ಮಂಕಡಿಂಗ್ ಎನ್ನಲಾಗುತ್ತದೆ.

1948ರಲ್ಲಿ ಆಸ್ಟ್ರೇಲಿಯಾದ ಸಿಡ್ನಿಯಲ್ಲಿ ಭಾರತ ಮತ್ತು ಆಸ್ಟ್ರೇಲಿಯಾ ನಡುವಣ ಟೆಸ್ಟ್ ಪಂದ್ಯದಲ್ಲಿ ಭಾರತದ ಎಡಗೈ ಸ್ಪಿನ್ನರ್ ವಿನೂ ಮಂಕಡ್ ಅವರು ಬೌಲಿಂಗ್ ಮಾಡುವಾಗ ನಾನ್ ಸ್ಟ್ರೈಕರ್ ತುದಿಯಲ್ಲಿದ್ದ ಬ್ಯಾಟ್ಸ್‌ಮನ್ ಬಿಲ್ಲಿ ಬ್ರೌನ್ ಕ್ರೀಸ್ ಬಿಟ್ಟಿದ್ದರು. ಮಂಕಡ್ ಬೌಲಿಂಗ್ ಆ್ಯಕ್ಷನ್ ಮಾಡದೇ ಬೇಲ್ಸ್ ಎಗರಿಸಿದರು. ಆ ಪ್ರವಾಸದ ಸಂದರ್ಭದಲ್ಲಿ ಮಂಕಡ್ ಅವರು ಬ್ರೌನ್ ಅವರಿಗೆ ಎರಡನೇ ಬಾರಿ ಈ ರೀತಿ ಮಾಡಿದ್ದರು. ಮೊದಲ ಬಾರಿ ಅವರು ಬ್ರೌನ್‌ಗೆ ಎಚ್ಚರಿಕೆ ನೀಡಿದ್ದರು. ಎರಡನೇ ಬಾರಿ ರನ್‌ಔಟ್ ನೀಡಲಾಯಿತು. ಆಗ ಆಸ್ಟ್ರೇಲಿಯಾ ಮಾಧ್ಯಮಗಳು ಮಂಕಡ್ ಅವರನ್ನು ಟೀಕಿಸಿದ್ದವು. ‘ಮಂಕಡಿಂಗ್’ ಎಂದು ಕರೆದಿದ್ದವು ಈ ರೀತಿ ಕರೆಯುವುದು ದಿಗ್ಗಜ ವಿನೂ ಮಂಕಡ್ ಅವರಿಗೆ ಮಾಡುವ ಅವಮಾನ ಎಂದು ಸುನಿಲ್ ಗಾವಸ್ಕರ್ ಸೇರಿದಂತೆ ಹಲವು ಕ್ರಿಕೆಟಿಗರು ಅಸಮಾಧಾನ ವ್ಯಕ್ತಪಡಿಸಿದ್ದರು.

> **ಮಂಕಡಿಂಗ್ ನಿಯಮ ಬದಲಾವಣೆ ಮಾಡಿದ್ದು ಸ್ವಾಗತಾರ್ಹ. ಬೌಲರ್‌ಗಳನ್ನು ಅಪರಾಧಿಗಳಂತೆ ನೋಡುವಂತೆ ಮಾಡಿದ್ದ ರೂಢಿಗೆ ಕಡಿವಾಣ ಬಿದ್ದಂತಾಗಿದೆ**
> **ದಿನೇಶ್ ಕಾರ್ತಿಕ್** ಕ್ರಿಕೆಟಿಗ

ಎಂಸಿಸಿ ನಿಯಮ 41.16ರಲ್ಲಿ ನಾನ್ ಸ್ಟ್ರೈಕರ್ ರನ್‌ಔಟ್ ಕುರಿತು ಉಲ್ಲೇಖವಿದೆ. ಈಗ ಇದನ್ನು ನಿಯಮ 41 (ಅನ್‌ಫೇರ್ ಪ್ಲೇ) ನಿಂದ ನಿಯಮ 38 (ರನ್‌ಔಟ್)ಕ್ಕೆ ಬದಲಾವಣೆ ಮಾಡಲಾಗಿದೆ.

2019ರ ಇಂಡಿಯನ್ ಪ್ರೀಮಿಯರ್ ಲೀಗ್ ಕ್ರಿಕೆಟ್ ಟೂರ್ನಿಯಲ್ಲಿ ಪಂಜಾಬ್ ಕಿಂಗ್ಸ್ ತಂಡದ ಆರ್. ಅಶ್ವಿನ್ ಅವರು, ರಾಜಸ್ಥಾನ್ ರಾಯಲ್ಸ್ ತಂಡದ ಜೋಸ್ ಬಟ್ಲರ್ ಅವರನ್ನು ಮಂಕಡಿಂಗ್ ಮಾಡಿದ್ದರು. ಆಗ ವಿವಾದದ ಕಿಡಿ ಹೊತ್ತಿಕೊಂಡಿತ್ತು. ಬಹಳಷ್ಟು ಜನರು ಅಶ್ವಿನ್ ಅವರನ್ನು ಟೀಕಿಸಿದ್ದರು.

ಆದರೆ, ಭಾರತ ಸೇರಿದಂತೆ ಕೆಲವು ದೇಶಗಳ ಕ್ರಿಕೆಟಿಗರು ಅಶ್ವಿನ್ ನಡೆಯನ್ನು ಬೆಂಬಲಿಸಿದ್ದರು. ಅಂದಿನಿಂದಲೂ ಅಶ್ವಿನ್ ಮಂಕಡಿಂಗ್ ನಿಯಮಬಾಹಿರವಲ್ಲ ಎಂದೇ ವಾದಿಸಿದ್ದರು. ಎಂಸಿಸಿ ನಿಯಮ ಬದಲಾಯಿಸಿದ ಬೆನ್ನಲ್ಲೇ ವೀರೇಂದ್ರ ಸೆಹ್ವಾಗ್ ಸೇರಿದಂತೆ ಹಲವು ಕ್ರಿಕೆಟಿಗರು ಇದು ಅಶ್ವಿನ್ ಹೋರಾಟಕ್ಕೆ ಸಂದ ಜಯ ಎಂದು ಅಭಿನಂದಿಸಿದ್ದಾರೆ.

ಚೆಂಡಿಗೆ ಎಂಜಲು ಲೇಪನ ಶಾಶ್ವತ ನಿಷೇಧ

ಕೊರೊನಾ ಕಾಲಘಟ್ಟದಲ್ಲಿ ಮರಳಿ ಆರಂಭವಾದ ಕ್ರಿಕೆಟ್‌ನಲ್ಲಿ ಚೆಂಡಿನ ಹೊಳಪು ಉಳಿಸಿಕೊಳ್ಳಲು ಎಂಜಲು ಬಳಕೆ ಮಾಡುವುದನ್ನು ತಾತ್ಕಾಲಿಕವಾಗಿ ನಿಷೇಧಿಸಲಾಗಿತ್ತು.

ಇದೀಗ ಹೊಸ ನಿಯಮದ ಪ್ರಕಾರ ಎಂಜಲು ಬಳಕೆಯನ್ನು ಶಾಶ್ವತವಾಗಿ ನಿಷೇಧಿಸಲಾಗಿದೆ.

‘ಎಂಜಲು ಬಳಕೆಯಿಂದ ಚೆಂಡಿನ ಚಲನೆಯ ಮೇಲೆ ಪರಿಣಾಮವಾಗುವುದಿಲ್ಲ. ಲೇಪನ ಮಾಡದಿದ್ದರೂ ಚೆಂಡು ಸ್ವಿಂಗ್ ಆಗುತ್ತದೆ. ಎಂಜಲು ಬಳಕೆ ಮಾಡಿದರೆ ನಿಯಮ ಉಲ್ಲಂಘನೆಯೆಂದು ಪರಿಗಣಿಸಲಾಗುವುದು. ಈ ನಿಯಮದಿಂದಾಗಿ ಫೀಲ್ಡರ್‌ಗಳು ಸಿಹಿ ಮಿಠಾಯಿ ಅಥವಾ ಚೂಯಿಂಗ್ ಗಮ್ ಅಗೆಯುತ್ತ ಅದೇ ಎಂಜಲನ್ನು ಚೆಂಡಿಗೆ ಬಳಸಿ ವಿರೂಪಗೊಳಿಸುವುದಕ್ಕೂ ಕಡಿವಾಣ ಬೀಳಲಿದೆ‘ ಎಂದು ಹೇಳಲಾಗಿದೆ.

‘ಅಶ್ವಿನ್‌ಗೆ ಇದು ಅದೃಷ್ಟದ ವಾರ’

ಅಶ್ವಿನ್‌ಗೆ ಈ ವಾರ ಬಹಳ ಅದೃಷ್ಟ ತಂದಿದೆ. ಭಾರತದ ಅತಿ ಹೆಚ್ಚು ವಿಕೆಟ್ ಗಳಿಸಿದ ಎರಡನೇ ಬೌಲರ್ ದಾಖಲೆ ಬರೆದರು. ಈಗ ಮಂಕಡಿಂಗ್ ವಾದ ಗೆದ್ದರು. ಇನ್ನು ಬಟ್ಲರ್ ಔಟ್ ಮಾಡಲು ಸಂಪೂರ್ಣ ಸ್ವಾತಂತ್ರ್ಯ ಸಿಕ್ಕಿದೆ. ಒಂದು ಬಾರಿಯಾದರೂ ಮಾಡಲು ಮರೆಯಬೇಡಿ ಎಂದು ಭಾರತ ತಂಡದ ಮಾಜಿ ಆಟಗಾರ ವೀರೇಂದ್ರ ಸೆಹ್ವಾಗ್ ಹೇಳಿದ್ದಾರೆ.

ಕ್ರಿಕೆಟ್‌ಗೆ ಶ್ರೀಶಾಂತ್ ವಿದಾಯ


ಎಸ್. ಶ್ರೀಶಾಂತ್

ಎಸ್. ಶ್ರೀಶಾಂತ್			
ಮಾದರಿ	ಪಂದ್ಯ	ವಿಕೆಟ್	ಶ್ರೇಷ್ಠ
ಟೆಸ್ಟ್	27	87	40ಕ್ಕೆ5
ಏಕದಿನ	53	75	55ಕ್ಕೆ6
ಟಿ20	10	7	12ಕ್ಕೆ2
ಪ್ರಥಮದರ್ಜೆ	74	213	40ಕ್ಕೆ5
ಲಿಸ್ಟ್ ಎ	92	124	55ಕ್ಕೆ6
ಟಿ20 (ದೇಶಿ)	65	54	29ಕ್ಕೆ3

ನವದೆಹಲಿ(ಪಿಟಿಐ): ವೇಗದ ಬೌಲರ್ ಎಸ್. ಶ್ರೀಶಾಂತ್ ಎಲ್ಲ ಮಾದರಿಗಳ ದೇಶಿ ಕ್ರಿಕೆಟ್‌ಗೆ ನಿವೃತ್ತಿ ಘೋಷಿಸಿದ್ದಾರೆ.

ಭಾರತ ತಂಡವು 2007ರಲ್ಲಿ ಟಿ20 ವಿಶ್ವಕಪ್ ಮತ್ತು 2011ರಲ್ಲಿ ಏಕದಿನ ವಿಶ್ವಕಪ್ ಗೆದ್ದ ಭಾರತ ತಂಡಗಳಲ್ಲಿ ಅವರು ಆಡಿದ್ದರು. 39 ವರ್ಷದ ಶ್ರೀಶಾಂತ್ ಈಚೆಗೆ ತಮ್ಮ ತವರು ರಾಜ್ಯವಾದ ಕೇರಳ ತಂಡವನ್ನು ರಣಜಿ ಟ್ರೋಫಿ ಟೂರ್ನಿಯಲ್ಲಿ ಪ್ರತಿನಿಧಿಸಿದ್ದರು. ಮೇಘಾಲಯ ವಿರುದ್ಧದ ಪಂದ್ಯದಲ್ಲಿ ಅವರು ಎರಡು ವಿಕೆಟ್ ಗಳಿಸಿದ್ದರು.

‘25 ವರ್ಷಗಳ ದೀರ್ಘ ವೃತ್ತಿಜೀವನಕ್ಕೆ ವಿರಾಮ ನೀಡುತ್ತಿದ್ದೇನೆ. ಯುವ ಕ್ರಿಕೆಟಿಗರಿಗೆ ಅವಕಾಶ ಸಿಗಲಿ. ನನ್ನ ಕುಟುಂಬ, ಸಹ ಆಟಗಾರರು ಮತ್ತು ಭಾರತದ ಜನತೆಗೆ ಕೃತಜ್ಞನಾಗಿದ್ದೇನೆ. ಬಹಳ ಭಾರವಾದ ಹೃದಯದಿಂದ ಈ ನಿರ್ಧಾರವನ್ನು ಕೈಗೊಂಡಿದ್ದೇನೆ. ಪ್ರಥಮದರ್ಜೆ ಮತ್ತು ಎಲ್ಲ ಮಾದರಿಯ ದೇಶಿ ಕ್ರಿಕೆಟ್‌ಗೆ ವಿದಾಯ ಘೋಷಿಸುತ್ತಿದ್ದೇನೆ’ ಎಂದು ಶ್ರೀಶಾಂತ್ ಸರಣಿ ಟ್ವೀಟ್ ಮಾಡಿದ್ದಾರೆ.

ಶ್ರೀಶಾಂತ್ 2006ರಲ್ಲಿ ನಾಗಪುರದಲ್ಲಿ ನಡೆದಿದ್ದ ಶ್ರೀಲಂಕಾ ಎದುರಿನ ಏಕದಿನ ಪಂದ್ಯದಲ್ಲಿ ಭಾರತ ತಂಡಕ್ಕೆ ಪದಾರ್ಪಣೆ ಮಾಡಿದ್ದರು.

ಐಪಿಎಲ್ ಫಿಕ್ಸಿಂಗ್ ಪ್ರಕರಣ: ಎರಡು ವಿಶ್ವಕಪ್ ವಿಜಯಗಳಲ್ಲಿ ಭಾಗಿಯಾಗಿದ್ದ ಶ್ರೀಶಾಂತ್ ಎಲ್ಲ ಮಾದರಿಗಳಲ್ಲಿಯೂ ಮಿಂಚುತ್ತಿದ್ದರು. ಆದರೆ, 2013ರಲ್ಲಿ ನಡೆದಿದ್ದ ಐಪಿಎಲ್ ಸ್ಪಾಟ್ ಫಿಕ್ಸಿಂಗ್ ಪ್ರಕರಣದಲ್ಲಿ ಅವರು ಸಿಕ್ಕಿಬಿದ್ದರು. ಅದರಿಂದಾಗಿ ಜೈಲು ಸೇರಿ, ವಿಚಾರಣೆಗೊಳಪಟ್ಟರು. ಅವರನ್ನು ಬಿಸಿಸಿಐ ಕ್ರಿಕೆಟ್ ಚಟುವಟಿಕೆಗಳಿಂದ ನಿಷೇಧಿಸಿತ್ತು.

ಆರು ವರ್ಷಗಳ ಕಾನೂನು ಹೋರಾಟದ ನಂತರ ಶ್ರೀಶಾಂತ್ ಆರೋಪಮುಕ್ತರಾಗಿದ್ದರು. ಎರಡು ದೇಶಿ ಋತುಗಳಲ್ಲಿ ಅವರು ಕೇರಳ ತಂಡಕ್ಕೆ ಆಡಿದ್ದರು.

ಇತ್ತೀಚೆಗೆ ನಡೆದಿದ್ದ ಐಪಿಎಲ್ ಹರಾಜು ಪ್ರಕ್ರಿಯೆಯಲ್ಲಿ ಅವರನ್ನು ಯಾವುದೇ ತಂಡವೂ ಖರೀದಿಸಿರಲಿಲ್ಲ.

ಸಂಕ್ಷಿಪ್ತ ಸುದ್ದಿ

30ರಂದು ಶೇನ್ ವಾರ್ನ್ ಅಂತ್ಯಕ್ರಿಯೆ

ಸಿಡ್ನಿ (ಎಎಫ್‌ಪಿ): ಹೃದಯಾಘಾತದಿಂದ ನಿಧನರಾಗಿರುವ ಆಸ್ಟ್ರೇಲಿಯಾದ ಸ್ಪಿನ್ ಬೌಲಿಂಗ್ ದಿಗ್ಗಜ ಶೇನ್ ವಾರ್ನ್ ಅವರ ಅಂತ್ಯಸಂಸ್ಕಾರವನ್ನು ಮಾರ್ಚ್ 30ರಂದು ನೆರವೇರಿಸಲಾಗುವುದು ಎಂದು ವಿಕ್ಟೋರಿಯನ್ ರಾಜ್ಯ ಸರ್ಕಾರವು ತಿಳಿಸಿದೆ.

ಮೆಲ್ಬರ್ನ್ ಕ್ರಿಕೆಟ್ ಮೈದಾನದಲ್ಲಿ ಅಂತಿಮ ವಿಧಿವಿಧಾನಗಳು ನಡೆಯಲಿವೆ.

ಐಸಿಸಿ ಪ್ರಶಸ್ತಿಗೆ ಶ್ರೇಯಸ್, ಮಿಥಾಲಿ

ದುಬೈ (ಪಿಟಿಐ): ಭಾರತ ಕ್ರಿಕೆಟ್ ತಂಡದ ಬ್ಯಾಟರ್ ಶ್ರೇಯಸ್ ಅಯ್ಯರ್ ಮತ್ತು ಮಹಿಳಾ ತಂಡದ ನಾಯಕಿ ಮಿಥಾಲಿರಾಜ್, ಆಲ್‌ರೌಂಡರ್ ದೀಪ್ತಿ ಶರ್ಮಾ ಅವರನ್ನು ಐಸಿಸಿ ಮಾಸಿಕ ಆಟಗಾರ ಪ್ರಶಸ್ತಿಗಾಗಿ ನಾಮನಿರ್ದೇಶನ ಮಾಡಲಾಗಿದೆ.

ಪುರುಷರ ವಿಭಾಗದಲ್ಲಿ ಶ್ರೇಯಸ್ ಜೊತೆಗೆ ಯುಎಇಯ ವಿರಿತ್ಯಾ ಅರವಿಂದ್ ಮತ್ತು ನೇಪಾಳದ ದೀಪೇಂದ್ರಸಿಂಗ್ ಐರಿ ಇದ್ದಾರೆ. ಮಹಿಳೆಯ ವಿಭಾಗದಲ್ಲಿ ಮಿಥಾಲಿ, ದೀಪ್ತಿ ಹಾಗೂ ನ್ಯೂಜಿಲೆಂಡ್‌ನ ಅಮೆಲಿಯಾ ಕೆರ್ ಇದ್ದಾರೆ.

ಶಕೀಬ್‌ಗೆ ವಿಶ್ರಾಂತಿ

ಢಾಕಾ (ಪಿಟಿಐ): ಆಲ್‌ರೌಂಡರ್ ಶಕೀಬ್ ಅಲ್ ಹಸನ್ ಅವರಿಗೆ ಬಾಂಗ್ಲಾದೇಶ ಕ್ರಿಕೆಟ್ ಸಂಸ್ಥೆಯು ಏಪ್ರಿಲ್ 30ರವರೆಗೆ ವಿಶ್ರಾಂತಿ ನೀಡಿದೆ. ಇದರಿಂದಾಗಿ ಅವರು ದಕ್ಷಿಣ ಆಫ್ರಿಕಾ ಪ್ರವಾಸಕ್ಕೆ ತೆರಳಲಿರುವ ಬಾಂಗ್ಲಾ ತಂಡದಲ್ಲಿ ಆಡುವುದಿಲ್ಲ. ಅವರು ಈಚೆಗೆ ವಿಶ್ರಾಂತಿಗಾಗಿ ಮನವಿ ಮಾಡಿದ್ದರು.

ಆ್ಯಂಡಿ ದೇಣಿಗೆ

ಲಂಡನ್ (ರಾಯಿಟರ್ಸ್): ಯುದ್ಧಪೀಡಿತ ಉಕ್ರೇನ್‌ನಲ್ಲಿ ಸಂತ್ರಸ್ತರಾಗಿರುವ ಮಕ್ಕಳ ಕಲ್ಯಾಣಕ್ಕಾಗಿ ಬ್ರಿಟನ್‌ನ ಟೆನಿಸ್ ಆಟಗಾರ ಆ್ಯಂಡಿ ಮರೆ ಅವರು ತಮ್ಮ ನಗದು ಬಹುಮಾನ ದೇಣಿಗೆ ನೀಡಲಿದ್ದಾರೆ.

2022ರಲ್ಲಿ ತಾವು ಆಡುವ ಎಲ್ಲ ಟೂರ್ನಿಗಳ ನಗದು ಬಹುಮಾನವನ್ನು ನೀಡುವುದಾಗಿ ಅವರು ತಿಳಿಸಿದ್ದಾರೆ.

ಕ್ರಿಕೆಟ್: ಬೆಸ್ಟೊ ಶತಕ

ಆ್ಯಂಟಿಗಾ (ಎಎಫ್‌ಪಿ): ಜಾನಿ ಬೆಸ್ಟೊ ಶತಕದ ಬಲದಿಂದ ಇಂಗ್ಲೆಂಡ್ ತಂಡವು ಇಲ್ಲಿ ನಡೆಯುತ್ತಿರುವ ಟೆಸ್ಟ್‌ನಲ್ಲಿ ಮಂಗಳವಾರ ದಿನದಾಟದ ಅಂತ್ಯಕ್ಕೆ ಉತ್ತಮ ಮೊತ್ತ ಕಲೆಹಾಕಿತು. ಮೊದಲ ದಿನದಾಟದಲ್ಲಿ ಜಾನಿ 109 ರನ್ ಗಳಿಸಿದರು. ತಂಡವು 86 ಓವರ್‌ಗಳಲ್ಲಿ 6 ವಿಕೆಟ್‌ಗಳಿಗೆ 268 ರನ್ ಗಳಿಸಿತು.

ಮೋಟರ್‌ಸ್ಪೋರ್ಟ್ಸ್: ನಾಳೆ ಕರ್ನಾಟಕ–1000 ರ‍್ಯಾಲಿ ಆರಂಭ

ಬೆಂಗಳೂರು: ಕರ್ನಾಟಕ ಮೋಟರ್‌ಸ್ಪೋರ್ಟ್ಸ್ ಕ್ಲಬ್‌ನಿಂದ ಆಯೋಜಿಸುವ ಎಫ್‌ಎಂಎಸ್‌ಸಿಐ ಇಂಡಿಯನ್ ನ್ಯಾಷನಲ್ ಮೋಟರ್ ರ‍್ಯಾಲಿಯ ಸುತ್ತು ಕರ್ನಾಟಕ–1000 ರ‍್ಯಾಲಿ ಶುಕ್ರವಾರದಿಂದ ಆರಂಭವಾಗಲಿದೆ.

1975ರಿಂದ ವರ್ಷಕ್ಕೊಮ್ಮೆ ನಡೆಯುತ್ತಿದ್ದ ರ‍್ಯಾಲಿಯು ಕೋವಿಡ್ ಕಾರಣದಿಂದ ಕಳೆದ ಎರಡು ವರ್ಷದಿಂದ ಆಯೋಜನೆಯಾಗಿರಲಿಲ್ಲ. ರ‍್ಯಾಲಿಗೆ 53 ಮಂದಿ ಚಾಲಕರು ಈಗಾಗಲೇ ಹೆಸರು ನೋಂದಾಯಿಸಿದ್ದಾರೆ.

ಕಬಡ್ಡಿ: ಕರ್ನಾಟಕಕ್ಕೆ ಉಷಾರಾಣಿ ನಾಯಕಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹರಿಯಾಣದಲ್ಲಿ ಗುರುವಾರದಿಂದ ನಡೆಯಲಿರುವ ರಾಷ್ಟ್ರೀಯ ಕಬಡ್ಡಿ ಚಾಂಪಿಯನ್‌ಷಿಪ್‌ಗೆ ಕರ್ನಾಟಕ ತಂಡವನ್ನು ಪ್ರಕಟಿಸಲಾಗಿದ್ದು, ಉಷಾರಾಣಿ ಅವರು ನಾಯಕಿ ಆಗಿದ್ದಾರೆ.

ಮಾರ್ಚ್ 13ರವರೆಗೆ ರಾಷ್ಟ್ರೀಯ ಚಾಂಪಿಯನ್‌ಷಿಪ್ ನಡೆಯಲಿದೆ.

ತಂಡ: ಉಷಾರಾಣಿ (ನಾಯಕಿ, ಕೆ.ಎಸ್.ಪಿ), ಅಶ್ವಿನಿ (ಉಪನಾಯಕಿ, ಬೆಂಗಳೂರು), ಮಾನಸ ಕೆ.ವಿ. (ಕೊಡಗು), ಗೌರಾ ಜಿ. ಕೋಲಿ (ಬೆಳಗಾವಿ), ದಾನೇಶ್ವರಿ ಬ್ಯಾಕೋಡ್ (ಬಾಗಲಕೋಟೆ), ದೀಪಾ ಕೆ. ಬ್ಯಾಕೋಡ್ (ಬಾಗಲಕೋಟೆ), ಮಧುಮಿತಾ, ಬೃಂದಾ (ಇಬ್ಬರೂ ನ್ಯಾಷನಲ್ ಕಬಡ್ಡಿ ಕ್ಲಬ್), ಆತ್ಮೀಯಾ ಎಂ.ಬಿ. (ಹಾಸನ), ಕುಮಾರಿ (ಬೆಂಗಳೂರು), ಸೌಮ್ಯಾ (ಕೆ.ಎಸ್.ಪಿ), ಸೋನಿ ಎಂ. (ವಿಜಯನಗರ), ಕೋಚ್: ಸಿ. ಹೊನ್ನಪ್ಪಗೌಡ, ಸಹಾಯಕ ಕೋಚ್: ರೂಪಶ್ರೀ ಕೆ.ಜೆ.

ರ‍್ಯಾಂಕಿಂಗ್: ಆಲ್‌ರೌಂಡರ್ ಜಡೇಜಗೆ ಅಗ್ರಸ್ಥಾನ


ರವೀಂದ್ರ ಜಡೇಜ

ದುಬೈ (ಪಿಟಿಐ): ಭಾರತದ ರವೀಂದ್ರ ಜಡೇಜ ಅಂತರರಾಷ್ಟ್ರೀಯ ಕ್ರಿಕೆಟ್ ಕೌನ್ಸಿಲ್ ಟೆಸ್ಟ್ ರ‍್ಯಾಂಕಿಂಗ್‌ನ ಆಲ್‌ರೌಂಡರ್ ಪಟ್ಟಿಯಲ್ಲಿ ಅಗ್ರಸ್ಥಾನಕ್ಕೇರಿದ್ದಾರೆ.

’ಮೊಹಾಲಿಯಲ್ಲಿ ಈಚೆಗೆ ನಡೆದ ಶ್ರೀಲಂಕಾ ಎದುರಿನ ಟೆಸ್ಟ್‌ನಲ್ಲಿ ಜಡೇಜ ಅವರ ಆಲ್‌ರೌಂಡ್ ಆಟದಿಂದ ಭಾರತ ಪಂದ್ಯ ಗೆದ್ದಿತ್ತು. ಅದರಿಂದಾಗಿ ಅವರು ಎಂಆರ್‌ಎಫ್ ಟೈರ್ಸ್ ಐಸಿಸಿ ಪುರುಷರ ಟೆಸ್ಟ್ ರ‍್ಯಾಂಕಿಂಗ್‌ನಲ್ಲಿ ಅಗ್ರಸ್ಥಾನ ಗಳಿಸಿದ್ದಾರೆ’ ಎಂದು ಐಸಿಸಿ ಪ್ರಕಟಣೆಯಲ್ಲಿ ತಿಳಿಸಿದೆ.

ಮೊಹಾಲಿಯಲ್ಲಿ ಅವರು ಅಜೇಯ ಶತಕ (175) ಮತ್ತು ಒಟ್ಟು ಒಂಬತ್ತು ವಿಕೆಟ್‌ಗಳನ್ನು ಗಳಿಸಿದ್ದರು. ಇದರಿಂದಾಗಿ ಅವರು ಅಗ್ರಸ್ಥಾನಕ್ಕೇರಿದರು. 2021ರ ಫೆಬ್ರುವರಿಯಿಂದ ಮೊದಲ ಸ್ಥಾನದಲ್ಲಿದ್ದ ವೆಸ್ಟ್ ಇಂಡೀಸ್ ತಂಡದ ಜೇಸನ್ ಹೋಲ್ಡರ್ ಅವರನ್ನು ಜಡೇಜ ಹಿಂದಿಕ್ಕಿದರು. 2017ರಲ್ಲಿ ಜಡೇಜ ಒಂದು ವಾರ ಅಗ್ರಸ್ಥಾನ ಗಳಿಸಿದ್ದರು.

ಇದೇ ಪಟ್ಟಿಯಲ್ಲಿರುವ ಆರ್. ಅಶ್ವಿನ್ ಮೂರನೇ ಸ್ಥಾನ ಪಡೆದಿದ್ದಾರೆ. ಅಕ್ಷರ್ ಪಟೇಲ್ 14ನೇ ಸ್ಥಾನದಲ್ಲಿದ್ದಾರೆ. ಅವರು ಎರಡು ಸ್ಥಾನ ಕುಸಿತ ಕಂಡಿದ್ದಾರೆ. ಗಾಯಗೊಂಡಿರುವ ಅವರು ಮೊಹಾಲಿ ಟೆಸ್ಟ್‌ನಲ್ಲಿ ಆಡಿರಲಿಲ್ಲ. ಶಾರ್ದೂಲ್ ಠಾಕೂರ್ 19ನೇ ಸ್ಥಾನದಲ್ಲಿದ್ದಾರೆ.

ಬ್ಯಾಟರ್‌ಗಳ ವಿಭಾಗದಲ್ಲಿ ವಿರಾಟ್ ಕೊಹ್ಲಿ ಎರಡು ಸ್ಥಾನಗಳ ಬಡ್ತಿ ಪಡೆದು, ಐದನೇ ಸ್ಥಾನಕ್ಕೇರಿದ್ದಾರೆ. ಭಾರತ ತಂಡದ ನಾಯಕ ರೋಹಿತ್ ಶರ್ಮಾ ಆರನೇ ಸ್ಥಾನದಲ್ಲಿ ಮುಂದುವರಿದಿದ್ದಾರೆ.

ವಿಕೆಟ್‌ಕೀಪರ್–ಬ್ಯಾಟರ್ ರಿಷಭ್ ಪಂತ್ 10ನೇ ಸ್ಥಾನಕ್ಕೇರಿದ್ದಾರೆ. ಆಸ್ಟ್ರೇಲಿಯಾದ ಮಾರ್ನಸ್ ಲಾಬುಷೇನ್ ಅವರು ಅಗ್ರಸ್ಥಾನದಲ್ಲಿದ್ದಾರೆ.

ಬೌಲಿಂಗ್ ವಿಭಾಗದಲ್ಲಿ ಭಾರತದ ಜಸ್‌ಪ್ರೀತ್ ಬೂಮ್ರಾ ಹತ್ತನೇ ಸ್ಥಾನದಲ್ಲಿ ಮುಂದುವರಿದಿದ್ದಾರೆ. ಆಸ್ಟ್ರೇಲಿಯಾ ತಂಡದ ನಾಯಕ ಪ್ಯಾಟ್ ಕಮಿನ್ಸ್ ಮೊದಲಿಗರಾಗಿದ್ದಾರೆ.


ಹೋಲ್ಡರ್


ಶಕೀಬ್


ಬೆನ್ ಸ್ಟೋಕ್ಸ್


ಆರ್. ಅಶ್ವಿನ್

ಐಸಿಸಿ ರ‍್ಯಾಂಕಿಂಗ್: ಐವರು ಅಗ್ರ ಆಲ್‌ರೌಂಡರ್‌ಗಳು		
ಆಟಗಾರ	ದೇಶ	ಪಾಯಿಂಟ್
ರವೀಂದ್ರ ಜಡೇಜ	ಭಾರತ	406
ಜೇಸನ್ ಹೋಲ್ಡರ್	ವೆಸ್ಟ್ ಇಂಡೀಸ್	382
ಆರ್. ಅಶ್ವಿನ್	ಭಾರತ	347
ಶಕೀಬ್ ಅಲ್ ಹಸನ್	ಬಾಂಗ್ಲಾ	324
ಬೆನ್ ಸ್ಟೋಕ್ಸ್	ಇಂಗ್ಲೆಂಡ್	287

ಫುಟ್‌ಬಾಲ್: ಆರಿಫ್ ಹ್ಯಾಟ್ರಿಕ್

ಬೆಂಗಳೂರು: ಆರಿಫ್ ಮೊಹಮ್ಮದ್ ಗಳಿಸಿದ ಹ್ಯಾಟ್ರಿಕ್ ಗೋಲುಗಳ ನೆರವಿನಿಂದ ಇಸಿಡಿ ಎಫ್‌ಸಿ ತಂಡವು ಬಿಡಿಎಫ್‌ಎ ಸಿ ಡಿವಿಷನ್ ಲೀಗ್ ಫುಟ್‌ಬಾಲ್ ಚಾಂಪಿಯನ್‌ಷಿಪ್‌ನ ಪಂದ್ಯದಲ್ಲಿ ಭರ್ಜರಿ ಜಯ ಗಳಿಸಿತು.

ಬೆಂಗಳೂರು ಫುಟ್‌ಬಾಲ್ ಕ್ರೀಡಾಂಗಣದಲ್ಲಿ ಬುಧವಾರ ನಡೆದ ಜೆ ಗುಂಪಿನ ಹಣಾಹಣಿಯಲ್ಲಿ 9–0 ಗೋಲುಗಳಿಂದ ದೇವನಹಳ್ಳಿ ಎಫ್‌ಸಿ ತಂಡವನ್ನು ಪರಾಭವಗೊಳಿಸಿತು. ಆರಿಫ್ 15, 22 ಮತ್ತು 37ನೇ ನಿಮಿಷಗಳಲ್ಲಿ ಗೋಲು ದಾಖಲಿಸಿದರು.

ವಿಜೇತ ತಂಡದ ಪರ ಆರ್ಯನ್ ಜೋಷಿ (8 ಮತ್ತು 41ನೇ ನಿ.) ಮತ್ತು ಎಸ್.ಕೆ. ಇಜಾಜ್ (18 ಮತ್ತು 19ನೇ ನಿ.) ಕೂಡ ಮಿಂಚಿದರು. ಸಾಬುಜ್ ಸೋಮ್ (3ನೇ ನಿ.) ಮತ್ತು ಶೇಖ್ ಸೊಹೈಲ್ (25ನೇ ನಿ.) ಕಾಣಿಕೆ ನೀಡಿದರು.

ಮತ್ತೊಂದು ಪಂದ್ಯದಲ್ಲಿ 515 ಆರ್ಮಿ ಬೇಸ್ ವರ್ಕ್‌ಶಾಪ್ ಎಫ್‌ಸಿ ತಂಡವು 1–0ಯಿಂದ ಹೀರೊಸ್ ಎಫ್‌ಸಿ ಚನ್ನಪಟ್ಟಣ ತಂಡದ ಎದುರು ಗೆದ್ದಿತು. ಆರ್ಮಿ ಬೇಸ್ ಪರ ಬಾಪಿ ಮಹತೊ (8ನೇ ನಿ.) ಗೋಲು ಹೊಡೆದರು.

ಮುಂಬೈ ರೇಸ್

ಡಿಸ್ಟಿಂಕ್ಷನ್ ಗೆಲ್ಲುವ ನಿರೀಕ್ಷೆ

ಬೈರಾಮ್ ಎನ್.ಜೀಜೀಭಾಯ್ ಟ್ರೋಫಿ ಗುರುವಾರದ ಮುಂಬೈ ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಡಿಸ್ಟಿಂಕ್ಷನ್ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆ ಇದೆ. ಮಧ್ಯಾಹ್ನ 2.45ಕ್ಕೆ ಪ್ರಾರಂಭವಾಗಲಿರುವ ದಿನದ ಏಳು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿದೆ:

1ನೇ ರೇಸ್: ಇಂಟೆನ್ಸ್ ಬಿಲೀಫ್ 2, ಸ್ಪಿರಿಚ್ಯುಯಲ್ ರಾಕ್ 9, ರೆಡ್ ಡಸ್ಟ್ 3
2ನೇ ರೇಸ್: ಬೋಲ್ಡ್ ಲೆಜೆಂಡ್ 1, ನಾರ್ದರನ್ ಲೈಟ್ಸ್ 3
3ನೇ ರೇಸ್: ಪ್ರೆಸಿಡೆನ್ಶಿಯಲ್ 1, ಫ್ಲೇಮಿಂಗ್ ಫೈರ್ 5, ಎವೆಂಜಲೈನ್ 4
4ನೇ ರೇಸ್: ಚೆರಿಶ್ಡ್ 1, ಬ್ರಿಲಿಯಂಟ್ ಲೈಟ್ 5, ಜಗ್‌ಹೆಡ್ 6
5ನೇ ರೇಸ್: ಲಾರ್ಡ್ ಬೈರೊನ್ 2, ಫೇರ್‌ಮಂಟ್ 3, ಕ್ಯಾಪ್ರಿಫ್ಲಾ 8
6ನೇ ರೇಸ್: ಡಿಸ್ಟಿಂಕ್ಷನ್ 3, ಮೊಜೆಲ್ಲೆ 6, ಸನ್ ಆಫ್ ಎ ಗನ್ 1
7ನೇ ರೇಸ್: ಸೂಪರ್ಲೆಗ್ಗೆರ 1, ಎನ್‌ಲೈಟೆನ್ಡ್ 3, ಡ್ರೀಮ್ಸ್ 4

ಉತ್ತಮ ಬೆಟ್: ಸೂಪರ್ಲೆಗ್ಗೆರ

ಜಾಕ್‌ಪಾಟ್	ಟ್ರಿಬಲ್
3,4,5,6,7	4,5,6

ಕೆಟೊಲಿಕಾ ಚೆಸ್: ನಾರಾಯಣನ್‌ಗೆ ಪ್ರಶಸ್ತಿ


ನಾರಾಯಣನ್

ಕೆಟೊಲಿಕಾ, ಇಟಲಿ (ಪಿಟಿಐ): ಭಾರತದ ಗ್ರ್ಯಾಂಡ್‌ಮಾಸ್ಟರ್ ಎಸ್.ಎಲ್. ನಾರಾಯಣನ್ ಅವರು ಗ್ರ್ಯಾಂಡಿಸ್ಕಾಚಿ ಕೆಟೊಲಿಕಾ ಅಂತರರಾಷ್ಟ್ರೀಯ ಓಪನ್ ಚೆಸ್ ಟೂರ್ನಿಯಲ್ಲಿ ಚಾಂಪಿಯನ್ ಆಗಿ ಹೊರಹೊಮ್ಮಿದ್ದಾರೆ.

ಮಂಗಳವಾರ ಕೊನೆಗೊಂಡ ಟೂರ್ನಿಯಲ್ಲಿ ಭಾರತದವರೇ ಆದ ಆರ್. ಪ್ರಜ್ಞಾನಂದ ಅವರು ರನ್ನರ್‌ಅಪ್ ಸ್ಥಾನ ಗಳಿಸಿದರು. ನಾರಾಯಣನ್ ಸೇರಿ ಆರು ಮಂದಿ ತಲಾ 6.5 ಪಾಯಿಂಟ್ಸ್ ಗಳಿಸಿದ್ದರು. ಆದರೆ ಟೈಬ್ರೇಕ್‌ನಲ್ಲಿ ಗಳಿಸಿದ ಉತ್ತಮ ಸ್ಕೋರ್‌ನಿಂದಾಗಿ ನಾರಾಯಣನ್‌ಗೆ ಟ್ರೋಫಿ ಒಲಿಯಿತು.

ಅಗ್ರ ಶ್ರೇಯಾಂಕದ, 24 ವರ್ಷದ ನಾರಾಯಣನ್ ಒಂಬತ್ತು ಸುತ್ತುಗಳಲ್ಲಿ ಅಜೇಯರಾಗಿ ಉಳಿದರು. ಮಂಗಳವಾರ ನಡೆದ ಒಂಬತ್ತನೇ ಹಾಗೂ ಅಂತಿಮ ಸುತ್ತಿನಲ್ಲಿ ಅವರು ಇಟಲಿಯ ಪಿಯರ್ ಲುಯಿಗಿ ಬ್ಯಾಸೊ ಜೊತೆ ಡ್ರಾ ಮಾಡಿಕೊಂಡರು. ಒಟ್ಟು ನಾಲ್ಕು ಗೆಲುವು ಮತ್ತು ಐದು ಸುತ್ತುಗಳಲ್ಲಿ ಡ್ರಾ ಸಾಧಿಸಿದರು.

ಪ್ರಜ್ಞಾನಂದ ಕೂಡ ನಾಲ್ಕು ಪಂದ್ಯಗಳಲ್ಲಿ ಜಯ ಮತ್ತು ಐದರಲ್ಲಿ ಡ್ರಾ ಸಾಧಿಸಿದರು.

ಮಹಿಳಾ ಏಕದಿನ ಕ್ರಿಕೆಟ್ ವಿಶ್ವಕಪ್ ಟೂರ್ನಿ: ಭಾರತ–ನ್ಯೂಜಿಲೆಂಡ್ ಹಣಾಹಣಿ ಇಂದು

ಮಿಥಾಲಿ ರಾಜ್– ಸೋಫಿ ಮುಖಾಮುಖಿ

ಮುಖ್ಯಾಂಶಗಳು

- ಪಾಕ್ ಎದುರಿನ ಪಂದ್ಯದಲ್ಲಿ ಸ್ನೇಹಾ, ಪೂಜಾ ಅರ್ಧಶತಕ
- ಮೊದಲ ಪಂದ್ಯದಲ್ಲಿ ಬಾಂಗ್ಲಾ ಎದುರು ಗೆದ್ದಿದ್ದ ಕಿವೀಸ್
- ಶಫಾಲಿ ವರ್ಮಾ ಲಯಕ್ಕೆ ಮರಳುವ ನಿರೀಕ್ಷೆ

ಐಸಿಸಿ ರ‍್ಯಾಂಕಿಂಗ್
4 ಭಾರತ 5 ನ್ಯೂಜಿಲೆಂಡ್

ಬಲಾಬಲ (ವಿಶ್ವಕಪ್)
11 ಪಂದ್ಯ
9 ಕಿವೀಸ್ ಜಯ
2 ಭಾರತ ಜಯ


ಮಿಥಾಲಿ ರಾಜ್


ಸೋಫಿ ಡಿವೈನ್

ಹ್ಯಾಮಿಲ್ಟನ್ (ಪಿಟಿಐ): ವಿಶ್ವಕಪ್ ಜಯಿಸುವ ಕನಸು ಕಾಣುತ್ತಿರುವ ಮಿಥಾಲಿ ರಾಜ್ ನಾಯಕತ್ವದ ಭಾರತ ತಂಡವು ಗುರುವಾರ ಆತಿಥೇಯ ನ್ಯೂಜಿಲೆಂಡ್ ಸವಾಲು ಎದುರಿಸಲಿದೆ.

ಈ ವಿಶ್ವಕಪ್ ಟೂರ್ನಿಯಲ್ಲಿ ಭಾರತ ತಂಡಕ್ಕೆ ಇದು ಎರಡನೇ ಪಂದ್ಯವಾಗಿದೆ. ಮೊದಲ ಪಂದ್ಯದಲ್ಲಿ ಪಾಕಿಸ್ತಾನದ ಎದುರು ಮಿಥಾಲಿ ಬಳಗ ಗೆದ್ದಿತ್ತು. ಪಂದ್ಯ ನಡೆಯಲಿರುವ ಸೆಡಾನ್ ಪಾರ್ಕ್ ಕ್ರೀಡಾಂಗಣದ ಪಿಚ್ ಬ್ಯಾಟಿಂಗ್‌ಗೆ ಹೆಚ್ಚು ನೆರವು ನೀಡುವ ಇತಿಹಾಸ ಹೊಂದಿದೆ. ಮಿಥಾಲಿ ರಾಜ್, ಸ್ಮೃತಿ ಮಂದಾನ, ಹರ್ಮನ್‌ಪ್ರೀತ್ ಕೌರ್ ಅವರು ತಮ್ಮ ಸಾಮರ್ಥ್ಯಕ್ಕೆ ತಕ್ಕ ಆಟವಾಡಬೇಕು. ಆರಂಭಿಕ ಬ್ಯಾಟರ್ ಶಫಾಲಿ ವರ್ಮಾ ಲಯಕ್ಕೆ ಮರಳಿದರೆ ತಂಡದ ಬಲ ಹೆಚ್ಚಲಿದೆ.

‘ಶಫಾಲಿ ತಮ್ಮ ಕೌಶಲಗಳನ್ನು ಸುಧಾರಿಸಿಕೊಳ್ಳಲು ಮತ್ತು ಲಯಕ್ಕೆ ಮರಳಲು ಕಠಿಣ ಅಭ್ಯಾಸ ನಡೆಸುತ್ತಿದ್ದಾರೆ. ಅವರ ಪ್ರಯತ್ನಕ್ಕೆ ಫಲ ಸಿಗಲಿದೆ’ ಎಂದು ತಂಡದ ಅನುಭವಿ ಬೌಲರ್ ಜೂಲನ್ ಗೋಸ್ವಾಮಿ ಹೇಳಿದ್ದರು.

ಟೂರ್ನಿಗೂ ಮುನ್ನ ಭಾರತ ತಂಡವು ನ್ಯೂಜಿಲೆಂಡ್ ಎದುರಿನ ಸರಣಿಯಲ್ಲಿ 1–4ರಿಂದ ಸೋತಿತ್ತು. ಆದ್ದರಿಂದ ಆತಿಥೇಯ ತಂಡವನ್ನು ಎದುರಿಸಲು ಕೋಚ್ ರಮೇಶ್ ಪೋವಾರ್ ಮತ್ತು ನಾಯಕಿ ಮಿಥಾಲಿ ವಿಶೇಷ ಯೋಜನೆಯೊಂದಿಗೆ ಕಣಕ್ಕಿಳಿಯುವುದು ಅನಿವಾರ್ಯ. ಆಲ್‌ರೌಂಡರ್‌ಗಳಾದ ದೀಪ್ತಿ ಶರ್ಮಾ, ಸ್ನೇಹಾ ರಣಾ ಮತ್ತು ಪೂಜಾ ವಸ್ತ್ರಕರ್ ಅವರ ಮೇಲೆ ನಿರೀಕ್ಷೆಯ ಭಾರವಿದೆ. ಸ್ಪಿನ್ನರ್ ರಾಜೇಶ್ವರಿ ಗಾಯಕವಾಡ್ ಉತ್ತಮ ಫಾರ್ಮ್‌ನಲ್ಲಿದ್ದಾರೆ.

ಆತಿಥೇಯ ತಂಡದ ಸೋಫಿ ಡಿವೈನ್, ಸೂಝಿ ಬೇಟ್ಸ್, ಎಮಿ ಸೆಟರ್ಥ್‌ವೇಟ್ ಮತ್ತು ಅಮೆಲಿಯಾ ಅವರನ್ನು ಕಟ್ಟಿಹಾಕುವಲ್ಲಿ ಮಿಥಾಲಿ ಬಳಗವು ಯಶಸ್ವಿಯಾದರೆ ಗೆಲುವಿನ ಅವಕಾಶ ಹೆಚ್ಚು.

ತಂಡಗಳು: ಭಾರತ: ಮಿಥಾಲಿ ರಾಜ್ (ನಾಯಕಿ), ಸ್ಮೃತಿ ಮಂದಾನ, ಶಫಾಲಿ ವರ್ಮಾ, ಹರ್ಮನ್‌ಪ್ರೀತ್ ಕೌರ್, ಯಷ್ಟಿಕಾ ಭಾಟಿಯಾ, ದೀಪ್ತಿ ಶರ್ಮಾ, ಪೂಜಾ ವಸ್ತ್ರಕರ್, ರಿಚಾ ಘೋಷ್ (ವಿಕೆಟ್‌ಕೀಪರ್), ತಾನಿಯಾ ಭಾಟಿಯಾ (ವಿಕೆಟ್‌ಕೀಪರ್), ಸ್ನೇಹಾ ರಾಣಾ, ಮೇಘನಾ ಸಿಂಗ್, ರಾಜೇಶ್ವರಿ ಗಾಯಕವಾಡ, ಪೂನಂ ಯಾದವ್, ಜೂಲನ್ ಗೋಸ್ವಾಮಿ, ರೇಣುಕಾ ಸಿಂಗ್.

ನ್ಯೂಜಿಲೆಂಡ್: ಸೋಫಿ ಡಿವೈನ್ (ನಾಯಕಿ), ಎಮಿ ಸೆಟರ್ಥ್‌ವೇಟ್ (ಉಪನಾಯಕಿ), ಸೂಝಿ ಬೇಟ್ಸ್, ಮ್ಯಾಡಿ ಗ್ರೀನ್, ಬ್ರೂಕ್ ಹಾಲಿಡೇ, ಹೆಯಲಿ ಜೆನ್ಸನ್, ಫ್ರಾನ್ ಜೋನ್ಸ್, ಜೆಸ್ ಕೆರ್, ಅಮೆಲಿಯಾ ಕೆರ್, ಫ್ರಾನ್ಸೆಸ್ ಮೆಕೆ, ರೋಸ್‌ಮೆರಿ ಮೇರ್, ಕೇಟಿ ಮಾರ್ಟಿನ್, ಜಾರ್ಜಿಯಾ ಪ್ಲಿಮ್ಮರ್, ಹನ್ನಾ ರೋವೆ, ಲೀಯಾ ತಹುಹು.

ಪಂದ್ಯ ಆರಂಭ: ಬೆಳಿಗ್ಗೆ 6.30.
ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್

ವಿಂಡೀಸ್ ಜಯಭೇರಿ

ಡನೆಡಿನ್: ಶೆಮೈನ್ ಕ್ಯಾಂಪ್‌ಬೆಲ್ ಸುಂದರ ಬ್ಯಾಟಿಂಗ್ ನೆರವಿನಿಂದ ವೆಸ್ಟ್ ಇಂಡೀಸ್ ತಂಡವು ಮಹಿಳೆಯರ ಏಕದಿನ ಕ್ರಿಕೆಟ್ ವಿಶ್ವಕಪ್ ಟೂರ್ನಿಯ ಪಂದ್ಯದಲ್ಲಿ ಏಳು ವಿಕೆಟ್‌ಗಳಿಂದ ಇಂಗ್ಲೆಂಡ್ ಎದುರು ಜಯಿಸಿತು.

ಬುಧವಾರ ನಡೆದ ಪಂದ್ಯದಲ್ಲಿ ಟಾಸ್ ಗೆದ್ದ ವಿಂಡೀಸ್ ಬ್ಯಾಟಿಂಗ್ ಆಯ್ಕೆ ಮಾಡಿಕೊಂಡಿತು. ಕ್ಯಾಂಪ್‌ಬೆಲ್ (66; 80ಎ, 4X4) ಮತ್ತು ಚೆಡಿಯನ್ ನೇಸನ್ (ಔಟಾಗದೆ 49; 74ಎ, 4X3) ಅವರ ಬ್ಯಾಟಿಂಗ್ 50 ಓವರ್‌ಗಳಲ್ಲಿ 6ಕ್ಕೆ 225 ರನ್ ಗಳಿಸಿತು. ಗುರಿ ಬೆನ್ನಟ್ಟಿದ ಇಂಗ್ಲೆಂಡ್ ತಂಡವು 47.4 ಓವರ್‌ಗಳಲ್ಲಿ 218 ರನ್ ಗಳಿಸಿ ಆಲೌಟ್ ಆಯಿತು.

ಸಂಕ್ಷಿಪ್ತ ಸ್ಕೋರು; ವೆಸ್ಟ್ ಇಂಡೀಸ್: 50 ಓವರ್‌ಗಳಲ್ಲಿ 6ಕ್ಕೆ225 (ದಿಯೇಂದ್ರ ಡಾಟಿನ್ 31, ಹೆಯಲಿ ಮ್ಯಾಥ್ಯೂಸ್ 45, ಶೆಮೈನ್ ಕ್ಯಾಂಪ್‌ಬೆಲ್ 66, ಚೆದಿಯನ್ ನೇಷನ್ ಔಟಾಗದೆ 49, ಸೋಫಿ ಎಕ್ಸೆಲ್‌ಸ್ಟೋನ್ 20ಕ್ಕೆ3, ನಥಾಲಿಯಾ ಸೀವರ್ 49ಕ್ಕೆ1) ಇಂಗ್ಲೆಂಡ್: 47.4 ಓವರ್‌ಗಳಲ್ಲಿ 218 (ಟಾಮಿ ಬೆಮೌಂಟ್ 46, ಡ್ಯಾನ್ ವೈಟ್ 33, ಸೋಫಿಯಾ ಡಂಕ್ಲೆ 38, ಸೋಫಿ ಎಕ್ಸೆಲ್‌ಸ್ಟೋನ್ 33, ಕೇಟ್ ಕ್ರಾಸ್ 27, ಶಮಿಲಿಯಾ ಕಾನೆಲ್ 38ಕ್ಕೆ3, ಅನಿಸಾ ಮೊಹಮ್ಮದ್ 24ಕ್ಕೆ2)

ಜರ್ಮನ್ ಓಪನ್ ಬ್ಯಾಡ್ಮಿಂಟನ್

ಪ್ರಣಯ್‌ಗೆ ಜಯ


ಪ್ರಣಯ್

ಮುಲ್ಹೆಮ್ ಆ್ಯನ್ ಡರ್ ರುಹ್ರ್, ಜರ್ಮನಿ (ಪಿಟಿಐ): ವಿಶ್ವ ಚಾಂಪಿಯನ್‌ಷಿಪ್ ಕ್ವಾರ್ಟರ್‌ಫೈನಲಿಸ್ಟ್, ಭಾರತದ ಎಚ್.ಎಸ್. ಪ್ರಣಯ್ ಅವರು ಜರ್ಮನ್ ಓಪನ್ ಸೂಪರ್ 300 ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ಶುಭಾರಂಭ ಮಾಡಿದ್ದಾರೆ.

ಮಂಗಳವಾರ ರಾತ್ರಿ ನಡೆದ ಪುರುಷರ ಸಿಂಗಲ್ಸ್ ಮೊದಲ ಸುತ್ತಿನ ಹಣಾಹಣಿಯಲ್ಲಿ ಪ್ರಣಯ್ 21–14, 21–19ರಿಂದ ಹಾಂಗ್‌ಕಾಂಗ್‌ನ ಎನ್‌ಜಿ ಕಾ ಲಾಂಗ್ ಆ್ಯಗ್ನಸ್ ಅವರನ್ನು ಪರಾಭವಗೊಳಿಸಿದರು. ಕೇವಲ 40 ನಿಮಿಷಗಳ ಕಾಲ ನಡೆದ ಜಿದ್ದಾಜಿದ್ದಿ ಹೋರಾಟದಲ್ಲಿ ಭಾರತದ ಆಟಗಾರನಿಗೆ ಜಯ ಒಲಿಯಿತು.

ಪ್ರಣಯ್ ಅವರಿಗೆ ಮುಂದಿನ ಸುತ್ತಿನಲ್ಲಿ ಇಂಡೊನೇಷ್ಯಾದ ಶೇಸರ್ ಹಿರೇನ್ ರುಸ್ತಾವಿಟೊ ಅಥವಾ ಮಲೇಷ್ಯಾದ ಲೀ ಚೆಕ್ ಯು ಸವಾಲು ಎದುರಾಗಲಿದೆ.

ಪುರುಷರ ಡಬಲ್ಸ್‌ನಲ್ಲಿ ಇಶಾನ್ ಭಟ್ನಾಗರ್ ಮತ್ತು ಸಾಯಿ ಪ್ರತೀಕ್ ಜೋಡಿಯು ಎರಡನೇ ಸುತ್ತು ಪ್ರವೇಶಿಸಿತು. ಮೊದಲ ಸುತ್ತಿನಲ್ಲಿ ಈ ಜೋಡಿಯು 21-15, 21-16ರಿಂದ ಇಂಗ್ಲೆಂಡ್‌ನ ಕ್ಯಾಲಮ್ ಹೆಮ್ಮಿಂಗ್ ಮತ್ತು ಸ್ಟೀವನ್ ಸ್ಟಾಲ್‌ವುಡ್ ಅವರನ್ನು ಸೋಲಿಸಿದರು.

ಮಿಶ್ರ ಡಬಲ್ಸ್ ವಿಭಾಗದಲ್ಲಿ ಸ್ಪರ್ಧಿಸಿದ್ದ ಧ್ರುವ ಕಪಿಲ ಮತ್ತು ಗಾಯತ್ರಿ ಗೋಪಿಚಂದ್ ಅವರು ವೀರೋಚಿತ ಹೋರಾಟ ತೋರಿದರೂ 19–21, 19–21ರಿಂದ ಇಂಡೊನೇಷ್ಯಾದ ಅದ್ನಾನ್ ಮೌಲಾನ ಮತ್ತು ಮಿಚೆಲ್ಲೆ ಕ್ರಿಸ್ಟೈನ್ ಬ್ಯಾಂಡಸೊ ಎದುರು ಎಡವಿದರು. ಹರಿತಾ ಮನ ಳಿಯಿಲ್ ಹರಿನಾರಾಯಣ್– ಆಶಾ ರಾಯ್ ಜೋಡಿಯು 9-21, 10-21ರಿಂದ ಇಟಲಿಯ ಮಾರ್ಟಿನಾ ಕೊರ್ಸಿನಿ– ಜುಡಿತ್ ಮೈರ್ ಅವರಿಗೆ ಮಣಿದರು.

ಮಿಶ್ರ ಡಬಲ್ಸ್ ವಿಭಾಗದ ಇನ್ನುಳಿದ ಹಣಾಹಣಿಗಳಲ್ಲಿ ಇಶಾನ್ ಭಟ್ನಾಗರ್– ತನಿಶಾ ಕ್ರಾಸ್ಟೊ 19–21, 22–20, 9–21ರಿಂದ ಇಂಗ್ಲೆಂಡ್‌ನ ಗ್ರೆಗರಿ ಮೈರ್ಸ್ ಮತ್ತು ಜೆನ್ನಿ ಮೋರ್ ಅವರಿಗೆ, ಎಂ.ಆರ್. ಅರ್ಜುನ್– ತ್ರಿಶಾ ಜೋಲಿ 9-21, 18-21ರಿಂದ ಫ್ರಾನ್ಸ್‌ನ ಥೊಮ್ ಜಿಕ್ವೆಲ್– ಡಾಲ್ಫಿನ್ ಡೆಲ್ರೆ ಎದುರು ನಿರಾಸೆ ಅನುಭವಿಸಿದರು.

ಬೆಂಗಳೂರಿಗೆ ಬಂದಿಳಿದ ಭಾರತ, ಲಂಕಾ ತಂಡಗಳು

ಪ್ರಜಾವಾಣಿ ವಾರ್ತೆ


ರೋಹಿತ್ ಶರ್ಮಾ

ಬೆಂಗಳೂರು: ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಇದೇ 12ರಿಂದ ನಡೆಯಲಿರುವ ಹೊನಲು ಬೆಳಕಿನ ಟೆಸ್ಟ್‌ನಲ್ಲಿ ಆಡಲಿರುವ ಭಾರತ ಮತ್ತು ಶ್ರೀಲಂಕಾ ತಂಡಗಳು ಬುಧವಾರ ಬಂದಿಳಿದವು.

ಮೊಹಾಲಿಯಲ್ಲಿ ನಡೆದಿದ್ದ ಮೊದಲ ಟೆಸ್ಟ್‌ನಲ್ಲಿ ರೋಹಿತ್ ಶರ್ಮಾ ಬಳಗವು ಭರ್ಜರಿ ಜಯ ದಾಖಲಿಸಿದೆ. ಮೂರೇ ದಿನಗಳಲ್ಲಿ ಪಂದ್ಯ ಮುಗಿದಿತ್ತು. ಅದರಿಂದಾಗಿ ಎರಡು ದಿನ ಮೊಹಾಲಿಯಲ್ಲಿಯೇ ಇದ್ದ ತಂಡಗಳು ಪಿಂಕ್ ಬಾಲ್ ಅಭ್ಯಾಸ ಮಾಡಿದ್ದವು.

ಬುಧವಾರ ಖಾಸಗಿ ವಿಮಾನದ ಮೂಲಕ ಆಟಗಾರರು ಮತ್ತು ಸಿಬ್ಬಂದಿ ಬೆಂಗಳೂರಿಗೆ ಆಗಮಿಸಿದರು. ಹೋಟೆಲ್‌ನಲ್ಲಿಯೇ ವಿಶ್ರಾಂತಿ ಪಡೆದರು. ಗುರುವಾರ ಮತ್ತು ಶುಕ್ರವಾರ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ತಂಡಗಳು ಅಭ್ಯಾಸ ನಡೆಸಲಿವೆ. ಕಟ್ಟುನಿಟ್ಟಾದ ಬಯೋಬಬಲ್ ನಿಯಮ ಜಾರಿ ಮಾಡಲಾಗಿದೆ ಎಂದು ಕೆಎಸ್‌ಸಿಎ ಮೂಲಗಳು ತಿಳಿಸಿವೆ.

14ರಿಂದ ಐಟಿಎಫ್ ಟೆನಿಸ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ರಾಜ್ಯ ಲಾನ್ ಟೆನಿಸ್ ಸಂಸ್ಥೆಯು, ಇದೇ 14ರಿಂದ 20ರವರೆಗೆ ಎಸ್‌ಕೆಎಂಇ ಐಟಿಎಫ್ ಓಪನ್ ಟೆನಿಸ್ ಟೂರ್ನಿಯನ್ನು ಆಯೋಜಿಸಲಿದೆ.

ಅಂತರರಾಷ್ಟ್ರೀಯ ಟೆನಿಸ್ ಫೆಡರೇಷನ್‌ನ (ಐಟಿಎಫ್) ವಿಶ್ವ ಟೂರ್ ಭಾಗವಾಗಿ ಈ ಟೂರ್ನಿ ನಡೆಯಲಿದ್ದು, ದೇಶದ ಆಟಗಾರರಿಗೆ ರ‍್ಯಾಂಕಿಂಗ್ ಪಾಯಿಂಟ್ಸ್ ಗಳಿಸಲು ಉತ್ತಮ ಅವಕಾಶವಾಗಿದೆ.

ಮಾರ್ಚ್ 13ರಿಂದ ಅರ್ಹತಾ ಸುತ್ತಿನ ಪಂದ್ಯಗಳು ನಡೆಯಲಿವೆ. ಭಾರತದ ಶಶಿಕುಮಾರ್ ಮುಕುಂದ್ ಪ್ರಮುಖ ಆಕರ್ಷಣೆಯಾಗಿದ್ದು, ಅವರಿಗೆ ಆಸ್ಟ್ರೇಲಿಯಾದ ಲೂಕಾಸ್ ಕ್ರೆನರ್, ಜೆಕ್ ಗಣರಾಜ್ಯದ ಡಾಮಿನಿಕ್ ಪಾಲನ್, ಜರ್ಮನಿಯ ರಾಬರ್ಟ್ ಸ್ಟ್ರಾಮ್‌ಬಾಕ್ಸ್ ಮತ್ತು ಇಂಗ್ಲೆಂಡ್‌ನ ಜೂಲಿಯನ್ ಕಾಶ್ ಸವಾಲೊಡ್ಡುವ ಸಾಧ್ಯತೆಯಿದೆ.

ಭಾರತದ ಅರ್ಜುನ್ ಖಾಡೆ, ಸಿದ್ಧಾರ್ಥ್ ರಾವತ್, ಮನೀಷ್ ಸುರೇಶ್ ಕುಮಾರ್, ನಿಖಿ ಪೂಣಚ್ಚ ಮತ್ತು ನಿತಿನ್ ಕುಮಾರ್ ಸಿನ್ಹಾ ಕೂಡ ಕಣದಲ್ಲಿದ್ದಾರೆ.

ಹಾಕಿ: ಸಾಯ್, ಎಂಇಜಿಗೆ ಜಯ

ಬೆಂಗಳೂರು: ಭಾರತ ಕ್ರೀಡಾ ಪ್ರಾಧಿಕಾರ (ಸಾಯ್) ಮತ್ತು ಮದ್ರಾಸ್ ಎಂಜಿನಿಯರಿಂಗ್ ಗ್ರೂಪ್ ಆ್ಯಂಡ್ ಸೆಂಟರ್ (ಎಂಇಜಿ) ತಂಡಗಳು ಹಾಕಿ ಕರ್ನಾಟಕ 19 ವರ್ಷದೊಳಗಿನವರ ಚಾಂಪಿಯನ್‌ಷಿಪ್‌ನಲ್ಲಿ ಜಯ ಸಾಧಿಸಿದವು.

ಫೀಲ್ಡ್ ಮಾರ್ಷಲ್ ಕೆ.ಎಂ. ಕಾರ್ಯಪ್ಪ ಹಾಕಿ ಅರೆನಾದಲ್ಲಿ ಬುಧವಾರ ನಡೆದ ಪಂದ್ಯದಲ್ಲಿ ಸಾಯ್ 3–0ಯಿಂದ ಕ್ರೀಡಾ ಶಾಲೆ ಕೂಡಿಗೆ ತಂಡವನ್ನು ಪರಾಭವಗೊಳಿಸಿತು. ವಿಜೇತ ತಂಡದ ಪರ ಪವನ್ ಕೆ.ಜೆ. ಆರು ಮತ್ತು 34ನೇ ನಿಮಿಷಗಳಲ್ಲಿ ಕೈಚಳಕ ತೋರಿದರು. ಮತ್ತೊಂದು ಗೋಲನ್ನು ರೆಡ್ಡಿ ಕಿರಣ್ (35ನೇ ನಿಮಿಷ) ದಾಖಲಿಸಿದರು.

ಮತ್ತೊಂದು ಪಂದ್ಯದಲ್ಲಿ ರಾಮ್‌ಜಿ ಗಳಿಸಿದ ಎರಡು ಗೋಲುಗಳ ನೆರವಿನಿಂದ ಎಂಇಜಿ ತಂಡವು 4–0ರಿಂದ ಹುಬ್ಬಳ್ಳಿ ಹಾಕಿ ಅಕಾಡೆಮಿ ತಂಡವನ್ನು ಮಣಿಸಿತು. ರಾಮ್‌ಜಿ ಮೂರು ಮತ್ತು ನಾಲ್ಕನೇ ನಿಮಿಷ ಗೋಲು ಗಳಿಸಿದರೆ, ಅರ್ಷ್ ಅಲಿ (9ನೇ ನಿ.) ಮತ್ತು ಅಂಕಿತ್ (10ನೇ ನಿ.) ತಲಾ ಒಂದು ಗೋಲು ಹೊಡೆದರು.